

ಗೌರಿ
ರಂಜನೆ ಬೋಧನೆ ಪ್ರಚೋದನೆ
ಲಂಕೇಶ್
ಡಿಸೆಂಬರ್ 28, 2011 ಪುಟ 20 ರೂ. 14/-

ದೇವ್ ಆನಂದ್ ಜೊತೆ ಒಂದು ಸಂಜೆ


ಯಡ್ಡಿಯ ಏನಿಮಿ ಸಿಎಂ!
'ಸದಾ' ತಲೆದಂಡಕ್ಕೆ ಸಿದ್ಧ

ಗಂಗಾವತಿಯ ಧೂಳು, ಬಿಸಿಲು ಮತ್ತು ಮನುಷ್ಯರು

ಗಂಡಾಂತರದಲ್ಲಿ ಹಂಪಿ ವಿವಿ



ಜ್ಯೋತಿಷಿ ಆದಿತ್ಯ ನಾರಾಯಣನಿಗೆ ಅವಿವೇಕಿಗಳೇ ಬಂಡವಾಳ


ದಲಿತ ನಾಯಕ ಮೂರ್ತಿ ಹತ್ಯೆ ಮರೆಯಲ್ಲಿ ನಂದೀಶ್ ರೆಡ್ಡಿ



ಕುಂಬ್ಳೆ ಸುತ್ತ ಸ್ವಾರ್ಥದ ಹುತ್ತ

ಆದಿವಾಸಿ ಮಹಿಳೆಗೆ ಪೋಲೀಸರ ಹಿಂಸೆ




ಕೃಷಿ ಹೂಡಿಕೆದಾರರ ಸಮಾವೇಶ

ಬಡಾಯಿ ಬೊಗಳೆಗಳೇ ಬಂಡವಾಳ

> ಕೃಷಿ ಉದ್ದಿಮೆಗಳ ಹೂಡಿಕೆಯ ಸಮಾವೇಶದಲ್ಲಿ ನೀಡಲಾದ ಭರವಸೆಗಳಲ್ಲಿ ಶೇ.75ಕ್ಕಿಂತಲೂ ಹೆಚ್ಚಿನ ಹೂಡಿಕೆಗಳು ರಿಯಲ್ ಎಸ್ಟೇಟ್ ಕ್ಷೇತ್ರ, ಗ್ರಾಮೀಣ ಸಾಫ್ಟ್‌ವೇರ್ ಕ್ಷೇತ್ರ ಮತ್ತು ಸ್ವಾವಲಂಬಿ ರೈತಾಪಿ ಜೀವನವನ್ನೇ ಒಳಗಿನಿಂದ ಪುನರ್ ರಚಿಸಿ ಅಂತರರಾಷ್ಟ್ರೀಯ ಮಾರುಕಟ್ಟೆಯ ಗ್ರಾಹಕರಾಗುವಂತೆ, ನವವಸಾಹತುವಾಗುವಂತೆ ಮಾಡು[ವ] ಹೂಡಿಕೆಗಳಾಗಿವೆ. ಹೀಗಾಗಿಯೇ ಈ ಸಮಾವೇಶ ಮತ್ತು ಅಲ್ಲಿ ಪ್ರಸ್ತಾಪಿತವಾದ ಹೂಡಿಕೆಗಳು ರೈತ ವಿರೋಧಿಯಾಗಿವೆ, ದೇಶ ವಿರೋಧಿಯಾಗಿವೆ.

'ದೇಶದಲ್ಲೇ ಪ್ರಪ್ರಥಮ'ವಾಗಿ ಜೈಲಿಗೆ ಹೋದ ಮುಖ್ಯಮಂತ್ರಿಯ ಕನಸಿನ ಕೂಸಾದ 'ದೇಶದಲ್ಲೇ ಪ್ರಪ್ರಥಮ' ಇತ್ಯಾದಿ ಬಡಾಯಿಯ 'ಕೃಷಿ ಹೂಡಿಕೆದಾರರ ಸಮಾವೇಶ' ಮುಕ್ತಾಯವಾಗಿದೆ. ಈ ಸಮಾವೇಶದಿಂದಾಗಿ ಕೋಟ್ಯಾಂತರ ರೂಪಾಯಿ ಬಂಡವಾಳ ಹರಿದುಬಂದು ನಾಡಿನ ರೈತಾಪಿಯ ಬದುಕು ಇನ್ನೇನು ಸ್ವರ್ಗ ಸಮಾನವಾಗಲಿದೆಯೆಂದು ಬಿಜೆಪಿ ಸರ್ಕಾರ ಕೊಚ್ಚಿಕೊಳ್ಳುತ್ತಿದೆ. ನಿಜಕ್ಕೂ ಈ ಸಮಾವೇಶ ರೈತಾಪಿಗೆ ಪೂರಕವಾಗಿತ್ತೇ? ವಾಸ್ತವವಾಗಿ ಬಂಡವಾಳ ಹೂಡಿಕೆ ಎಷ್ಟು ಆಗಲಿದೆ? ಎಲ್ಲೆಲ್ಲಿ ಆಗಲಿದೆ? ಇದರಿಂದ ರೈತಾಪಿಗೆ ಏನು ಅನುಕೂಲ? ಎಲ್ಲಕ್ಕಿಂತ ಹೆಚ್ಚಾಗಿ ಈ ಸಮಾವೇಶದ ಹಿಂದಿನ ಉದ್ದೇಶ ಬರಲಿರುವ ದಿನಗಳಲ್ಲಿ ರೈತಾಪಿಯ ಬಿಕ್ಕಟ್ಟನ್ನು ಯಾವ ರೀತಿಯಲ್ಲಿ ಬಗೆಹರಿಸುವ ಮಾರ್ಗವನ್ನು ಹಿಡಿದಿದೆ? ಈ ಎಲ್ಲಾ ಪ್ರಶ್ನೆಗಳು ಈ ಸಮಾವೇಶದ ಮುಂಚಿನಿಂದಲೂ ಇದ್ದರೂ ಈ ಸಮಾವೇಶ ನಡೆದ ನಂತರ ಇನ್ನೂ ಹೆಚ್ಚಾಗಿ ಪ್ರಜ್ಞಾವಂತರನ್ನು ಮತ್ತು ರೈತಾಪಿಯನ್ನು ಕಾಡುತ್ತಿವೆ.

ಮುಖ್ಯಮಂತ್ರಿ ಸದಾನಂದಗೌಡರ ಪ್ರಕಾರ ಈ ಸಮಾವೇಶದಲ್ಲಿ **2000** ಪ್ರತಿನಿಧಿಗಳು ಭಾಗವಹಿಸಿದ್ದು **43** ಕಂಪನಿಗಳು **1,13,000** ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆ ಮಾಡುವ ಭರವಸೆ ನೀಡಿವೆ. ಸರ್ಕಾರದ ಪ್ರಕಾರ ಈ ಹೂಡಿಕೆಗಳು ಲಕ್ಷಾಂತರ ಉದ್ಯೋಗಗಳನ್ನು ಮತ್ತು ರೈತಾಪಿಗೆ ಹೆಚ್ಚಿನ ಆದಾಯದ ಅವಕಾಶಗಳನ್ನು ಹುಟ್ಟುಹಾಕಲಿವೆ.

ಆದರೆ ಹೂಡಿಕೆ ಮಾಡಲಿರುವ ಕಂಪನಿಗಳು ಮತ್ತು ಅವು ಹೂಡಲಿರುವ ಕ್ಷೇತ್ರಗಳನ್ನು ಗಮನಿಸಿದರೆ ಸರ್ಕಾರದ ಈ ಎಲ್ಲಾ ಹೇಳಿಕೆಗಳು ಕೇವಲ ಬಂಡವಾಳವಿಲ್ಲದ ಬಡಾಯಿ ಎಂಬುದು ಅರ್ಥವಾಗುತ್ತದೆ. ಮೊದಲಿಗೆ ಹೂಡಿಕೆ ಆಗುತ್ತಿರುವ ಪ್ರಮಾಣದ ಬಗ್ಗೆ ಸರ್ಕಾರದ ಬಡಾಯಿಯನ್ನು ನೋಡೋಣ.

"ಜಾಗತಿಕ ಕೃಷಿ ಉದ್ಯಮಿಗಳ ಮತ್ತು ಆಹಾರ ಸಂಸ್ಕರಣಾ ಉದ್ಯಮಿಗಳ ಸಮಾವೇಶ"ದ ಎರಡನೇ ದಿನ ಒಟ್ಟು **1,13,000** ಕೋಟಿ ಹೂಡಿಕೆಯ ಪ್ರಸ್ತಾಪವಾಗಿರುವುದು ನಿಜವಾದರೂ ಅದರಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ **40,000** ಕೋಟಿಯನ್ನು ಮತ್ತು ಬ್ಯಾಂಕ್ ಆಫ್ ಇಂಡಿಯಾ **10,000** ಕೋಟಿಯನ್ನು ಹೂಡಿಕೆದಾರರಿಗೆ ಅಗ್ಗದ ದರದಲ್ಲಿ ಸಾಲವಾಗಿ ನೀಡುವುದಾಗಿ ಕೊಟ್ಟಿರುವ ಭರವಸೆಯಷ್ಟೆ. ಅವು ಪ್ರತ್ಯೇಕ ಹೂಡಿಕೆಯಲ್ಲ!

ಆದರೆ ಸರ್ಕಾರ ಪತ್ರಿಕಾ ಹೇಳಿಕೆ ನೀಡುವಾಗ ಈ ಸಾಲವನ್ನು ಹೂಡಿಕೆಯಾಗುವ ಬಂಡವಾಳವೆಂದೇ ಪರಿಗಣಿಸಿ ಒಟ್ಟು ಮೊತ್ತವನ್ನು ಹಿಗ್ಗಿಸಿದೆ. ಹೀಗಾಗಿ ಸಿಕ್ಕಿರುವುದು **63,000** ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಭರವಸೆಯೇ ವಿನಃ **1,13,000** ಕೋಟಿಯಲ್ಲ. ಕೃಷಿ ಬಂಡವಾಳಿಗರಿಗೆ ನಮ್ಮ ಬ್ಯಾಂಕುಗಳು ಅಗ್ಗದ ದರದಲ್ಲಿ ಸಾಲ ನೀಡಿದರೆ ಆ ಕಂಪನಿಗಳ ಲಾಭದ ದರ ಹೆಚ್ಚುವುದೇ ವಿನಃ ಸಾಮಾನ್ಯ ರೈತಾಪಿಗೆ ಏನೂ ಅನುಕೂಲವಾಗುವುದಿಲ್ಲ. ಬದಲಿಗೆ ಕೃಷಿ ಮತ್ತು ರೈತಾಪಿಯ ಹೆಸರಲ್ಲಿ ಈ ಬ್ಯಾಂಕುಗಳು ಕಡ್ಡಾಯವಾಗಿ ಕೊಡಬೇಕಾಗಿದ್ದ ಸಾಲದ ಮೊತ್ತದಲ್ಲಿ **50,000** ಕೋಟಿ ಖೋತಾ ಆಗಿ ಈ ಶ್ರೀಮಂತ ಕಂಪನಿಗಳ ಜೇಬು ಸೇರುತ್ತದೆ.

ಇನ್ನು ಭರವಸೆ ನೀಡಲಾಗಿರುವ **63,000** ಕೋಟಿ ಬಂಡವಾಳದಲ್ಲಿ ಯಾವ ಬಗೆಯ ಕಂಪನಿಗಳು ಯಾವ ಕ್ಷೇತ್ರದಲ್ಲಿ ಹೂಡಿಕೆ ಮಾಡುತ್ತಿವೆ? ಇದರಿಂದ ರೈತನ ಆದಾಯವಾಗಲೀ, ಒಟ್ಟಾರೆ ಕೃಷಿಗಾಗಲೀ ಹೇಗೆ ಉಪಯೋಗವಾಗುತ್ತದೆ ನೋಡೋಣ...

35,488 ಕೋಟಿ ರೂ. ಬಂಡವಾಳ ಕೃಷಿ ಮೂಲಭೂತ ಸೌಕರ್ಯ ಉದ್ದಿಮೆಯಲ್ಲೂ, **3,845** ಕೋಟಿ ರೂ.ಗಳನ್ನು ಕೃಷಿ ತೋಟಗಾರಿಕಾ ಇಂಜಿನಿಯರಿಂಗ್ ಕ್ಷೇತ್ರ ದಲ್ಲೂ, **9,635** ಕೋಟಿ ರೂ.ಗಳನ್ನು ಆಹಾರ ಸಂಸ್ಕರಣಾ ಕ್ಷೇತ್ರದಲ್ಲೂ, **1,123** ಕೋಟಿ ರೂ.ಗಳನ್ನು ಕೃಷಿ ಜ್ಞಾನ ಸಂವಹನ ಕ್ಷೇತ್ರದಲ್ಲೂ ಹೂಡಿಕೆಯಾಗಲಿದೆಯೆಂದು ಸರ್ಕಾರ ಹೇಳಿದೆ.

ಈ 'ಕೃಷಿ ಮೂಲಭೂತ ಸೌಕರ್ಯ', 'ಕೃಷಿ ಬಂಡವಾಳ ಹೂಡಿಕೆ', 'ಕೃಷಿ ಇಂಜಿನಿಯರಿಂಗ್' ಇತ್ಯಾದಿ ಶೀರ್ಷಿಕೆಗಳು ತಮ್ಮಂತೆ ತಾವೇ ನಿಜವಾದ ಅರ್ಥವನ್ನಾಗಲೀ, ಆ ಪದಗಳ ಹಿಂದಿರುವ ರಾಜಕೀಯ ಆರ್ಥಿಕತೆಯನ್ನಾಗಲೀ ಬಿಚ್ಚಿಡುವುದಿಲ್ಲ. ಅದರಲ್ಲೂ ಬಿಜೆಪಿ ಸರ್ಕಾರ ಬಣ್ಣದ ಮಾತುಗಳನ್ನಾಡಿ ನಿಜವಾದ ಅರ್ಥವನ್ನು ಮುಚ್ಚಿಡುವುದರಲ್ಲಿ ನಿಸ್ಸೀಮ. 'ವಿಲೀನ' ಎನ್ನುತ್ತಾ ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ಬಚ್ಚಿಡಲು ಯತ್ನಿಸಿದರಲ್ಲ... ಹಾಗೆ. ಹೀಗಾಗಿ ಈ ಪದಗಳ ಹಿಂದೆ ಬಚ್ಚಿಟ್ಟುಕೊಂಡಿರುವ ನಿಜವಾದ ಅರ್ಥವೇನು ಎಂದು ನೋಡೋಣ.

ಇಲ್ಲಿ 'ಕೃಷಿ ಬಂಡವಾಳ ಹೂಡಿಕೆ' ಅಂದರೆ ಒಟ್ಟಾರೆ ರೈತಾಪಿಯ ಸಾರ್ವಜನಿಕ ಪ್ರಯೋಜನಕ್ಕಾಗಿ ಮಾಡುವ ಸಾರ್ವಜನಿಕ ಹೂಡಿಕೆಯಲ್ಲ, ರೈತಾಪಿಗೆ ನಿಜಕ್ಕೂ ಉಪಯೋಗವಾಗುವ ನೀರಾವರಿ, ಶೈತ್ಯಾಗಾರ, ವಿಮೆ, ಅಗ್ಗದ ಸಾಲ ದೊರಕಿಸುವ ಹಣಕಾಸು ಮೂಲಭೂತ ಸೌಕರ್ಯಗಳಲ್ಲ, ಬದಲಾಗಿ ಖಾಸಗಿ ಕಂಪನಿಗಳು "ತಮಗೇ ಲಾಭವೆಂದು" ತೋರುವ ಕ್ಷೇತ್ರದಲ್ಲಿ ಮಾಡುವ ಹೂಡಿಕೆಗಳು. ಅವು ಮೂಲಭೂತವಾಗಿ ಉದ್ಯಮಿಯ ಲಾಭಾಸಕ್ತಿಯನ್ನು ಆಧರಿಸಿರುತ್ತವೆಯೇ ಹೊರತು ರೈತಾಪಿಯ ಹಿತಾಸಕ್ತಿಯನ್ನಲ್ಲ. ಹಾಗೆಯೇ 'ಕೃಷಿ ಮೂಲಭೂತ ಸೌಕರ್ಯ' ಎಂದರೆ ಸಾಮಾನ್ಯ ರೈತಾಪಿಗೆ ಬೇಕಿರುವ ಸರ್ವ ಋತು ಗ್ರಾಮೀಣ ರಸ್ತೆ, ಮಾರುಕಟ್ಟೆ ಸೌಕರ್ಯ, ಸಾಗಾಣಿಕೆ, ಹಣಕಾಸು ಹೊಂದಿಕೆ ಸೌಕರ್ಯಗಳಲ್ಲ. ಇಲ್ಲಿ 'ಮೂಲಭೂತ ಸೌಕರ್ಯ' ಎಂದರೆ ರಫ್ತು ಮಾರುಕಟ್ಟೆಗೆ ಬೇಕಿರುವ ಸೌಕರ್ಯ ಎಂದಷ್ಟೇ ಅರ್ಥ. ದೈತ್ಯ ಬಹುರಾಷ್ಟ್ರೀಯ ದಲ್ಲಾಳಿ ಕಂಪನಿಗಳು ರೈತಾಪಿಯಿಂದ ತಮಗೆ ಬೇಕಾದ ಸರಕನ್ನು ಕಡಿಮೆ ದರದಲ್ಲಿ ಕೊಂಡುಕೊಂಡು ಅದನ್ನು ಅಧಿಕ ದರಕ್ಕೆ ವಿದೇಶಕ್ಕೆ ಮಾರಿಕೊಳ್ಳುವ ವ್ಯವಹಾರ. ಅದಕ್ಕೆ ಬೇಕಿರುವ ಹೈ ಸ್ಪೀಡ್ ರಸ್ತೆ, ಹೈ ಟೆಕ್ ಕೃಷಿ, ವಿಮಾನ ನಿಲ್ದಾಣ, ಹಣಕಾಸು ಮೂಲಭೂತ ಸೌಕರ್ಯಗಳೇ 'ಕೃಷಿ ಉದ್ಯಮ', 'ಕೃಷಿ ಬಂಡವಾಳ ಹೂಡಿಕೆ' ಮತ್ತು 'ಕೃಷಿ ಮೂಲಭೂತ ಸೌಕರ್ಯ'ಗಳ ನಿಜವಾದ ಅರ್ಥ.

ಈ ಹಿನ್ನೆಲೆಯಲ್ಲಿ ಈ ಸಮಾವೇಶದ ಫಲಶೃತಿಯನ್ನು ವಿಶ್ಲೇಷಿಸಿದರೆ ನಿಜವಾದ ಬಂಡವಾಳ ಹೊರಗೆ ಬೀಳುತ್ತದೆ.

ಬಂಡವಾಳ ಹೂಡಿಕೆಯ ಪ್ರಧಾನ ಪಾಲು ಈ ತಥಾಕಥಿತ 'ಕೃಷಿ ಮೂಲಭೂತ ಸೌಕರ್ಯ' ಕ್ಷೇತ್ರಕ್ಕೆ ಹೋಗುತ್ತಿದ್ದು ಆ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಭರವಸೆ ನೀಡಿರುವುದು ಕೇವಲ **6-8** ಕಂಪನಿಗಳು. ಆ ಕಂಪನಿಗಳಿಗಾಗಿಯೇ ಸರ್ಕಾರ ಭರವಸೆ ನೀಡಿರುವ **50,000** ಎಕರೆ ಜಮೀನಿನಲ್ಲಿ ಶೇ.**80** ಭಾಗ ಜಮೀನು ನೀಡಲು ಒಪ್ಪಿಕೊಂಡಿದೆ. ಉಳಿದ **30**ಕ್ಕೂ ಹೆಚ್ಚು ಕಂಪನಿಗಳು ಪುಷ್ಪೋದ್ಯಮ, ಆಹಾರ ಸಂಸ್ಕರಣೆ ಉದ್ಯಮಗಳಲ್ಲಿರುವ ಸಣ್ಣ ಹಾಗೂ ಮಧ್ಯಮ ಸ್ಥಾಯಿಯ ಕಂಪನಿಗಳು. ಇವುಗಳಲ್ಲಿ ಹೆಚ್ಚಿನವು **1990**ರ ದಶಕದಲ್ಲಿ ತಲೆ ಎತ್ತಿರುವ ಕಂಪನಿಗಳು. ಈ ಕಂಪನಿಗಳ ಇನ್ನೊಂದು ಸಮಾನ ಗುಣಲಕ್ಷಣ ಯಾವುದೆಂದರೆ ಇವುಗಳಿಗೆ ಪ್ರಾರಂಭಿಕ



ರೈತರಿಂದ ಪ್ರತಿಭಟ...


ಬಂಡವಾಳವನ್ನು ಒದಗಿಸಿದ್ದೂ ಸಹ ಸರ್ಕಾರಿ ಬ್ಯಾಂಕುಗಳೇ. ಇವರ ಸೇವೆ ಮತ್ತು ಸರಕುಗಳನ್ನು ಮಾರುಕಟ್ಟೆ ದರಕ್ಕಿಂತಲೂ ಹೆಚ್ಚಿನ ದರದಲ್ಲಿ ಕೊಂಡುಕೊಳ್ಳುತ್ತಿದ್ದದ್ದೂ ಸರ್ಕಾರವೇ! ಇನ್ನೊಂದು ಸಮಾನ ಅಂಶವೆಂದರೆ ಈ ಎಲ್ಲಾ ಕಂಪನಿಗಳ ಒಡೆಯರು ಈ ಹಿಂದೆ ಅಡ್ರೆಸ್ಸಿಗೂ ಇಲ್ಲದ ಉದ್ಯಮಿಗಳಾಗಿದ್ದರೆ, ಆ ಕಂಪನಿಗಳ ನಿರ್ದೇಶನ, ಮ್ಯಾನೇಜ್‌ಮೆಂಟ್ ಇನ್ನಿತ್ಯಾದಿಗಳನ್ನು ನೋಡಿಕೊಳ್ಳುವವರು ಮಾತ್ರ ಸರ್ಕಾರದ ಮಾಜಿ ಅಧಿಕಾರಿಗಳೇ! ಇದು ಉದಾರೀಕರಣದ ನಂತರ ಈ ದೇಶದಲ್ಲಿ ದಿಢೀರ್ ಶ್ರೀಮಂತವಾದ ಎಲ್ಲಾ ಕಂಪನಿಗಳ ಗುಣಸ್ವರೂಪ ಎಂದರೆ ತಪ್ಪಿಲ್ಲ. ಸರ್ಕಾರದ ಬೊಕ್ಕಸದಿಂದ ನೇರವಾಗಿ ಖಾಸಗಿ ತಿಜೋರಿಗೆ ಲಾಭ ಹರಿದು ಬೀಳುವಂತೆ ಮಾಡಲು ಸರ್ಕಾರದ ಕಳ್ಳ ಗಿಂಡಿಗಳನ್ನು ಬಲ್ಲ ಅಧಿಕಾರಿಗಳೇ ಬೇಕಲ್ಲ. **1991**ರ ನಂತರ ಈ ಕಳ್ಳತನ ಅಧಿಕೃತ ಆರ್ಥಿಕ ನೀತಿಗಳೇ ಆಗಿಬಿಟ್ಟಿದ್ದು ಈಗ ಅದು ಹಗಲು ದರೋಡೆಯ ಸ್ವರೂಪವನ್ನು ಪಡೆದಿದೆಯಷ್ಟೆ.

ಮೊನ್ನೆ ಮೂರು ಕಂಪನಿಗಳು **4,000** ಕೋಟಿ ಮತ್ತು ಅದಕ್ಕಿಂತ ಹೆಚ್ಚಿಗೆ ಬಂಡವಾಳ ಹೂಡಿಕೆಯ ಭರವಸೆ ನೀಡಿದ್ದರೆ, ಎರಡು ಕಂಪನಿಗಳು **15,000** ಕೋಟಿ ಬಂಡವಾಳ ಹೂಡಿಕೆಯ ಭರವಸೆ ನೀಡಿವೆ. ಈ ಐದು ಕಂಪನಿಗಳು ನೀಡಿರುವ ಹೂಡಿಕೆ ಭರವಸೆ ಒಟ್ಟು **45,000** ಕೋಟಿಗಳಾಗಲಿದೆ...



ರೈತರ ಪ್ರತಿಭಟನೆ...

ಅಂದರೆ ಒಟ್ಟು ಭರವಸೆಗಳ ಶೇ.75ರಷ್ಟು. ಆದ್ದರಿಂದ ಈ ಐದು ಕಂಪನಿಗಳ ಪೂರ್ವೋತ್ತರಗಳನ್ನು ಪರಿಶೀಲಿಸಿದರೆ ಬಿಜೆಪಿ ಸರ್ಕಾರ ಕರ್ನಾಟಕದ ರೈತಾಪಿಯ ಕುತ್ತಿಗೆ ಕತ್ತರಿಸುವ ಕತ್ತಿಗೆ ಯಾವ ಮುಖವಾಡವನ್ನು ಸುತ್ತಿದೆ ಎಂಬುದು ಗೊತ್ತಾಗುತ್ತದೆ.



ಶಿವಸುಂದರ್

ಚಾರ್ವಾಕ

1. ಆ ಐದು ಬೃಹತ್ ಕಂಪನಿಗಳಲ್ಲಿ ಪ್ರಮುಖವಾದದ್ದು ಕೆನಡಾ ಮೂಲದ **Herald Don** ಎಂಬ ಕನ್ಸಲ್ಟೆನ್ಸಿ ಕಂಪನಿ. ಬೇರೆಬೇರೆ ದೇಶಗಳ ಸರ್ಕಾರಗಳಿಗೆ ಮತ್ತು ಖಾಸಗಿ ಕಂಪನಿಗಳಿಗೆ ಯಾವ್ಯಾವ ದೇಶದಲ್ಲಿ ಯಾವ್ಯಾವ ಬಗೆಯ ಹೂಡಿಕೆ ಮಾಡಬೇಕು. ಯಾವುದರಲ್ಲಿ ಲಾಭ ಇದೆ. ಯಾವ ದೇಶದಲ್ಲಿ ಯಾರನ್ನು ಹಿಡಿದರೆ ಕೆಲಸ ಸುಲಭವಾಗುತ್ತದೆ ಇತ್ಯಾದಿ ಬಗೆಯ "ಇಂಟೆಲಿಜೆನ್ಸ್" ಮಾಹಿತಿಯನ್ನು ಕೊಡುವ ಕಂಪನಿ ಇದು. ಪ್ರಧಾನವಾಗಿ ಈ ಕಂಪನಿಯ ವ್ಯವಹಾರ 1. ಕ್ಷೇತ್ರಾಧ್ಯಯನ 2. ತಮ್ಮ ಕಕ್ಷಿದಾರರು ಕೈಗೆತ್ತಿಕೊಂಡಿರುವ ಯೋಜನೆಗಳ ಸಾಧ್ಯಾಸಾಧ್ಯತೆಗಳ ಅಧ್ಯಯನ 3. ತಂತ್ರಜ್ಞಾನ ಸಹಕಾರ 4. ತಂತ್ರಜ್ಞಾನ ಹಸ್ತಾಂತರ 5. ಯೋಜನಾ ನೀಲನಕ್ಷೆ ತಯಾರಿ 6. ಯೋಜನಾ ನಿರ್ವಹಣೆ 7. ರಫ್ತು ನಿರ್ವಹಣೆ. ಅಂದರೆ ಸದಾ ಉದ್ಯಮಿಗಳ ಹಿತಾಸಕ್ತಿಯಿಂದ ಯೋಜನೆಯನ್ನು ರೂಪಿಸಿ, ತಂತ್ರಜ್ಞಾನ ಹಸ್ತಾಂತರ ಮಾಡಿ, ಯೋಜನೆಯ ನಿರ್ವಹಣೆಯನ್ನೂ ಮಾಡುವ ಕಂಪನಿ ಇದು.

ಈ ಕಂಪನಿ ಚೀನಾದಲ್ಲಿ **2002**ರಿಂದ ಕೆಲಸ ಮಾಡುತ್ತಿದ್ದು ಆ ದೇಶದ ಕೃಷಿಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಬೇಕಾದಂತೆ ಪುನರ್ ರಚನೆ ಮಾಡಲು **5-C Group** ಎಂಬ ಅಧೀನ ಸಂಸ್ಥೆಯನ್ನು ಹುಟ್ಟುಹಾಕಿದೆ. ಈಗ ಆ ಕಂಪನಿಯು ಕೃಷಿ ಕ್ಷೇತ್ರದಲ್ಲಿ ಅತಿ ದೊಡ್ಡ ಗ್ರಾಹಕ ಮಾರುಕಟ್ಟೆ ಆಗಿರುವ ಭಾರತದ ಮೇಲೆ ಕಣ್ಣಿಟ್ಟಿದೆ. ಅದಕ್ಕೆ ಕರ್ನಾಟಕ ಹೆಬ್ಬಾಗಿಲನ್ನು ತೆರೆದಿದೆ. ಈ ಕಂಪನಿ **15,000** ಕೋಟಿ ಬಂಡವಾಳ ಹೂಡಿಕೆ ಮಾಡುವ ಭರವಸೆ ನೀಡಿದೆ.

ಮುಂದಿನ ದಿನಗಳಲ್ಲಿ ಭಾರತದಲ್ಲಿ ಹೂಡಿಕೆ ಮಾಡಲು ಬರಲಿರುವ ನೂರಾರು ಕೃಷಿ ಆಧಾರಿತ ಬಹುರಾಷ್ಟ್ರೀಯ ಮತ್ತು ಸ್ವದೇಶಿ ಕಂಪನಿಗಳಿಗೆ ಎಲ್ಲೆಲ್ಲಿ ಹೂಡಿಕೆ ಮಾಡಬ[ೇಕು,] ಸರ್ಕಾರದಲ್ಲಿ ಯಾರನ್ನು ಹಿಡಿಯಬೇಕು, ಇತ್ಯಾದಿ '[...] ಸಂವಹನಾ 'ಸೇವೆ'ಯನ್ನು ಈ ಕಂಪನಿ ಮಾಡ[...] ಜೊತೆಗೆ, ಸರ್ಕಾರವು ಕೃಷಿ ನೀತಿಯನ್ನು ರೂಪಿಸು[...] ಅದರಲ್ಲಿ ಪ್ರಮುಖ ಪಾತ್ರ ವಹಿಸಿ ಇಡೀ ನಾಡಿನ ಕೃಷಿ[...] ಆಹಾರ ಸಾರ್ವಭೌಮತೆಯ ದೃಷ್ಟಿಯಿಂದಲ್ಲದೆ [...] ರಾಷ್ಟ್ರೀಯ ಮಾರುಕಟ್ಟೆಯ ಅಗತ್ಯವನ್ನು ಗಮನದ[...] ಕೊಂಡು ರಫ್ತು ಆಧಾರಿತ ಕೃಷಿಯನ್ನಾಗಿ ಪರಿವರ್ತಿ[...] ಯಾವ ರೀತಿಯ ನೀತಿಯನ್ನು ತರಬೇಕು ಎಂದು "ಸ[...] ಸಲಹೆ" ಮತ್ತು "ಸಹಕಾರ"ವನ್ನು ಕೊಡುತ್ತದೆ. ಅದ[...] ಜನಪ್ರತಿನಿಧಿಗಳಿಗೆ 'ಜ್ಞಾನ ಸಂವಹನ' ಮಾಡಲು [...] 'ಶಿಕ್ಷಣ ನೀಡಲು' ಕೋಟ್ಯಾಂತರ ರೂಪಾಯಿ [...] ಮಾಡಲಿದೆ!

ಈ ಕಂಪನಿ ಈಗಾಗಲೇ ರಾಜ್ಯದಲ್ಲಿ ಔಷಧಿ ಸಸ್ಯ[...] ಬೆಳೆಯಲು ಬೇಕಾದ ನೆಲವನ್ನು, ಬೆಳೆದದ್ದನ್ನು [...] ಮಾಡಲು ಪರವಾನಗಿಯನ್ನು ಪಡೆಯಲು ನಿಯಮ[...] ಬದಲಾವಣೆ ತರುವಂತೆ ಸರ್ಕಾರವನ್ನು ಪ್ರೇರೇಪಿಸ[...] ಅದಕ್ಕೆ ಕಾರಣ ವಿಶ್ವ ಆರೋಗ್ಯ ಸಂಸ್ಥೆಯ ಇತ್ತೀಚಿನ ವರ[...] ಭಾರತದಲ್ಲಿ ಈ ಔಷಧೀಯ ಸಸ್ಯಗಳ ವಹಿವಾಟು 30[...] ಕೋಟಿಯಷ್ಟಿದೆ ಎಂದಿರುವುದು. ಜೊತೆಗೆ ಅಂತರರಾ[...] ಮಟ್ಟದಲ್ಲಿ ಈಗ ಈ ವಹಿವಾಟು 1,30[...] ಕೋಟಿಯಷ್ಟಿದ್ದು 2050ರ ವೇಳೆಗೆ ಅದು 25[...] ಕೋಟಿ ರೂಪಾಯಿಗಳಷ್ಟಾಗುತ್ತದೆ ಎ[...] ಅಂದಾಜಿಸಿರುವುದು.

ಅಂದರೆ ಒಟ್ಟು ವಹಿವಾಟಿನಲ್ಲಿ ದೊಡ್ಡ ಪಾ[...] ಭಾರತ ರಫ್ತು ಮಾಡಲು ಸಾಧ್ಯವಿರುವುದರಿಂದ ಆ ಕ್ಷೇ[...] ಖಾಸಗಿ ಕಂಪನಿಗಳ ಪರವಾದ ಕಾನೂನು, ಪೇಟೆಂಟ್ [...] ಮತ್ತು ರಫ್ತು ಮಾಡಲು ಪೂರಕವಾದ ನೀತಿಗಳ[...] **Herald Don** ಖಾಸಗಿ ಕಂಪನಿಗಳಿಗೆ ಮತ್ತು ಸರ[...] ಕನ್ಸಲ್ಟೆನ್ಸಿ ಶುರುಮಾಡಿದೆ. ಇದು ನಾಡಿನ ಸಂಪನ್ಮೂಲ[...] ಜನರ ಸಾಮುದಾಯಿಕ ಒಡೆತನದಿಂದ ಕಿತ್ತು [...] ಕಂಪನಿಗಳ ವಶಕ್ಕೆ ಮತ್ತು ಅವುಗಳ ಲಾಭಕ್ಕೆ ಕೊಡು[...]

ಇದಲ್ಲದೆ ಎಥೆನಾಲ್ ರಫ್ತಿಗೆ ಕಬ್ಬು ಮುಸುಕಿನ ಜೋ[...] ಕಾಂಟ್ರ್ಯಾಕ್ಟ್ ಫಾರ್ಮಿಂಗ್‌ಗೆ ಪೂರಕವಾದ ತಿದ್ದುಪಡಿ[...] ತರುವುದರ ಹಿಂದೆಯೂ ಮೆಕೆನ್ಸಿ ಮತ್ತು **Herald** [...] ನಂತಹ ಕಂಪನಿಗಳ ಹಿಕಮತ್ತಿದೆ. ಈ ಕಂಪನಿ 15[...] ಕೋಟಿ ಬಂಡವಾಳ ಹೂಡಿ ವಿದೇಶಿ ಮತ್ತು ಸ್ವ[...] ಕಂಪನಿಗಳಿಗೆ ಲಾಭ ತರುವುದರಿಂದ ನಾಡಿನ ರೈತರಿ[...] ಉಪಯೋಗ?

2. ಸುಮಾರು **15,000** ಕೋಟಿ ರೂ.ಗಳಷ್ಟು ಬಂಡ[...] ಹೂಡಿಕೆ ಮಾಡುತ್ತಿರುವ ಮತ್ತೊಂದು ಸಂಸ್ಥೆ ಪ[...] ಬಂಗಾಳದ **Srei Infrastructure Fina[...] Limited Company.** 1989ರಲ್ಲಿ ಸ್ಥಾಪನೆ[...] ಈ ಕಂಪನಿ 20 ವರ್ಷಗಳಲ್ಲಿ 15,000 ಕೋ[...] ಬಂಡವಾಳ ಹೂಡುವಷ್ಟು ಸಾಮರ್ಥ್ಯ ಸಾಧ್ಯವಾ[...] ಜಾಗತೀಕರಣ ಮತ್ತು ಉದಾರೀಕರಣದ ಕಾಲಘಟ್ಟ[...] ಸರ್ಕಾರಿ ಸ್ವತ್ತು ಮತ್ತು ಉದ್ದಿಮೆಗಳ ಖಾಸಗೀಕರ[...] ಲಾಭವನ್ನು ಉಡಾಯಿಸುವುದರ ಮೂಲಕ. ಅದ[...] 2000ದ ನಂತರ ಸರ್ಕಾರದ ಪ್ರತಿಯೊಂದು ಯೋ[...] ಯಲ್ಲೂ ಖಾಸಗಿ ಸಹಭಾಗಿತ್ವ ಇರಲೇಬೇಕೆಂಬ [...] ವಾಳಶಾಹಿ ಪರ ಯೋಜನಾನೀತಿಗಳು ಶಾಸನಬದ್ಧ[...] ಸಂವಿಧಾನಾತ್ಮಕ ಅಧಿಕಾರವನ್ನು ಗಳಿಸಿಕೊಂಡ ನ[...] ▶

ದೇವ್ ಆನಂದ್ ಜೊತೆ ಕಳೆದ ಸಂಜೆಯ ನೆನಪು




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನಮ್ಮ 'ಗ್ಯಾಂಗ್'ನಲ್ಲಿ ನಾಲ್ಕು ಜನ ಯುವತಿಯರಿದ್ದೆವು. ನಮ್ಮೆಲ್ಲರಿಗೂ ಆಗ 17-18ರ ಪ್ರಾಯ. ಆ ವಯಸ್ಸಿಗೆ ತಕ್ಕಂತೆ ಬದುಕಿನ ಬಗ್ಗೆ ಹೊಸ ಕನಸುಗಳನ್ನು ಕಾಣುತ್ತಾ, ಭವಿಷ್ಯದ ಬಗ್ಗೆ ಮನದೊಳಗೆ ಆಶೆಗಳನ್ನು ಬೆಚ್ಚಗಿಟ್ಟುಕೊಂಡು, ರೊಮ್ಯಾಂಟಿಕ್ ಆಗಿ ಚಿಂತಿಸುತ್ತಿದ್ದ ಕಾಲ. ಆಗ ನಮ್ಮ ಬದುಕಿನಲ್ಲಿ ಬಾಲಿವುಡ್ಡಿನ ಮೂವರು ಪುರುಷರು ಪ್ರಮುಖ ಸ್ಥಾನ ಪಡೆದಿದ್ದರು. ಆ ಮೂವರೆಂದರೆ ದಿಲೀಪ್ ಕುಮಾರ್, ದೇವ್ ಆನಂದ್ ಮತ್ತು ಗುರುದತ್. ಅಷ್ಟು ಹೊತ್ತಿಗಾಗಲೇ ಗುರುದತ್ ತೀರಿಕೊಂಡು ಒಂದು ದಶಕಕ್ಕೂ ಮೇಲಾಗಿತ್ತು. ದಿಲೀಪ್ ಕುಮಾರ್ ಮತ್ತು ದೇವ್ ಆನಂದ್‌ಗೆ ನಮ್ಮ ಅಪ್ಪಂದಿರಿಗಿಂತಲೂ ಹೆಚ್ಚು ವಯಸ್ಸಾಗಿತ್ತು. ಆದರೂ ಈ ಮೂವರು ನಟಿಸಿದ್ದ ಕಪ್ಪುಬಿಳುಪಿನ ಚಿತ್ರಗಳಿಗೆ ಮನಸೋತು ಆ ಸಿನಿಮಾಗಳಲ್ಲಿದ್ದ ಹೀರೋಗಳು ನಮ್ಮ ಜೀವನವನ್ನು ಹೊಕ್ಕರೆ ಎಷ್ಟು ಚೆಂದ ಎಂದು ಆಶಿಸುತ್ತಿದ್ದೆವು.

ನಮ್ಮ ಗ್ಯಾಂಗಿನಲ್ಲಿದ್ದವರು ಪ್ರಭಾ, ರೀಟಾ, ಜಯಶ್ರೀ ಮತ್ತು ನಾನು. (ಹಲವೊಮ್ಮೆ ನಮಗಿಂತ ಕಿರಿಯಳಾಗಿದ್ದ ನನ್ನ ತಂಗಿ ಕವಿತಾಳಿಗೆ ನಮ್ಮ ಗ್ಯಾಂಗಿನಲ್ಲಿ 'ತಾತ್ಕಾಲಿಕ ಸದಸ್ಯತ್ವ'ವನ್ನು ಕೊಡುವಷ್ಟು 'ಉದಾರಿತನ' ತೋರುತ್ತಿದ್ದೆವು.) ನಾವು ನಾಲ್ವರು ಆಗ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದೆವು. ಆದರೆ ಶನಿವಾರ ಬೆಳಗ್ಗೆ ಮಾತ್ರ ತಪ್ಪದೆ ಕಾಲೇಜಿಗೆ ಚಕ್ಕರ್ ಹೊಡೆದು ಕಾಲೇಜಿನ ಸುತ್ತಮುತ್ತ ಇದ್ದ ಸಿನಿಮಾಮಂದಿರಗಳಿಗೆ ಹಾಜರಾಗುತ್ತಿದ್ದೆವು. ಆ ದಿನಗಳಲ್ಲಿ ಚಿತ್ರಮಂದಿರಗಳಲ್ಲಿ ಹಳೆಯ ಹಿಂದಿ ಸಿನಿಮಾಗಳನ್ನು ಮಾರ್ನಿಂಗ್ ಶೋಗಳಲ್ಲಿ ತೋರಿಸುತ್ತಿದ್ದರು. ಮಾರ್ನಿಂಗ್ ಶೋಗಳ ಟಿಕೆಟ್ ಬೆಲೆ ಕಡಿಮೆ ಇದ್ದದ್ದು ನಮಗೆ ಮುಖ್ಯವಾಗಿತ್ತಲ್ಲದೆ, ಮನೆಯಲ್ಲಿ ಅಪ್ಪ ಅಮ್ಮನಿಗೆ ನಾವು ಕಾಲೇಜಿಗೆ ಹೋಗಿದ್ದೆವು ಎಂದು ನಂಬಿಸುವುದು ಸುಲಭವಾಗಿದ್ದರಿಂದ ನಮಗೆ ಮಾರ್ನಿಂಗ್ ಶೋಗಳು ಅನುಕೂಲಕರವಾಗಿದ್ದವು




ದೇವ್ ಆನಂದ್ ಮತ್ತು ಗುರುದತ್

ನಾವು ಹಾಗೆ ಕದ್ದು ನೋಡಿದ ಹಲವಾರು ಚಿತ್ರಗಳಲ್ಲಿ 'ಮಧುಮತಿ' ಒಂದು. ಆ ಸಿನಿಮಾ ನಾವುಗಳು ಹುಟ್ಟುವುದಕ್ಕೆ ಮುನ್ನವೇ ಬಿಡುಗಡೆಗೊಂಡಿತ್ತು. ಪುನರ್‌ಜನ್ಮದ ಕತೆ ಹೊಂದಿರುವ ಆ ಸಿನಿಮಾದಲ್ಲಿ ದಿಲೀಪ್ ಕುಮಾರ್ ಮತ್ತು ವೈಜಯಂತಿಮಾಲಾ ನಟಿಸಿದ್ದರು. ಯುವಪ್ರೇಮಿಯ ಪಾತ್ರದಲ್ಲಿದ್ದ ದಿಲೀಪ್ ಕುಮಾರ್ ಎಷ್ಟು ಮೃದುವಾಗಿ, ಚೆಂದವಾಗಿ, ಪ್ರೀತಿಯಿಂದ ತನ್ನ ಪ್ರಿಯತಮೆಯನ್ನು ಆ ಸಿನಿಮಾದಲ್ಲಿ ಕರೆದಿದ್ದನೆಂದರೆ ನಾವೆಲ್ಲ ಆತನಿಗೆ ಸಂಪೂರ್ಣವಾಗಿ ಫಿದಾ ಆಗಿ "ಆಹ್ಹಾ, ನಮಗೂ ಆತನಂತಹ ಪ್ರಿಯತಮ ಸಿಗಬಾರದೇ" ಎಂದು ಹಂಬಲಿಸಿದ್ದೆವು.

ಹಾಗೆಯೇ ಇನ್ನೊಂದು ಚಿತ್ರ 'ಪ್ಯಾಸಾ'. ಇದು ಕೂಡ ನಮ್ಮ ಅಪ್ಪ-ಅಮ್ಮಂದಿರು ಮದುವೆ ಆಗುವುದಕ್ಕೂ ಮುನ್ನ ತಯಾರಾದ ಸಿನಿಮಾ. ಗುರುದತ್ ನಿರ್ದೇಶಿಸಿ ನಟಿಸಿದ್ದ 'ಪ್ಯಾಸಾ' ಚಿತ್ರವನ್ನು ನೋಡಿದ ನಂತರ ಆತನಷ್ಟು ಸುರದ್ರೂಪಿಯಾದ, ಉತ್ಕಟವಾದ, ಕವಿ ಮನಸ್ಸಿನ ಯುವಕ ನಮಗೂ ಸಿಗಬಾರದೇಕೆ ಎಂದು ಆಶಿಸಿದ್ದೆವು. ಅದರಲ್ಲೂ ಗುರುದತ್ ಕನ್ನಡಿಗರಂತೆ ಎಂದು ಗೊತ್ತಾದ ನಂತರ ಆತನಂತೆ ಯಾರಾದರೂ ಕನ್ನಡ ಯುವಕರು ಇರಬಾರದೇಕೆ, ಅಂಥವನೊಬ್ಬ ನಮಗೆ ಸಿಗಬಾರದೇಕೆ ಎಂದು ಕನಸು ಕಂಡಿದ್ದೆವು.

ದೇವ್ ಆನಂದ್ ಮತ್ತು ಸಾಧನಾ ನಟಿಸಿದ್ದ 'ಹಮ್ ದೋನೋ' ಚಿತ್ರ ಕೂಡ ನಾವು ಈ ಜಗತ್ತಿಗೆ ಬರುವುದಕ್ಕೂ ಮುನ್ನ ತೆರೆಕಂಡಿತ್ತು. ಆ ಚಿತ್ರದಲ್ಲಿ ಸೈನ್ಯಾಧಿಕಾರಿಯಾಗಿ ದ್ವಿಪಾತ್ರದಲ್ಲಿ ನಟಿಸುವ ಹೊತ್ತಿಗೆ ದೇವ್ ಆನಂದ್ ಅವರಿಗೆ 38 ವರ್ಷ ವಯಸ್ಸಾಗಿತ್ತು. ಆದರೂ ಆತ ಆ ಚಿತ್ರದಲ್ಲಿ ಎಷ್ಟು ಹ್ಯಾಂಡ್‌ಸಮ್ ಆಗಿದ್ದನೆಂದರೆ ನಮಗೆಲ್ಲ ಆತ ತುಂಬಾ ಇಷ್ಟವಾಗಿದ್ದ. ಅಷ್ಟೇ ಅಲ್ಲ, ಆ ಚಿತ್ರದಲ್ಲಿ ದೇವ್ ಆನಂದ್



ಸಾಧನಾಳಿಗೆ "ಅಭಿ ನಾ ಜಾವ್ನೋ ಚೋಡ್ ಕರ್, ಕಿ ದಿಲ್ ಅಭೀ ಭರಾ ನಹೀ" (ಹೊರಡಬೇಡ ಈ ಕೂಡಲೇ, ಶಾಂತಗೊಂಡಿಲ್ಲ ಮನದ ಅಲೆ, ಅರೆಕ್ಷಣ ಹಿಂದೆ ತಾನೇ ಬಂದಿರುವೆ, ವಸಂತದಂತೆ ಎಲ್ಲೆಡೆ ಹಬ್ಬಿರುವೆ) ಎಂದು ಹಾಡಿದಾಗ ಆತ ನಮಗೇ ಆ ಸಾಲುಗಳನ್ನು ಹಾಡುತ್ತಿದ್ದಾನೆಂದು ಭ್ರಮಿಸಿದ್ದೆವು.

ಜೊತೆಗೆ ಅದೇ ಚಿತ್ರದ ಇನ್ನೊಂದು ಹಾಡಿನಲ್ಲಿ ದೇವ್ ಆನಂದ್ "ಮೆ ಜಿಂದಗೀ ಕೆ ಸಾಥ್ ನಿಭಾತಾ ಚಲಾಗಯಾ, ಹರ್ ಫಿಕರ್‌ಕೊ ದುವೇಮೆ ಉಡಾತಾ ಚಲಾಗಯಾ..." (ಬದುಕಿನೊಂದಿಗೆ ನಾನು ಹಾಗೇ ಸಾಗಿದೆ, ಚಿಂತೆಗಳ ಹೊಗೆಯಾಗಿಸುತ್ತಾ ಮುಂದೆ ಸಾಗಿದೆ, ಸೋಲುಗಳ ಸೂತಕದಾಚರಣೆ ಬಲು ವ್ಯರ್ಥ, ಸೋಲುಗಳ ಸಡಗರವಾಗಿಸುತ್ತಾ ಮುಂದೆ ಸಾಗಿದೆ) ಎಂದು ಹಾಡಿದಾಗ ಆತ ನಮ್ಮ ಜೀವನ ದೃಷ್ಟಿಯನ್ನೇ ಹಾಡುತ್ತಿದ್ದಾನೆನಿಸಿತ್ತು.

(ಅಂದಹಾಗೆ, ಇವತ್ತಿಗೂ ಜನಪ್ರಿಯವಾಗಿರುವ ಈ ಎರಡೂ ಹಾಡುಗಳನ್ನು ಬರೆದದ್ದು ಖ್ಯಾತ ಕವಿ ಸಾಹಿರ್ ಲುಧಿಯಾನ್ವಿ. ನಮ್ಮ ಪತ್ರಿಕೆಯ ಮಿತ್ರ ಸಂವರ್ತ 'ಸಾಹಿಲ್' ಲುಧಿಯಾನ್ವಿಯ ಪರಮ ಆರಾಧಕರಾಗಿದ್ದು, ಇವುಗಳನ್ನು ಕನ್ನಡಕ್ಕೆ ಅನುವಾದಿಸಿ ನನಗೆ ಸಹಾಯ ಮಾಡಿದ್ದಾರೆ. ಈ ಹಾಡುಗಳು ಎಷ್ಟು ಆಕರ್ಷಕವಾಗಿವೆ ಎಂದರೆ, ನನಗಿಂತ ಹಿಂದಿನ ತಲೆಮಾರನ್ನಲ್ಲದೆ, ನನ್ನ ತಲೆಮಾರನ್ನೂ ಒಳಗೊಂಡಂತೆ ಇವತ್ತಿನ ಯುವ ಪೀಳಿಗೆಗೂ ಇಷ್ಟವಾದ ಹಾಡುಗಳಾಗಿವೆ.)

ನನ್ನ ಯೌವನದಲ್ಲಿ ನನಗೆ ತುಂಬಾ ಇಷ್ಟವಾಗಿದ್ದ ದಿಲೀಪ್ ಕುಮಾರ್ ಮತ್ತು ಗುರುದತ್ ಅವರನ್ನು ಭೇಟಿ ಆಗುವ ಅವಕಾಶ ನನಗೆ ಎಂದೂ ಸಿಗಲಿಲ್ಲ. ಆದರೆ ದೇವ್ ಆನಂದ್ ಅವರನ್ನು ಒಮ್ಮೆ ಭೇಟಿ ಆಗುವ ಭಾಗ್ಯ ನನಗೆ ಸಿಕ್ಕಿತ್ತು.

ಅದು 1995. ಆಗ ನನ್ನ ಗೆಳೆಯ ಚಿದಾನಂದ ರಾಜಘಟ್ಟ ಮುಂಬೈಯಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಸಂಪಾದಕನಾಗಿದ್ದ. ನಾನು ಆಗಾಗ್ಗೆ ಮುಂಬೈಗೆ ಹೋಗಿ ಚಿದು ಮನೆಯಲ್ಲಿ ತಂಗುತ್ತಿದ್ದೆ. ಒಮ್ಮೆ ನಾನು ಚಿದುನ ಮನೆಯಲ್ಲಿ ಉಳಿದುಕೊಂಡಿದ್ದಾಗ ನನಗೆ ಆಫೀಸಿನಿಂದ ಫೋನ್ ಮಾಡಿದ ಚಿದು "ದೇವ್ ಆನಂದ್ ಅವರು ಇವತ್ತು ಸಂಜೆ ನನ್ನನ್ನು ಅವರ ಮನೆಗೆ ಆಹ್ವಾನಿಸಿದ್ದಾರೆ. ನೀನೂ ನನ್ನೊಂದಿಗೆ ಬರುತ್ತೀಯಾ?" ಎಂದು ಕೇಳಿದ. ನಾನು ಸಂತೋಷವಾಗಿಯೇ ಒಪ್ಪಿಕೊಂಡೆ. ಚಿದು ತನ್ನೊಂದಿಗೆ ನನ್ನನ್ನೂ ಕರೆತರುವ ಬಗ್ಗೆ ದೇವ್ ಆನಂದ್ ಅವರಿಗೆ ಹೇಳಿದಾಗ "ದಿ ಯಂಗ್ ಲೇಡಿ ಈಸ್ ವೆರಿ ವೆಲ್‌ಕಂ ಟು ಮೈ ಹೌಸ್" ಎಂದರು.

ನಾವಿಬ್ಬರೂ ಪಾಲಿ ಹಿಲ್ಸ್‌ನಲ್ಲಿದ್ದ ದೇವ್ ಆನಂದ್ ಅವರ ಮನೆಗೆ ಹೋದೆವು. ಹಳದಿ ಶರ್ಟ್, ಬ್ರೌನ್ ಬಣ್ಣದ ಕಾರ್ಡುರಾಯ್ ಪ್ಯಾಂಟ್, ಜಾಕೆಟ್ ಮತ್ತು ಕತ್ತಿನ ಸುತ್ತ ಸ್ಕಾರ್ಫ್ ಒಂದನ್ನು ದೇವ್ ಆನಂದ್ ಧರಿಸಿದ್ದರು. ಬಹಳಷ್ಟು ಸಿನಿಮಾಗಳಲ್ಲಿ ಅವರು ಸದಾ ಧರಿಸುತ್ತಿದ್ದ ಹ್ಯಾಟ್ ಮಾತ್ರ ಅವತ್ತು ಅವರ ತಲೆ ಮೇಲಿರಲಿಲ್ಲ. ದೇವ್ ಆನಂದ್ ಅವರು ನಮ್ಮಿಬ್ಬರನ್ನು ಆತ್ಮೀಯವಾಗಿ ತಮ್ಮ ಮನೆಗೆ ಬರಮಾಡಿಕೊಂಡರು.

ಅವತ್ತು ಅವರ ಮನೆಯಲ್ಲಿ ಯಾವುದೋ ಕಾರಣಕ್ಕೆ ಸಂತೋಷಕೂಟ ಇದೆ ಎಂದೂ, ಅಲ್ಲಿ ಬಹಳಷ್ಟು ಜನ ಇರುತ್ತಾರೆಂದೂ ಭಾವಿಸಿದ್ದ ನನಗೆ ಒಂದು ಅಚ್ಚರಿ ಕಾದಿತ್ತು. ಯಾಕೆಂದರೆ ಅವತ್ತು ಚಿದು ಮತ್ತು ನನ್ನನ್ನು ಹೊರತುಪಡಿಸಿದರೆ ಬೇರೆ ಯಾರೂ ಇರಲಿಲ್ಲ. ಅಂದರೆ ಅವರು ನಮ್ಮಿಬ್ಬರನ್ನೇ ತಮ್ಮ ಮನೆಗೆ ಕರೆದಿದ್ದರು.

ನಾವು ಆಗಮಿಸಿದ ಆರಂಭದಲ್ಲಿ ಅವರ ಸಹಾಯಕನೊಬ್ಬ ನೀರು, ಗ್ಲಾಸ್ ಇತ್ಯಾದಿಗಳನ್ನು ಇಟ್ಟ ನಂತರ ಹೊರಟು ಹೋದ. ಅವರ ಮನೆಯಲ್ಲಿ ವಾಸ ಮಾಡುತ್ತಿದ್ದ ಬೇರೆ ಯಾರೂ ನಮಗೆ ಕಾಣಿಸಲಿಲ್ಲ. ದೇವ್ ಆನಂದ್ ಅವರೇ ನಮ್ಮಿಬ್ಬರನ್ನು ಕೇಳಿ ಮೂವರಿಗೂ ಒಂದೊಂದು ಗ್ಲಾಸ್‌ನಲ್ಲಿ ವಿಸ್ಕಿಯನ್ನು ತುಂಬಿಸಿ ತಂದರು. ಅಷ್ಟುಹೊತ್ತಿಗೆ ಅವರಿಗೆ 73 ವರ್ಷ ವಯಸ್ಸಾಗಿತ್ತು. ಆದರೂ ಆ ವಯಸ್ಸಿಗೆ ಸಹಜವಾದ ನಿಧಾನ ಅವರಲ್ಲಿ ಕಂಡುಬರಲಿಲ್ಲ. ಬದಲಾಗಿ ಅವರ ಮಾತು ಮತ್ತು ನುಡಿಯಲ್ಲಿ ಉತ್ಸಾಹ ಪುಟಿಯುತ್ತಿತ್ತು. ತಾವು ಹಿರಿಯರು ಎಂದಾಗಲೀ, ನಮ್ಮ ನಡುವೆ ಒಂದು ಪೀಳಿಗೆಯ ಅಂತರ ಇದೆ ಎಂಬಂತಾಗಲೀ ಅವರ ವರ್ತನೆ ಇರಲಿಲ್ಲ. ನಾವೆಲ್ಲರೂ ಸಮಾನರು, ಬಹಳ ದಿನಗಳ ನಂತರ ಭೇಟಿ ಆಗುತ್ತಿರುವ ಮಿತ್ರರು ಎಂಬಂತಿತ್ತು ಅವರ ನಡವಳಿಕೆ.

ಹೊಸ ಹಿಂದಿ ಸಿನಿಮಾ, ಹಳೆ ಕಾಲದ ಚಿತ್ರಗಳು, ಹಾಲಿವುಡ್ ಸಿನಿಮಾಗಳು, ಇತ್ಯಾದಿಗಳ ಬಗ್ಗೆ ಮಾತನಾಡಿದ ನಂತರ ಅವರು ತಮ್ಮ ಹೊಸ ಚಿತ್ರದ ಬಗ್ಗೆ ತುಂಬಾ ಉತ್ಸಾಹದಿಂದ ಮಾತನಾಡಲಾರಂಭಿಸಿದರು. 1978ರಲ್ಲಿ ಬಿಡುಗಡೆಗೊಂಡ ಅವರ 'ದೇಸ್ ಪರ್ದೇಸ್' ನಂತರ ಅವರು ನಟಿಸಿದ್ದ ಯಾವ ಚಿತ್ರವನ್ನೂ ನಾವು ನೋಡಿರಲಿಲ್ಲ. ಮಾತ್ರವಲ್ಲ, ಆ ಚಿತ್ರದ ನಂತರ ಅವರು ನಿರ್ದೇಶಿಸಿ, ನಟಿಸಿದ್ದ ಎಲ್ಲ ಚಿತ್ರಗಳೂ ತೋಪಾಗಿದ್ದವು ಎಂಬುದು ನಮಗೆ ಗೊತ್ತಿತ್ತು. ಆದರೂ, ಆ ವಯಸ್ಸಿನಲ್ಲೂ, ಅಷ್ಟೊಂದು ಸೋಲುಗಳ ನಂತರವೂ ಅವರು ಹೊಸ ಸಿನಿಮಾದ ಬಗ್ಗೆ ಅಷ್ಟು ಉತ್ಸಾಹದಿಂದ ಮಾತನಾಡುತ್ತಿರುವುದನ್ನು ಕಂಡು ನಮ್ಮಿಬ್ಬರಿಗೂ ಅಚ್ಚರಿಯೋ ಅಚ್ಚರಿ. ಆಗ ನಾನು ದೇವ್ ಆನಂದ್ ಅವರಿಗೆ "ಫ್ರಮ್ ವೇರ್ ಡು ಯು ಗೆಟ್ ಆಲ್ ದಿಸ್ ಎನರ್ಜಿ? (ನಿಮಗೆ ಇಷ್ಟೊಂದು ಕಸುವು ಎಲ್ಲಿಂದ ಬರುತ್ತದೆ)" ಎಂದು ಕೇಳಿದೆ.

"ಸಿನಿಮಾ ಈಸ್ ಮೈ ಫ್ಯಾಷನ್. ಇಟ್ ಕೀಪ್ಸ್ ಮಿ ಗೋಯಿಂಗ್. ಆಫ್ಟರ್‌ಆಲ್, ವಾಟ್ ಈಸ್ ಏಜ್? ಐ ಸ್ಟಿಲ್ ಫೀಲ್ ವೆರಿ ಯಂಗ್!" (ಸಿನಿಮಾ ಎಂದರೆ ನನಗೆ ತುಂಬಾ ಇಷ್ಟ. ಅದೇ ನನ್ನಲ್ಲಿ ಉತ್ಸಾಹ ಮೂಡಿಸುತ್ತದೆ. ವಯಸ್ಸು ಎಂದರೆ ಏನು? ನಾನಿನ್ನೂ ಯುವಕ ಎನಿಸುತ್ತದೆ) ಎಂದು ಉತ್ತರಿಸಿದ್ದರು.

ಸಂಜೆ ಕಳೆಯುತ್ತಾ ಹೋದಂತೆ ನಮ್ಮ ನಡುವಿನ ಹರಟೆ ಮುಂದುವರೆಯುತ್ತಾ ಹೋಯಿತು. ಚಿದುನ ಗ್ಲಾಸ್‌ನಲ್ಲಿದ್ದ ವಿಸ್ಕಿ ಖಾಲಿಯಾದ ಕೂಡಲೇ ಅದನ್ನು ಗಮನಿಸಿದ ದೇವ್ ಆನಂದ್ ಅವರು ಆತನಿಗೆ ಮತ್ತೊಂದು ಡ್ರಿಂಕ್ ತುಂಬಿಸಿ ಕೊಟ್ಟರು. ಆಗ ದೇವ್ ಆನಂದ್ ಅವರ ಗ್ಲಾಸ್ ಇನ್ನೂ ತುಂಬಿದ್ದ ಹಾಗೆಯೇ ಇದ್ದದ್ದನ್ನು ಗಮನಿಸಿದ ನಾನು "ಬಟ್ ಯೂ ಆರ್ ನಾಟ್ ಡ್ರಿಂಕಿಂಗ್" (ಆದರೆ ನೀವು ಕುಡಿಯುತ್ತಲೇ ಇಲ್ಲ) ಎಂದು ಅಚ್ಚರಿ ವ್ಯಕ್ತಪಡಿಸಿದೆ. ಅದಕ್ಕೆ ಅವರು "ನೋ, ನೋ. ಐ ಆಮ್" ಎಂದು ತಮ್ಮ ಗ್ಲಾಸಿನಿಂದ ಒಂದು ಸಣ್ಣ ಗುಟುಕನ್ನು ಹೀರಿದರು. ನಾವು ಅಲ್ಲಿಂದ ಹೊರಡುವ ತನಕ ಅವರು ತಮ್ಮ ಗ್ಲಾಸ್‌ನಿಂದ ಮತ್ತೊಂದು ಸಿಪ್ ತೆಗೆದುಕೊಂಡದ್ದನ್ನು ನಾನು ಕಾಣಲಿಲ್ಲ. ಅಂದರೆ ಅವರು ತಮ್ಮ ಅತಿಥಿಗಳೊಂದಿಗೆ ತಾವೂ ಕುಡಿಯುತ್ತಿದ್ದೇವೆ ಎಂದು ತೋರಿಸಿಕೊಳ್ಳುವುದಕ್ಕೆ ತಮ್ಮ ಬಳಿ ಒಂದು ಗ್ಲಾಸ್ ಇಟ್ಟುಕೊಂಡಿದ್ದರೆ ಹೊರತು ಅವರಿಗೆ ಕುಡಿಯುವ ಇಚ್ಛೆ ಇದ್ದಂತಿರಲಿಲ್ಲ.


ಒಮ್ಮೆ ಮಾತಿನ ಮಧ್ಯದಲ್ಲಿ ಚಿದು "ನನಗೆ ತಮ್ಮ ಸಿನಿಮಾಗಳಿಗಿಂತ ನಿಮ್ಮ ಅಣ್ಣ ಗೋಲ್ಡಿ ಆನಂದ್ ಅವರು ನಿರ್ದೇಶಿಸಿದ್ದ ಸಿನಿಮಾಗಳು ಹೆಚ್ಚು ಇಷ್ಟವಾಗಿದ್ದವು" ಎಂದಾಗ ದೇವ್ ಆನಂದ್ ಅವರು ಕಿಂಚಿತ್ತೂ ಬೇಜಾರು ಮಾಡಿಕೊಳ್ಳದೆ "ಹಿಸ್ ಸ್ಟೈಲ್ ಈಸ್ ಡಿಫರೆಂಟ್, ಮೈ ಸ್ಟೈಲ್ ಈಸ್ ಡಿಫರೆಂಟ್" ಎಂದು ನಕ್ಕಿದ್ದರು.

ರಾತ್ರಿ ಸುಮಾರು ಹನ್ನೊಂದು ಗಂಟೆಗೆ ಚಿದು ಮತ್ತು ನಾನು ದೇವ್ ಆನಂದ್ ಅವರ ಮನೆಯಿಂದ ಹೊರಟೆವು. ದಾರಿಯಲ್ಲಿ ನಾವಿಬ್ಬರೂ ಚರ್ಚಿಸಿದ್ದು ಒಂದೇ ವಿಷಯವನ್ನು. ಅದೇನೆಂದರೆ ಸಿನಿಮಾರಂಗದಲ್ಲಿ ದೇವ್ ಆನಂದ್ ಅವರ ಯುಗ ಮುಗಿದಿದ್ದರೂ, ಅವರಿಗೆ ವಯಸ್ಸಾಗಿ ಅವರು ಅಪ್ರಸ್ತುತರಾಗಿದ್ದರೂ, ಅವರು ನಿರ್ದೇಶಿಸುತ್ತಿದ್ದ ಸಿನಿಮಾಗಳು ಬಾಕ್ಸ್‌ಆಫೀಸಿನಲ್ಲಿ ಮುಗ್ಗರಿಸುತ್ತಿದ್ದರೂ ಅದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ದೇವ್ ಆನಂದ್ ಅವರು ಯುವಕರಾಗಿದ್ದಾಗ ಅದೆಷ್ಟು ಉತ್ಸಾಹದಿಂದಿದ್ದರೋ ತಮ್ಮ 73ನೇ ವಯಸ್ಸಿನಲ್ಲೂ ಅಷ್ಟೇ ಉತ್ಸಾಹದಿಂದಿದ್ದದ್ದು. "ವಿಸ್ಮಯಕರ ಮನುಷ್ಯ" ಎಂದು ಚಿದು ಅಂದದ್ದು ನನಗಿನ್ನೂ ನೆನಪಿದೆ.

ಇಂತಹ ದೇವ್ ಆನಂದ್ ಕಳೆದ ವಾರ ತೀರಿಕೊಂಡರು. ಆ ಸುದ್ದಿ ಗೊತ್ತಾಗುತ್ತಿದ್ದಂತೆ ಈಗ ರಜೆ ಮೇಲೆ ಬೆಂಗಳೂರಿಗೆ ಬಂದಿರುವ ಚಿದು "ನಾವಿಬ್ಬರೂ ದೇವ್ ಆನಂದ್ ಜೊತೆ ಕಳೆದ ಸಂಜೆಯ ನೆನಪಿದೆಯಾ?" ಎಂದು ಎಸ್ಸೆಮ್ಮೆಸ್ ಮಾಡಿದ. ನನ್ನ ಯೌವನದಲ್ಲಿ ನನಗೆ ತುಂಬಾ ಇಷ್ಟವಾಗಿದ್ದ ಈ ನಟನನ್ನು ಭೇಟಿ ಆಗಿದ್ದರ ನೆನಪನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ...

ಗಂಗಾವತಿಯ ಧೂಳು, ಬಿಸಿಲು ಮತ್ತು ಮನುಷ್ಯರು

ಸವದತ್ತಿ ಎಲ್ಲಮ್ಮ ಜಾತ್ರೆಗೂ, ಶಿರಸಿ ಮಾರಿಕಾಂಬೆಯ ಹಬ್ಬಕ್ಕೂ, ಕೋಟೇಶ್ವರ ತೇರಿಗೂ, ಸಾಹಿತ್ಯ ಸಮ್ಮೇಳನಕ್ಕೂ ಹೆಚ್ಚು ವ್ಯತ್ಯಾಸವೇನೂ ಇತ್ತೀಚೆಗೆ ಕಾಣಿಸುತ್ತಿಲ್ಲ. ಸಮ್ಮೇಳನದ ಮುಖ್ಯ ವೇದಿಕೆ ಇರುವ ಚಪ್ಪರದಲ್ಲಂತೂ ಜನ ತುಂಬಿ ತುಳುಕುತ್ತಿದ್ದರು. ಇದನ್ನೇ ನೋಡಿದ ಟಿ.ವಿ ಚಾನಲ್‌ಗಳು 'ಸಾಹಿತ್ಯ ಸಮ್ಮೇಳನದ ಗೋಷ್ಠಿಗಳಿಗೆ ಜನರು ಬರುವುದಿಲ್ಲ ಎಂಬ ಮಾತನ್ನು ಗಂಗಾವತಿಯ ಸಮ್ಮೇಳನ ಸುಳ್ಳು ಮಾಡಿದೆ' ಎಂದು ವರದಿ ಮಾಡುತ್ತಿದ್ದವು. ನಿಜಕ್ಕೂ ಜನರು ಆ ಗಂಭೀರವಾದ, ಕಷ್ಟವಾದ ಗದ್ಯದಲ್ಲಿ ಮಾತನಾಡುವ ಗೋಷ್ಠಿಗಳನ್ನು ಕೇಳಲು ಜನ ಅಲ್ಲಿ ಸೇರಿದ್ದರೋ ಅಥವಾ ಗಂಗಾವತಿಯ ಬಿಸಿಲಿನ ಉರಿಯಿಂದ ಕೊಂಚ ಹೊತ್ತು ಬಚಾವಾಗಲು ಅಲ್ಲಿ ಸೇರಿದ್ದರೋ ಎಂಬ ಅನುಮಾನ ನನ್ನನ್ನು ಈಗಲೂ ಕಾಡುತ್ತಿದೆ.




• ಶಶಿಧರ ಹೆಮ್ಮಾಡಿ, ಕುಂದಾಪುರ



ಮೊನ್ನೆ ಗಂಗಾವತಿಗೆ ಹೋಗಿದ್ದೆ. ಸಾಹಿತ್ಯ ಸಮ್ಮೇಳನ ಎಲ್ಲೇ ಆದರೂ ಒಂದು ಭೇಟಿ ನೀಡುವ ಹವ್ಯಾಸ ಇತ್ತೀಚಿನ ವರ್ಷಗಳಲ್ಲಿ ಬೆಳೆಸಿಕೊಂಡಿರುವ ನನಗೆ ಗಂಗಾವತಿಗೂ ಹೋಗಬೇಕೆಂದು ಮನಸಾಗಿ ಒಂದು ತಿಂಗಳ ಹಿಂದೆಯೆ ಇಂಟರ್ನೆಟ್‌ನಲ್ಲಿ ಹುಡುಕಿ ಸಮರ್ಥ ಕಂಫೊರ್ಟ್ಸ್ ಎಂಬ ಹೋಟೆಲ್‌ನಲ್ಲಿ ಕೊಠಡಿಯನ್ನೂ ಕಾದಿರಿಸಿಕೊಂಡಿದ್ದೆ. ಹದಿನೈದು ದಿನಗಳ ಹಿಂದೆ ಮತ್ತೊಮ್ಮೆ ಹೋಟೆಲ್‌ನವರಿಗೆ ಕೊಠಡಿಯನ್ನು ಕಾದಿರಿಸಿರುವ ಬಗ್ಗೆ ನೆನಪಿಸೋಣ ಎಂದು ಕರೆ ಮಾಡಿದರೆ "ಹೋಟೆಲ್‌ನಲ್ಲಿ ಎಲ್ಲ ರೂಮುಗಳನ್ನು ಡಿಸಿ ಸಾಹೇಬ್ರು ಬುಕ್ ಮಾಡಿದ್ದಾರೆ, ಕಷ್ಟ ಸಾರ್" ಅಂತ ಆಚೆ ಬದಿಯ ಧ್ವನಿ ಹೇಳಿತು. ನಂಗೆ ರೇಗಿಹೋಯಿತು. "ಅಲ್ಲಯ್ಯ ನಿಮ್ಮ ಡಿಸಿ ಸಾಹೇಬ್ರಿಗೆ ಹೇಳು, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರಿ ಪಟಾಲಂ ಮಾತ್ರ ಅಲ್ಲ ನನ್ನಂತಹ ಸಾವಿರಾರು ಜನ ಬರ್ತಾರೆ ಅಂತ. ನಾನು ಬುಕ್ ಮಾಡಿದ ರೂಮ್ ಡಿಸಿ ಸಾಹೇಬ್ರಿಗೆ ಕೊಟ್ರೆ ಅವರ ನಂಬರ್ ಕೊಡು, ನಾನೇ ಅವರ ಜೊತೆ ಮಾತಾಡ್ತೇನೆ" ಅಂತ ಸ್ವಲ್ಪ ಖಡಕ್ ಆಗಿಯೇ ಹೇಳಿದೆ. ಸಮ್ಮೇಳನಕ್ಕೆ ಒಂದು ವಾರ ಮುಂಚೆ ಮತ್ತೆ ಕರೆ ಮಾಡಿದಾಗಲೂ ಅದೇ ರಾಗ ಎಳೆದ ಹೋಟೆಲ್‌ನವರು ಕೊನೆಗೆ "ಬನ್ನಿ ಸಾರ್ ಏನಾದ್ರು ಅಡ್ಜಸ್ಟ್ ಮಾಡೋಣ" ಎಂದರು.

ಬುಕ್ಕಿಂಗ್ ಮಾಡುವಾಗಲೇ ಪತ್ರಕರ್ತ ಅಂತ ಹೇಳಿದ್ದಕ್ಕೆ ಬಹುಶಃ ನನಗೆ ಕೊಠಡಿ ನಿರಾಕರಿಸಲಿಲ್ಲ ಅನ್ನಿಸುತ್ತೆ. ಪಾಪ, ಹೋಟೆಲ್‌ನವರನ್ನು ದೂರಿ ಪ್ರಯೋಜನವಿಲ್ಲ. ಈ ರೀತಿಯ ಸಮ್ಮೇಳನಗಳು ಆಗುವ ಎಲ್ಲ ಕಡೆ ಈ ಆಡಳಿತಶಾಹಿ ಇದನ್ನೇ ಮಾಡುತ್ತದೆ. ಸಮ್ಮೇಳನಕ್ಕೆ ನಮ್ಮಂತಹ ಜನಸಾಮಾನ್ಯರೂ ಬರುತ್ತಾರೆ, ಅವರಿಗೂ ಉಳಿದುಕೊಳ್ಳಲು ಸ್ಥಳ ಬೇಕು ಎಂಬ ವಿಚಾರ ಈ ಮಂದಿಗೆ ಹೊಳೆಯುವುದೇ ಇಲ್ಲವೋ ಏನೋ.

ಸಮ್ಮೇಳನದ ಎರಡನೆಯ ದಿನ ಬೆಳಗ್ಗೆ ನಾನು ಗಂಗಾವತಿಯನ್ನು ತಲುಪಿದೆ. ಸಮರ್ಥ ಕಂಫೊರ್ಟ್ಸ್‌ನ ರಿಸೆಪ್ಷನ್‌ನಲ್ಲಿ ಚಾವಿ ತೆಗೆದುಕೊಂಡು ನನ್ನ ಕೊಠಡಿ ಸೇರಿ ಸ್ನಾನಾದಿಗಳನ್ನು ಮುಗಿಸಿದೆ. ರೂಮ್ ಬಾಯ್ ಒಂದು ಕೆಟ್ಟ ಟೀ ತಂದು ಕೊಟ್ಟ. ನನ್ನ ಇ-ಮೇಲ್‌ಗಳನ್ನು ಚೆಕ್ ಮಾಡಬೇಕೆಂದು ಲ್ಯಾಪ್‌ಟಾಪ್ ತೆರೆದೆ. ನೋಕಿಯಾ ಫೋನ್ ಅನ್ನು ಅದಕ್ಕೆ ಕನೆಕ್ಟ್ ಮಾಡಿದೆ. ಸ್ವಲ್ಪ ನಿಧಾನಗತಿಯಲ್ಲೇ ಬ್ರೌಸಿಂಗ್ ಆಗುತ್ತಿತ್ತು. ಇತ್ತೀಚೆಗಷ್ಟೆ ನಾನು ಕುಂದಾಪುರದಲ್ಲಿ ಎಂಟಿಎಸ್ ಕಂಪೆನಿಯ ಎಂಬ್ಲೇಝ್ ವೈರ್‌ಲೆಸ್ ಬ್ರಾಡ್ ಬ್ಯಾಂಡ್ ಡಿವೈಸ್ ಖರೀದಿಸಿದ್ದೆ. ಹೊರಡುವ ಕೊನೆಯ ಕ್ಷಣದಲ್ಲಿ ಅಲ್ಲಿ ಕನೆಕ್ಷನ್ ಖಂಡಿತ ಸಿಗಲ್ಲ ಎಂದು ನನ್ನ ಮನಸ್ಸು ಗಟ್ಟಿಯಾಗಿ ಹೇಳಿದ ಹೊರತಾಗಿಯೂ ಅದನ್ನು ನನ್ನ ಬ್ಯಾಗಿಗೆ ಹಾಕಿಕೊಂಡಿದ್ದೆ.



ನೋಡೋಣ ಅಂತ ಎಂಬ್ಲೇಝ್ ಅನ್ನು ಲ್ಯಾಪ್‌ಟಾಪ್‌ಗೆ ಕನೆಕ್ಟ್ ಮಾಡಿದೆ. ಕ್ಷಣಾರ್ಧದಲ್ಲಿ ಕನೆಕ್ಟ್ ಆಯ್ತು. ಅಲ್ಲಿಗೆ ನನ್ನಲ್ಲಿ ಗಂಗಾವತಿ ಊರಿನ ಬಗ್ಗೆ ಮೆಚ್ಚುಗೆ ಶುರುವಾಯ್ತು ನೋಡಿ. ನಮಗೆ - ಅರ್ಥಾತ್ ಕರಾವಳಿ ತೀರದ ಉಡುಪಿ-ಮಂಗಳೂರು ಕಡೆಯವರಿಗೆ - ಇತರ ಊರುಗಳ ಬಗ್ಗೆ, ವಿಶೇಷವಾಗಿ ಉತ್ತರ ಕರ್ನಾಟಕದ ಊರು ಮತ್ತು ಜನಗಳ ಬಗ್ಗೆ ವಿಚಿತ್ರವಾದ ಪೂರ್ವಾಗ್ರಹಗಳಿರುತ್ತವೆ. ನಾವೇ ಎಲ್ಲ ಊರುಗಳಿಗಿಂತ ಮುಂದಿದ್ದೇವೆಂದೂ, ನಾವೇ ಎಲ್ಲರಿಗಿಂತ ಫೇರ್ ಎಂಡ್ ಹ್ಯಾಂಡ್‌ಸಮ್ ಆಗಿದ್ದೇವೆಂದೂ, ಎಜುಕೇಟೆಡ್ ಎಂದೂ, ನಮ್ಮಷ್ಟು ಉದ್ಧಾರವಾಗಿರುವವರು ಬೇರೆಲ್ಲೂ ಇಲ್ಲವೆಂದೂ.. ಹೀಗೆ ತರಹೇವಾರಿಯಾಗಿ ನಾವು ಸ್ವಕುಚ ಮರ್ದನದಲ್ಲಿ ತೊಡಗಿಕೊಂಡಿರುತ್ತೇವೆ. ಉದಾಹರಣೆಗೆ, ನಮ್ಮೂರ ಬಸ್ಸುಗಳಲ್ಲಿ ಉತ್ತರ ಕರ್ನಾಟಕದ ಕಾರ್ಮಿಕನೊಬ್ಬ ಕೊಳಕು ಅಂಗಿಯಲ್ಲಿ ಬಸ್ ಹತ್ತಿದ ಎಂದರೆ ಆತನನ್ನೂ ಭಿಕ್ಷುಕನನ್ನೂ ಒಂದೇ ರೀತಿಯಲ್ಲಿ ಕಾಣುವುದು ನಮ್ಮ ಜನ್ಮಜಾತ ಕಾಯಿಲೆ. ನಿಜ ಹೇಳಬೇಕೆಂದರೆ ಆತ ದಿನಕ್ಕೆ ಮುನ್ನೂರು ರೂಪಾಯಿ ಕಮಾಯಿ ಮಾಡುವ ಶ್ರಮಜೀವಿ. ಆತನ ಬಗ್ಗೆ ಕಮೆಂಟ್ ಮಾಡುವ ಮತ್ತು ಕೀಳಾಗಿ ನೋಡುವ ನಮ್ಮ ಹೈಕ್ಲಾಸ್ ಹುಡುಗ ಹುಡುಗಿಯರು ಬಟ್ಟೆ ಅಂಗಡಿಯಲ್ಲಿ, ಶೂ ಅಂಗಡಿಯಲ್ಲಿ ಕೆಲಸ ಮಾಡಿ ತಿಂಗಳಿಗೆ 2-3 ಸಾವಿರ ದುಡಿದು ಕೊನೆಗೆ ತಿಂಗಳ ಅಂತ್ಯದಲ್ಲಿ ಮೊಬೈಲ್‌ಗೆ ಕರೆನ್ಸಿ ಹಾಕಲಿಕ್ಕೆ ಸಾಲ ಮಾಡುವ ಮಂದಿ. ಇಷ್ಟೇ ಅಲ್ಲ, ನಮ್ಮೂರಿನಲ್ಲಿ ದುಡಿಮೆ ಮಾಡಲು ಬರುವ ಉತ್ತರ ಕರ್ನಾಟಕದ ಎಲ್ಲರಿಗೂ ನಮ್ಮ ಊರಿನವರು ಇಟ್ಟಿರುವ ಹೆಸರು 'ಗೌಡ'. ಅವರು ಲಿಂಗಾಯತರಿರಲಿ, ಸಾಬರಿರಲಿ, ಯಾರೇ ಇರಲಿ, ಅವರೆಲ್ಲರೂ ನಮ್ಮೂರಿಗರಿಗೆ ಗೌಡ. ಇರಲಿ, ಗಂಗಾವತಿಯಂತಹ ಊರಿನಲ್ಲಿ ಇಂಟರ್ನೆಟ್ ಇಷ್ಟೊಂದು ಫಾಸ್ಟ್ ಇದೆಯಲ್ಲ ಅಂತ ಖುಷಿನೇ ಆಯ್ತು. ಫೇಸ್‌ಬುಕ್‌ನಲ್ಲಿ ಸ್ಟೇಟಸ್ ಅಪ್‌ಡೇಟ್‌ಗಳನ್ನು ಮುಗಿಸಿ ಎಂಟಿಎಸ್‌ಗೆ ಥ್ಯಾಂಕ್ಸ್ ಹೇಳಿ ಸಮ್ಮೇಳನತದತ್ತ ಹೊರಟೆ.

ಗಂಗಾವತಿಯಲ್ಲಿ ನಡೆಯುತ್ತಿದ್ದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಇತರೆಡೆ ನಡೆದ ಸಾಹಿತ್ಯ ಸಮ್ಮೇಳನಗಳಿಗೂ ಮೇಲ್ನೋಟಕ್ಕೆ ಹೆಚ್ಚು ವ್ಯತ್ಯಾಸವೇನೂ ಕಂಡುಬರಲಿಲ್ಲ. ಅದೇ ದೊಡ್ಡ ಚಪ್ಪರ, ಮೈಕು, ಟಿವಿ, ಪುಸ್ತಕ ಪ್ರದರ್ಶನ ಮಳಿಗೆಗಳು ಜನರು, ಗದ್ದಲ-ಗೌಜು, ಕಾರು, ಬೈಕು, ಪೊಲೀಸರು, ರಾಜಕಾರಣಿಗಳು, ಭಿಕ್ಷುಕರು, ವ್ಯಾಪಾರಿಗಳು, ಐಸ್‌ಕ್ರೀಮ್ ಗಾಡಿಗಳು, ಹೆಸರಿಲ್ಲದ ನೀರಿನ ಬಾಟಲಿ ಮಾರುವ ಹುಡುಗರು.. ಎಲ್ಲ ಸಮ್ಮೇಳನಗಳೂ ಹೆಚ್ಚು-ಕಡಿಮೆ ಹೀಗೆಯೆ ಇರುತ್ತವೆ.

ಸವದತ್ತಿ ಎಲ್ಲಮ್ಮ ಜಾತ್ರೆಗೂ, ಶಿರಸಿ ಮಾರಿಕಾಂಬೆಯ ಹಬ್ಬಕ್ಕೂ, ಕೋಟೇಶ್ವರ ತೇರಿಗೂ, ಸಾಹಿತ್ಯ ಸಮ್ಮೇಳನಕ್ಕೂ ಹೆಚ್ಚು ವ್ಯತ್ಯಾಸವೇನೂ ಇತ್ತೀಚೆಗೆ ಕಾಣಿಸುತ್ತಿಲ್ಲ. ಸಮ್ಮೇಳನದ ಮುಖ್ಯ ವೇದಿಕೆ ಇರುವ ಚಪ್ಪರದಲ್ಲಂತೂ ಜನ ತುಂಬಿ ತುಳುಕುತ್ತಿದ್ದರು. ಇದನ್ನೇ ನೋಡಿದ ಟಿ.ವಿ ಚಾನಲ್‌ಗಳು 'ಸಾಹಿತ್ಯ ಸಮ್ಮೇಳನದ ಗೋಷ್ಠಿಗಳಿಗೆ ಜನರು ಬರುವುದಿಲ್ಲ ಎಂಬ ಮಾತನ್ನು ಗಂಗಾವತಿಯ ಸಮ್ಮೇಳನ ಸುಳ್ಳು ಮಾಡಿದೆ' ಎಂದು ವರದಿ ಮಾಡುತ್ತಿದ್ದವು. ನಿಜಕ್ಕೂ ಜನರು ಆ ಗಂಭೀರವಾದ, ಕಷ್ಟವಾದ ಗದ್ಯದಲ್ಲಿ ಮಾತನಾಡುವ ಗೋಷ್ಠಿಗಳನ್ನು ಕೇಳಲು ಜನ ಅಲ್ಲಿ ಸೇರಿದ್ದರೋ ಅಥವಾ ಗಂಗಾವತಿಯ ಬಿಸಿಲಿನ ಉರಿಯಿಂದ ಕೊಂಚ ಹೊತ್ತು ಬಚಾವಾಗಲು ಅಲ್ಲಿ ಸೇರಿದ್ದರೋ ಎಂಬ ಅನುಮಾನ ನನ್ನನ್ನು ಈಗಲೂ ಕಾಡುತ್ತಿದೆ.

ಬೆಂಗಳೂರಿನಲ್ಲಿ ಕಳೆದ ವರ್ಷ ಸಮ್ಮೇಳನ ನಡೆದಿತ್ತು. ಬೆಂಗಳೂರಿಗರು ಅದನ್ನು ಅತ್ಯಂತ ಕೆಟ್ಟದಾಗಿ ಆಯೋಜಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೆ. ಅದಕ್ಕಿಂತ ಗಂಗಾವತಿಯ ಹಸಿವು, ಬಡತನದ ನಡುವೆಯೂ ಸಮ್ಮೇಳನ ಅದ್ದೂರಿಯಾಗಿ, ಅಚ್ಚುಕಟ್ಟಾಗಿ ನಡೆದಿತ್ತು ಎನ್ನಬಹುದು. ಗಂಗಾವತಿಯ ಸಮ್ಮೇಳನದಲ್ಲಿ ಕಂಡುಬಂದ ಒಂದು ಮುಖ್ಯ ವ್ಯತ್ಯಾಸ ಎಂದರೆ ಇಲ್ಲಿ ಜೀನ್ಸ್, ಟೀ ಶರ್ಟ್/ ಜುಬ್ಬಾ ಧರಿಸಿದ ಮೊಡರ್ನ್ ಸಾಹಿತ್ಯಾಸಕ್ತರು ಇರಲೇ ಇಲ್ಲ ಎಂಬಷ್ಟರ ಮಟ್ಟಿಗೆ ಕಡಿಮೆ ಇದ್ದರು. ಅಂತೆಯೆ ಸಾಹಿತ್ಯದ ಸಂದರ್ಭಗಳಿಗೆಂದೇ ವಿಶೇಷವಾಗಿ ಖರೀದಿಸಿದ ಜುಬ್ಬಾ ಮೇಲ್ಕೋಟು ಧರಿಸಿ ಬರುತ್ತಿದ್ದ ಮಂದಿಯೂ ಇಲ್ಲಿ ಬೆರಳೆಣಿಕೆಯಷ್ಟಿದ್ದರು. ಸಮ್ಮೇಳನದ ಇಡೀ ಪ್ರಾಂಗಣದಲ್ಲಿ ತುಂಬಿದ್ದು ಗಂಗಾವತಿಯ ಮೂಲೆಮೂಲೆಯ ಹಳ್ಳಿಗಳಿಂದ ಹರಿದುಬಂದ ಜನಸಾಗರ. ಹಬ್ಬ ಸವಿಯಲೆಂದೇ ಬಂದ ಜನ ಅವರು. ರಸ್ತೆಯ ಇಕ್ಕೆಲಗಳಲ್ಲಿ ಮತ್ತು ಸಮ್ಮೇಳನದ ಆಸುಪಾಸಿನಲ್ಲಿದ್ದ ಮೆಣಸಿನ ಬೋಂಡಾ, ಕಲ್ಲಂಗಡಿ ಹಣ್ಣು, ಮಂಡಲ ಒಗ್ಗರಣೆ, ಕರದಂಟು, ಕಬ್ಬಿನ ಹಾಲು, ಪಪ್ಪಾಯಿ, ಐಸ್ ಕ್ರೀಮ್ ಅಂಗಡಿ ಎಲ್ಲ ಕಡೆ ಭರ್ಜರಿ ವ್ಯಾಪಾರವೇ ನಡೆದಿತ್ತು. ಬಲೂನು, ಬಳೆ, ಬಕೀಟು ಎಲ್ಲ ಮಾರಾಟವಾಯಿತು. ಇದಕ್ಕೆ ಹೋಲಿಸಿದಲ್ಲಿ ಪುಸ್ತಕದ ಅಂಗಡಿಯವರ ವ್ಯಾಪಾರ ಸಪ್ಪೆ ಸಪ್ಪೆಯಾಗಿತ್ತು.

ಸಾಹಿತ್ಯ ಸಮ್ಮೇಳನಗಳಿಗೆ ನಾನು ಹೋಗುವ ಮುಖ್ಯ ಕಾರಣ ಅಲ್ಲಿಗೆ ಬರುವ ಪುಸ್ತಕದಂಗಡಿಗಳು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಎಲ್ಲಿಯೂ ಪುಸ್ತಕದಂಗಡಿಗಳು ಒಂದಾಗುವುದಿಲ್ಲ, ಒಂದಷ್ಟು ಡಿಸ್ಕೌಂಟು ಕೂಡ ಇರುತ್ತದೆ. ಪ್ರತಿ ಸಾರಿಯ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕದಂಗಡಿಗಳ ಸುತ್ತ ನಾಲ್ಕು ಸುತ್ತು ಹೊಡೆಯುತ್ತಿದ್ದ ನನಗೆ ಈ ಬಾರಿ ಒಂದೂವರೆ ಸುತ್ತಿಗೆ ಸಾಕಪ್ಪಾ ಅನ್ನಿಸಿತು. ಯಾವುದೇ ಪುಸ್ತಕದಂಗಡಿ ಹೊಕ್ಕರೂ ಕಾಣುವುದು ಒಬ್ಬ ಕನ್ನಡ ಸಾಹಿತಿಯ ಪುಸ್ತಕಗಳೇ. 'ಗೃಹಭಂಗ' ಬರೆದು ಪ್ರಸಿದ್ಧರಾಗಿ ಈಗ ಕನ್ನಡ ನಾಡಿನ ಸ್ನೇಹ, ಸೌಹಾರ್ದ, ಸಾಮರಸ್ಯಕ್ಕೆ ರಸಭಂಗ ಉಂಟುಮಾಡುತ್ತಿರುವ, 'ಆವರಣ'ದ ಮೂಲಕ



ಅನಾವರಣಗೊಂಡ ಎಸ್.ಎಲ್.ಭೈರಪ್ಪನವರ ಪುಸ್ತಕಗಳ ರಾಶಿ ಎಲ್ಲ ಅಂಗಡಿಯಲ್ಲೂ ಇತ್ತು. ತೇಜಸ್ವಿಯವರ ಪುಸ್ತಕಗಳು ಕೆಲವೆಡೆ ಇದ್ದವು. ಅಲ್ಲಲ್ಲಿ ಕೆಲವೊಂದು ಮಳಿಗೆಗಳಲ್ಲಿ ಚಿತ್ತಾಲ, ಕಾರಂತ, ಕುವೆಂಪು, ಲಂಕೇಶ್‌ರ ಕೃತಿಗಳು ನಾಮಕಾವಸ್ಥೆಗೆ ಇದ್ದಂತೆ ಇದ್ದವು. ಕೆಲವು ಅಂಗಡಿಯಲ್ಲಿ ಬೇಕಂತಲೆ ನಾನು "ಏನ್ರೀ, ಬರೆ ಭೈರಪ್ಪನನ್ನು ರಾಶಿ ಹಾಕಿದ್ದೀರಲ್ಲಾ" ಅಂತ ಸ್ವಲ್ಪ ಕೀಟಲೆ ಮಾಡುವವರ ತರಹವೇ ಕೇಳಿದೆ. ಕೆಲವರು "ಮಾರಾಟ ಆಗೋ ಪುಸ್ತಕಗಳನ್ನೇ ಎದುರಿಗೆ ಇಡೋದು ಸಾರ್" ಎಂದು ಪಕ್ಕಾ ವ್ಯಾಪಾರಸ್ಥರ ಹಾಗೆ ಹೇಳಿದರು. ಇನ್ನೊಬ್ಬ ಮಹಾಶಯರು ನನ್ನ ಪ್ರಶ್ನೆಯನ್ನು ಕೇಳಿ ಸಿಟ್ಟಾಗಿ "ನಿಮಗ್ಯಾರ್ರಿ ಬೇಕು" ಎಂದು ದಬಾಯಿಸಿದರು. ನಾನು "ಲಂಕೇಶ್, ಅನಂತಮೂರ್ತಿ, ಚಿತ್ತಾಲ, ಕುವೆಂಪು, ಕಾರಂತರು" ಎಂದೆ. "ಲಂಕೇಶ್‌ರದ್ದು ಅವರ ಸ್ಟಾಲ್‌ನಲ್ಲಿ ಸಿಗತ್ತೆ ನೋಡಿ. ಕಾರಂತರದ್ದು, ಚಿತ್ತಾಲರದ್ದು ಇಲ್ಲಿವೆ ನೋಡಿ" ಎಂದು ಯಾರೂ ಗಮನಿಸದ ಮೂಲೆಯೊಂದನ್ನು ತೋರಿಸಿದ. ಅಲ್ಲಿ ಕಾರಂತರ ಹಳೆಯ ಬೈಂಡಿನ ಒಂದೆರಡು ಪುಸ್ತಕಗಳಿದ್ದವು. ಕಂಬಾರರ ಪುಸ್ತಕಗಳಿಗೂ ಹೆಚ್ಚಿನ ಪ್ರಾಶಸ್ತ್ಯ ಯಾವುದೇ ಮಳಿಗೆಯಲ್ಲೂ ಕಾಣಿಸಲಿಲ್ಲ.

ಮಕ್ಕಳು ಮರಿಗಳೂ ಭೈರಪ್ಪ ತಮ್ಮ ಪಕ್ಕದ ಮನೆಯವನು ಅನ್ನೋ ತರಹ ಮಾತಾಡುತ್ತಿದ್ದ ಸೀನ್ ನೋಡಿ ನನಗಂತೂ ಸಾಹಿತ್ಯ ಸಮ್ಮೇಳನಗಳು ಕವಲು ಒಡೆದಿರುವುದು ಸ್ಪಷ್ಟವಾಯಿತು. ಕನ್ನಡದ ದಿಗ್ಗಜ ಸಾಹಿತಿಗಳ ಪುಸ್ತಕ ಇಲ್ಲವಲ್ಲ ಎಂಬ ಬೇಸರದ ನಡುವೆಯೂ ಒಂದು ಖುಷಿಯ ವಿಷಯವೂ ಅಲ್ಲಿತ್ತು. ಇತರ ಸಮ್ಮೇಳನಗಳ ಪುಸ್ತಕ ಮಳಿಗೆಗಳಲ್ಲಿ ಎದ್ದು ಕಾಣುತ್ತಿದ್ದ 'ಬೆತ್ತಲೆ ಜಗತ್ತು', 'ನೆಹರೂ ಪರದೆ ಸರಿಯಿತು', 'ನಾನೇಕೆ ಗಾಂಧಿಯನ್ನು ಕೊಂದೆ' ಎಂಬ ಕೆಟ್ಟ ಪುಸ್ತಕಗಳು ಇಲ್ಲಿ ಹೆಚ್ಚು ಗೆಟಪ್‌ನಲ್ಲಿ ಕಾಣಿಸಲಿಲ್ಲ. ಲಂಕೇಶ್ ಪ್ರಕಾಶನದ ಮಳಿಗೆಯಲ್ಲಿ ಯಾರಾದರೂ ಪರಿಚಯದವರು ಇದ್ದರೆ ಮಾತನಾಡಿಸೋಣ ಎಂದು ಹುಡುಕಿ ಹೊರಟೆ. ಅಲ್ಲಿ ಪುಸ್ತಕ ಮಾರಾಟ ಬಿಡಿ, ಜೀವನದಲ್ಲಿಯೇ ಆಸಕ್ತಿ ಇರದಂತಿದ್ದ ಎರಡು ಮುಖಗಳನ್ನು ಕಂಡು ನಾನೂ ಆಸಕ್ತಿ ಕಳಕೊಂಡು ಅಲ್ಲಿಂದ ಮುನ್ನಡೆದೆ. ಅವರು ಅಲ್ಲಿ ಲಂಕೇಶರ ಎಷ್ಟು ಪುಸ್ತಕ ವ್ಯಾಪಾರ ಮಾಡಿದರೋ ಅವರೇ ಬಲ್ಲರು. ಒಟ್ಟಿನಲ್ಲಿ ಪುಸ್ತಕ ವ್ಯಾಪಾರಿಗಳು ಈ ಸಮ್ಮೇಳನದಲ್ಲಿ ಖುಷಿಪಡುವಂತಹುದು ಏನೂ ಇರಲಿಲ್ಲ, ಪುಸ್ತಕ ಮಾರಾಟ ಮಳಿಗೆಗಳೂ ಅವ್ಯವಸ್ಥೆಯಿಂದ ತುಂಬಿದ್ದವು.

ಈ ಮಧ್ಯೆ ನಾನು ಗಂಗಾವತಿಯಲ್ಲಿ ನೆಲೆಸಿರುವ ನಮ್ಮ ದೂರದ ಸಂಬಂಧಿಯೋರ್ವರ ಮನೆಗೆ ಹೋಗಿದ್ದೆ. ಸಾಹಿತ್ಯ ಸಮ್ಮೇಳನಕ್ಕೆ ನಾನು ಬಂದ ವಿಷಯ ಅವರಿಗೂ ಗೊತ್ತಿತ್ತು. ನಮ್ಮ ಸಂಬಂಧಿ ಬಹಳ ಹೆಮ್ಮೆಯಿಂದ "ನನ್ನ ತಮ್ಮ ಮನೆಗೆ ಬಾರದೆ ಕೆಲವು ದಿನಗಳಾಯ್ತು. ಆತನ ಹೆಂಡತಿ ಮಕ್ಕಳೆಲ್ಲ ಸಮ್ಮೇಳನದಲ್ಲಿ ಇದ್ದಾರೆ. ನನ್ನ ತಮ್ಮ ಸಮ್ಮೇಳನ ಸಮಿತಿಯಲ್ಲಿ ತುಂಬಾ ಮುಂದಿದ್ದಾನೆ. ಆತ ಇಲ್ಲಿಯ ಬಜರಂಗ ದಳ, ವಿಶ್ವ ಹಿಂದೂ ಪರಿಷತ್, ಆರೆಸ್ಸೆಸ್ ಎಲ್ಲದಕ್ಕೂ ಮುಖಂಡ ಮತ್ತು ಮಾರ್ಗದರ್ಶಕ. ಸಾಹಿತ್ಯ ಸಮ್ಮೇಳನದಲ್ಲಿ ಆತ ತುಂಬಾ ಓಡಾಡುತ್ತಿದ್ದಾನೆ" ಎಂದು ವಿವರಿಸಿದರು. ಸಂಘಪರಿವಾರದ ಇಂತಹ ಮಂದಿ ಸಮ್ಮೇಳನದ ಮುಂಚೂಣಿಯಲ್ಲಿದ್ದರೆ ಭೈರಪ್ಪನ ಪುಸ್ತಕಗಳು ಮಾರಾಟ ಆಗುತ್ತಿರುವುದರಲ್ಲಿ ವಿಶೇಷವೇನೂ ಇಲ್ಲ ಎಂದು ನನಗೆ ಆಗ ಹೊಳೆಯಿತು.


ಗಂಗಾವತಿ ನಗರದಾದ್ಯಂತ ಕನ್ನಡದ ಸಾಹಿತಿಗಳ ಭಾವಚಿತ್ರಗಳನ್ನು ಅಲ್ಲಲ್ಲಿ ಹಾಕಿದ್ದರು. ಅವರ ಕೃತಿಗಳಿಗಿಂತ ಅವರು ಪಡೆದ ಪ್ರಶಸ್ತಿಗಳಿಗೆ ಅಲ್ಲಿ ಹೆಚ್ಚು ಒತ್ತು ನೀಡಿದ್ದರು. ಡಿ.ಆರ್. ನಾಗರಾಜ್ ಕುರಿತಾದ ಪೋಸ್ಟರ್‌ನಲ್ಲಿ ಅವರು 'ಆರ್ಯ ಭಟ್ ಪ್ರಶಸ್ತಿ' ಪಡೆದಿದ್ದರು ಎಂದು ಬರೆಯಲಾಗಿತ್ತು. ಆರ್ಯಭಟ್ಟ, ಆರ್ಯ ಭಟ್ ಆಗಿ ಬಿಟ್ಟಿದ್ದ. ಗಂಗಾವತಿಯ ಯಾವುದೋ ಕನ್ನಡ ಸಂಘಟನೆಯೊಂದು ಮುದ್ರಿಸಿ ರಿಕ್ಷಾಗಳ ಹಿಂಬದಿಯಲ್ಲಿ ಅಂಟಿಸಿದ್ದ ಪೋಸ್ಟರ್‌ಗಳನ್ನು ನೋಡಿದ್ದರೆ ಕುವೆಂಪುಗೆ ಸಿಟ್ಟು ಬರುತ್ತಿತ್ತೋ ಏನೋ. ಅಲ್ಲಿ 'ಕನ್ನಡ ನುಡಿ ಕುಣಿದಾಡುವ ದೇಹ, ಕನ್ನಡ ತಾಯಿಯ ಮಕ್ಕಳ ದೇಹ' ಎಂದು ಬರೆಯಲಾಗಿತ್ತು. ಕನ್ನಡ ಮಕ್ಕಳ ಗೇಹ, ದೇಹ ಎಲ್ಲ ಒಂದಾಗಿತ್ತು.

ಹಾಗೆ ನೋಡಿದರೆ, ಗಂಗಾವತಿ ಊರು ದೊಡ್ಡದಾಗಿಯೇ ಇದೆ. ಆದರೆ ಎಲ್ಲಿ ನೋಡಿದರೂ ಹಂದಿಗಳು, ಸೊಳ್ಳೆ ಮತ್ತು ಕೊಳಚೆ ನೀರಿನ ವಾಸನೆ. ಹೆಚ್ಚಿನ ಖಾನಾವಳಿಗಳು, ಹೋಟೆಲ್‌ಗಳು ಶುಚಿತ್ವಕ್ಕೆ ಯಾವುದೇ ಮಹತ್ವವನ್ನು ನೀಡಿಲ್ಲ ಅನ್ನಿಸಿತು. ಗಂಗಾವತಿಯ ಮೆಣಸಿನ ಬೋಂಡಾ ಸವಿಯಬೇಕೆಂದು ಆಸೆ ಇಟ್ಟುಕೊಂಡಿದ್ದ ನನಗೆ ಆ ಬೋಂಡಾ ಅಷ್ಟೇನೂ ಹಿಡಿಸಲಿಲ್ಲ. ಚಿಕ್ಕ ಮೆಣಸಿಗೆ ಎಷ್ಟೊಂದು ಕಡಲೆ ಹಿಟ್ಟು ಸುತ್ತಿರುತ್ತದೆ ಎಂದರೆ ಅದು ತಿಂದರೆ ಯಾವ ಮಜಾನೂ ಸಿಗಲಿಲ್ಲ. ಬೋಂಡಾಕ್ಕಿಂತ ಮೆಣಸನ್ನು ಹಾಗೆಯೆ ತಿಂದರೆ ರುಚಿ ಇತ್ತು. ಗಂಗಾವತಿಯ ಬೋಂಡಾಕ್ಕಿಂತ ನನ್ನ

ಮಾವ ಸಾಗರದಲ್ಲಿ ನನಗೆ ಕೊಡಿಸುವ ಬೋಂಡಾನೇ ಚೆನ್ನಾಗಿದೆ ಅನ್ನಿಸಿತು. ಗಂಗಾವತಿ ಅಕ್ಕಿಯ ಕಣಜ. ಬಗೆಬಗೆಯ ಅಕ್ಕಿಯನ್ನು ಅಲ್ಲಿ ಬೆಳೆಯುತ್ತಾರೆ. ವ್ಯಾಪಾರ ವಹಿವಾಟಿಗೂ ತೊಂದರೆ ಇಲ್ಲ ಎಂದು ಗಂಗಾವತಿ ನಗರದಲ್ಲಿ ಹಬ್ಬಿರುವ ಅಂಗಡಿ ಮುಂಗಟ್ಟುಗಳ ಸಾಲೇ ಸೂಚಿಸುತ್ತದೆ.

ಗಂಗಾವತಿ ಪ್ರಾಣೇಶ ತಮ್ಮ ಕಾಮಿಡಿ ಪ್ರಸಂಗಗಳಲ್ಲಿ ದಕ್ಷಿಣ ಕನ್ನಡದವರ ಬಗ್ಗೆ ಆಗಾಗ ಒಂದು ಜೋಕ್ ಹೇಳುತ್ತಾರೆ. ಮಂಗಳೂರು ಕಡೆಯವರದು ಮಾತೂ ಕಡಿಮೆ, ನಗುವೂ ಕಡಿಮೆ. ಬಸ್ಸಿನಲ್ಲಿ ಎಲ್ಲಿಗಾದರೂ ದೂರ ಪ್ರಯಾಣ ಹೊರಟರೆ ಪಕ್ಕದಲ್ಲಿ ಕೂತ ಉತ್ತರ ಕರ್ನಾಟಕದ ಸಹ ಪ್ರಯಾಣಿಕ ಅವರನ್ನು ಮಾತನಾಡಿಸಿದರೆ ಮಂಗಳೂರಿನ ಆಸಾಮಿ ಹತ್ತು ಮಾತಿಗೆ ಒಂದು ಮಾತು ಕೂಡ ಆಡೋದು ಕಷ್ಟ. ಏನೇ ಕೇಳಿದರೂ ಹಾಂ, ಹೂಂ, ಹೌದು, ಇಲ್ಲ ಎಂಬ ಉತ್ತರಗಳು ಮಾತ್ರ. ಅದೂ ಬೇಕೋ ಬೇಡವೋ ಎಂಬ ಹಾಗೆ. ಉತ್ತರ ಕರ್ನಾಟಕದವರನ್ನು ಯಾರೂ ಮಾತ ನಾಡಿಸೋದೇ ಬೇಡ. ಅವರು ತಾವೇ ಸ್ವತಃ ಮಾತು ಶುರು ಮಾಡಿ ಒಂದು ನಿಮಿಷದಲ್ಲಿ ಮಾತು ಎಲ್ಲಿಂದ ಎಲ್ಲಿಗೋ ಹೋಗುತ್ತೆ, ಒಂದು ಕೇಳಿದರೆ ಹತ್ತು ಮಾತನಾಡುತ್ತಾರೆ. ಇದು ಪ್ರಾಣೇಶ್ ಹೇಳುವ ಜೋಕ್. ಗಂಗಾವತಿಯಲ್ಲಿ ಒಂದೆರಡು ಕಡೆ ನನಗೆ ಅದೇ ಅನುಭವವಾಯಿತು.

ಸಮ್ಮೇಳನದ ಸುತ್ತ ಸುತ್ತಾಡಿ ಉರಿಬಿಸಿಲಿಗೆ ಒಂದು ಚಿಲ್ಡ್ ಬಿಯರ್ ಹಾಕಿದರೆ ದೇಹ ತಂಪಾಗುತ್ತೆ ಎಂದುಕೊಂಡು ಬಾರ್ ಒಂದರಲ್ಲಿ ಕೂತೆ. ಕಿಂಗ್‌ಫಿಶರ್ ಪ್ರೀಮಿಯಂ ಬಿಯರ್ ಆರ್ಡರ್ ಮಾಡಿದೆ. ಪಕ್ಕದ ಟೇಬಲ್‌ನಲ್ಲಿ ಗಂಗಾವತಿಯ ಆಸಾಮಿಯೊಬ್ಬ ಎಣ್ಣೆ ಹಾಕುತ್ತಿದ್ದ. ನನ್ನನ್ನು ನೋಡಿ ಮುಗ್ಧವಾದ ಒಂದು ಸ್ಮೈಲ್ ಕೊಟ್ಟ. ನಾನೂ ನಗಾಡಿದೆ. "ಯಾವ್ ಊರು?" ಎಂದು ಕೇಳಿದ. "ಕುಂದಾಪುರ" ಅಂದೆ. ಅವನಿಗೆ ಊರಿನ ಹೆಸರು ಅರ್ಥವಾಗಲಿಲ್ಲ, ಉಡುಪಿ ಅಂದೆ. ಅಷ್ಟು ಹೇಳಿದ್ದೇ ತಡ. ಅವನ ನಾನ್ ಸ್ಟಾಪ್ ಪ್ರಶ್ನೋತ್ತರ ಕಾರ್ಯಕ್ರಮ ಶುರು ಆಯ್ತು ನೋಡಿ. ನನ್ನ ಜೀವಮಾನದಲ್ಲಿ ಯಾವ ಇಂಟರ್‌ವ್ಯೂದಲ್ಲೂ ಇಷ್ಟೊಂದು ಪ್ರಶ್ನೆಗಳನ್ನು ನಾನು ಎದುರಿಸಿಲ್ಲ.



"ಏನು ಮಾಡ್ಕೊಂಡಿದ್ದೀರಿ, ಎಲ್ಲಿ ಉಳ್ಕೊಂಡ್ರಿ, ಹೇಗೆ ಬಂದ್ರಿ, ಬೆಳಗ್ಗೆ ಎಲ್ಲಿ ಟಿಫಿನ್ ಮಾಡಿದ್ರಿ, ಸಾಹಿತ್ಯ ಸಮ್ಮೇಳನಕ್ಕೆ ಅಷ್ಟು ದೂರದಿಂದ ಯಾಕೆ ಬಂದ್ರಿ, ಏನಾದ್ರೂ ಕಾರ್ಯಕ್ರಮ ಕೊಡ್ತೋದಿತ್ತಾ, ನೀವು ಸಾಹಿತಿಯಾ, ಸುಮ್ಮನೆ ನೋಡೋಕಂತ ಇಷ್ಟು ಖರ್ಚು ಮಾಡ್ಕೊಂಡು ಬಂದ್ರಾ, ಎಷ್ಟು ದಿನ ಇರ್ತೀರಿ, ಯಾವಾಗ ಹೋಗ್ತೀರಿ, ಟಿಕೆಟ್ ಬುಕ್ ಮಾಡಿದ್ದೀರಾ, ಯಾವ ಹೊಟೆಲ್‌ನಲ್ಲಿ ಉಳ್ಕೊಂಡ್ರಿ, ಅಷ್ಟೊಂದು ಕಾಸ್ಟ್‌ಲಿ ಲಾಜ್‌ಗೆ ಯಾಕ್ ಹೋದ್ರಿ, ಒಬ್ರೇ ಬಂದ್ರೂ ಡಬಲ್ ರೂಮ್ ಯಾಕೆ ಮಾಡಿದ್ರಿ, ಸ್ವಲ್ಪ ಆ ಕಡೆ ಹೋದ್ರೆ ಚೀಪರ್ ಲಾಜ್ ಸಿಗ್ತಿತ್ತಲ್ಲ, ಬಿಯರ್ ಯಾಕೆ ಕುಡಿಯೋದು, ಹಾಟ್ ಯಾಕೆ ಕುಡಿಯಲ್ಲ, ಪ್ರೀಮಿಯಂ ಯಾಕೆ, ಸ್ಟ್ರಾಂಗ್ ಕುಡಿಯೋಲ್ವಾ, ಸ್ಟ್ರಾಂಗ್ ಕುಡಿದ್ರೆ ಟೈಟ್ ಆಗ್ತೀರಾ, ಮನೆಯಲ್ಲಿ ಯಾರೆಲ್ಲಾ ಇದಾರೆ, ಅವರಿಗೆಲ್ಲ ಏನು ಉದ್ಯೋಗ" ಹೀಗೆ ಅವನ ಪ್ರಶ್ನೆಗಳಿಗೆ ಕೊನೆಯೇ ಇಲ್ಲ ಎಂಬಂತಿತ್ತು. ಕೆಲವು ಪ್ರಶ್ನೆಗಳಿಗೆ ನಾನು ಉತ್ತರ ಕೊಡದಿದ್ದರೂ ಆತನ ಮಾತಿಗೇನೂ ಬ್ರೇಕ್ ಬೀಳುತ್ತಿರಲಿಲ್ಲ.


ಉಡುಪಿಯವರ ಅನೇಕ ಹೋಟೆಲ್‌ಗಳು ಈ ಊರಿನಲ್ಲಿ ಇವೆಯೆಂದೂ, ಅವರೆಲ್ಲ ಇಲ್ಲಿ ಬಂದ ಮೇಲೆ ತುಂಬಾ ದುಡ್ಡು ಮಾಡಿದ್ದಾರೆ ಎಂದೂ, ಯಾವುದೋ ಹೋಟೆಲ್‌ನವರೊಬ್ಬರು ಥೇಟ್ ನಿಮ್ಮ ಹಾಗೆ ಕಾಣಿಸುತ್ತಾರೆಂತಲೂ ಆತ ನನಗೆ ಹೇಳುತ್ತಿದ್ದ. ಅಷ್ಟು ಮಾತ್ರವಲ್ಲ, ಆತ ಕಳೆದ ಸಾರಿ ಉಡುಪಿಗೆ ಬಂದಿದ್ದು, ಅಲ್ಲಿ ಒಂದೇ ರೂಮ್‌ನಲ್ಲಿ ಹತ್ತು ಜನ ಮಲಗಿದ್ದು, ಅಲ್ಲಿಂದ ಕೊಲ್ಲೂರಿಗೆ ಹೋಗಿದ್ದು, ಮತ್ತೆ ಉಡುಪಿಗೆ ಬಂದು ಎಣ್ಣೆ ಹಾಕಿದ್ದು, ಹಾಡು ಹಾಡಿದ್ದು, ಧರ್ಮಸ್ಥಳಕ್ಕೆ ಹೋಗುವಾಗ ಮಧ್ಯ ದಾರೀಲಿ ಗಾಡಿ ಪಂಕ್ಚರ್ ಆಗಿದ್ದು, ವಾಪಸ್ ಬರುವಾಗ ಮಲ್ಪೆ ಬೀಚ್‌ಗೆ ಬಂದಿದ್ದು, ಮಣಿಪಾಲದಲ್ಲಿ ಹುಡುಗಿಯರು ಹಗಲು ಹೊತ್ತಲ್ಲೇ ಅರ್ಧ ಚಡ್ಡಿಯಲ್ಲಿ ಅಡ್ಡಾಡೋದು ಗೊತ್ತಿದ್ದರೂ ಆ ಊರಿಗೆ ಹೋಗಲಾಗದೆ ಇದ್ದದ್ದು... ಹೀಗೆ ಆತ ಎಲ್ಲವನ್ನೂ ಹೇಳುತ್ತಾ ಸಾಗಿದ್ದ. ಅಷ್ಟರಲ್ಲಿ ಆತನ ಗ್ಲಾಸ್ ಖಾಲಿಯಾಗಿ ಅರ್ಧ ಗಂಟೆ ದಾಟಿತ್ತು. ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದರಿಂದ ಬಾರ್‌ನಲ್ಲಿ ಸಹಜವಾಗಿಯೇ ರಶ್ ಇತ್ತು. ಬೇರೆ ಗಿರಾಕಿಗಳು ಬಂದಿದ್ದಾರೆಂದು ವೈಟರ್ ಆತನಿಗೆ ಅಲ್ಲಿಂದ ಏಳುವಂತೆ ಕೇಳಿದ.

ಆ ಸಂಭಾಷಣೆ ಹಾಗೇನಾದ್ರೂ ಮುಂದುವರಿದಿದ್ದರೆ ನನ್ನ ಅವಸ್ಥೆ ಬಹಳ ಕಷ್ಟವಿತ್ತು, ಬಿಯರ್ ಕುಡಿಯುತ್ತಿದ್ದರೂ ಬಾಯಿ ಒಣಗಿಹೋಗಿತ್ತು. ಪ್ರಾಣೇಶ್ ಹೇಳಿದ ಜೋಕ್ ನೆನಪಾಗಿ ನಗು ಬಂತು. ಆತ ಹೋದ ಮೇಲೆ ಬಾರ್ ಇಡೀ ಖಾಲಿ ಖಾಲಿ ಅನ್ನಿಸಿತು. ನನ್ನ ಕುರಿತು ನನಗೇ ಸ್ವಲ್ಪ ಬೇಸರವೂ ಆಯಿತು. ಆತ ನನ್ನ ಬಗ್ಗೆ ಅಷ್ಟೆಲ್ಲ ಕೇಳಿದ, ನಾನು ಕನಿಷ್ಠ ಆತನ ಹೆಸರು, ಆತನ ಉದ್ಯೋಗ ಏನು ಅಂತಾದ್ರೂ ಕೇಳಬೇಕಿತ್ತು ಅನ್ನಿಸಿತು. ನಿಜ, ಆತ ತುಂಬಾ ಮಾತನಾಡಿದ, ಬೋರ್ ಹೊಡೆಸಿದ. ಆದರೆ ದಕ್ಷಿಣ ಕನ್ನಡಿಗರು ಯಾವುದೇ ಅಪರಿಚಿತರನ್ನು ಮಾತನಾಡಿಸುವಾಗ ಮುಖ್ಯವಾಗಿ ಮತ್ತು ಅಗತ್ಯವಾಗಿ ಕೇಳುವ ಒಂದು ಪ್ರಶ್ನೆಯಿದೆ. "ನಿಮ್ಮ ಜಾತಿ ಯಾವುದು?" ಎಂಬುದೇ ಆ ದರಿದ್ರ ಪ್ರಶ್ನೆ. ಆದರೆ ಗಂಗಾವತಿಯ ಆ ವ್ಯಕ್ತಿ ಏನೆಲ್ಲಾ ಕೇಳಿದ್ದರೂ "ನಿಮ್ಮ ಜಾತಿ ಯಾವುದು" ಎಂದು ಕೇಳಲೇ ಇಲ್ಲ, ಇಷ್ಟರ ಮಟ್ಟಿಗೆ ಆತ ನನ್ನ ಪಾಲಿಗೆ ವಿಶ್ವಮಾನವನೇ ಆದ. ಮಂಗಳೂರು ಕಡೆಯವರಿಗಿಂತಲೂ ಆತ ಹೆಚ್ಚು ಎಜುಕೇಟೆಡ್ ಅನ್ನಿಸಿದ.

ಗಂಗಾವತಿ ಊರಿನ ಬೆವರು ಬಾರದ ಒಣಕಲು ಉರಿ ಬಿಸಿಲು, ಮೂಗಿಗೆ ಬಡಿಯುವ ಒಣಮಣ್ಣಿನ ಕಪ್ಪು ಧೂಳು, ಅಲ್ಲಲ್ಲಿ ಹಂದಿಗಳು ಮತ್ತು ಕೊಳಚೆ ನೀರಿನ ದುರ್ನಾತದ ನಡುವೆಯೂ ಗಂಗಾವತಿ ಜನರ ಲವಲವಿಕೆ, ಜೀವನ ಪ್ರೇಮ ನಿಜಕ್ಕೂ ಖುಷಿ ಕೊಟ್ಟಿತು. ಗಂಗಾವತಿಗೆ ಕರೆಸಿಕೊಂಡ ಸಮ್ಮೇಳನಕ್ಕೆ ಧನ್ಯವಾದ ಹೇಳಲೇಬೇಕು!

ಕುಂಬ್ಳೆಯ ಸುತ್ತ ಸ್ವಾರ್ಥದ ಹುತ್ತ

ನ್ಯಾಷನಲ್ ಕ್ರಿಕೆಟ್ ಅಕಾಡೆಮಿಯ ಚೇರ್‌ಮನ್ ಸ್ಥಾನಕ್ಕೆ ಅನಿಲ್ ಕುಂಬ್ಳೆ ಎಸೆದಿರುವ ರಾಜೀನಾಮೆಯ ಚೆಂಡು ಕುಂಬ್ಳೆಯನ್ನೇ ಅನುಮಾನದಿಂದ ನೋಡುವಂತೆ ಮಾಡಿದೆ. ಇಷ್ಟು ದಿನ ಕ್ರೀಡಾ ಸೇನಾನಿಯಂತೆ ಮೆರೆದಿದ್ದ, ಅಷ್ಟೇ ಗೌರವಯುತ ಸಾಧನೆಗಳ ಸರಮಾಲೆ ಪೋಣಿಸಿದ್ದ ಕುಂಬ್ಳೆ ಇದೀಗ ಸ್ವಾರ್ಥಕ್ಕಾಗಿ ಅಧಿಕಾರವನ್ನು ಬಳಸಿಕೊಳ್ಳಲು ಮುಂದಾದ ಆರೋಪವನ್ನು ಮೈಮೇಲೆಳೆದುಕೊಂಡಿದ್ದಾರೆ. ಮೇಲ್ನೋಟಕ್ಕೆ ಮತ್ತು ಸ್ವತಃ ಕುಂಬ್ಳೆಯೇ ಹೇಳಿಕೊಳ್ಳುವಂತೆ ಸಮಿತಿಯ ಸದಸ್ಯರ ಅಸಹಕಾರವೇ ರಾಜೀನಾಮೆಗೆ ಕಾರಣವೆಂಬಂತೆ ಕಂಡುಬಂದರೂ ಅಸಲಿಯತ್ತೇ ಬೇರೆಯಿದೆ.



ಕಳೆದ ವರ್ಷ ಬಿಸಿಸಿಐ ತನ್ನ ನ್ಯಾಷನಲ್ ಕ್ರಿಕೆಟ್ ಅಕಾಡೆಮಿ (ಎನ್.ಸಿ.ಎ) ಗೆ ಅನಿಲ್ ಕುಂಬ್ಳೆಯನ್ನು ಚೇರ್‌ಮನ್ ಆಗಿ ಆಯ್ಕೆ ಮಾಡಿದಾಗ ಅದನ್ನು ಸ್ವಾಗತಿಸಿದವರೇ ಹೆಚ್ಚು. ಏಕೆಂದರೆ ಕ್ರೀಡಾ ಸಂಸ್ಥೆಗೆ ಅಪ್ಪಟ ಕ್ರೀಡಾಪಟುವೇ ನೇತಾರನಾದರೆ ಸುಧಾರಣೆ ಸಾಧ್ಯ ಎಂಬ ಅಭಿಪ್ರಾಯ ಎಲ್ಲರದ್ದಾಗಿತ್ತು, ಅದಕ್ಕೆ ತಕ್ಕಂತೆಯೇ ಮೂರು ವರ್ಷದ ಈ ಅವಧಿಯಲ್ಲಿ ಏನೇನೂ ಮತ್ತು ಹೇಗೆಲ್ಲಾ ಬದಲಾವಣೆ ತರಬೇಕೆಂಬುದರ ಬಗ್ಗೆ ಅಚ್ಚುಕಟ್ಟಾದ ಬ್ಲೂಪ್ರಿಂಟನ್ನು ಸಿದ್ಧಪಡಿಸಿಕೊಂಡ ಕುಂಬ್ಳೆ ಭರವಸೆಯನ್ನೂ ಮೂಡಿಸಿದ್ದರು. ಅದೇ 2010ರಲ್ಲಿ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್‌ಗೆ ನಡೆದ ಎಲೆಕ್ಷನ್ನಲ್ಲಿ ಕುಂಬ್ಳೆ ತನ್ನ ತಂಡವನ್ನು ಗೆಲ್ಲಿಸಿಕೊಂಡು ಅಧ್ಯಕ್ಷನಾದಾಗಲು ಯಾರೂ ಕೊಂಕು ತೆಗೆದಿರಲಿಲ್ಲ, ಅದಕ್ಕೂ ಕುಂಬ್ಳೆ ಅರ್ಹ ವ್ಯಕ್ತಿಯೇ ಆಗಿದ್ದರು. ಇನ್ನು ಬಿರುಬೀಸಿನ ಟ್ವೆಂಟಿ-ಟ್ವೆಂಟಿ ಅವತಾರದ ಐಪಿಎಲ್‌ನಲ್ಲಿ ವಿಜಯ್‌ಮಲ್ಯನ ಆರ್‌ಸಿಬಿ ತಂಡದ ಮುಖ್ಯ ಸಲಹೆಗಾರನಾಗಿ ಉಳಿದಾಗಲಂತೂ ಆತನ ಕ್ರಿಕೆಟ್ ಪ್ರೇಮವೇ ಎದ್ದು ಕಾಣುತ್ತಿತ್ತು. ಕುಂಬ್ಳೆಯ ಈ ಎಲ್ಲಾ ನಡೆಯನ್ನು ಅಭಿಮಾನಿಗಳಿರಲಿ ಪ್ರತಿಸ್ಪರ್ಧಿಗಳೇ ಅನುಮಾನಿಸಲು ಆಸ್ಪದವಿರಲಿಲ್ಲ, ಆದರೆ ಅದ್ಯಾವ ಘಳಿಗೆಯಲ್ಲಿ ಕುಂಬ್ಳೆ ತನ್ನದೇ ಖಾಸಗಿ ಒಡೆತನದಲ್ಲಿ ಟೆನ್‌ವಿಕ್ ಎಂಬ ಸ್ಪೋರ್ಟ್ಸ್ ಕಾರ್ಪೋರೇಟ್ ಕಂಪೆನಿಯನ್ನು ತೆರೆದು ಯುವ ಆಟಗಾರರೊಂದಿಗೆ ಡೀಲ್ ಕುದುರಿಸಲು ಪ್ರಾರಂಭಿಸಿದರೋ ಆಗ ಕುಂಬ್ಳೆಯ ಆಯ್ಕೆ ಮತ್ತು ಆಲೋಚನೆಗಳೆಲ್ಲವೂ ಅನುಮಾನಕ್ಕೆ ತುತ್ತಾಗಲು ಪ್ರಾರಂಭಿಸಿದ್ದವು. ಅಲ್ಲಿಂದ ಆರಂಭವಾದ ರಗಳೆ ಈಗ ರಾಜೀನಾಮೆವರೆಗೂ ಬಂದು ನಿಂತಿದೆ.

ತನ್ನ ಸೋದರ ದಿನೇಶ್ ಹಾಗೂ ಮಾಜಿ ಟೇಬಲ್ ಟೆನಿಸ್ ಆಟಗಾರ ವಸಂತ್ ಭಾರದ್ವಾಜ್ ಜೊತೆ ಸೇರಿ ಕುಂಬ್ಳೆ ಈ ಟೆನ್‌ವಿಕ್ ಅನ್ನು ಸ್ಥಾಪಿಸಿದರು. 1999ರಲ್ಲಿ ಪಾಕಿಸ್ತಾನ ವಿರುದ್ಧದ ಐತಿಹಾಸಿಕ ಪಂದ್ಯದಲ್ಲಿ 10 ವಿಕೆಟ್ ಕಿತ್ತ ನೆನಪಿಗಾಗಿ ಮತ್ತು ಆ ಸಾಧನೆಯನ್ನು ಎನ್‌ಕ್ಯಾಷ್ ಮಾಡಿಕೊಳ್ಳಲಿಕ್ಕಾಗಿ ಟೆನ್‌ವಿಕ್ ಎಂದು ನಾಮಕರಣ ಮಾಡಿದರು. ಯುವ ಆಟಗಾರರಿಗೆ ಪರ್ಸನಾಲಿಟಿ ಡೆವಲಪ್‌ಮೆಂಟ್ ಜೊತೆಗೆ ಮೀಡಿಯಾಗಳನ್ನು ಹೇಗೆ ಫೇಸ್ ಮಾಡಬೇಕು, ಒತ್ತಡವನ್ನು ಹೇಗೆ ನಿಭಾಯಿಸಬೇಕೆಂಬುದು ಕಲಿಸುವ ಮತ್ತು ಅವರನ್ನು ಮ್ಯಾನೇಜ್ ಮಾಡುವ ಜವಾಬ್ದಾರಿಯನ್ನು ಇದು ನಿರ್ವಹಿಸಲಿದೆ ಎಂದು ಕುಂಬ್ಳೆ ಹೇಳಿಕೊಂಡಿದ್ದರು. ಆದರೆ ಇವೆಲ್ಲವುಗಳ ಮರೆಯಲ್ಲಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡ ಒಪ್ಪಂದ ಮಾಡಿಕೊಂಡ ಸೇರಿದ ಯುವ ಆಟಗಾರರಿಗೆ ದೇಶೀಯ ತಂಡಗಳಲ್ಲಿ ಅವಕಾಶ ಕಲ್ಪಿಸುವ ಒಂದರ್ಥದ ಮಧ್ಯವರ್ತಿಯ ಕೆಲಸಕ್ಕೆಂದೇ ಅದನ್ನು ಸ್ಥಾಪಿಸಲಾಗಿದೆ ಎಂಬ ಗುಮಾನಿ ಆಗಲೇ ಎದ್ದಿದ್ದವು.

ಹೇಗೂ ಕುಂಬ್ಳೆ ಎನ್‌ಸಿಎ, ಕೆಎಸ್‌ಸಿಎ ಮತ್ತು ಆರ್‌ಸಿಬಿಯ ಸಲಹೆಗಾರನಂತಹ ಪ್ರಭಾವಿ ಸ್ಥಾನದಲ್ಲಿದುದರಿಂದ ಅವಕಾಶ ದೊರಕಿಸಬಹುದೆಂಬ ಭಾವನೆ ಯುವ ಆಟಗಾರರಲ್ಲಿ ಅನಧಿಕೃತವಾಗಿ ಮೂಡುವಂತೆ ಮಾಡಲಾಗುತ್ತೆ ಎಂಬ ಸಂದೇಹವೂ ಹಲವರಲ್ಲಿ ಮೂಡಿತ್ತು, ಅದೂಅಲ್ಲದೆ ಆಟಗಾರರಿಗೆ ಬೇರೆ ಬೇರೆ ತಂಡಗಳೊಂದಿಗೆ ಕಾಂಟ್ರ್ಯಾಕ್ಟ್ ಮಾಡಿಸಿಕೊಡುವುದೇ ಟೆನ್‌ವಿಕ್‌ನ ಮೂಲ ಅಜೆಂಡಾವಾಗಿತ್ತು. ಇಂತಹ ಗುಮಾನಿಗೆ ಪೂರಕವೆಂಬಂತೆ ಟೆನ್‌ವಿಕ್ ತೂರಿಕೊಂಡ ಕರ್ನಾಟಕದ ವಿನಯ್‌ಕುಮಾರ್ ಮತ್ತು ಎಸ್.ಅರವಿಂದ್ ರಾಷ್ಟ್ರೀಯ ಹಾಗೂ ಐಪಿಎಲ್ ತಂಡಗಳಲ್ಲಿ ಸ್ಥಾನ ಗಿಟ್ಟಿಸಿಕೊಂಡದ್ದು ಕುಂಬ್ಳೆಯ ಕಾರ್ಪೋರೇಟ್ ಕಂಪನಿಯನ್ನು ಅನುಮಾನದ ಅಂಚಿಗೆ ತಳ್ಳಿದ್ದವು. ಅಂದಹಾಗೆ ಯುವ ಆಟಗಾರರಿಗೆ ಇದೆಲ್ಲಾ ಸೇವೆಗಳನ್ನು ಕಂಪನಿ ಬಿಟ್ಟಿಯಾಗೇನೂ ನೀಡುತ್ತಿಲ್ಲ, ತಂಡಗಳೊಂದಿಗೆ ಕಾಂಟ್ರ್ಯಾಕ್ಟೂ ಸೇರಿದಂತೆ ಎಲ್ಲದಕ್ಕು ಅವರಿಂದ ಶುಲ್ಕ ವಸೂಲಿ ಮಾಡುತ್ತೆ.

ತನ್ನ ಈ ಖಾಸಗಿ ಸ್ಪೋರ್ಟ್ಸ್ ಕಂಪನಿಯನ್ನು ಪ್ರಮೋಟ್ ಮಾಡಲು ಕುಂಬ್ಳೆ ಎನ್.ಸಿ.ಎ ಹಾಗೂ ಕೆ.ಎಸ್.ಸಿ.ಎ ಅಧ್ಯಕ್ಷಗಿರಿಯ ಜೊತೆಗೆ ಆರ್‌ಸಿಬಿಯ ಮೆಂಟರ್ ಸ್ಥಾನವನ್ನು ದುಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಸಮರ್ಥಿಸುವಂತೆ ಕುಂಬ್ಳೆ ಎನ್‌ಸಿಎ ಹೆಸರಿನಲ್ಲಿ ಬಿಸಿಸಿಐ ಮುಂದೆ ಒಂದಿಲ್ಲೊಂದು ಯೋಜನೆಗಳನ್ನು ಇಡುತ್ತಲೇ ಬಂದಿದ್ದರು. ಬೆಂಗಳೂರಿನಲ್ಲಿರುವ ಎನ್.ಸಿ.ಎ ನಂತೆಯೇ ಬಿಸಿಸಿಐ ಮತ್ತೂ ಮೂರು ಅಕಾಡೆಮಿಗಳನ್ನು ಹೊಂದಿದ್ದು ಅದರಲ್ಲಿ ಮುಂಬೈನ ಬ್ಯಾಟಿಂಗ್ ಅಕಾಡೆಮಿ, ಮೊಹಲಿಯ ಫಾಸ್ಟ್ ಬೌಲಿಂಗ್ ಅಕಾಡೆಮಿ ಮತ್ತು ಚೆನ್ನೈನ ಸ್ಪಿನ್ ಬೌಲಿಂಗ್ ಹಾಗೂ ವಿಕೆಟ್‌ಕೀಪರ್ಸ್ ಅಕಾಡೆಮಿಗಳು ಯುವ ಆಟಗಾರರಿಗೆ ತರಬೇತಿ ನೀಡುತ್ತಿವೆ. ಇವೆಲ್ಲ ಬಿಸಿಸಿಐಗೆ ಅಧೀನವಾಗಿರುತ್ತವಾದ್ದರಿಂದ ಎನ್.ಸಿ.ಎ ಗೆ ರಿಪೋರ್ಟ್ ಒಪ್ಪಿಸುವ ಅಗತ್ಯವಿಲ್ಲ, ಆದರೆ ಕುಂಬ್ಳೆ ಈ ನಿಯಮವನ್ನು ಬದಲಿಸಿ ಅವೆಲ್ಲ ಎನ್‌ಸಿಎ ಮೂಲಕ ಬಿಸಿಸಿಐ ಸಂಪರ್ಕಿಸುವಂತೆ ಮಾಡಲು ಯೋಜಿಸಿದ್ದರು. ತೀರಾ ಅನುಮಾನಿಸುವಂತ ಯೋಜನೆಯೇನು ಇದಾಗಿರಲಿಲ್ಲವಾದರೂ ಟೆನ್‌ವಿಕ್‌ನ ಯಜಮಾನಿಕೆ ಈ ಯೋಜನೆ ಹಿಂದೆ ಕೆಲಸ ಮಾಡಿದ್ದು ಸ್ಪಷ್ಟವಾಗಿತ್ತು, ಹೀಗೆ ಮಾಡುವುದರಿಂದ ದೇಶೀಯ ಯುವ ಆಟಗಾರರು ಸುಲಭವಾಗಿ ಎನ್‌ಸಿಎ ಚೇರ್‌ಮನ್ ಕುಂಬ್ಳೆಯ ಸಂಪರ್ಕಕ್ಕೆ ಬರುತ್ತಾರೆ. ಆಗ ಅವರನ್ನು ಸೆಳೆಯುವುದು ಟೆನ್‌ವಿಕ್‌ಗೆ ಸುಲಭವಾಗುತ್ತಿತ್ತು, ಇದೇ ಕಾರಣಕ್ಕೆ ಕುಂಬ್ಳೆ ಸಲಹೆಯನ್ನು ಬಿಸಿಸಿಐ ಸಮಿತಿ ಸಾರಾಸಗಟಾಗಿ ತಳ್ಳಿಹಾಕಿತು.


ಯುವ ಆಟಗಾರರಿಗೆ ಜೀವನ ಕೌಶಲ್ಯದ ತರಬೇತಿಯನ್ನು ನೀಡುವಂತೆ ಕಳೆದ ವರ್ಷ ಬಿಸಿಸಿಐಗೆ ಕುಂಬ್ಳೆ ಶಿಫಾರಸ್ಸು ಮಾಡಿದ್ದರು. ಸ್ಟ್ರೆಸ್ ಮ್ಯಾನೇಜ್‌ಮೆಂಟ್, ಆ್ಯಂಟಿ ಡೋಪಿಂಗ್ ಕೋಡ್, ಮೀಡಿಯಾ ಮ್ಯಾನೇಜ್‌ಮೆಂಟ್ ಇತ್ಯಾದಿಗಳನ್ನು ಟೆನ್‌ವಿಕ್ ಮೂಲಕ ಕೊಡಿಸುವುದು ಮತ್ತು ಅದರ ಉಸ್ತುವಾರಿಯನ್ನು ತಾನೇ ನಿರ್ವಹಿಸುವುದು ಎಂದೆಲ್ಲ ರೆಕಮೆಂಡ್ ಮಾಡಿಕೊಂಡಿದ್ದ ಕುಂಬ್ಳೆ ಅದಕ್ಕೆಂದು ಪ್ರತಿ ಆಟಗಾರನಿಗೆ 2.9 ಲಕ್ಷದ ದುಬಾರಿ ಕೊಟೇಷನ್ ಕೂಡಾ ತಗುಲಿಸಿದ್ದರು. ಅದೂಅಲ್ಲದೆ ಆಟಗಾರರು 12 ತಿಂಗಳ ಕಾಲ ಬೆಂಗಳೂರಿನಲ್ಲೇ ಇದ್ದು ತರಬೇತಿ ಪಡೆದರೆ ಸೂಕ್ತ ಎಂಬ ಖಾಸಗಿ ಅಭಿಪ್ರಾಯವೂ ಅದರಲ್ಲಿತ್ತು, ಇದು ಟೀಮಿಗಿಂತ ಹೆಚ್ಚಾಗಿ ಟೆನ್‌ವಿಕ್‌ಗೆ ಲಾಭದಾಯಕವಾಗುತ್ತದೆಂದು ತೀರ್ಮಾನಿಸಿದ ಬಿಸಿಸಿಐ ಅದನ್ನೂ ಡ್ರಾಪ್ ಮಾಡಿತ್ತು.

ಈ ನಡುವೆ ಬಿಸಿಸಿಐ ಆಟಗಾರರ ಗಾಯಾಳು ವಿವರಗಳನ್ನು ದಾಖಲಿಸಿಡುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಆಲೋಚಿಸಿದ್ದೇ ತಡ, ಕುಂಬ್ಳೆ ಇನ್ಫೋಸಿಸ್ ಸಾಫ್ಟ್‌ವೇರ್ ಕಂಪನಿಯೊಂದಿಗೆ ಮಾತುಕತೆಗೆ ಮುಂದಾಗಿದ್ದರು. ಇಲ್ಲಿಯೂ ಸಹ ಅದಕ್ಕೆ ತಗುಲಬಹುದಾದ ವೆಚ್ಚಕ್ಕಿಂತ ಭಾರಿ ಮೊತ್ತವನ್ನು ಕುಂಬ್ಳೆ ಕೋಟ್ ಮಾಡಿದ್ದೇ ತಡ ಬಿಸಿಸಿಐ ಮಂದಿ ಇದರಲ್ಲೂ ಕುಂಬ್ಳೆಯ ಗೂಗ್ಲಿ ಇರುವುದನ್ನು ಖಾತ್ರಿಪಡಿಸಿಕೊಂಡವರಂತೆ ಒಂದೇ ಏಟಿಗೆ ಯೋಜನೆಯನ್ನೇ ಕೈಬಿಟ್ಟು ಕುಳಿತಿದ್ದರು.

ಹೀಗೆ ಮೇಲಿಂದ ಮೇಲೆ ಕುಂಬ್ಳೆಯ ಕಾರ್ಪೋರೇಟ್ ಓಟಕ್ಕೆ ಬಿಸಿಸಿಐ ಬ್ರೇಕ್ ಹಾಕುತ್ತಿದ್ದುದನ್ನೇ ಅಸಹಕಾರವೆಂದು ಬಿಂಬಿಸಿದ ಕುಂಬ್ಳೆ ನೇರವಾಗಿ ಎನ್.ಸಿ.ಎ ಚೇರ್‌ಮನ್ ಸ್ಥಾನಕ್ಕೇ ರಾಜಿನಾಮೆ ಗೀಚಿದ್ದಾರೆ. "ನನ್ನ ಆಲೋಚನೆಗಳು ಸಮಿತಿಯ ಇತರರ ಅಭಿಪ್ರಾಯಗಳಿಗೆ ಸರಿಹೊಂದಲಿಲ್ಲ, ಅದೂ ಅಲ್ಲದೆ ನನ್ನ ಮಾತನ್ನು ಯಾರೂ ಕೇಳಲಿಲ್ಲವೆಂದ ಮೇಲೆ ಅಧ್ಯಕ್ಷನಾಗಿಯಾದರೂ ಯಾಕಿರಬೇಕೆಂದು ಹೊರಬಂದಿದ್ದೇನೆ" ಎಂದು ಕುಂಬ್ಳೆ ಹೇಳಿದ್ದಾರೆ. ಆದರೆ ಅವರ ಆಲೋಚನೆಗಳು ಟೆನ್‌ವಿಕ್‌ನಂತಹ ಖಾಸಗಿ ಕಂಪನಿಯತ್ತ ಮುಖಮಾಡಿದ್ದರೆ ಹೇಗೆ ತಾನೆ ಸಹಕಾರ ನೀಡಲು ಸಾಧ್ಯವಾದೀತು. ಕ್ರಿಕೆಟ್ ಚರಿತ್ರೆಯಲ್ಲಿ ಯಾರೂ ಯಾವತ್ತಿಗೂ ಅನುಮಾನಿಸದಂತಹ ಗುರುತುಗಳನ್ನು ಉಳಿಸಿ ಬಂದ ಕುಂಬ್ಳೆಗೆ ಇದೆಲ್ಲಾ ಬೇಕಿತ್ತಾ?

• ಗಿರೀಶ್ ತಾಳಿಕಟ್ಟೆ

ನಿಜವಾಗದ ನಿರೀಕ್ಷೆಗಳು




ಕುಂಬ್ಳೆ ಅಂಡ್ ಟೀಮು ಕಳೆದ ಕೆ.ಎಸ್.ಸಿ.ಎ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದಾಗ ಮೂಡಿದ್ದ ಭಾರೀ ಬದಲಾವಣೆಯನಿರೀಕ್ಷೆಗಳೆಲ್ಲವೂ ಇನ್ನೂ ನಿರೀಕ್ಷೆಯಾಗೇ ಉಳಿದಿವೆ. ಕುಂಬ್ಳೆಯ ಅರ್ಹತೆ ಮತ್ತು ಸಾಮರ್ಥ್ಯದ ದೃಷ್ಟಿಯಿಂದ ಆ ನಿರೀಕ್ಷೆಗಳಿಗೆ ಬೆಲೆಯಂತೂ ಖಂಡಿತ ಇದೆ. ಆದರೆ ವಿಪರೀತವೆನಿಸುವ ಐಡಿಯಾ ಕಮ್ ಆಲೋಚನೆಗಳೇ ಕುಂಬ್ಳೆಯನ್ನೀಗ ಕರ್ತವ್ಯಭ್ರಷ್ಟನನ್ನಾಗಿ ಕೂರಿಸಿವೆ.

ಕ್ರಿಕೆಟ್ ಅಕಾಡೆಮಿಯ ಚೇರ್‌ಮನ್, ಕೆ.ಎಸ್.ಸಿ.ಎ ಅಧ್ಯಕ್ಷ, ಆರ್‌ಸಿಬಿಯ ಮೆಂಟರ್ ಹೀಗೆ ಹಲವಾರು ಸ್ಥಾನಗಳಲ್ಲಿ ಏಕಕಾಲದಲ್ಲಿ ಪ್ರತಿಷ್ಠಾಪನೆಯಾಗಿದ್ದ ಕುಂಬ್ಳೆ ಟೆನ್‌ವಿಕ್ ಕಂಪೆನಿಯ ಮೂಲಕ ಕಾರ್ಪೋರೇಟ್ ವಲಯಕ್ಕೂ ಕಾಲಿರಿಸಿದ ಪರಿಣಾಮ ಯಾವೊಂದು ಸ್ಥಾನಕ್ಕೂ ತೃಪ್ತಿಕರ ನ್ಯಾಯ ಒದಗಿಸಲಾಗಿಲ್ಲ ಎಂಬುದಕ್ಕೆ ಇಲ್ಲಿವರೆಗೆ ಕೆ.ಎಸ್.ಸಿ.ಎ ಸುತ್ತ ಎದ್ದಿರುವ ಕೆಲ ಕಾಂಟ್ರವರ್ಸಿಗಳೇ ಸಾಕ್ಷಿ. ಕಳೆದ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಇಂಗ್ಲೆಂಡ್ ನಡುವಿನ ಪಂದ್ಯ ಕೊಲ್ಕತ್ತಾದಿಂದ ಬೆಂಗಳೂರಿಗೆ ಶಿಫ್ಟಾದಾಗ ಟಿಕೆಟ್ ಮಾರಾಟದಲ್ಲಿ ನಡೆದ ಗೊಂದಲವೇ ಸಾಕು ಕುಂಬ್ಳೆಯ ಹಿಡಿತವಿಲ್ಲದ ಆಡಳಿತವನ್ನು ಬಿಚ್ಚಿಡಲು. ಅವತ್ತು ಕ್ರಿಕೆಟ್‌ಪ್ರಿಯರಿಗೆ ಮಾರಾಟಕ್ಕೆಂದು ಸಿಕ್ಕಿದ್ದು ಕೆಲವೇ ಸಾವಿರದಷ್ಟು ಟಿಕೆಟ್ ಮಾತ್ರ. ಸುಮಾರು 10,000 ಟಿಕೆಟ್‌ಗಳನ್ನು ಐಸಿಸಿ ಪಡೆದುಕೊಂಡಿತ್ತು ಎಂಬ ಸಬೂಬನ್ನು ಕೆ.ಎಸ್.ಸಿ.ಎ ನೀಡಿತ್ತಾದರೂ ಐಸಿಸಿಗೆ ಸಂದಾಯವಾಗಿದ್ದು ಒಂದು ಸಾವಿರಕ್ಕೂ ಕಡಿಮೆ ಟಿಕೆಟ್‌ಗಳು ಮಾತ್ರ ಎಂಬುದಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಹಾರೂನ್ ಲೋರ್ಗಾಟ್ ಆರೋಪಿಸಿದ್ದಾರೆ. ಇನ್ನು ಕೆ.ಎಸ್.ಸಿ.ಎ ಗೆ ಸಂಬಂಧಿಸಿದ ಕಾಂಟ್ರ್ಯಾಕ್ಟನ್ನು ಕುಂಬ್ಳೆ ತನ್ನ ಸ್ನೇಹಿತರಿಗೆ ಮಾತ್ರ ನೀಡುತ್ತಾರೆ ಹಾಗೂ ಸ್ಟೇಡಿಯಮ್‌ನಲ್ಲಿ ದುಬಾರಿ ಮದ್ಯ ಸರಬರಾಜಿನ ಕುರಿತಾಗಿ ಸದನದಲ್ಲಿ ಗದ್ದಲವಾಗಿದ್ದು ತೀರಾ ಮರೆತುಹೋಗುವಷ್ಟು ಹಳೆಯ ಸಂಗತಿಗಳೇನಲ್ಲ.

ಸಯ್ಯದ್ ಕಿರ್ಮಾನಿ ಮತ್ತು ರಘುರಾಮ್ ಭಟ್‌ರಂತಹ ಹಿರಿಯ ಕ್ರಿಕೆಟಿಗರನ್ನು ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಕರ್ನಾಟಕ ತಂಡದ ಆಯ್ಕೆದಾರರ ಸಮಿತಿಯಿಂದ ಕಿತ್ತೆಸೆದದ್ದಕ್ಕೂ ಕುಂಬ್ಳೆ ಸೂಕ್ತವಾಗಿ ಪ್ರತಿಕ್ರಿಯಿಸಿಲ್ಲ. ಇದೆಲ್ಲವನ್ನೂ ಗಮನಿಸಿದರೆ ಕುಂಬ್ಳೆಯ ತಂಡ ಕರ್ನಾಟಕ ಕ್ರಿಕೆಟ್‌ನತ್ತ ಗಮನ ಹರಿಸಿಲ್ಲ ಎಂಬುದಂತೂ ಸ್ಪಷ್ಟವಾಗುತ್ತೆ. ಅಧಿಕಾರಕ್ಕೆ ಬಂದ ಹೊಸದರಲ್ಲಿ ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಮಾತನ್ನಾಡಿದ್ದ ಕುಂಬ್ಳೆ ಈಗ ತನ್ನ ಖಾಸಗಿ ಸ್ಪೋರ್ಟ್ಸ್ ಕಂಪನಿಗೆ ಅನುಕೂಲವಾಗುವಂತಹ ಯೋಜನೆಗಳಲ್ಲೆ ಸಮಯ ಕಳೆಯುತ್ತಿರುವುದು ದುರದೃಷ್ಟಕರ. ಇನ್ನು ಮುಂದಾದರೂ ಯುವ ಪ್ರತಿಭೆಗಳ ನಿರೀಕ್ಷೆಗಳತ್ತ ಕುಂಬ್ಳೆ ಮುಖಮಾಡುವಂತಾಗಲಿ. ಅದು ಮಾತ್ರವೇ ಕುಂಬ್ಳೆಯ ಮೇಲಿರುವ ಅಭಿಮಾನವನ್ನು ಮತ್ತಷ್ಟು ದಿನ ಕಾಯಬಲ್ಲದು.

ದಲಿತ ನಾಯಕ ಮೂರ್ತಿ ಹತ್ಯೆ ಹಿಂದೆ ನಂದೀಶ್ ರೆಡ್ಡಿ?


ನಂದೀಶ್ ರೆಡ್ಡಿ

ನಿನ್ನೆ ರೈತ ನಾಯಕ ಸಿದ್ಲಿಂಗ ಪ್ರಭು ಕೊಲೆಯಾದರೆ ಈಗ ದಲಿತ ನಾಯಕ ಕೆಂಪಾಪುರ ಮೂರ್ತಿಯ ಹತ್ಯೆಯಾಗಿದೆ!

ಈ ಎರಡೂ ಪ್ರಕರಣಗಳಿಗೂ ಇರುವ ಸಂಬಂಧ ಒಂದೇ. ಅದು ಬಿಜೆಪಿಯ ನಾಯಕರು-ಶಾಸಕರು ಜೈಲುಪಾಲಾಗದೇ ಬಚಾವಾಗಿದ್ದು!

ಹೇಗೆ ಸಿದ್ಲಿಂಗ ಪ್ರಭು ಹತ್ಯೆಯಲ್ಲಿ ನೈಸ್ ಖೇಣಿ ಮತ್ತು ಬಿಜೆಪಿ ನಾಯಕ ರುದ್ರೇಶ್‌ರನ್ನು ಸರ್ಕಾರವೇ ನಿಂತು ಬಚಾವು ಮಾಡಿತೋ ಹಾಗೆ ದಲಿತ ನಾಯಕ ಕೆಂಪಾಪುರ ಮೂರ್ತಿಯ ಕೊಲೆಯಲ್ಲಿ ಕೇಳಿಬಂದ. ಕೆ.ಆರ್. ಪುರದ ನೆಲಕಂಟಕ ಶಾಸಕ ನಂದೀಶ್ ರೆಡ್ಡಿಯ ಹೆಸರೂ ಮುಚ್ಚಿಹೋಯಿತು?

ಬಿಜೆಪಿ ಅಧಿಕಾರಕ್ಕೆ ಬಂದನಂತರ ಉಲ್ಬಣಿಸಿದ ದಲಿತ ದಮನಕಾರ್ಯದ ವಿಸ್ತರಣೆಯೋ ಎಂಬಂತೆ ಕೊಲೆಯಾದವನು ಎಂ. ಮೂರ್ತಿ ಆಲಿಯಾಸ್ ಕೆಂಪಾಪುರ ಮೂರ್ತಿ ಉರ್ಫ್ ಬಾಕ್ಸರ್ ಮೂರ್ತಿ. ಜೀವನಭೀಮಾನಗರದ ಇನ್ಸ್‌ಪೆಕ್ಟರ್ ಅಶೋಕ್ ಮತ್ತು ಕೆ.ಆರ್. ಪುರಂ ವಲಯದ ಎಸಿಪಿ ನರಸಿಂಹಯ್ಯ ಇಬ್ಬರೂ ಶಾಸಕ ನಂದೀಶ್ ರೆಡ್ಡಿಯ ಕೃಪೆಯಲ್ಲೇ ನೇಮಕಗೊಂಡವರು. ಈಗ ಮೂರ್ತಿ ಕೊಲೆ ಆರೋಪಿಗಳೆಂದು ಆತನ ಸಹಚರ ತಿಪ್ಪಸಂದ್ರದ ಜಗ್ಗ ಆಲಿಯಾಸ್ ಜಗದೀಶ ಮತ್ತು ಆತನ ಮೂರ್‍ನಾಲ್ಕು ಮಂದಿ ಅನಾಮಿಕ ಶಿಷ್ಯರನ್ನು ಹಿಡಿದು ಇವರೇ ಹಂತಕರೆಂದು ಜೈಲಿಗೆ ಹಾಕಿದ್ದಾರೆ. ಕೊಲೆಗೆ ಕಾರಣ ಸಾಲವೆಂದೂ, ಮೂರ್ತಿ ಜಗ್ಗನಿಗೆ ಲಕ್ಷಗಟ್ಟಲೇ ಸಾಲ ಕೊಡಬೇಕಿತ್ತೆಂದೂ, ಪಡೆದ ದುಡ್ಡನ್ನು ತೀರಿಸಲಾಗದೇ ಮೂರ್ತಿ ಜಗ್ಗನನ್ನೇ ಕೊಲ್ಲಿಸಲು ಸಂಚು ರೂಪಿಸಿದ್ದನೆಂದೂ ಇದು ಹೇಗೋ ಜಗ್ಗನಿಗೆ ಗೊತ್ತಾಗಿ ಆತನೇ ಮೂರ್ತಿಯನ್ನು ಕೊಂದನೆಂಬುದು ಪೊಲೀಸರ ಹೇಳಿಕೆ.

ಆದರೆ ಎಚ್‌ಎಎಲ್ ಸುತ್ತಮುತ್ತಲ ದೊಮ್ಮಲೂರು, ಇಂದಿರಾನಗರ, ಜೋಗುಪಾಳ್ಯ, ಮಲ್ಲೇಶ್‌ಪಾಳ್ಯ, ತಿಪ್ಪಸಂದ್ರ, ಜೀವನಭೀಮಾನಗರ ಇತ್ಯಾದಿ ಯಾವುದೇ ಏರಿಯಾದ ಪುಢಾರಿಯನ್ನು ಕೇಳಿದರೂ ಮೂರ್ತಿ ಹತ್ಯೆಯ ಹಿಂದೆ ಕೇಳಿಬರುತ್ತಿದ್ದುದ್ದು ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿಯದೇ ಹೆಸರು. ರೈತ ನಾಯಕ ಸಿದ್ದಲಿಂಗ ಪ್ರಭುವನ್ನು ಕೊಲ್ಲಿಸಿದ ಖೇಣಿಯನ್ನಾಗಲಿ, ಆತನ ಬಂಟ ರುದ್ರೇಶನನ್ನಾಗಲಿ ಇವತ್ತಿಗೂ ಬಂಧಿಸಲಾಗದ ಬಿಜೆಪಿ ಸರ್ಕಾರಕ್ಕೆ ಶಾಸಕ ನಂದೀಶ್ ರೆಡ್ಡಿಯನ್ನು ಮುಟ್ಟಲಾದೀತೆ?


ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಪತ್ರಿಕೆ 'ಕಂಡೋರ ಆಸ್ತಿಗೆ ನಂದೀಶ್ ರೆಡ್ಡಿಯ ನಾಲಿಗೆ' ಎಂಬ ತನಿಖಾ ವರದಿಯೊಂದನ್ನು ಪ್ರಕಟಿಸಿತ್ತು. ಅದು ಎಚ್‌ಎಎಲ್ ಪಕ್ಕದ ದೊಡ್ಡನೆಕ್ಕುಂದಿಯ ಸರ್ವೆ ನಂಬರ್ 81/4, 5,6 ರಲ್ಲಿದ್ದ 3.36 ಎಕರೆ ಸೊತ್ತು, ಇದರ ಸದ್ಯದ ಮಾರುಕಟ್ಟೆ ರೇಟೇ 40 ಕೋಟಿ. ಇದರ ಪಕ್ಕದಲ್ಲೇ ನಂದೀಶ್‌ರೆಡ್ಡಿಯ ಹೆಸರಲ್ಲಿ 3.32 ಎಕರೆ ಆಸ್ತಿಯಿದೆ. ಹೀಗಿದ್ದು ದುರಾಶೆಗೆ ಬಿದ್ದ ನಂದೀಶ್ ರೆಡ್ಡಿ ತನ್ನ ಸೊತ್ತಿನ ಸರ್ವೆ ನಂಬರನ್ನು ಪಕ್ಕದ 3.36 ಎಕರೆ ಸೊತ್ತಿಗೆ ಬೋಗಸ್ ದಾಖಲೆ ಸೃಷ್ಟಿಸಿ ಕೆ.ಆರ್. ಪುರದಲ್ಲಿರುವ ಬೆಂಗಳೂರು ಪೂರ್ವ ತಹಶೀಲ್ದಾರ್ ಟಿ.ಎಲ್. ಶಿವಕುಮಾರನ ಮೂಲಕ ತನ್ನ ಹೆಸರಿಗೆ ದಾಖಲೆ ಸೃಷ್ಟಿಸಿಕೊಂಡ. ಬೆನ್ನಲ್ಲೇ ಎರಡು ಡಜನ್ ರೌಡಿಗಳನ್ನು ಛೂಬಿಟ್ಟು ಪಕ್ಕದ ಆಸ್ತಿಗೂ ಕಾಂಪೌಂಡ್ ಹಾಕಿಸಿ ಅಲ್ಲಿ ಕಾವಲಿಗೆಂದು ನೇಮಿಸಿದ್ದ ಗಂಡ ಹೆಂಡತಿಯರನ್ನು ಹೊತ್ತೊಯ್ದು ದೂರದ ಆಂಧ್ರ ಪ್ರದೇಶದಲ್ಲಿ ಬಿಡುಗಡೆ ಮಾಡಿಸಿದ್ದ.

ಇದನ್ನೇ ಪತ್ರಿಕೆ ವರದಿ ಮಾಡಿತ್ತು, ಹೀಗೆ ನಂದೀಶ್ ರೆಡ್ಡಿ ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾರ್‌ನನ್ನು ಮುಂದಿಟ್ಟುಕೊಂಡು ಆಕ್ರಮಿಸಿದ 40 ಕೋಟಿ ಬೆಲೆಬಾಳುವ ಸೊತ್ತು ಈಗ ಕೊಲೆಯಾಗಿರುವ ಕೆಂಪಾಪುರ ಮೂರ್ತಿಗೆ ಸೇರಿತ್ತು, ಈಗ ಪೊಲೀಸರು ಮೂರ್ತಿಯ ಸಹಚರ ಜಗ್ಗ ಆಲಿಯಾಸ್ ಜಗದೀಶನೇ ಕೊಲ್ಲಿಸಿದನೆಂದೂ, ಮೂರ್ತಿ ಜಗ್ಗನಿಗೆ 40 ಲಕ್ಷ ಕೊಡಬೇಕಿತ್ತೆಂದೂ, ಅದಕ್ಕೆ ಪ್ರತಿಯಾಗಿ ಮೂರ್ತಿ ಜಗ್ಗನ ಹತ್ಯೆಗೆ ಸ್ಕೆಚ್ ಹಾಕಿದ್ದನೆಂದೂ, ಮೂರ್ತಿ ಓರ್ವ ರೌಡಿಯೆಂದೂ, ಆ ಕಾರಣಕ್ಕೇ ತನ್ನ ಸಹಚರ ಜಗ್ಗನ ಕೈಯಲ್ಲೇ ಮೂರ್ತಿ ಕೊಲೆಯಾದನೆಂದೂ ಕಂಠಪಾಠ ಒಪ್ಪಿಸುತ್ತಿದ್ದಾರೆ. ಪೊಲೀಸರ ಇಂಥ ಹೇಳಿಕೆ ಓದಿಯೇ ಎಚ್‌ಎಎಲ್ ಸುತ್ತಮುತ್ತಲ ಜನ ಹಣೆ ಚಚ್ಚಿಕೊಂಡು ನಗುತ್ತಿದ್ದಾರೆ.


ದೊಡ್ಡ ನೆಕ್ಕುಂದಿಯ ಆಸ್ತಿಯೊಂದೇ 40 ಕೋಟಿ ಬೆಲೆಬಾಳುವಾಗ ತನ್ನ ಸಹಚರನಿಂದಲೇ 40 ಲಕ್ಷ ಸಾಲ ಪಡೆಯುವಂಥ ದಾರಿದ್ರ್ಯವಾಗಲಿ ದುರ್ಗತಿಯಾಗಲಿ ಮೂರ್ತಿಗೆ ಇರಲೇ ಇಲ್ಲ. ಪುಡಿ ಕಾಸಿಗೆ ಮೂರ್ತಿಯ ಛೇಲಾಗಿರಿ ಮಾಡಿಕೊಂಡಿದ್ದು ಆತನ ಬಳಿಯೇ ಐದೋ ಹತ್ತೋ ಸಾವಿರಕ್ಕೆ ಕೈಚಾಚುತ್ತಿದ್ದ ಜಗ್ಗ ತನ್ನ ಗುರುಮೂರ್ತಿಗೆ 40 ಲಕ್ಷ ಸಾಲ ಕೊಟ್ಟಿದ್ದನೆಂಬುದನ್ನು ನಂಬುವಷ್ಟು ಮೂರ್ಖರು ಈ ಭಾಗದಲ್ಲೇ ಇಲ್ಲ. ಮೂರ್ತಿ ವೃತ್ತಿಯಲ್ಲಿ ಕಂಟ್ರಾಕ್ಟರ್. ಜೊತೆಗೆ ರಿಯಲ್ ಎಸ್ಟೇಟ್ ಕೂಡ ಮಾಡುತ್ತಿದ್ದ. ಐದು ಕೋಟಿಯ ವೆಚ್ಚದಲ್ಲಿ ತಿಪ್ಪಸಂದ್ರದಲ್ಲೊಂದು ಬಂಗಲೆ ಕಟ್ಟಿಸಿದ್ದ. ಇದಲ್ಲದೇ ಕೆಂಪಾಪುರದಲ್ಲೊಂದು ಮನೆಯಿತ್ತು, ನಾಲ್ಕು ಸೈಟುಗಳಿದ್ದವು. ರಿಂಗ್‌ರಸ್ತೆಯಲ್ಲಿ ಐಷಾರಾಮಿ ಆಫೀಸಿತ್ತು, ದುಬಾರಿಯ ಕಾರುಗಳಿದ್ದವು. ಪತ್ನಿ ಸುಧಾಮಣಿಗೆ ಪೊಲೀಸ್ ಇಲಾಖೆಯಲ್ಲಿ ಕೆಲಸವಿತ್ತು.

ಒಂದಾನೊಂದು ಕಾಲಕ್ಕೆ ರಾಷ್ಟ್ರಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದ, ಬಾಕ್ಸಿಂಗ್‌ನಲ್ಲಿ ರಾಜ್ಯಕ್ಕೆ ಹತ್ತಾರು ಪದಕಗಳನ್ನು ಗೆದ್ದುಕೊಟ್ಟ, ಜಾತಿಯಲ್ಲಿ ದಲಿತನಾಗಿದ್ದೂ ಬಿಜೆಪಿಯನ್ನು ಬೆಂಬಲಿಸಿದ, ಲಿಂಬಾವಳಿಯನ್ನು ತಾನೇ ನಿಂತು ಗೆಲ್ಲಿಸಿದ, ಮಹದೇವಪುರ ಬಿಜೆಪಿಯ ಪರಿಶಿಷ್ಟ ಜಾತಿ ಮೋರ್ಛಾದ ಅಧ್ಯಕ್ಷನೂ ಆಗಿದ್ದ ಕೆಂಪಾಪುರ ಮೂರ್ತಿ ಯಾವುದೋ ಕಾಲಕ್ಕೆ ಪುಡಿ ರೌಡಿಯೊಬ್ಬನ ಹಾವಳಿಯ ವಿರುದ್ಧ ಬಡಿದಾಡಿದ್ದು ಬಿಟ್ಟರೆ ಇನ್ನಾವತ್ತೂ ಗಲಾಟೆಗೆ ಕೈಯಿಟ್ಟವನಲ್ಲ. ಎಚ್‌ಎಎಲ್ ಸುತ್ತಮುತ್ತಲ ಹತ್ತಾರು ಏರಿಯಾಗಳಲ್ಲಿ ಆತನಿಗೆ ಒಳ್ಳೆಯ ಹೆಸರಿತ್ತು. ಮೊದಲು ವರ್ತೂರು ಶಾಸಕರಾಗಿದ್ದ ಕೃಷ್ಣಪ್ಪನವರ ಬಂಟನಂತಿದ್ದ. ಕಳೆದ ಚುನಾವಣೆಗೂ ಮುನ್ನ ಬಿಜೆಪಿ ಸೇರಿಕೊಂಡ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಲಿಂಬಾವಳಿ ಮಹದೇವಪುರಕ್ಕೆ ವಲಸೆ ಬರದೇಹೋಗಿದ್ದರೆ ಮೂರ್ತಿ ಈ ಹೊತ್ತಿಗೆ ಬಿಜೆಪಿ ಶಾಸಕನಾಗಿರುತ್ತಿದ್ದ.

ಮೊನ್ನೆ ಅಂದರೆ ಡಿಸೆಂಬರ್ 1 ರ ಮಧ್ಯಾಹ್ನ 3.30ರ ಹೊತ್ತಿಗೆ ಇಂದಿರಾ ನಗರದ ನ್ಯೂ ತಿಪ್ಪಸಂದ್ರದ ತನ್ನ ಮನೆ ಮುಂದೆ ನಿಂತಿದ್ದ ಮೂರ್ತಿಯನ್ನು ಐದಾರು ಮಂದಿಯಿದ್ದ ಹಂತಕ ಪಡೆ ಕೊಚ್ಚಿ ಹಾಕಿದೆ. ತನ್ನ ಮನೆಯ ಹೊಸ್ತಿಲಲ್ಲೇ ಹೆಣವಾದ ಮೂರ್ತಿಯ ಅಂತ್ಯಸಂಸ್ಕಾರ ಕ್ಕೆಂದು ಸೇರಿದ್ದು ಐದು ಸಾವಿರಕ್ಕೂ ಅಧಿಕ ಮಂದಿ. ನೆರೆದ ಪ್ರತಿಯೊಬ್ಬರ ಬಾಯಲ್ಲೂ ಶಾಸಕ ನಂದೀಶ್ ರೆಡ್ಡಿ ವಿರುದ್ಧ ಹಿಡಿಶಾಪವಿತ್ತು, ಇಂಥಾ ಹಿನ್ನೆಲೆಯ ಮೂರ್ತಿ ತನ್ನ ಬಳಿಯೇ ಪುಡಿಕಾಸಿಗೆ ಕೈಚಾಚುತ್ತಿದ್ದ ಜಗ್ಗನಿಂದ ಸಾಲ ಪಡೆದಿದ್ದ ಮತ್ತು ಅದೇ ಕಾರಣಕ್ಕೆ ಕೊಲೆಯಾದ ಎಂಬ ಪೊಲೀಸ್ ಹೇಳಿಕೆಯೇ ಹತ್ತಾರು ಪ್ರಶ್ನೆಗಳನ್ನು ಹುಟ್ಟುಹಾಕಿದೆ.


ಅರವಿಂದ ಲಿಂಬಾವಳಿ

ಪಕ್ಕದ ಮಹದೇವಪುರ ಮೀಸಲು ಕ್ಷೇತ್ರದ ಬಿಜೆಪಿ ನಾಯಕನಾದರೂ ಮೂರ್ತಿಯ ಕಾರ್ಯವ್ಯಾಪ್ತಿ, ಪ್ರಭಾವ, ಆಸ್ತಿ ಮತ್ತು ರಿಯಲ್ ಎಸ್ಟೇಟ್ ಉಸಾಬರಿಗಳೆಲ್ಲ ಕೇಂದ್ರೀ ಕರಿಸಿದ್ದು ನಂದೀಶ್ ರೆಡ್ಡಿಯ ಕೆ.ಆರ್. ಪುರ ವ್ಯಾಪ್ತಿಯಲ್ಲೇ. ಒಂದಾನೊಂದು ಕಾಲಕ್ಕೆ ನಂದೀಶ್ ರೆಡ್ಡಿಯೇ ಮೂರ್ತಿಯ ಶಿಷ್ಯನಾಗಿದ್ದ. ಕೆ.ಆರ್. ಪುರಂ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ದೋಚಿಯೇ ಕುಬೇರನಾಗಿ ಬಿಜೆಪಿ ಟಿಕೆಟ್ ಖರೀದಿಸಿ ಶಾಸಕನೂ ಆದ. ನಂದೀಶ್ ರೆಡ್ಡಿಯ ರಿಯಲ್ ಎಸ್ಟೇಟ್ ಸಾಮ್ರಾಜ್ಯಕ್ಕೆ ಅಪಾಯವೇನಾದರೂ ಇತ್ತೆಂದರೆ ಅದು ಕೆಂಪಾ ಪುರ ಮೂರ್ತಿಯಿಂದ ಮಾತ್ರ. ಏಕೆಂದರೆ ಸ್ಥಳೀಯವಾಗಿ ಮೂರ್ತಿ ನಂದೀಶ್ ರೆಡ್ಡಿಯಷ್ಟೇ ಜನಪ್ರಿಯನಾಗಿದ್ದ ಮತ್ತು ನೂರಾರು ಬೆಂಬಲಿಗರನ್ನಿಟ್ಟಿದ್ದ. ಆತ ದೊಡ್ಡನೆಕ್ಕುಂದಿಯಲ್ಲಿ ನಂದೀಶ್ ರೆಡ್ಡಿಗೂ ಮೊದಲೇ 3.36 ಎಕರೆ ಖರೀದಿಸಿದ್ದು ತನ್ನ ಸ್ವಂತ ಸಾಮರ್ಥ್ಯದ ಮೇಲೆಯೇ. ಕೆ.ಆರ್. ಪುರಂ ಸುತ್ತಮುತ್ತ ರಿಯಲ್ ಎಸ್ಟೇಟ್ ಮತ್ತು ಸರ್ಕಾರಿ ಭೂಮಿಯನ್ನು ದೋಚಲು ನಿಂತ ಬಹುತೇಕ ರೆಡ್ಡಿಗಳೆಲ್ಲರೂ ನಂದೀಶ್ ರೆಡ್ಡಿಯ ಸಂಬಂಧಿಕರೆ. ಈ ಪೈಕಿ ಪ್ರಮುಖರೆಂದರೆ ದೊಡ್ಡ ನೆಕ್ಕುಂದಿಯ ಖದೀಮರಾದ ವೆಂಕಟೇಶ್‌ರೆಡ್ಡಿ ಮತ್ತು ಬಾಬು ರೆಡ್ಡಿ, ಇಂಥ ಭೂಕಂಟಕರನ್ನು ಎದುರುಹಾಕಿಕೊಂಡೇ ಮೂರ್ತಿ ದೊಡ್ಡನೆಕ್ಕುಂದಿಯ ಆಸ್ತಿಗೆ ಕೈಯಿಟ್ಟ.


ಮೂರ್ತಿ

ಎಷ್ಟೆಂದರೂ 40 ಕೋಟಿಯ ಸೊತ್ತು, ಪಕ್ಕದಲ್ಲೇ ನಂದೀಶ್ ರೆಡ್ಡಿ ವಕ್ಕರಿಸಿದ್ದು ಗೊತ್ತಾಗಿಯೇ ಮೂರ್ತಿ ತನ್ನ ಸೊತ್ತಿಗೆ ಸರ್ವೆ ನಡೆಯದೇ ಖಾತೆ ಮಾಡದ ಹಾಗೇ ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾರ್ ವಿರುದ್ಧ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದ. ಆದರೆ ನಂದೀಶ್ ರೆಡ್ಡಿಗೆ ಕೋರ್ಟ್ ಕಟ್ಟಾಜ್ಞೆಯಾವ ಲೆಕ್ಕ. ರೆವಿನ್ಯೂ ಇನ್ಸ್‌ಪೆಕ್ಟರ್ ಮಂಜುನಾಥ್ ನಕಲಿ ಖಾತೆಗೆ ಒಪ್ಪಲಿಲ್ಲ ಎಂದು ಆತನನ್ನು ರಜೆ ಮೇಲೆ ಸಾಗಹಾಕಿದ. ಆ ಜಾಗಕ್ಕೆ ತನ್ನ ಛೇಲಾ ಸತ್ಯನಾರಾಯಣನನ್ನು ಹಾಕಿಸಿಕೊಂಡ ನಂದೀಶ್ ರೆಡ್ಡಿ ತಹಶೀಲ್ದಾರ್ ಶಿವಕುಮಾರ್‌ನನ್ನು ತನ್ನ ಮನೆಗೇ ಕರೆಸಿಕೊಂಡು ನಕಲಿ ಖಾತೆ ಮಾಡಿಸಿಕೊಂಡ. ಅದೇ ರೀತಿ ಸಬ್ ರಿಜಿಸ್ಟ್ರಾರ್‌ನನ್ನೂ ಮನೆಗೇ ಕರೆಸಿ ಇಡೀ 3.32 ಎಕರೆಯನ್ನು ಅಗದಿ ಕಮ್ಮಿ ರೇಟಿಗೆ ತನ್ನ ಹೆಸರಿಗೆ ನೋಂದಾಯಿಸಿಕೊಂಡ.

ಇಷ್ಟಾಗಿದ್ದೇ ಎರಡು ಡಜನ್ ರೌಡಿಗಳನ್ನು ಛೂಬಿಟ್ಟ ನಂದೀಶ್ ರೆಡ್ಡಿ, ಮೂರ್ತಿ ತನ್ನ ಸೊತ್ತಿನ ಕಾವಲಿಗಿಟ್ಟಿದ್ದ ಗಂಡ ಹೆಂಡತಿಯರಿಬ್ಬರನ್ನೂ ಆಂಧ್ರಕ್ಕೆ ಅಪಹರಿಸಿ ಹಿಂಸಿಸಿದ್ದ. ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಯ್ತು. ಪತ್ರಿಕೆಗಳಲ್ಲೂ ನಂದೀಶ್ ರೆಡ್ಡಿಯ ದೌರ್ಜನ್ಯದ ವರದಿಯಾಯ್ತು. ನಂದೀಶ್ ರೆಡ್ಡಿಯ ಇಂಥ ದೌರ್ಜನ್ಯವನ್ನೇ ಇಲ್ಲಿಗೆ ಎರಡು ತಿಂಗಳ ಹಿಂದೆ ಪತ್ರಿಕೆ ವರದಿ ಮಾಡಿದ್ದು.

ಯಾವತ್ತು ಪತ್ರಿಕೆಯಲ್ಲಿ ತನ್ನ ದೌರ್ಜನ್ಯದ ವಿರುದ್ಧ ವರದಿ ಬಂತೋ ಕೆಂಡಾಮಂಡಲನಾದ ನಂದೀಶ್ ರೆಡ್ಡಿ ಮೂರ್ತಿ ವಿರುದ್ಧ ಹಲ್ಲು ಕಚ್ಚಿದ. ಬಂದ ವರದಿಗೆ ಮೂರ್ತಿಯೇ ಕಾರಣನೆಂದು ಲೆಕ್ಕ ಹಾಕಿದ. ಹಾಗಂಥ ತೋರಿಸಿಕೊಳ್ಳಬಾರದೆಂದು ಉಪಾಯವಾಗಿ ಮೂರ್ತಿಯನ್ನು ಕರೆಸಿಕೊಂಡಿದ್ದೇ ಮರುಳು ಮಾಡಿ ರಾಜಿ ಮಾಡಿಕೊಂಡ. ನಂಬಿದ ಮೂರ್ತಿ ತನ್ನ ತಂಟೆಗಿನ್ನು ನಂದೀಶ್ ರೆಡ್ಡಿ ಬರಲಾರ ಎಂದೇ ನಿರಾಳನಾದ. ಅದೇ ಹೊತ್ತಿಗೆ ಆತನ ಜೊತೆಗಿದ್ದ ಜಗ್ಗ ಯಾವುದೋ ಪಿಳ್ಳೆನೆಪವೊಡ್ಡಿ ಮೂರ್ತಿಯಿಂದ ದೂರಾದ. ಅಸಲಿಗೆ ಜಗ್ಗನೇ ಮೂರ್ತಿಯನ್ನು ವಂಚಿಸಿದ್ದ. ಹೇಗೂ ನಂದೀಶ್‌ರೆಡ್ಡಿಗೆ ಮೂರ್ತಿ ವಿರುದ್ಧ ಸಿಟ್ಟಿರುವುದರಿಂದ ತನಗೆ ಎಮ್ಮೆಲ್ಲೇ ಬೆಂಬಲವಿದ್ದೇ ಇರುತ್ತದೆಯೆಂಬುದು ಆತನ ಲೆಕ್ಕಾಚಾರವಾಗಿತ್ತೋ ಅಥವಾ ನಂದೀಶ್ ರೆಡ್ಡಿಯ ಕುಮ್ಮಕ್ಕಿನಿಂದಲೇ ಜಗ್ಗ ಮೂರ್ತಿ ವಿರುದ್ಧ ತಿರುಗಿಬಿದ್ದನೋ ಗೊತ್ತಿಲ್ಲ.

ಅಂತೂ ಜಗ್ಗನ ಕೈಯಲ್ಲಿ ಮೂರ್ತಿ ಕೊಲೆಯಾದನೆಂದು ಪೊಲೀಸರು ಕತೆ ಹೊಡೆಯುತ್ತಿದ್ದಾರೆ. ಜಿದ್ದು ಮತ್ತು ಆಸ್ತಿ ವಿವಾದವಿದ್ದದ್ದು ಶಾಸಕ ನಂದೀಶ್ ರೆಡ್ಡಿ ಮತ್ತು ಮೂರ್ತಿ ನಡುವೆ. ಮೂರ್ತಿ ಹತ್ಯೆಯಿಂದ ಲಾಭವಾಗಿದ್ದು ಕೂಡ ನಂದೀಶ್ ರೆಡ್ಡಿಗೇ. ಮೂರ್ತಿ ಅರವಿಂದ ಲಿಂಬಾವಳಿಯ ಬಂಟ. ಬಿಜೆಪಿ ನಾಯಕ. ದುಷ್ಮನಿಯಿದ್ದದ್ದು ಕೂಡ ನಂದೀಶ್ ರೆಡ್ಡಿಯ ಜೊತೆಗೇ. ದುರಂತವೆಂದರೆ ರೈತ ನಾಯಕ ಸಿದ್ದಲಿಂಗ ಪ್ರಭು ಹತ್ಯೆಯಲ್ಲಿ ನೈಸ್ ಖೇಣಿಯನ್ನು ಬಂಧಿಸುವಂತೆ ದೇವೇಗೌಡರು ಬೀದಿಗಿಳಿದರೆ ತನ್ನ ನಂಬಿಕಸ್ಥ ಬಂಟನೇ ಹತ್ಯೆಯಾದರೂ ಲಿಂಬಾವಳಿಗದು ಲೆಕ್ಕಕ್ಕಿಲ್ಲ.

ಬಿಜೆಪಿಯ ಆತ್ಮವಂಚನೆ ಹಾಳಾಗಲಿ ದಲಿತ ಸಂಘಟನೆಗಳಾದರೂ ಬೀದಿಗಿಳಿಯಬಹುದಿತ್ತಲ್ಲವೇ? ಕನಿಷ್ಠ ಸಿಬಿಐ ತನಿಖೆಗೆ ಒತ್ತಾಯಿಸುವವರೇ ಇಲ್ಲ. ವಿರೋಧ ಪಕ್ಷಗಳಿಗೂ ಈ ಅನ್ಯಾಯ ಕಾಣಿಸುತ್ತಿಲ್ಲವೆ?

• ರಾ. ಸೋಮನಾಥ್

ಕರ್ನೂಲಿನ ಸುಪಾರಿ ಹಂತಕರೂ ತಹಶೀಲ್ದಾರ್ ಶಿವಕುಮಾರನೂ

ಕೆಂಪಾಪುರ ಮೂರ್ತಿಯ ಹಂತಕರೆಂದು ಕೆ.ಆರ್. ಪುರ ಪೊಲೀಸರು ಬಂಧಿಸಿದ್ದು ತಿಪ್ಪಸಂದ್ರದ ಜಗ್ಗಿ ಆಲಿಯಾಸ್ ಜಗದೀಶನನ್ನು. ಈತನ ಜೊತೆಗೆ ಭೈರಸಂದ್ರದ ಪ್ರಕಾಶ್ ಬಾಬು, ಚಂದ್ರಶೇಖರ್, ಯಶವಂತಪುರ ಬಿ.ಕೆ. ನಗರದ ಅನಂತ, ಪಾಂಡವಪುರದ ದೇವೇಗೌಡ ಕೊಪ್ಪಲಿನ ಮಿಥುನ್ ಕುಮಾರ್ ಮತ್ತು ಮಂಡ್ಯದ ಚಿಕ್ಕಾಡೆಯ ಅಂದಾನಿಗೌಡ ಎಂಬ ಪಡ್ಡೆಗಳನ್ನು ಸೇರಿಸಿ ಜೈಲಿಗೆ ಹಾಕಿದ್ದಾರೆ. ಮೂರ್ತಿಯ ಪರಮಾಪ್ತರ ಪ್ರಕಾರ ಇವರೇ ಶಾಸಕ ನಂದೀಶ್ ರೆಡ್ಡಿಯ ಎಡಗೈ-ಬಲಗೈಗಳಂತಿರುವ ಬಾಬುರೆಡ್ಡಿ ಮತ್ತು ವೆಂಕಟೇಶ್‌ರೆಡ್ಡಿಯೇ ನಿಂತು ಸರೆಂಡರ್ ಮಾಡಿಸಿದ ಬಾಡಿಗೆ ಆರೋಪಿಗಳು. ಇವರ‍್ಯಾರಿಗೂ ಬಲಾಢ್ಯ, ದೈತ್ಯ ಮೂರ್ತಿಯನ್ನು ಕೊಲ್ಲುವಷ್ಟು ತಾಕತ್ತಾಗಲಿ, ಹರಕತ್ತಾಗಲಿ ಇಲ್ಲವೇ ಇಲ್ಲ.


ತಹಶೀಲ್ದಾರ್ ಶಿವಕುಮಾರ್

ಅಸಲಿಗೆ ಕೊಂದಿದ್ದು ಕರ್ನೂಲಿನ ಸುಪಾರಿ ಹಂತಕರೆಂದೂ, ಅವರಿಗೆ ಬೆಂಗಳೂರು ಪೂರ್ವ ತಹಶೀಲ್ದಾರ್ ಟಿ.ಎಲ್. ಶಿವಕುಮಾರ್ ಮೂಲಕ ಒಂದು ಕೋಟಿ ಮೊತ್ತದ ಸುಪಾರಿ ಹಣ ಸಂದಾಯವಾಗಿದೆಯೆಂದೂ ಹಾಗೇ ಶಿವಕುಮಾರ್ ಕೊಟ್ಟ ದುಡ್ಡನ್ನು ಬೆಂಗಳೂರು ಪೂರ್ವ ಡೆಪ್ಯೂಟಿ ತಹಶೀಲ್ದಾರ್ ಶೇಖರಪ್ಪ ಮತ್ತು ಈ ಹಿಂದೆ ಕೆ.ಆರ್. ಪುರದ ದೊಡ್ಡಗುಬ್ಬಿಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿದ್ದು ಈಗ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಗೆ ಬಂದಿರುವ ನಕಲಿ ಛಾಪಾ ಖದೀಮ ರಘುಪತಿ ಸೇರಿಕೊಂಡು ಮೆಜೆಸ್ಟಿಕ್ ರೈಲ್ವೇ ಸ್ಟೇಷನ್ ಪಕ್ಕದ ತೋಟದಪ್ಪ ಛತ್ರದಲ್ಲಿ ಸುಪಾರಿ ಹಂತಕರಿಗೆ ಒಪ್ಪಿಸಿದ್ದಾರೆಂದೂ ಮೂರ್ತಿಯ ಪರಮಾಪ್ತರೇ ಆರೋಪಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲೇ ಇಡೀ ಹತ್ಯೆಯನ್ನು ಪರಿಶೀಲಿಸಿದರೆ ಕೆ.ಆರ್. ಪುರದ ಸುತ್ತಮುತ್ತಲ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಶಾಸಕ ನಂದೀಶ್‌ರೆಡ್ಡಿಯ ಗ್ಯಾಂಗ್ ಕಬಳಿಸಿದ್ದು, ಅದಕ್ಕೆ ತಹಶೀಲ್ದಾರ್ ಶಿವಕುಮಾರನೇ ಪಾಲುದಾರನಾಗಿರುವುದು, ಶಾಸಕನೇ ಹಾಕಿಸಿಕೊಂಡ ರೆವಿನ್ಯೂ ಸಿಬ್ಬಂದಿ, ಪೊಲೀಸರು ಮತ್ತು ಆಂಧ್ರದ ನೆಲಕಂಟಕರೆಲ್ಲ ಸೇರಿ ನಡೆಸುತ್ತಿರುವ ರಿಯಲ್ ಎಸ್ಟೇಟ್ ದಂಧೆ ಜೊತೆಗೆ ಇದಕ್ಕಾಗಿ ಚೆಲ್ಲಿದ ರಕ್ತದ್ದೇ ಭೀಕರ ಅಧ್ಯಾಯವಾಗುತ್ತದೆ. ಮೂರ್ತಿಯ ಹತ್ಯೆಗೂ ಅರ್ಧ ಗಂಟೆಯ ಮುನ್ನ ತಹಶೀಲ್ದಾರ್ ಶಿವಕುಮಾರ್ ತನ್ನ KA-03-4522 ನಂಬರಿನ ಬಿಳಿ ಟಾಟಾ ಸುಮೋದಲ್ಲಿ ಏಕೆ ಮೂರ್ತಿಯ ಮನೆ ಮುಂದಿನಿಂದ ಹಾದುಹೋದ? ಬಂದಿದ್ದ ಕರ್ನೂಲಿನ ಸುಪಾರಿ ಹಂತಕರ‍್ಯಾರು? ಅವರಿಗೂ ಶಾಸಕ ನಂದೀಶ್‌ರೆಡ್ಡಿಗೂ ಏನು ಸಂಬಂಧ? ಹಂತಕನೆಂದು ಫಿಟ್ಟಾದ ಜಗ್ಗಿಯ ಮೊಬೈಲಿನಿಂದ ನಂದೀಶ್‌ರೆಡ್ಡಿಗೆ ಎಷ್ಟು ಕರೆಗಳು ಬಂದಿವೆ? ಮೂರ್ತಿಯ 40 ಕೋಟಿಯ ಸೊತ್ತಿಗೆ ನಕಲಿ ಖಾತೆ ಮಾಡಿಕೊಟ್ಟ ತಹಶೀಲ್ದಾರ್ ಶಿವಕುಮಾರ್ ಮತ್ತು ನಂದೀಶ್‌ರೆಡ್ಡಿ ನಡುವಿನ ರಿಯಲ್ ಎಸ್ಟೇಟ್ ಸಂಬಂಧವೇನು? ಇದಲ್ಲದೇ ಇನ್ನಾವ ಅಕ್ರಮದ ವಿರುದ್ಧ ಮೂರ್ತಿ ಕೈಹಾಕಿದ್ದ? ಇತ್ಯಾದಿಗಳೆಲ್ಲ ಬಯಲಾಗಬೇಕೆಂದರೆ ಸಿಬಿಐ ತನಿಖೆಯಲ್ಲದೇ ಇನ್ನಾವ ದಾರಿಯಿದೆ?

ಗಂಡಾಂತರದಲ್ಲಿ ಕನ್ನಡ ವಿವಿ

ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯಕ್ಕೆ ಈಗ ಒದಗಿಬಂದಿರುವ ಗಂಡಾಂತರದ ಬಗ್ಗೆ ವಿವರಿಸುವ ಮೊದಲು ಅದರ ಹಿನ್ನೆಲೆ ಬಗ್ಗೆ ಸ್ವಲ್ಪ ಗಮನ ಹರಿಸುವುದು ಒಳ್ಳೆಯದು.

ಕನ್ನಡ ವಿವಿಯು ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಎಲ್ಲ ಆಯಾಮಗಳನ್ನು ಅಧ್ಯಯನ ಮಾಡುವ, ಅದರ ಸಾರವನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವಂತೆ ಮಾಡುವ ಮಹತ್ತರ ಉದ್ದೇಶವನ್ನು ಹೊಂದಿದೆ. ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಮಾಡಿ ಕನ್ನಡಿಗರನ್ನು ವಿಶ್ವಮಾನವರನ್ನಾಗಿ ಬೆಳೆಸಲು ಕನ್ನಡ ವಿವಿ ಹಲವಾರು ಗುರುತರವಾದ ಸಾಧನೆಗಳನ್ನು ಮಾಡಿದೆ. ಇಂಥ ವಿವಿಯನ್ನು ಕಟ್ಟಿ ಬೆಳೆಸಲು ಶ್ರಮಿಸಿದ, ಶ್ರಮಿಸುತ್ತಿರುವ ಗಣ್ಯರು ಹಲವರು, ಜ್ಞಾನಪೀಠ ವಿಜೇತ ಚಂದ್ರಶೇಖರ ಕಂಬಾರರು, ಸಂಶೋಧಕರಾದ ಕಲಬುರ್ಗಿಯಂಥವರು ಕುಲಪತಿಗಳಾಗಿ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಹಾಗೆಯೇ ನಾಡಿನ ಹೆಮ್ಮೆಯ ಸಾಹಿತಿಗಳು ಸಂಶೋಧಕರಾದ ಜಿ.ಎಸ್.ಶಿವರುದ್ರಪ್ಪ, ಚನ್ನವೀರ ಕಣವಿ, ಮುದೇನೂರು ಸಂಗಣ್ಣ, ಕೀರ್ತಿನಾಥ ಕುರ್ತಕೋಟಿ, ಎಸ್.ಚಂದ್ರಶೇಖರ್, ರಂಜಾನ್‌ದರ್ಗಾ, ಬರಗೂರು ರಾಮಚಂದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ... ಇತ್ಯಾದಿ ಗಣ್ಯರು ವಿವಿಯ ಸಿಂಡಿಕೇಟ್ ಸದಸ್ಯರಾಗಿ ವಿವಿಯ ಉತ್ತಮ ಭವಿಷ್ಯಕ್ಕೆ ಬುನಾದಿ ಹಾಕಿದ್ದಾರೆ. ಇಲ್ಲಿ ಅಧ್ಯಯನದಲ್ಲಿ ತೊಡಗಿರುವ ಸಿಬ್ಬಂದಿಯಲ್ಲಿ ಬಹುಪಾಲು ಜನರು ಪ್ರತಿಭಾವಂತರೂ, ನಾಡು-ನುಡಿಯ ಬಗ್ಗೆ ಕಳಕಳಿಯುಳ್ಳವರೂ ಆಗಿದ್ದು ತಮ್ಮ ಕಾರ್ಯವಿಧಾನಗಳಿಂದ ನಾಡಿನಾದ್ಯಂತ ಆದರಾಭಿಮಾನಗಳಿಗೆ ಪಾತ್ರರಾಗಿದ್ದಾರೆ. ಇಂಥ ಘನ ಇತಿಹಾಸವಿರುವ ಕನ್ನಡ ವಿವಿಯ ಸ್ಥಾಪನೆಯು ಕರ್ನಾಟಕ ಏಕೀಕರಣದಷ್ಟೇ ಮಹತ್ವವನ್ನು ಹೊಂದಿದೆ ಎಂಬುದರಲ್ಲಿ ಯಾವ ಅತಿಶಯವೂ ಇಲ್ಲ.

ಇಂಥ ಕನ್ನಡ ವಿವಿಗೆ ಈಗ ಗಂಡಾಂತರ ಒದಗಿಬಂದಿದೆ. ಹೀಗೆ ಘನತೆಯಿಂದ ಎತ್ತರಕ್ಕೆ ಬೆಳೆಯುತ್ತಿರುವ ಕನ್ನಡ ವಿವಿಯನ್ನು ನಾಶ ಮಾಡಲು ಸರ್ಕಾರದೊಳಗಿರುವ ವಿಧ್ವಂಸಕ ಶಕ್ತಿಗಳು ಹಠತೊಟ್ಟು ನಿಂತಿವೆ. ಅದರ ಭಾಗವಾಗಿ ನೇಮಕವಾಗಿರುವ ಹಾಲಿ ಸಿಂಡಿಕೇಟ್ ಸ್ಥಿತಿಗತಿಯನ್ನು ನೋಡಿ.

ಕೆ.ಬಿ.ಶ್ರೀನಿವಾಸ್: ಹೊಸಪೇಟೆಯ ಬಿಜೆಪಿ ಶಾಸಕ. ಆನಂದ ಸಿಂಗ್ ಹತ್ತಿರದ ಸಂಬಂಧಿಯಾಗಿರುವ ಇವರು ಹಾಲಿ ಗುತ್ತಿಗೆದಾರ ಮತ್ತು ಗಣಿ ಮಾಲೀಕರಾಗಿದ್ದಾರೆ.

ಡಾ.ಬಿ.ವಿ.ವಸಂತಕುಮಾರ್: ದಶಕಗಳುದ್ದಕ್ಕೂ ಸಂಘಪರಿವಾರದ ಸೇವೆಗೆ ಕಟಿಬದ್ಧರಾಗಿರುವ ಇವರು ಎಬಿವಿಪಿಯ ರಾಜ್ಯಕಾರ್ಯದರ್ಶಿ.

ಚೂಡಾಮಣಿ ನಂದಗೋಪಾಲ್: ಮಾಜಿ ಭರತ ನಾಟ್ಯಪಟು. ಈಗ ದೇವಾಲಯಗಳಲ್ಲಿ ಶಿಲ್ಪಗಳ ಅಧ್ಯಯನ.

ಗಾಯತ್ರಿ ನಾವಡ : ಸಣ್ಣಪುಟ್ಟ ಬರಹಗಳು ಇವರ ಹೆಸರಿನಲ್ಲಿ ಪ್ರಕಟಿಸಿದ್ದೇ ಸಾಧನೆ. ಜಾನಪದ ವಿದ್ವಾಂಸ ಎ.ವಿ. ನಾವಡ ಅವರ ಧರ್ಮಪತ್ನಿ.

ಡಾ.ಜಿ.ಬಿ. ಪುಟ್ಟಣ್ಣಯ್ಯ: ಜಾನುವಾರುಗಳಿಗೆ ಕಾಯಿಲೆ ಕಸಾಲೆ ಬಂದರೆ ಉಪಚರಿಸುವ ವೆಟರ್ನರಿ ಡಾಕ್ಟರು.

ಸರ್ಕಾರದಿಂದ ನಾಮನಿರ್ದೇಶನಗೊಂಡ ಈ ಪಟ್ಟಿ ಹೀಗೇ ಮುಂದುವರೆಯುತ್ತದೆ.

ಅಂದಹಾಗೆ ಈ ಮಹಾನುಭಾವರಿಗೂ ಕನ್ನಡ ವಿವಿಯ ಧ್ಯೇಯೋದ್ದೇಶಗಳಿಗೂ ಯಾವ ರೀತಿಯ ಸಂಬಂಧವಿರಬಹುದು ಎಂದು ಕೆಲವು ಆಸಕ್ತ ಸಂಶೋಧಕರು ಪ್ರಯತ್ನಪಟ್ಟಾಗ ಕಂಡುಬಂದದ್ದಿಷ್ಟು. ಇವರಿಗೆ ವಿವಿಯ ಆಶಯಗಳು, ಗುರಿಗಳೊಂದಿಗೆ ಯಾವ ಸಂಬಂಧವೂ ಕಂಡುಬಂದಿಲ್ಲದಿದ್ದರೂ ರಾಜ್ಯದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಸರ್ಕಾರ ಹಾಗೂ ಅದರ ಹಿಂದಿನ ಸಂಘಪರಿವಾರದ ಹಿಡೆನ್ ಅಜೆಂಡಾದೊಂದಿಗೆ ನೇರಾನೇರ ಸಂಬಂಧವಿರುವುದು ಬೆಳಕಿಗೆ ಬಂದಿದೆ. ಅದರ ಒಂದು ಸ್ಯಾಂಪಲ್ ಹೀಗಿದೆ.

ಈ ಹಿಂದೆ ವೈಭವದಿಂದ ಮೆರೆದಿತ್ತೆಂದು ಖ್ಯಾತಿ ಗಳಿಸಿರುವ ವಿಜಯನಗರ ಸಾಮ್ರಾಜ್ಯದ ಮೇಲೆ ಬಹಮನಿ ಸುಲ್ತಾನರು ದಾಳಿ ನಡೆಸಿ ವಿಧ್ವಂಸಗೊಳಿಸಿ ಹಂಪೆಯನ್ನು ಹಾಳುಕೊಂಪೆಯನ್ನಾಗಿಸಿದ್ದು ನಮಗೆಲ್ಲಾ ತಿಳಿದಿದೆ. ಈಗ ಸಂಘಪರಿವಾರದ ಆಧುನಿಕ ದಾಳಿಕೋರರು ಕನ್ನಡ ವಿವಿಯ ಮೇಲೆ ದಾಳಿಗಿಳಿದಿದ್ದಾರೆ. ಅದಕ್ಕಾಗಿ ಅವರು ಬಳಸುತ್ತಿರುವ ಆಯುಧಗಳು ಬೇರೆ ರೀತಿಯವು.

ಡಾ.ಟಿ.ಆರ್.ಚಂದ್ರಶೇಖರ್ ಅವರು 'ಅಭಿವೃದ್ಧಿ ಅಧ್ಯಯನ ವಿಭಾಗ'ದಲ್ಲಿ ಬದ್ಧತೆಯಿಂದ ದುಡಿಯುತ್ತಿರುವವರು. ಅವರ ಕಾಳಜಿ, ಪರಿಶ್ರಮ ಮತ್ತು ವಿದ್ವತ್ತಿನಿಂದಾಗಿ ನಾಡಿನಾದ್ಯಂತ ಹಲವರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.


ಇಂತಹ ಅಪರೂಪದ ನಾಡಪರ ಚಿಂತಕರನ್ನು ಸಿಂಡಿಕೇಟ್ ಸಭೆ ಸೇವೆಯಿಂದ ಅಮಾನತುಗೊಳಿಸಿದೆ. ಸರ್ಕಾರಿ ವೃತ್ತಿಯಲ್ಲಿರುವವರು ಗಂಭೀರ ತಪ್ಪುಗಳನ್ನು ಎಸಗಿದಾಗ ಅಂತಹವರನ್ನು ಅಮಾನತುಗೊಳಿಸುವುದು ಸಾಮಾನ್ಯ. ಆದರೆ ಡಾ.ಟಿಆರ್‌ಸಿಯವರು ಅಂಥ ಯಾವ ಘನಘೋರ ತಪ್ಪನ್ನೂ ಮಾಡುವವರಲ್ಲ. ಇಂಥವರ ಮೇಲೆ ಸದಾ ಹದ್ದಿನ ಕಣ್ಣಿಟ್ಟು ಕಾದಿದ್ದ ಸಿಂಡಿಕೇಟ್ ಹೇಗೂ ಕಾರಣವಲ್ಲದ ಒಂದು ಕಾರಣವನ್ನು ಕಷ್ಟಪಟ್ಟು ಪತ್ತೆಮಾಡಿ, ಅದೇ ನೆಪದಲ್ಲಿ ಅವರ ಮೇಲೆ ಈ ಕ್ರಮ ತೆಗೆದುಕೊಂಡಿದೆ. ಅದು ಎಂತಹ ನೆಪವೆಂಬುದನ್ನು ನೋಡಿ.

ಇಲ್ಲಿಗೆ ಸುಮಾರು ಮೂರು ವರ್ಷಗಳ ಹಿಂದೆ ಡಾ.ಟಿಆರ್‌ಸಿಯವರು ಯುನಿಸೆಫ್ ಸಂಸ್ಥೆ ಮತ್ತು ರಾಯಚೂರು ಜಿಲ್ಲಾ ಪಂಚಾಯತ್ ಜಂಟಿಯಾಗಿ ನಡೆಸಿದ ಬಡಮಕ್ಕಳ ಅಪೌಷ್ಟಿಕತೆಗೆ ಸಂಬಂಧಿಸಿದ ಅಧ್ಯಯನವೊಂದರಲ್ಲಿ ಪಾಲ್ಗೊಂಡಿದ್ದರು. ಅವರು ಆ ಯೋಜನೆಯ ಫೀಲ್ಡ್ ಸ್ಟಡಿ ಮಾಡುವ ತಂಡಗಳಿಗೆ ಮಾರ್ಗದರ್ಶಕರಾಗಿದ್ದುದ್ದರು. ಈ ಯೋಜನೆಯಲ್ಲಿ ತೊಡಗಿಕೊಳ್ಳುವ ಮುಂಚೆ ಈ ಪ್ರಸ್ತಾಪವನ್ನು ವಿಭಾಗದ ಸಭೆಯಲ್ಲಿ ಮಂಡಿಸಿ, ಅನುಮತಿಯನ್ನು ಪಡೆದಿದ್ದರು. ಈ ಅಧ್ಯಯನ ವಿಭಾಗದ ನಿರ್ಣಯದ ಒಂದು ಪ್ರತಿಯನ್ನು ಆಡಳಿತಾಂಗಕ್ಕೂ ಕಳಿಸಿಕೊಟ್ಟಿದ್ದರು.



ನಂತರ ಆ ಯೋಜನೆ ಪೂರ್ಣಗೊಂಡದ್ದೂ ಆಯಿತು. ಅದನ್ನು ಯುನಿಸೆಫ್ ಮತ್ತು ಜಿಲ್ಲಾ ಪಂಚಾಯತ್‌ಗಳು ಅಂಗೀಕರಿಸಿದ್ದೂ ಆಯಿತು. 2008-09ರಲ್ಲಿ ಅವರು ವಿವಿಗೆ ಸಲ್ಲಿಸಿದ ವಾರ್ಷಿಕ ವರದಿಯಲ್ಲಿ ಈ ಯೋಜನೆಯಲ್ಲಿ ಅವರ ಕಾರ್ಯಭಾರಗಳು ಪೂರ್ಣಗೊಂಡಿರುವ ಬಗ್ಗೆ ಉಲ್ಲೇಖಿಸಿದ್ದೂ ಆಯಿತು.

ಎಲ್ಲವೂ ಸರಿಯಾಗಿದ್ದ ಮೇಲೆ ಮತ್ತೇನು ಸಮಸ್ಯೆ ಎಂದು ನೀವು ಯೋಚಿಸುತ್ತಿರಬಹುದು. ಆದರೆ ಹಿಡನ್ ಅಜೆಂಡಾದೊಂದಿಗೆ ಹೊಂಚುಹಾಕುತ್ತಿದ್ದವರು ಸುಮ್ಮನಿರುತ್ತಾರೆಯೇ? ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವರು ವಿವಿಯ ಅನುಮತಿಯನ್ನೇ ಪಡೆದಿಲ್ಲವೆಂಬ ಕುಂಟುನೆಪ ನೀಡಿ ಏಕಾಏಕಿ ಅಮಾನತು ಆದೇಶ ಹೊರಡಿಸಿದ್ದಾರೆ.



ಅದರ ಜೊತೆಗೆ ಟಿಆರ್‌ಸಿಯವರು ಯೋಜನೆಯ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಕೆಸರೆರಚುವ ಕೃತ್ಯದಲ್ಲಿ ಕೆಲವು ಪಟ್ಟಭದ್ರ ಶಕ್ತಿಗಳು ತೊಡಗಿವೆ. ಆದರೆ ಟಿಎ/ಡಿಎ ಹೊರತುಪಡಿಸಿದರೆ ಅವರು ಗೌರವಧನವನ್ನೂ ಸಹ ಪಡೆದಿಲ್ಲ ಎಂಬುದು ಕಟುವಾಸ್ತವ.

ಈ ಅನ್ಯಾಯವನ್ನು ಪ್ರತಿಭಟಿಸಿರುವ ಅಭಿವೃದ್ಧಿ ಅಧ್ಯಯನ ವಿಭಾಗವು 09-12-2011ರಂದು ಸಭೆ ಸೇರಿ ಸಿಂಡಿಕೇಟ್ ನಿರ್ಣಯ ಸಮರ್ಥನೀಯವಲ್ಲವೆಂದು, ಆರೋಪಗಳಲ್ಲಿ ಗಟ್ಟಿಯಾದ ಹುರುಳಿಲ್ಲವೆಂದೂ, ಆದ್ದರಿಂದ ಅಮಾನತನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸುವ ನಿರ್ಣಯ ಮಾಡಿ ಅದರ ಪ್ರತಿಗಳನ್ನು ಕುಲಸಚಿವರು, ಸಿಂಡಿಕೇಡ್ ಸದಸ್ಯರು ಹಾಗೂ ಇನ್ನಿತರರಿಗೆ ಕಳಿಸಿಕೊಟ್ಟಿದ್ದಾರೆ. ಒಂದು ವೇಳೆ ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದರೆ ಈ ದುಷ್ಟ ಸಿಂಡಿಕೇಟ್ ನಿರ್ಣಯಕ್ಕೆ ಛೀಮಾರಿ ತಪ್ಪಿದ್ದಲ್ಲ, ಆ ಮಾತು ಬೇರೆ.

ತಪ್ಪಿತಸ್ಥ ವ್ಯಕ್ತಿ ಮುಂದೆ ನಡೆಯಲಿರುವ ತನಿಖೆಯನ್ನು ಪ್ರಭಾವಿಸಬಹುದೆನ್ನುವ ಕಾರಣಕ್ಕಾಗಿ ತನಿಖೆಗೆ ಮುನ್ನ ವ್ಯಕ್ತಿಯೊಬ್ಬರನ್ನು ಸೇವೆಯಿಂದ ಅಮಾನತುಗೊಳಿಸುವುದು ಸಾಮಾನ್ಯ ಕ್ರಮವಾಗಿದೆ. ಆದರೆ ಟಿಆರ್‌ಸಿಯವರು ಸಾಮಾನ್ಯ ಪ್ರಾಧ್ಯಾಪಕರಾಗಿದ್ದು, ಯಾವುದೇ ಆಡಳಿತಾಂಗದ ಹುದ್ದೆಯನ್ನು ಹೊಂದಿಲ್ಲ. ಹೀಗಿದ್ದರೂ ಇಷ್ಟು ಕಠಿಣ ಕ್ರಮ ತೆಗೆದುಕೊಳ್ಳಲು ಹಿನ್ನೆಲೆ ಏನಿರಬಹುದು ಎಂದು ಕೆದಕುತ್ತಾ ಹೋದರೆ ಕನ್ನಡ ವಿವಿಗೊದಗಿರುವ ಗಂಡಾಂತರದ ಪರಿಚಯವಾಗುತ್ತದೆ. ಈ ತರ್ಕಹೀನ, ದುರುದ್ದೇಶಪೂರಿತ ಕ್ರಮದ ಬಗ್ಗೆ ಅಭಿವೃದ್ಧಿ ವಿಭಾಗ ಕೈಗೊಂಡಿರುವ ನಿರ್ಣಯದ ಕೆಲವು ಸಾಲುಗಳನ್ನು ಓದಿದರೆ ಒಳ್ಳೆಯದು.

"ಯೋಜನೆಗಳ ನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಧನಸಹಾಯ ತೆಗೆದುಕೊಂಡು ಯೋಜನೆಯನ್ನು ಪೂರ್ಣಗೊಳಿಸದಿರುವ, ಯೋಜನೆಗಾಗಿ ಪಡೆದ ಹಣದ ಹೊಂದಾಣಿಕೆಯನ್ನು ವರ್ಷಾನುಗಟ್ಟಲೆ ಮಾಡದಿರುವ ಹಲವಾರು ಕೇಸ್‌ಗಳು ವಿಶ್ವವಿದ್ಯಾಲಯದಲ್ಲಿವೆ. ಈ ವಿಚಾರ ಕುರಿತು ಹಲವಾರು ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಚರ್ಚೆಗಳು ನಡೆದಿವೆ. ಆದರೆ ಇವುಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಕಾರ್ಯಕಾರಿ ಸಮಿತಿ ಡಾ. ಟಿ.ಆರ್. ಚಂದ್ರಶೇಖರ್ ಅವರನ್ನು ಯಾಕೆ ಇಷ್ಟೊಂದು ಕಠಿಣವಾಗಿ ಶಿಕ್ಷಿಸಲು ತೀರ್ಮಾನಿಸಿದೆ ಎನ್ನುವ ಪ್ರಶ್ನೆ ಬಂದಾಗ ಪ್ರಮುಖವಾಗಿ ಎರಡು ವಿಚಾರಗಳು ಸಭೆಯ ಗಮನ ಸೆಳೆದವು.

ಡಾ. ಟಿ.ಆರ್. ಚಂದ್ರಶೇಖರ್ ಅವರು ವಿಶ್ವವಿದ್ಯಾಲಯದ 80 ಎಕರೆ ಭೂಮಿಯನ್ನು ಪ್ರವಾಸೋದ್ಯಮ ಇಲಾಖೆಗೆ ಪರಭಾರೆ ಮಾಡುವ ಆಡಳಿತಾಂಗದ ತೀರ್ಮಾನವನ್ನು ವಿರೋಧಿಸಿದವರಲ್ಲಿ ಪ್ರಮುಖರು ಮತ್ತು ಇಡೀ ಚಳವಳಿಯ ಮುಂಚೂಣಿಯಲ್ಲಿದ್ದು ಆಡಳಿತಾಂಗದ ನಿರ್ಣಯವನ್ನು ತಡೆಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಈಗಿನ ಸರ್ಕಾರದ ಆರ್ಥಿಕ ನೀತಿಗಳನ್ನು ಮತ್ತು ಅಭಿವೃದ್ಧಿ ಧೋರಣೆಗಳನ್ನು ಖಂಡಿಸುವ ಲೇಖನಗಳನ್ನು ದಿನಪತ್ರಿಕೆಗಳಿಗೆ ಸತತ ಬರೆಯುತ್ತಿದ್ದಾರೆ. ಈ ಎರಡು ಅಂಶಗಳು ಡಾ. ಟಿ.ಆರ್. ಚಂದ್ರಶೇಖರ್ ಅವರ ವಿರುದ್ಧ ಕಠಿಣ ಧೋರಣೆಗೆ ಕಾರಣವಾಗಿರಬಹುದೆ? ಎನ್ನುವ ಸಂದೇಹವನ್ನು ಸಭೆ ವ್ಯಕ್ತಪಡಿಸಿದೆ.

ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಚರ್ಚಿಸಿದ ಸಭೆ ಡಾ. ಟಿ.ಆರ್. ಚಂದ್ರಶೇಖರ್ ಅವನ್ನು ಸೇವೆಯಿಂದ ಅಮಾನತುಗೊಳಿಸುವ ಕಾರ್ಯಕಾರಿ ಸಮಿತಿ ನಿರ್ಣಯ ವಸ್ತುನಿಷ್ಠವಾಗಿಲ್ಲ, ಆದುದರಿಂದ ಡಾ. ಟಿ.ಆರ್. ಚಂದ್ರಶೇಖರ್ ಅವರನ್ನು ಸೇವೆಯಿಂದ ಅಮಾನತುಗೊಳಿಸುವ ಕಾರ್ಯಕಾರಿ ಸಮಿತಿ ನಿರ್ಣಯವನ್ನು ತಕ್ಷಣ ಹಿಂದಕ್ಕೆ ಪಡೆಯಬೇಕೆಂದು ಆಡಳಿತಾಂಗ ಮತ್ತು ಕಾರ್ಯಕಾರಿ ಸಮಿತಿಯನ್ನು ಕೋರಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು."

ಈಗ ಕನ್ನಡ ವಿವಿಯ ಬಹುಪಾಲು ವ್ಯವಹಾರಗಳು ಬಿ.ವಿ. ವಸಂತಕುಮಾರ್‌ರವರ ಕಾರ್ಯಸಮಿತಿಯ ಮೇಲೆಯೇ ನಡೆಯುತ್ತಿವೆ ಎಂಬುದು ಒಂದು ಓಪನ್ ಸೀಕ್ರೆಟ್. ಇಷ್ಟಕ್ಕೂ ಈ ಮಹಾನುಭಾವ ಯಾರು? ಈತನ ಪೂರ್ವಾಪರಗಳೇನು? ಎಂದರೆ ಅದರಲ್ಲಿ ಯಾವ ಗುಟ್ಟೂ ಇಲ್ಲ. ಆತ ಎಬಿವಿಪಿಯ ರಾಜ್ಯ ಕಾರ್ಯದರ್ಶಿ ಕೇವಲ. ಕೆಲವೇ ತಿಂಗಳುಗಳ ಹಿಂದೆ ಅಂದರೆ ಜುಲೈ 27 ರಂದು ಮಂಗಳೂರಿನಲ್ಲಿ ನಡೆದ ಎಬಿವಿಪಿ ರ್‍ಯಾಲಿಯಲ್ಲಿ ನೇತೃತ್ವದಲ್ಲಿದ್ದ ಈತ ಅಲ್ಲಿ ಭರ್ಜರಿ ಭಾಷಣವನ್ನೂ ಬಿಗಿದಿದ್ದಾನೆ. ಪತ್ರಿಕೆಗಳಲ್ಲಿ ಈ ಬಗ್ಗೆ ಫೋಟೋ ಸಮೇತ ವರದಿಗಳೂ ಬಂದಿದೆ. ಅಂದರೆ ವಿಷಯ ಸ್ಪಷ್ಟವಾಗಿದೆ. ಬಿಜೆಪಿ ಸರ್ಕಾರ ಮತ್ತು ಅದರ ಹಿಂದೆ ಷಡ್ಯಂತ್ರಗಳನ್ನು ಹೆಣೆಯುತ್ತಿರುವ ಸಂಘಪರಿವಾರ ತನ್ನ ಹಿಡನ್ ಅಜೆಂಡಾ ಜಾರಿ ಮಾಡಲು ಅಷ್ಟೇನೂ ಮುಚ್ಚುಮರೆ ಮಾಡುತ್ತಿಲ್ಲ, ಅವರು ಹಾಡುಹಗಲೇ ಇಷ್ಟೊಂದು ಬಹಿರಂಗವಾಗಿ, ವ್ಯವಸ್ಥಿತವಾಗಿ ನಾಡಪರ, ಜನಪರ ಚಿಂತಕರ ಮೇಲೆ ದಾಳಿಗೆ ಇಳಿದಿದ್ದಾರೆ. ಡಾ. ಟಿ.ಆರ್.ಸಿ.ಯವರಂತೆಯೇ ನಾಡಪರ ಚಿಂತನೆಯಲ್ಲಿ ತೊಡಗಿರುವ ಇನ್ನೂ ಕೆಲವು ಪ್ರಾಧ್ಯಾಪಕರಿಗೂ ಕುಂಟು ನೆಪಗಳನ್ನು ಒಡ್ಡಿ ನಾನಾ ಕಿರುಕುಳ ನೀಡಲು ಪ್ರಾರಂಭಿಸಿದ್ದಾರೆ ಎಂಬ ಸುದ್ದಿಗಳೂ ಬರುತ್ತಿವೆ.

ಕನ್ನಡನಾಡಿನ ಹೆಮ್ಮೆಯ ವಿಶ್ವವಿದ್ಯಾಲಯ ಇನ್ನೂ ಎತ್ತರಕ್ಕೆ ಬೆಳೆದು ನಾಡಿಗೆ ಮಹತ್ತರ ಸೇವೆ ಸಲ್ಲಿಸಬೇಕೆಂದು ಆಶಿಸುತ್ತಿರುವ ಕನ್ನಡಾಭಿಮಾನಿಗಳು, ಪ್ರಗತಿಪರರು, ಸಂಘಸಂಸ್ಥೆಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕನ್ನಡಮ್ಮನ ಕತ್ತು ಹಿಸುಕುವ ದೈತ್ಯಕೈಗಳ ವಿರುದ್ಧ ಹೋರಾಡದೇ ಬೇರೆ ವಿಧಿಯೇ ಇಲ್ಲ. ಈ ಸತ್ಕಾರ್ಯದಲ್ಲಿ ನೀವೂ ಸಹ ಕೈಜೋಡಿಸುತ್ತೀರಿ ತಾನೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ


ಸಿಂಡಿಕೇಟ್‌ನ ಮೇಧಾವಿತನ

ಕನ್ನಡ ವಿವಿಗೆ ಒದಗಿರುವ ದುರ್ಗತಿಗೆ ಇಲ್ಲೊಂದು ತಾಜಾ ಉದಾಹರಣೆ ಇದೆ. ಇತ್ತೀಚೆಗ ಪ್ರಗತಿ ಪರಿಶೀಲನೆ ನಡೆಸುತ್ತಿದ್ದ ಸಿಂಡಿಕೇಟ್‌ನಲ್ಲಿ ಹಾಲಿ ಸದಸ್ಯ ಡಾ. ಜಿ.ಬಿ. ಪುಟ್ಟಣ್ಣಯ್ಯನವರೂ ಇದ್ದರು. ನಮ್ಮ ಹಳ್ಳಿ ಭಾಷೆಯಲ್ಲಿ ಹೇಳುವುದಾದರೆ ವೃತ್ತಿಯಲ್ಲಿ ಅವರು ದನದ ಡಾಕ್ಟ್ರು. ಕನ್ನಡ ವಿವಿಯ 'ಪ್ರಗತಿ'ಯ ಬಗ್ಗೆ ತೀವ್ರ ಅಸಮಾಧಾನ ತೋರಿದ ಶ್ರೀಯುತರು "ನೀವೆಲ್ಲಾ ಬರೀ ಕನ್ನಡದಲ್ಲಿ ಬರೆದರೆ ಯಾರಪ್ಪಾ ಓದುತ್ತಾರೆ? ನೀವೆಲ್ಲಾ ಇಂಗ್ಲಿಷಿನಲ್ಲಿ ಬರೆಯಬೇಕು. ಆಗ ಎಲ್ಲರಿಗೂ ಅನುಕೂಲ ಆಗುತ್ತೆ" ಅಂತ ಕಾನ್ವೆಂಟ್ ಶಾಲೆಯ ಮಾಲೀಕರ ಶೈಲಿಯಲ್ಲಿ ಉಪದೇಶ ಶುರು ಮಾಡಿಬಿಟ್ಟರಂತೆ. ಆಗ ಅಲ್ಲಿದ್ದ ಹಲವು ಪ್ರಾಧ್ಯಾಪಕರು ಕನ್ನಡ ವಿವಿಯ ಉದ್ದೇಶವೇ ಜಗತ್ತಿನ ಸಕಲ ಜ್ಞಾನವನ್ನು ಕನ್ನಡಕ್ಕೆ ತರುವುದು ಎಂಬುದನ್ನು ತಿಳಿಸಿ ಹೇಳಿದಾಗ, "ಯಸ್, ಯಸ್, ಕನ್ನಡ ಈಸ್ ಇಂಪಾರ್ಟೆಂಟ್" ಅಂತ ವರಸೆ ಬದಲಿಸಿದರಂತೆ. ಹೆಂಗಿದ್ದ ಹಂಪಿ ವಿವಿ ಹೆಂಗಾಯ್ತು ನೋಡಿ.




ಧೀಂ ತಕಿಟ ತೋಂ

ಕನ್ನಡ ನಾಡಿನ ಸಾಮಾಜಿಕ ಸಾಂಸ್ಕೃತಿಕ ಪ್ರಜ್ಞೆಯ ಅಭಿವೃದ್ಧಿಯಂತೆ ರೂಪುಗೊಳ್ಳುತ್ತಿರುವ ಕನ್ನಡ ವಿಶ್ವವಿದ್ಯಾಲಯವನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸಲು ಸರ್ಕಾರ ಷಡ್ಯಂತ್ರ ರೂಪಿಸಿದೆ. ತನ್ನ ಈ ಉದ್ದೇಶದ ಈಡೇರಿಕೆಗಾಗಿ ರಚಿಸಿರುವ ಸಿಂಡಿಕೇಟ್‌ನಲ್ಲಿ ನಾಟ್ಯ ಕಲಾವಿದೆಯನ್ನೇ ಸಿಂಡಿಕೇಟ್ ಸದಸ್ಯೆಯನ್ನಾಗಿಸಿಬಿಟ್ಟಿರೆ?!! ಸರ್ಕಾರದ 'ವಿಶೇಷ ನೀತಿ ನಿರೂಪಕರ' ಶಿಫಾರಸ್ಸಿನ ಮೇರೆಗೆ ಹಂಪಿಗೆ ಡಾ.ಚೂಡಾಮಣಿ ನಂದಗೋಪಾಲ್ ಎಂಬ ಕಲಾವಿದೆಯೊಬ್ಬರ ರಂಗಪ್ರವೇಶವಾಗಿದೆ. ಇವರು ಈಗಲೂ ಕಾಲ್ಗೆಜ್ಜೆ ಕಟ್ಟಿ ಕುಣಿಯುತ್ತಿದ್ದಾರೆಂದು ಭಾವಿಸಬೇಡಿ. ಇವರು ಹಾಗೆ ಕುಣಿದು ಸುಮಾರು 28 ವರ್ಷಗಳೇ ಸಂದಿವೆ. ಆದರೆ ದುರಂತವೆಂದರೆ ಕರ್ನಾಟಕ ರಾಜ್ಯ ಸಂಗೀತ, ನೃತ್ಯ, ನಾಟಕ ಅಕಾಡೆಮಿಯವರು 28 ವರ್ಷಗಳ ಹಿಂದೆ ಈ ಮಾಜಿ ನೃತ್ಯಪಟುವಿನ ನಾಟ್ಯ ಭಂಗಿಗಳನ್ನು ನೆನೆ ನೆನೆದು ಪುಳಕಿತಗೊಂಡು 2011ರ ಸಾಲಿನ ಗೌರವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದ್ದಾರೆ. ಈ ಬಗ್ಗೆ ಪರಿಣಿತರಿಂದ ತೀವ್ರ ವಿಮರ್ಶೆಗಳು ಕೇಳಿಬಂದಿವೆ. ಈಗ ಇವರು ದೇವಾಲಯಗಳಲ್ಲಿನ ಶಿಲ್ಪಕಲೆಗಳ ಬಗ್ಗೆ ಅಧ್ಯಯನದಲ್ಲಿ ತೊಡಗಿದ್ದಾರೆ. ಈ ಬಗ್ಗೆ ಕೆಲವು ಕೃತಿಗಳನ್ನೂ ಹೊರತಂದಿದ್ದಾರೆ. ಈ ವಿಷಯಕ್ಕೇನಾದರೂ ಪ್ರಶಸ್ತಿ ಕೊಟ್ಟಿದ್ದರೆ ಬಹುಶಃ ತಕರಾರು ತೆಗೆದವರು ಸುಮ್ಮನಿರುತ್ತಿದ್ದರೇನೋ? ಅದು ಹಾಗಿರಲಿ. ಪ್ರಸ್ತುತ ಕುಣಿಯುವುದನ್ನು ನಿಲ್ಲಿಸಿರುವ ಈ ಕಲಾವಿದೆ ಕನ್ನಡ ವಿವಿಯನ್ನು ಭ್ರಷ್ಟರ, ಸರ್ವಾಧಿಕಾರಿಗಳ ತಾಳಕ್ಕೆ ತಕ್ಕಂತೆ ಕುಣಿಸಲು ಹೊರಟಿರುವುದು ನಾಡಿನ ದುರ್ದೈವ!



ಆದಿವಾಸಿ ಮಹಿಳೆಗೆ ಪೊಲೀಸರ ಹಿಂಸೆ

"ಸೋನಿ ಸೋರಿ ಎಂಬ ದಿಟ್ಟ ಮಹಿಳೆ ತನ್ನ ಆದಿವಾಸಿ ಜನರ ಪರವಾಗಿ ಹೋರಾಡುತ್ತಿದ್ದರಿಂದ ಪೊಲೀಸರ ಬೆದರಿಕೆಗಳಿಗೆ ಜಗ್ಗದೇ ಇದ್ದದ್ದರಿಂದ ಈಗ ಜೈಲು ಪಾಲಾಗಿದ್ದಾಳಲ್ಲದೆ, ಚಿತ್ರಹಿಂಸೆಗೂ ಗುರಿಯಾಗಿದ್ದಾಳೆ. ಸ್ವತಂತ್ರ ಭಾರತದಲ್ಲಿ ಜನರನ್ನು ಹೇಗೆ ದಮನ ಮಾಡಲಾಗುತ್ತಿದೆ ಎಂದು ಬಿಚ್ಚಿಡುವ ಲೇಖನ ಇಲ್ಲಿದೆ."



ಪೊಲೀಸರ ಹಿಂಸೆಯಿಂದ ಆಸ್ಪತ್ರೆಯಲ್ಲಿ ನರಳುತ್ತಿರುವ ಸೋನಿ

• ಗೌರಿ ಲಂಕೇಶ್

"ಸೋನಿ ಸೋರಿ ಎಂಬ ಆದಿವಾಸಿ ಮಹಿಳೆಯ ಯೋನಿ ಮತ್ತು ಗುದದಲ್ಲಿ ಕಲ್ಲುಗಳನ್ನು ತೂರಿಸಿದ್ದನ್ನು ಪತ್ತೆಹಚ್ಚಿದ ಕೊಲ್ಕತ್ತಾ ಆಸ್ಪತ್ರೆಯ ವೈದ್ಯರ ತಂಡ ಆ ಕಲ್ಲುಗಳೊಂದಿಗೆ ತಮ್ಮ ವರದಿಯನ್ನು ಸುಪ್ರೀಂ ಕೋರ್ಟಿಗೆ ಕಳುಹಿಸಿದ್ದಾರೆ..."

... ಇಂತಹ ಆಘಾತಕಾರಿ ವರದಿಯೊಂದು ಕಳೆದ ವಾರ ಹಲವು ಇಂಗ್ಲಿಷ್ ಪತ್ರಿಕೆಗಳಲ್ಲಿ ಚಿಕ್ಕದಾಗಿ ಪ್ರಕಟಗೊಂಡಿತ್ತು.

ಯಾರು ಈ ಸೋನಿ ಸೋರಿ ಎಂಬ ಆದಿವಾಸಿ ಮಹಿಳೆ? ಆಕೆಯ ಗುಪ್ತಾಂಗಗಳಲ್ಲಿ ಕಲ್ಲುಗಳನ್ನು ತೂರಿದ್ದವರು ಯಾರು? ಪೊಲೀಸರು ಯಾಕೆ ಆಕೆಯನ್ನು ಇನ್ನಿಲ್ಲದಂತೆ ಬೆದರಿಸುತ್ತಿದ್ದಾರೆ? ಆಕೆ ದೆಹಲಿಯ ನ್ಯಾಯಾಲಯದ ಮುಂದೆ ತನ್ನನ್ನು ತನ್ನ ಛತ್ತೀಸಗಡ ರಾಜ್ಯಕ್ಕೆ ವಾಪಸ್ ಕಳುಹಿಸಬಾರದೆಂದು ಬೇಡಿಕೊಂಡರೂ ಆಕೆಯ ಅಹವಾಲು ಯಾಕೆ ನಮ್ಮ ನ್ಯಾಯದೇವತೆಯ ಕಿವಿಯ ಮೇಲೆ ಬೀಳಲಿಲ್ಲ?

ಈ ಎಲ್ಲ ಪ್ರಶ್ನೆಗಳ ಹಿಂದೆ ಇವತ್ತು ನಮ್ಮ ಪ್ರಜಾಪ್ರಭುತ್ವ ದೇಶದಲ್ಲಿ ಸಾಮಾನ್ಯ ಜನರ ಮೇಲೆ ಎಂತಹ ದೌರ್ಜನ್ಯ ನಡೆಯುತ್ತಿದೆ, ಹೇಗೆ ಅಮಾಯಕರ ದನಿಗಳನ್ನು ದಮನ ಮಾಡಲಾಗುತ್ತಿದೆ, ಹೇಗೆ ನಮ್ಮ ಇಡೀ ಆಡಳಿತಾಂಗ ಭ್ರಷ್ಟಗೊಂಡಿದೆ ಎಂಬ ಸತ್ಯಗಳು ಅಡಗಿವೆ.

ಇದು ಕೇವಲ ಸೋನಿ ಸೋರಿ ಎಂಬ ಮಹಿಳೆಯ ಕತೆಯಲ್ಲ, ಬದಲಾಗಿ ಸ್ವತಂತ್ರ ಭಾರತವು ಹೇಗೆ ತನ್ನ ಪ್ರಜೆಗಳನ್ನು ಕಾಡುತ್ತಿದೆ, ಹಿಂಸಿಸುತ್ತಿದೆ, ಜೈಲಿಗೆ ದೂಡುತ್ತಿದೆ ಎಂಬ ಕತೆ...

ಸೋನಿಯ ಹಿನ್ನೆಲೆ

ಸೋನಿ ಸೋರಿ ಛತ್ತೀಸಗಡ ರಾಜ್ಯದ ದಂತೆವಾಡದಲ್ಲಿ ವಾಸಿಸುತ್ತಿರುವ ಆದಿವಾಸಿ ಮಹಿಳೆ. ಆಕೆ ವಿದ್ಯಾಭ್ಯಾಸ ಪಡೆದು ಜಲೇಬಿ ಎಂಬ ಕುಗ್ರಾಮದಲ್ಲಿ ಶಾಲಾ ಟೀಚರ್ ಆಗಿದ್ದಾರೆ. ಆಕೆಯ ತಂದೆ ಮದ್ರು ಸೋರಿ ಹದಿನೈದು ವರ್ಷಗಳ ಕಾಲ ಹಳ್ಳಿಯ ಸರಪಂಚರಾಗಿದ್ದರಿಂದ ಸುತ್ತಮುತ್ತಲಿನ ಹಳ್ಳಿಗಳ ಜನರ ಅಭಿಮಾನವನ್ನು ಪಡೆದಿದ್ದಾರೆ. ಜೊತೆಗೆ ಸೋನಿಯ ಮಾವ ಒಬ್ಬರು ಸಿಪಿಐ ಪಕ್ಷದಿಂದ ಒಮ್ಮೆ ಶಾಸಕರಾಗಿದ್ದರೆ ಆಕೆಯ ಅಣ್ಣ ಕಾಂಗ್ರೆಸ್ ಪಕ್ಷದ ಸದಸ್ಯ. ಹೀಗೆ ರಾಜಕೀಯದೊಂದಿಗೆ ಹಲವಾರು ರೀತಿಯ ನಂಟನ್ನು ಹೊಂದುಕೊಂಡು ಬೆಳೆದ ಸೋನಿಗೆ ಮತ್ತಷ್ಟು ತಿಳಿವಳಿಕೆಯನ್ನು ನೀಡಿದ್ದ ಸಮಾಜ ಸೇವಕ ಹಿಮಾಂಶು ಕುಮಾರ್. ಇದೆಲ್ಲದರ ಪರಿಣಾಮವಾಗಿ ಇವತ್ತು ಸೋನಿ ತನ್ನ ಅಸಹಾಯಕ, ಅಮಾಯಕ ಆದಿವಾಸಿ ಜನರ ಹಕ್ಕುಗಳನ್ನು ತೀಕ್ಷ್ಣವಾಗಿ ಪ್ರತಿಪಾದಿಸುತ್ತಾ ಬಂದಿದ್ದಾರೆ. ಈಗ ಅದೇ ಅವರ ಬದುಕಿನಲ್ಲಿ ಒಂದು ಮುಳ್ಳಾಗಿದೆ.


ಈಗ ಛತ್ತೀಸಗಡ ರಾಜ್ಯದ ದಟ್ಟ ಕಾಡುಗಳಲ್ಲಿ ಪೊಲೀಸ್ ಮತ್ತು ನಕ್ಸಲರ ನಡುವೆ ಭೀಕರ ಯುದ್ಧ ನಡೆಯುತ್ತಿದೆ. ಆ ಯುದ್ಧದಲ್ಲಿ ಈ ಎರಡೂ ವೈರಿಗಳ ಮಧ್ಯೆ ಆದಿವಾಸಿಗಳು ಸಿಕ್ಕಿ ಹಾಕಿಕೊಂಡಿದ್ದಾರೆ. ಅವರದ್ದು ಎಂತಹ ಕಷ್ಟದ ಪರಿಸ್ಥಿತಿ ಎಂದರೆ ಆಕಸ್ಮಾತ್ ಹಳ್ಳಿಗನೊಬ್ಬ ಪೊಲೀಸರೊಂದಿಗೆ ಮಾತನಾಡಿದರೆ ಆತ ತಮ್ಮ ಬಗ್ಗೆ ಮಾಹಿತಿ ನೀಡುತ್ತಿದ್ದಾನೆ ಎಂದು ಅವನನ್ನು ನಕ್ಸಲರು ಕೊಂದು ಹಾಕುತ್ತಾರೆ. ಹಾಗೆಯೇ ಆಕಸ್ಮಾತ್ ಆತ ವಿಧಿ ಇಲ್ಲದೆ ನಕ್ಸಲರ ಸಭೆಗಳಿಗೆ ಹೋದರೆ ಆತ ನಕ್ಸಲ್ ಆಗಿದ್ದಾನೆಂದು ಪೊಲೀಸರು ಆತನನ್ನು ಕೊಂದು ಹಾಕುತ್ತಾರೆ.

ಇಂಥ ಯುದ್ಧ ಭೂಮಿಯಲ್ಲಿ ಎರಡೂ ಕಡೆಗಳನ್ನು ತಿರಸ್ಕರಿಸಿ ತನ್ನ ಜನರ ಪರವಾಗಿ ದುಡಿಯುತ್ತಿರುವಾಕೆ ಸೋನಿ ಸೋರಿ. ಆಕೆಗೆ ನಕ್ಸಲರ ಸಶಸ್ತ್ರ ಹೋರಾಟವೂ ಬೇಕಿಲ್ಲ, ಪೊಲೀಸರ ದೌರ್ಜನ್ಯವೂ ಬೇಕಿಲ್ಲ, ಬದಲಾಗಿ ಆಕೆ ತನ್ನ ಜನರಿಗಾಗಿ ಕೇಳುತ್ತಿರುವುದು ಸಂವಿಧಾನದತ್ತವಾದ ಸಮಾನ ಹಕ್ಕುಗಳು ಮತ್ತು ಕಾನೂನಿನ ರಕ್ಷಣೆ. ತನ್ನ ಜನರ ಭೂಮಿಯನ್ನು ಕಿತ್ತುಕೊಂಡಿರುವ, ಅವರ ಬದುಕನ್ನು ತಮ್ಮ ರಾಕ್ಷಸ ಹಿಡಿತದಲ್ಲಿ ಇಟ್ಟುಕೊಂಡು ಶೋಷಿಸುತ್ತಿರುವ ಕಾಂಟ್ರಾಕ್ಟುದಾರರು, ರಾಜಕಾರಣಿಗಳು, ಪೊಲೀಸರು ಮತ್ತು ನಕ್ಸಲರಿಂದಲೂ ಆದಿವಾಸಿಗಳನ್ನು ರಕ್ಷಿಸುವುದು ಸೋನಿಗೆ ಮುಖ್ಯವಾಗಿತ್ತು. ಈ ಹಿಂದೆ ಸೋನಿ ಆದಿವಾಸಿಗಳ ಪರವಾಗಿ ಹಲವಾರು ಹೋರಾಟಗಳನ್ನು ಕೈಗೆತ್ತಿಕೊಂಡಿದ್ದಳು. ಆದಿವಾಸಿಗಳ ದಿನಗೂಲಿಯನ್ನು 60 ರಿಂದ 120 ರೂಪಾಯಿಗೆ ಏರಿಸುವಲ್ಲಿ ಯಶಸ್ವಿಯಾದಳು. ಗಣಿಗಳಲ್ಲಿ ದುಡಿಯುತ್ತಿರುವ ಆದಿವಾಸಿಗಳ ಹಕ್ಕುಗಳಿಗಾಗಿಯೂ ಹೋರಾಡಿದರು, ನಕ್ಸಲರನ್ನು ಹಿಡಿಯಲೆಂದು ಪೊಲೀಸ್ ಅಧಿಕಾರಿಗಳು ಕಾಡನ್ನು ನಾಶಮಾಡುತ್ತಾ ತಮ್ಮ ಜೇಬನ್ನು ತುಂಬಿಸಿಕೊಳ್ಳುತ್ತಿರುವುದನ್ನು ಪ್ರತಿಭಟಿಸಿದಳು.

ಇದೆಲ್ಲದರ ಪರಿಣಾಮವಾಗಿ ಆಕೆ ಪೊಲೀಸರ, ನಕ್ಸಲರ, ರಾಜಕಾರಣಿಗಳ ಕೆಂಗಣ್ಣಿಗೆ ತುತ್ತಾದಳು. ಅಂದಿನಿಂದ ಸೋನಿಯ ಬದುಕೇ ಛಿದ್ರಗೊಂಡಿತು.

ಸೋನಿಯ ಎಲ್ಲ ಹೋರಾಟಗಳಲ್ಲಿ ಆಕೆಗೆ ಸಾತ್ ನೀಡುತ್ತಿದ್ದದ್ದು ಆಕೆಯ ಅಕ್ಕನ ಮಗ ಲಿಂಗಾ. 25 ವರ್ಷ ವಯಸ್ಸಿನ ಲಿಂಗಾ ಕೂಡ ಪೊಲೀಸರನ್ನು ಮತ್ತು ನಕ್ಸಲರನ್ನು ತಿರಸ್ಕರಿಸಿ ಆದಿವಾಸಿಗಳ ಪರವಾಗಿ ಹೋರಾಡುವ, ದನಿ ಎತ್ತುವ ಬಿಸಿ ರಕ್ತದ ಯುವಕ. ಆತ ಪೊಲೀಸರ ದೌರ್ಜನ್ಯಗಳ ಬಗ್ಗೆ ಬಾಯಿ ತೆರೆದಾಗಲೆಲ್ಲ ಪೊಲೀಸರಿಗೆ ಕಸಿವಿಸಿ ಉಂಟಾಗುತ್ತಿತ್ತು. ಆದ್ದರಿಂದ ಪೊಲೀಸರು ಸೋನಿ ಮತ್ತು ಲಿಂಗಾರನ್ನು ತಮ್ಮ ಮಾಹಿತಿದಾರರಾಗಿ ಪರಿವರ್ತಿಸಿಕೊಳ್ಳಲು ಯತ್ನಿಸಿದರು. ಆದರೆ ಅವರಿಬ್ಬರು ಪೊಲೀಸರ ಎಲ್ಲ ರೀತಿಯ ಆಮಿಷಗಳಿಗೆ, ಬೆದರಿಕೆಗಳಿಗೆ ಮಣಿಯದೇ ಹೋದರು. ಪೊಲೀಸರ ಒತ್ತಡ ಹೆಚ್ಚಾದಾಗ ಹಿಮಾಂಶು ಕುಮಾರ್ ಅವರ ಸಲಹೆ ಮೇರೆಗೆ ಲಿಂಗಾ ದೆಹಲಿಗೆ ಹೋದ. ಅಲ್ಲಿ ಛತ್ತೀಸಗಡದ ಆದಿವಾಸಿಗಳ ಮೇಲೆ ಪೊಲೀಸರು ನಡೆಸುತ್ತಿರುವ ದಾಳಿಗಳ ಬಗ್ಗೆ ಮಾಧ್ಯಮಗಳಿಗೆ ಲಿಂಗಾ ವಿವರಿಸಿದನಲ್ಲದೆ, ತಾನೂ ಪತ್ರಿಕೋದ್ಯಮದಲ್ಲಿ ಪದವಿ ಪಡೆದ. ಆತನ ಉದ್ದೇಶ ತನ್ನ ಜನರ ಪಾಡನ್ನು ಇನ್ನೂ ಸೂಕ್ಷ್ಮವಾಗಿ ಜನರಿಗೆ ವಿವರಿಸುವುದಾಗಿತ್ತು, ಪತ್ರಿಕೋದ್ಯಮದಲ್ಲಿ ಪದವಿ ಪಡೆದ ನಂತರ ಲಿಂಗಾ ದಂತೆವಾಡಕ್ಕೆ ವಾಪಸ್ ಬಂದ.

ಆಗ ಮತ್ತೆ ಸೋನಿ ಮತ್ತು ಲಿಂಗಾ ಮೇಲೆ ಪೊಲೀಸರ ಒತ್ತಡ ಪ್ರಾರಂಭವಾಯಿತು. ನಾಲ್ಕೈದು ಕಡೆ ನಕ್ಸಲರು ನಡೆಸಿದ ದಾಳಿಗಳಲ್ಲಿ ಸೋನಿ ಮತ್ತು ಲಿಂಗಾ ಭಾಗವಹಿಸಿದ್ದರೆಂದು ಅವರಿಬ್ಬರ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸಲಾರಂಭಿಸಿದರು. ಅಷ್ಟೇ ಅಲ್ಲ, ಆ ಕೇಸುಗಳಲ್ಲಿ ಸೋನಿ ಪರಾರಿಯಾಗಿದ್ದಾಳೆಂದು, ಆಕೆಯನ್ನು ಹುಡುಕಲಾಗುತ್ತಿದೆ ಎಂದು ಬರೆದರು. ವಾಸ್ತವವಾಗಿ ಆಗ ಸೋನಿ ಎಂದಿನಂತೆ ತನ್ನ ಶಾಲೆಗೆ ಹೋಗಿ ಪಾಠ ಮಾಡುತ್ತಿದ್ದಳು. ಶಾಲೆಯ ದಾಖಲೆಗಳಲ್ಲಿ ತನ್ನ ಹಾಜರಿ ಕುರಿತಂತೆ ಸಾಕ್ಷಿ ಇದ್ದದ್ದರಿಂದ ತನಗೂ, ತನ್ನ ವಿರುದ್ಧ ಪೊಲೀಸರು ಮಾಡಿದ್ದ ಸುಳ್ಳು ಆರೋಪಗಳಿಗೂ ಸಂಬಂಧ ಇಲ್ಲದಂತೆ ಸುಮ್ಮನಿದ್ದಳು. ಪೊಲೀಸರಿಗೂ ಆಕೆ ದಿನನಿತ್ಯ ತನ್ನ ಶಾಲೆಗೆ ಹೋಗುತ್ತಿರುವುದು ಗೊತ್ತಿದ್ದರೂ ಆಕೆಯನ್ನು ಬಂಧಿಸಲಿಲ್ಲ, ಯಾಕೆಂದರೆ ಇಂತಹ ಹಲವಾರು ಕೇಸುಗಳನ್ನು ಸೋನಿ ವಿರುದ್ಧ ಜಡಿದರೆ ಆಕೆ ಹೈರಾಣಾಗಿ ತಮಗೆ ನಕ್ಸಲರ ವಿರುದ್ಧ ಮಾಹಿತಿ ನೀಡಲು ಒಪ್ಪುತ್ತಾಳೆ ಎಂಬುದು ಅವರ ಲೆಕ್ಕಾಚಾರವಾಗಿತ್ತು.



ಮದ್ರನ ಕಾಲಿಗೆ ಗುಂಡೇಟು

ಗಂಡನ ಬಂಧನ, ತಂದೆ ಮೇಲೆ ದಾಳಿ

ಪೊಲೀಸರ ಇಂತಹ ಕುತಂತ್ರಗಳಿಗೂ ಸೋನಿ ಜಗ್ಗದಿದ್ದಾಗ ಅವರು ನೇರ ಕಾರ್ಯಾಚರಣೆಗೆ ಇಳಿದರು. ಆರಂಭದಲ್ಲಿ ಸೋನಿಯ ಗಂಡ ಅನಿಲ್ ಫುಟಾನೆ ಓರ್ವ ನಕ್ಸಲ್ ಬೆಂಬಲಿಗ ಎಂದು ಆರೋಪಿಸಿ ಪೊಲೀಸರು ಆತನನ್ನು ಬಂಧಿಸಿದರು.

ವಿಪರ್ಯಾಸವೆಂದರೆ, ಅನಿಲ್‌ನನ್ನು ಬಂಧಿಸಿದ ಕೆಲದಿನಗಳಲ್ಲೇ ಸೋನಿಯ ತಂದೆ ಮದ್ರು ಪೊಲೀಸರಿಗೆ ತಮ್ಮ ಬಗ್ಗೆ ಮಾಹಿತಿ ನೀಡುತ್ತಿದ್ದಾನೆಂದು ನಕ್ಸಲರು ಮದ್ರುನ ಮನೆ ಮೇಲೆ ದಾಳಿ ಮಾಡಿದರು. ಅವತ್ತು ಮದ್ರುನ ಮನೆಯಲ್ಲಿದ್ದವರನ್ನೆಲ್ಲ ಅರಣ್ಯದಲ್ಲಿ ಕಟ್ಟಿಹಾಕಿದ ನಕ್ಸಲರು ಇಡೀ ಮನೆಯನ್ನು ಚಿಂದಿ ಮಾಡಿದರಲ್ಲದೆ ಮದ್ರುನ ಕಾಲಿಗೆ ಗುಂಡೇಟು ತಗುಲಿ ಆತ ಆಸ್ಪತ್ರೆ ಸೇರುವಂತಾಯಿತು. ಆಸ್ಪತ್ರೆಯಲ್ಲಿ ನರಳುತ್ತಾ ಬಿದ್ದಿದ್ದ ಮದ್ರು ಅವರು "ಪೊಲೀಸರು ಮುಂದಿನಿಂದ ನಮಗೆ ಹೊಡೆಯುತ್ತಾರೆ, ನಕ್ಸಲರು ನಮ್ಮನ್ನು ಹಿಂದಿನಿಂದ ಒದೆಯುತ್ತಾರೆ. ಸರ್ಕಾರ ನಮ್ಮ ಮೇಲೆ ದಯೆ ತೋರಿ ನಮ್ಮನ್ನು ಕೊಂದು ಹಾಕಿದರೆ ನಮಗೆ ಈ ಹಿಂಸೆ ನಿಲ್ಲುತ್ತದೆ" ಎಂದು ರೋದಿಸಿದ್ದರು.

ಒಂದೆಡೆ ನಕ್ಸಲ್ ಬೆಂಬಲಿಗ ಎಂದು ಜೈಲು ಪಾಲಾದ ಗಂಡ, ಇನ್ನೊಂದೆಡೆ ಪೊಲೀಸರ ಮಾಹಿತಿದಾರ ಎಂದು ನಕ್ಸಲರ ದಾಳಿಗೆ ಗುರಿಯಾದ ತಂದೆ... "ಇದರಿಂದಾದರೂ ನಾವು ನಕ್ಸಲರ ಬೆಂಬಲಿಗರಲ್ಲ ಮತ್ತು ಪೊಲೀಸರ ದೌರ್ಜನ್ಯಕ್ಕೆ ಗುರಿಯಾಗಿರುವವರು ಎಂದು ಸರ್ಕಾರಕ್ಕೆ ಯಾಕೆ ಅರ್ಥವಾಗುವುದಿಲ್ಲ ?" ಎಂದು ಸೋನಿ ಕೇಳಿದ ಪ್ರಶ್ನೆಗೆ ಯಾರಲ್ಲೂ ಉತ್ತರವಿರಲಿಲ್ಲ.

ಲಿಂಗಾ ಬಂಧನ

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ದಂತೆವಾಡದ ಪೊಲೀಸರು ಒಂದು ಸಂಚು ರೂಪಿಸಿದರು. ಅದೇ ದಂತೆವಾಡದ ಕಾಡುಗಳಲ್ಲಿ ಎಸ್ಸಾರ್ ಕಂಪನಿಯ ಕಾಂಟ್ರಾಕ್ಟುದಾರ ಬಿ.ಕೆ. ಲಾಲಾ ಎಂಬಾತ ಕೊಳವೆಗಳನ್ನು ಅಳವಡಿಸುವ ಜವಾಬ್ದಾರಿಯನ್ನು ಹೊತ್ತಿದ್ದ. ಆದರೆ ಲಾಲಾ ಸ್ಥಳೀಯ ಪೊಲೀಸರಿಗೆ ಮಾಮೂಲನ್ನು ಕೊಟ್ಟಿರಲಿಲ್ಲ, ಆದ್ದರಿಂದ ಆತನ ಮೇಲೂ ಕಣ್ಣಿಟ್ಟಿದ್ದ ಪೊಲೀಸರು ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳನ್ನು ಕೆಡವಲು ಮುಂದಾದರು. ಮೊದಲೇ ಲಿಂಗಾ ಮತ್ತು ಲಾಲಾನನ್ನು ಅವರವರ ಮನೆಗಳಿಂದ ಕರೆದುಕೊಂಡು ಹೋಗಿದ್ದ ಪೊಲೀಸರು ಸೆಪ್ಟೆಂಬರ್ 9 ರಂದು ಅವರಿಬ್ಬರನ್ನು ದಂತೆವಾಡಾದ ಮಾರ್ಕೆಟ್ಟನಲ್ಲಿ ಸೆರೆ ಹಿಡಿದೆವೆಂದೂ, ಲಾಲಾ ಸುಮಾರು 15 ಲಕ್ಷ ರೂಪಾಯಿಗಳನ್ನು ಲಿಂಗಾನಿಗೆ ನೀಡಿದ್ದನೆಂದೂ, ಆ ಹಣವನ್ನು ಲಿಂಗಾ ನಕ್ಸಲರಿಗೆ ಕೊಡಲು ಪಡೆದಿದ್ದನೆಂದೂ ಆರೋಪಿಸಿದರು. ಅಷ್ಟೇ ಅಲ್ಲ, ಈ ಹಣ ವಸೂಲಿ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಸೋನಿಯನ್ನೂ ಅವತ್ತೇ ಬಂಧಿಸಬೇಕಿತ್ತು, ಆದರೆ ಆಕೆ ಸ್ಥಳದಿಂದ ಪರಾರಿಯಾದಳು, ಈಗ ಆಕೆಗೆ ಹುಡುಕುತ್ತಿದ್ದೇವೆ ಮತ್ತು ಆದಷ್ಟು ಬೇಗ ಆಕೆಯನ್ನೂ ಬಂಧಿಸುತ್ತೇವೆ ಎಂದು ಪೊಲೀಸರು ಘೋಷಿಸಿದರು.

ಆಗ ಸೋನಿಗೆ ಅರ್ಥವಾಯಿತು. ತಾನೇನೂ ತಪ್ಪು ಮಾಡಿರದಿದ್ದರೂ ತನ್ನನ್ನು ಪೊಲೀಸರು ಬಂಧಿಸುತ್ತಾರೆ ಎಂದು



ದಂತೆವಾಡದ ಅರಣ್ಯದಲ್ಲಿ ಒಂದು ಹಳ್ಳಿ

ಆಕೆಗೆ ಗೊತ್ತಾಯಿತು. ಅವತ್ತೇ ತನ್ನ ಮೂವರು ಚಿಕ್ಕಮಕ್ಕಳನ್ನು ಸಂಬಂಧಿಕರ ಮನೆಗಳಲ್ಲಿ ಬಿಟ್ಟು ಸೋನಿ ಜಲೇಬಿ ಗ್ರಾಮದಿಂದ ನಾಪತ್ತೆಯಾದಳು. ಆಕೆಗಾಗಿ ದಂತೆವಾಡದ ಪೊಲೀಸರು ಮಾತ್ರವಲ್ಲ, ಇಡೀ ಛತ್ತೀಸಗಡ ರಾಜ್ಯದ ಪೊಲೀಸರು ಹುಡುಕಲಾರಂಭಿಸಿದರು.

ಛತ್ತೀಸಗಡದ ದಟ್ಟ ಅರಣ್ಯ ಪ್ರದೇಶದ ಜಲೇಬಿ ಎಂಬ ಕುಗ್ರಾಮದಿಂದ ಸೋನಿ ತರಹದ ಆದಿವಾಸಿ ಮಹಿಳೆ ಅದು ಹೇಗೆ ದೆಹಲಿಯನ್ನು ತಲುಪಿದಳೋ ಗೊತ್ತಿಲ್ಲ, ಒಟ್ಟು ಆಕೆ ಕಳೆದ ಅಕ್ಟೋಬರ್ ತಿಂಗಳಲ್ಲಿ ದೇಶದ ರಾಜಧಾನಿಯಲ್ಲಿ ಪ್ರತ್ಯಕ್ಷಳಾದಳು. ಹಾಗೆ ಪ್ರತ್ಯಕ್ಷಳಾದವಳೇ ತನ್ನ ರಾಜ್ಯದಲ್ಲಿ ನಿಜವಾಗಲೂ ಏನಾಗುತ್ತಿದೆ ಎಂದು ಹಲವು ಮಾಧ್ಯಮಗಳಿಗೆ ವಿವರಿಸಿದಳು. ಆಕೆ ದೆಹಲಿಯಲ್ಲಿರುವುದು ಪೊಲೀಸರಿಗೆ ಗೊತ್ತಾಯಿತಲ್ಲದೆ, ಛತ್ತೀಸಗಡ ಮತ್ತು ದೆಹಲಿಯ ಪೊಲೀಸರ ಜಂಟಿಪಡೆ ಆಕೆಯನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿತು.

ಅವತ್ತು ಸೋನಿ ಮತ್ತು ಆಕೆಯ ವಕೀಲರು ನ್ಯಾಯಾಲಯದ ಮುಂದೆ ಆಕೆಯನ್ನು ಛತ್ತೀಸಗಡಕ್ಕೆ ವಾಪಸ್ ಕಳುಹಿಸಿದರೆ ಆಕೆಯ ಪ್ರಾಣಕ್ಕೆ ಪೊಲೀಸರಿಂದಲೇ ಬೆದರಿಕೆ ಇದೆ ಎಂದು ಪರಿಪರಿಯಾಗಿ ಬೇಡಿದರು. ಆಕೆಯನ್ನು ಕರೆದುಕೊಂಡು ಹೋಗಲು ಬಂದಿದ್ದ ಪೊಲೀಸ್ ತಂಡದಲ್ಲಿದ್ದ ಓರ್ವ ಅಧಿಕಾರಿ ಈ ಹಿಂದೆ ಆಕೆಗೆ ಪೊಲೀಸ್ ಠಾಣೆಯಲ್ಲಿ ಚಿತ್ರಹಿಂಸೆ ನೀಡಿದ್ದ ಎಂದೂ, ಆಕೆಯ ಮೇಲೆ ಲೈಂಗಿಕ ದಾಳಿ ನಡೆಸಿದ್ದನೆಂದೂ ನ್ಯಾಯಾಲಯಕ್ಕೆ ವಿವರಿಸಿದರು. ಬೇಕಿದ್ದರೆ ಆಕೆಯನ್ನು ದೆಹಲಿಯಲ್ಲೇ ಬಂಧನದಲ್ಲಿಟ್ಟು ವಿಚಾರಣೆ ನಡೆಸಲಿ ಎಂದೂ ಕೇಳಿಕೊಂಡರು. ಆದರೆ ಸೋನಿಯ ಕಷ್ಟವನ್ನು ನ್ಯಾಯಾಲಯ ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಯಿತು. ಅಕ್ಟೋಬರ್ 6ರಂದು ಸೋನಿಯನ್ನು ಛತ್ತೀಸಗಡದ ಪೊಲೀಸರಿಗೆ ನ್ಯಾಯಾಧೀಶರು ವಹಿಸಿದರು. (ಸೋನಿ ದೆಹಲಿ ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ಲಿಖಿತ ಮನವಿಗೆ ಬಾಕ್ಸ್ ನೋಡಿ)

ಸೋನಿಯನ್ನು ತಮ್ಮ ವಶಕ್ಕೆ ಪಡೆದುಕೊಂಡ ಛತ್ತೀಸಗಡದ ಪೊಲೀಸರು ಆಕೆಯನ್ನು ಮಾರನೆದಿನವೇ ವಿಮಾನದಲ್ಲಿ ದಂತೆವಾಡಕ್ಕೆ ಕರೆದುಕೊಂಡು ಹೋದರು. ಅಕ್ಟೋಬರ್ 8ರಂದು ಸೋನಿಗೆ ಚಿತ್ರಹಿಂಸೆ ಪ್ರಾರಂಭವಾಯಿತು. ಆಕೆ ಕೊಟ್ಟಿರುವ ಹೇಳಿಕೆ ಹೀಗಿದೆ:

"ಅಕ್ಟೋಬರ್ 8ರ ಮಧ್ಯರಾತ್ರಿಯಿಂದ ಸುಮಾರು 2.30 ಗಂಟೆ ತನಕ ದಂತೆವಾಡದ ಎಸ್‌ಪಿ ಅಂಕಿತ್ ಗರ್ಗ್ ನನಗೆ ಚಿತ್ರಹಿಂಸೆ ನೀಡಿದರು. ಪೊಲೀಸ್ ಠಾಣೆಯ ಒಂದು ಕೊಠಡಿಯಲ್ಲಿ ನನ್ನ ಮೈಮೇಲಿನ ಬಟ್ಟೆಯನ್ನೆಲ್ಲ ತೆಗೆಸಿ ನನಗೆ ಎಲೆಕ್ಟ್ರಿಕ್ ಶಾಕ್ ನೀಡಿದರು."

ದೆಹಲಿ ನ್ಯಾಯಾಲಯದ ಆದೇಶದಂತೆ ಅಕ್ಟೋಬರ್ 10ರಂದು ಪೊಲೀಸರು ಸೋನಿಯನ್ನು ದಂತೆವಾಡದ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಿತ್ತು. ಆದರೆ ಆಕೆಗೆ ಎಷ್ಟು ಹಿಂಸೆ ನೀಡಲಾಗಿತ್ತೆಂದರೆ ಆಕೆಗೆ ನಿಲ್ಲಲೂ ಸಾಧ್ಯವಾಗುತ್ತಿರಲಿಲ್ಲ. ಇನ್ನು ಪೊಲೀಸ್ ವ್ಯಾನಿನಿಂದ ನ್ಯಾಯಾಲಯದ ಕೊಠಡಿ ತನಕ ನಡೆದುಕೊಂಡುಹೋಗುವ ಮಾತು ಎಲ್ಲಿಂದ ಬಂತು? ಆಕೆಯ ಇಂತಹ ದಾರುಣ ಸ್ಥಿತಿಯನ್ನೂ ದುರುಪಯೋಗಮಾಡಿಕೊಂಡ ಪೊಲೀಸರು ನ್ಯಾಯಾಲಯದ ಕ್ಲರ್ಕ್‌ಗೆ ಆಕೆಯಿಂದ ವ್ಯಾನಿನಲ್ಲೇ ಒಂದು ಹೇಳಿಕೆ ಕೊಡಿಸಿದರು. ಅದೂ ಏನೆಂದು: "ನಾನು ಪೊಲೀಸ್ ಠಾಣೆಯಲ್ಲಿ ಜಾರಿ ಬಿದ್ದಿದ್ದರಿಂದ ನನ್ನ ತಲೆಗೆ ಮತ್ತು ಬೆನ್ನು ಮೂಲೆಗೆ ಪೆಟ್ಟಾಗಿದೆ."

ವಾಸ್ತವವಾಗಿ ಏನಾಗಿತ್ತೆಂದರೆ ಸೋನಿಗೆ ಪೊಲೀಸರು ಕೊಟ್ಟ ಚಿತ್ರಹಿಂಸೆಯನ್ನು ತಾಳಲಾರದೆ ಆಕೆ ಮೂರ್ಛೆ ಹೋಗಿದ್ದಳು. ಆಕೆಗೆ ಹೆಚ್ಚುಕಡಿಮೆ ಆದರೆ ತಮ್ಮ ತಲೆಗೆ ಬರುತ್ತದೆ ಎಂದು ಹೆದರಿದ ಪೊಲೀಸರು ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಮೂರ್ಛೆ ಹೋಗಿದ್ದ ಸ್ಥಿತಿಯಲ್ಲೇ ಕರೆದುಕೊಂಡು ಬಂದಿದ್ದ ಸೋನಿಯನ್ನು ಪರೀಕ್ಷಿಸಿದ ವೈದ್ಯರು ಆಕೆಯ ತಲೆಬುರುಡೆಗೆ ಮತ್ತು ಬೆನ್ನು ಮೂಲೆಗೆ ಪೆಟ್ಟು ಬಿದ್ದಿರುವುದನ್ನು ಖಾತರಿಪಡಿಸಿದರು.

ಅಕ್ಟೋಬರ್ 20ರಂದು ಸೋನಿ ಪರವಾಗಿ ಆಕೆಯ ವಕೀಲರು ಸುಪ್ರೀಂ ಕೋರ್ಟಿನ ಮೊರೆ ಹೋಗಿ ಛತ್ತೀಸಗಡದ ಪೊಲೀಸರಿಂದಾಗಿ ಸೋನಿಯ ಪ್ರಾಣಕ್ಕೆ ಅಪಾಯ ಇದೆ ಎಂದೂ, ಆಕೆಯನ್ನು ಛತ್ತೀಗಡದ ಆಸ್ಪತ್ರೆಯಲ್ಲಲ್ಲದೆ ಬೇರೆ ರಾಜ್ಯದ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕೆಂದೂ ಕೋರಿದರು. ಅದಕ್ಕೆ ಒಪ್ಪಿದ ಸುಪ್ರೀಂಕೋರ್ಟ್ ಸೋನಿಯನ್ನು ಕೊಲ್ಕತ್ತಾದ ಎನ್‌ಆರ್‌ಎಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕೆಂದು ಆದೇಶಿಸಿತು.

ನವೆಂಬರ್ 25ರಂದು ಹೊರಬಿದ್ದದ್ದೇ "ಸೋನಿ ಸೋರಿ ಎಂಬ ಆದಿವಾಸಿ ಮಹಿಳೆಯ ಯೋನಿ ಮತ್ತು ಗುದದಲ್ಲಿ ಕಲ್ಲುಗಳನ್ನು ತೂರಿಸಲಾಗಿದೆ" ಎಂಬ ವೈದ್ಯರ ಆಘಾತಕಾರಿ ವರದಿ.

ಅಂದರೆ ಅಕ್ಟೋಬರ್ 8ರಿಂದ ನವೆಂಬರ್ ತಿಂಗಳವರೆಗೂ ಛತ್ತೀಸ್‌ಗಢದ ಪೊಲೀಸರು ಸೋನಿಗೆ ಇನ್ನೆಂತಹ ಹಿಂಸೆ ನೀಡಿರಬೇಕೆಂದು ಊಹಿಸಿದರೆ ಎದೆ ನಡುಗುತ್ತದೆ.

ಕೊಲ್ಕತ್ತಾ ವೈದ್ಯರ ವರದಿಯಿಂದ ಸುಪ್ರೀಂಕೋರ್ಟ್ ಕೂಡ ಕೆಂಡಾಮಂಡಲವಾಗಿದೆ. ಅದೀಗ ಸೋನಿ ಸ್ಥಿತಿಯನ್ನು ಕುರಿತಂತೆ ತನಗೆ ವರದಿ ಕೊಡಬೇಕೆಂದು ಛತ್ತೀಸಗಡ ಸರ್ಕಾರಕ್ಕೆ ಆದೇಶಿಸಿದೆ.

ಆದರೆ ವಿಚಿತ್ರ ನೋಡಿ: ಯಾವ ರಾಜ್ಯ ಪೊಲೀಸರಿಂದ ತನಗೆ ಪ್ರಾಣ ಬೆದರಿಕೆ ಇದೆ ಎಂದೂ, ಅವರು ಈ ಹಿಂದೆ ತನಗೆ ಚಿತ್ರಹಿಂಸೆ ನೀಡಿದ್ದರೆಂದೂ ಸೋನಿ ಆರೋಪಿಸಿದ್ದರೋ ಅವೆಲ್ಲ ಇವತ್ತು ಸಾಬೀತಾಗಿದೆ. ಆದ್ದರಿಂದ ಸೋನಿ ಅವರನ್ನು ಛತ್ತೀಸಗಡದ ಜೈಲಿನಿಂದ ದೆಹಲಿ ಜೈಲಿಗೆ ವರ್ಗಾಯಿಸಬೇಕೆಂದು ಆಕೆಯ ಪರ ಹಿರಿಯ ವಕೀಲರಾದ ಕಾಲಿನ್ ಗೊಂಜಾಲ್ವೆಸ್ ಕೇಳಿಕೊಂಡರೂ ಸುಪ್ರೀಂಕೋರ್ಟ್ ಅದಕ್ಕೆ ಒಪ್ಪಿಲ್ಲ.

ಬದಲಾಗಿ ಮೊನ್ನೆ ಡಿಸೆಂಬರ್ 2ರಂದು ಆಕೆಯನ್ನು ಛತ್ತೀಸಗಡದ ಜಗದಲ್ಪುರ ಜೈಲಿನಿಂದ ಅದೇ ರಾಜ್ಯದ ರಾಯಪುರ್ ಜೈಲಿಗೆ ವರ್ಗಾಯಿಸಬೇಕೆಂದು ಕೋರ್ಟ್ ಆದೇಶಿಸಿದೆ. ಅಷ್ಟೇ ಅಲ್ಲ, ಕೊಲ್ಕತ್ತಾದ ವೈದ್ಯರು ಸಲ್ಲಿಸಿರುವ ವರದಿಗೆ ಪ್ರತಿಕ್ರಿಯಿಸಲು ಸುಪ್ರೀಂಕೋರ್ಟ್ ಛತ್ತೀಗಡ ರಾಜ್ಯಕ್ಕೆ 45 ದಿನಗಳ ಕಾಲಾವಕಾಶವನ್ನು ನೀಡಿದೆ. ಅಂದರೆ ರಾಯಪುರ ಜೈಲಿನಲ್ಲೂ ಸೋನಿಗೆ ಚಿತ್ರಹಿಂಸೆ ತಪ್ಪಿದ್ದಲ್ಲ... ಮತ್ತು ಅದು ಇನ್ನೂ ಒಂದು ತಿಂಗಳ ಮಟ್ಟಿಗೆ ಮುಂದುವರೆಯಲಿದೆ.



ಬಂಧನಕ್ಕೊಳಗಾಗಿರುವ ಲಿಂಗಾ

ಅಷ್ಟುಹೊತ್ತಿಗೆ ಸೋನಿ ದೈಹಿಕವಾಗಿಯೂ, ಮಾನಸಿಕವಾಗಿಯೂ ಬದುಕುಳಿದಿರುತ್ತಾಳೆ ಎಂದೂ, ಜೈಲಿನಿಂದ ಬಿಡುಗಡೆ ಆದನಂತರ ಆಕೆ ತನ್ನ ಆದಿವಾಸಿ ಜನರ ಪರವಾಗಿ ಹೋರಾಟವನ್ನು ಮುಂದುವರೆಸುತ್ತಾಳೆ ಎಂದೂ ಯಾರೂ ಭ್ರಮೆ ಇಟ್ಟುಕೊಳ್ಳುವ ಅಗತ್ಯವಿಲ್ಲ. ಯಾಕೆಂದರೆ 'ಮೇರಾ ಭಾರತ್ ಮಹಾನ್' ಎಂತಹ ದೇಶವಾಗಿದೆ ಎಂದರೆ ಇಲ್ಲಿ ಅಮಾಯಕ, ಅಸಹಾಯಕ ಜನರ ದಮನವಾಗುತ್ತಿದೆ, ಮಾತ್ರವಲ್ಲ ಅದರ ವಿರುದ್ಧ ಯಾರೂ ಸೊಲ್ಲೆತ್ತುವಂತಿಲ್ಲ.

ಹಾಗೊಮ್ಮೆ ಸೊಲ್ಲೆತ್ತಿದರೆ ಧೀರ, ದಿಟ್ಟ ಆದಿವಾಸಿ ಮಹಿಳೆ ಸೋನಿ ಸೋರಿಗೆ ಆಗುತ್ತಿರುವುದು ಎಲ್ಲರಿಗೂ ಆಗುತ್ತದೆ....

ವ್ಹಾ ಸ್ವತಂತ್ರ, ಸಮಾನ, ಸ್ವಾಭಿಮಾನಿ ಭಾರತ....

ಜಡ್ಜ್ ಸಾಹೇಬರೇ ನನಗೆ ನ್ಯಾಯ ಕೊಡಿ

ಕಳೆದ ಅಕ್ಟೋಬರ್ ತಿಂಗಳಲ್ಲಿ ಸೋನಿ ಸೋರಿಯನ್ನು ರಾಜಧಾನಿಯಲ್ಲಿ ದೆಹಲಿ ಮತ್ತು ಛತ್ತೀಸಗಡದ ಪೊಲೀಸರು ಬಂಧಿಸಿದಾಗ ಆಕೆ ದೆಹಲಿಯ ಕೋರ್ಟ್ ಮುಂದೆ ಒಂದು ಲಿಖಿತ ಹೇಳಿಕೆಯನ್ನು ಕೊಟ್ಟಿದ್ದಳು. ಅದರ ಪೂರ್ಣ ಪಾಠ ಇಲ್ಲಿದೆ:

"ಗೌರವಾನ್ವಿತ ಜಡ್ಜ್ ಸಾಹೇಬರೇ, ನಾನು ಈ ಲಿಖಿತ ಹೇಳಿಕೆಯಲ್ಲಿ ಹೇಳಿರುವುದೆಲ್ಲ ಸತ್ಯವೆಂದು ಪ್ರಮಾಣ ಮಾಡುತ್ತೇನೆ.

ಕಳೆದ ಎರಡು ವರ್ಷಗಳಿಂದ ಪೊಲೀಸರು ನನಗೆ ಕಿರುಕುಳ ನೀಡುತ್ತಿದ್ದಾರೆ. ನನ್ನನ್ನು ಪದೇಪದೇ ಪೊಲೀಸ್ ಠಾಣೆಗೆ ಕರೆಸುವುದು, ನಮ್ಮ ಮನೆಯ ಮೇಲೆ ದಾಳಿ ಇಟ್ಟು ಮನೆಯಲ್ಲಿರುವ ಸಾಮಾನುಗಳನ್ನು ನಾಶ ಮಾಡುವುದು, ನಾನು ತೊಟ್ಟಿರುವ ಬಟ್ಟೆಯನ್ನು ಹಿಡಿದು ಅಸಹ್ಯವಾಗಿ ಮಾತನಾಡುವುದು, ಇಂತಹ ಕೃತ್ಯಗಳಿಂದ ನನ್ನನ್ನು ಪೊಲೀಸರು ಪೀಡಿಸುತ್ತಿದ್ದಾರೆ. ನಾನು ಅವರನ್ನು ವಿರೋಧಿಸಿದರೆ ನನಗೆ ಬೆದರಿಕೆ ಹಾಕುತ್ತಾರೆ. "ನಮ್ಮ ವಿರುದ್ಧ ದೂರು ಕೊಡುತ್ತೀಯಾ? ಎಲ್ಲಿ ದೂರು ಕೊಡುತ್ತೀಯ? ನಿನ್ನ ಮಾತನ್ನು ಯಾರು ನಂಬುತ್ತಾರೆ? ನೀನು ನಕ್ಸಲೈಟ್ ಎಂದು ಒಂದು ದಿನ ನಿನ್ನನ್ನು ಕೊಂದು ಹಾಕುತ್ತೇವೆ. ಹೇಗಿದ್ದರೂ ಹೋದ ವರ್ಷದಿಂದ ನೀನು ತಲೆ ತಪ್ಪಿಸಿಕೊಂಡಿರುವ ನಕ್ಸಲ್ ಎಂದು ಘೋಷಿಸಿಯಾಗಿದೆ" ಎಂದು ಬೆದರಿಸುತ್ತಾರೆ. ನಾನು ಶಾಲೆಯೊಂದರಲ್ಲಿ ಅಧ್ಯಾಪಕಿ ಆಗಿದ್ದು ದಿನಾ ಶಾಲೆಗೆ ಹೋಗುತ್ತಿರುವಾಗ ನಾನು ತಲೆ ತಪ್ಪಿಸಿಕೊಂಡಿರುವೆ ಎಂದು ಹೇಗೆ ಘೋಷಿಸುತ್ತೀರಿ ಎಂದರೆ ಅವರು ಕೇಳುವುದಿಲ್ಲ.

ಜಡ್ಜ್ ಸಾಹೇಬರೇ, ನಾನು ಒಂದು ಉದ್ದೇಶದಿಂದ ದೆಹಲಿತನಕ ಬಂದಿದ್ದೇನೆ. ಆ ಉದ್ದೇಶವನ್ನು ಈಡೇರಿಸಲೆಂದೇ ನಾನು ಅಲ್ಲಿ ಇಲ್ಲಿ ಬಚ್ಚಿಟ್ಟುಕೊಂಡು ಬಂದಿದ್ದೇನೆ. ನಾನು ಯಾವುದಾದರೂ ಅಪರಾಧ ಎಸಗಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ, ಆದರೆ ಸತ್ಯ ನನ್ನೊಂದಿಗಿರುವುದರಿಂದ ಆ ಸತ್ಯವನ್ನು ಸುಪ್ರೀಂಕೋರ್ಟಿನ ಮುಂದೆ ಹೇಳಲು ಬಂದಿದ್ದೇನೆ.

ಜಡ್ಜ್ ಸಾಹೇಬರೇ, ಪೊಲೀಸರು ಯಾಕೆ ನಾನು ತಲೆ ತಪ್ಪಿಸಿಕೊಂಡಿರುವಳೆಂದು ಹೇಳಿದ್ದಾರೆ ಎಂದು ನನಗೆ ದಯವಿಟ್ಟು ತಿಳಿಸಿ. ಯಾಕೆ ನನ್ನನ್ನು ಕೊಲ್ಲಲು ನನ್ನ ಮೇಲೆ ಗುಂಡು ಹಾರಿಸಿದರು ಎಂದು ನನಗೆ ದಯವಿಟ್ಟು ಹೇಳಿ.

ಬಿ.ಕೆ. ಲಾಲಾ ಎಂಬಾತನಿಗೆ ನಾನು ನಕ್ಸಲ್ ಎಂದು ಹೇಳಿಕೊಂಡು ಫೋನ್ ಕರೆ ಮಾಡಬೇಕೆಂದು ಪೊಲೀಸ್‌ನವನೊಬ್ಬ ನನ್ನನ್ನು ಒತ್ತಾಯಿಸಿದ.



ನಾನು ಅದಕ್ಕೆ ಒಪ್ಪಲಿಲ್ಲ, ಅದಕ್ಕೇ ನಾನು ತಲೆ ಮರೆಸಿಕೊಂಡಿದ್ದೇನೆಂಬ ಸುದ್ದಿಯನ್ನು ಛತ್ತೀಸಗಡದ ತುಂಬಾ ಹಬ್ಬಿಸಿ, ನನ್ನ ಸ್ವಾಭಿಮಾನವನ್ನು, ಸಾಮಾಜಿಕ ಸ್ಥಾನಮಾನವನ್ನು ಹರಾಜು ಹಾಕಿದ್ದಾರೆ. ಪರಿಣಾಮವಾಗಿ ಛತ್ತೀಸಗಡದ ಜನ ನನ್ನನ್ನು ಈಗ ಅಪರಾಧಿಯಂತೆ ಪರಿಗಣಿಸುತ್ತಿದ್ದಾರೆ. ಆದ್ದರಿಂದ ಜಡ್ಜ್ ಸಾಹೇಬರೇ ನಾನು ದೆಹಲಿಯಲ್ಲೇ ಉಳಿದುಕೊಂಡು ಸತ್ಯ ಮತ್ತು ಸುಳ್ಳುಗಳ ನಡುವಿನ ಈ ಯುದ್ಧವನ್ನು ನಡೆಸಲು ಇಚ್ಛಿಸಿದ್ದೇನೆ. ಈ ಯುದ್ಧದಲ್ಲಿ ಗೆದ್ದ ನಂತರ ನಾನು ನಿರ್ದೋಷಿಯಾಗಿ ಛತ್ತೀಸಗಡಕ್ಕೆ ಹಿಂದಿರುಗಬೇಕೆಂದು ಆಶಿಸಿದ್ದೇನೆ.

ಜಡ್ಜ್ ಸಾಹೇಬರೇ, ದಯವಿಟ್ಟು ನನ್ನನ್ನು ಛತ್ತೀಸಗಡಕ್ಕೆ ವಾಪಸ್ ಕಳುಹಿಸಕೂಡದೆಂದು ಕೇಳಿಕೊಳ್ಳುತ್ತೇನೆ. ಯಾಕೆಂದರೆ ಆ ರಾಜ್ಯದ ಪೊಲೀಸರು ನನ್ನ ವಿರುದ್ಧ ಖೊಟ್ಟಿ ಕೇಸನ್ನು ಸೃಷ್ಟಿಸಿ ನನ್ನನ್ನು ಕೊಂದು ಹಾಕುತ್ತಾರೆ. ನಾನು ಈಗಾಗಲೇ ಪೊಲೀಸರ ಕೈಯಲ್ಲಿ ಸಾಕಷ್ಟು ಹಿಂಸೆ ಅನುಭವಿಸಿದ್ದೇನೆ. ಸಾಹೇಬರೇ, ನನಗೆ ಮೂವರು ಪುಟ್ಟ ಮಕ್ಕಳಿದ್ದಾರೆ. ಈಗ ಅವರನ್ನು ನೋಡಿಕೊಳ್ಳಲು ಯಾರೂ ಇಲ್ಲ. ಸುಳ್ಳು ಕೇಸಿನ ಮೇಲೆ ಕಳೆದ ವರ್ಷ ನನ್ನ ಗಂಡನನ್ನೂ ಜೈಲಿಗೆ ದೂಡಿದ್ದಾರೆ. ಆ ರಾಜ್ಯದ ನ್ಯಾಯಾಲಯಗಳು ಆತನ ವಿಚಾರಣೆಯನ್ನೇ ನಡೆಸುತ್ತಿಲ್ಲ. ಪೊಲೀಸರು ನನಗೆ ಹಿಂಸೆ ನೀಡುತ್ತಿದ್ದಾರೆ. ಅವರಿಗೆ ನಾನೆಷ್ಟು ಬಾರಿ ಸತ್ಯವನ್ನು ಹೇಳಿದ್ದರೂ ಅವರು ನನ್ನನ್ನು ನಂಬುತ್ತಿಲ್ಲ. ನಾನು ನಕ್ಸಲರನ್ನು ಬೆಂಬಲಿಸುತ್ತೇನೆಂದು ಪೊಲೀಸರು ವಾದಿಸುತ್ತಾರೆ. ನಾನು ನಕ್ಸಲರ ಬೆಂಬಲಿಗಳಾಗಿದ್ದರೆ ನನ್ನ ತಂದೆಯ ಮನೆಯನ್ನು ನಕ್ಸಲರ ದಾಳಿಯಿಂದ ನಾನು ರಕ್ಷಿಸುತ್ತಿರಲಿಲ್ಲವೇ? ಕಳೆದ ತಿಂಗಳು, 14-6-2011ರಂದು ನಕ್ಸಲರು ನನ್ನ ತಂದೆಯ ಮನೆಯನ್ನು ಲೂಟಿ ಮಾಡಿದರಲ್ಲದೆ ಆತನ ಕಾಲಿಗೆ ಗುಂಡೇಟನ್ನು ಕೊಟ್ಟರು. ಇದಾದ ನಂತರವೂ ಪೊಲೀಸರು ನಾನು ನಕ್ಸಲ್ ಬೆಂಬಲಿಗಳಲ್ಲ ಎಂಬುದನ್ನು ಒಪ್ಪುತ್ತಿಲ್ಲ. ದೆಹಲಿಗೆ ಬರುವ ಮುನ್ನ ನಾನು ಬಹಳಷ್ಟು ಜನರ ನೆರವು ಹೇಳಿದೆ. ಆದರೆ ಯಾರೂ ನನ್ನ ಸಹಾಯಕ್ಕೆ ಬರಲಿಲ್ಲ. ಜಡ್ಜ್ ಸಾಹೇಬರೇ, ದಯವಿಟ್ಟು ನನ್ನನ್ನು ವಾಪಸ್ ಕಳುಹಿಸಬೇಡಿ. ನನ್ನ ಅಹವಾಲನ್ನು ಸುಪ್ರೀಂಕೋರ್ಟ್ ಮುಂದೆ ಸಲ್ಲಿಸಲು ನೆರವು ಕೊಡಿ.

ಜಡ್ಜ್ ಸಾಹೇಬರೇ, ನನ್ನ ಒಂದೆರಡು ಬೇಡಿಕೆಗಳಿವೆ. ಅವುಗಳೆಂದರೆ:

1: ಅವದೇಶ್ ಗೌತಮ್ ಎಂಬಾತನ ಮೇಲೆ ನಡೆದ ದಾಳಿಯಲ್ಲಿ ಪೊಲೀಸರು ನಾನು ಆರೋಪಿ ಎಂದು ಸುಳ್ಳು ಕೇಸನ್ನು ದಾಖಲಿಸಿದ್ದಾರೆ. ಈ ಪ್ರಕರಣ ಕುರಿತಂತೆ ಸಿಬಿಐ ತನಿಖೆ ಆಗಬೇಕೆಂದು ಆದೇಶ ನೀಡಿ.

2: ಪೊಲೀಸರು ನನ್ನ ಪ್ರದೇಶದಲ್ಲಿರುವ ಜನರನ್ನು ಮತ್ತು ನನ್ನ ಸಹೋದರರು, ತಂದೆ-ತಾಯಿ, ನನ್ನ ಮಕ್ಕಳಿಗೆ ಕಿರುಕುಳ ನೀಡಬಾರದೆಂದು ಆದೇಶ ನೀಡಿ.

ಅರ್ಜಿದಾರರು
(ಸಹಿ)
ಸೋನಿ ಸೋರಿ
ಅಕ್ಟೋಬರ್ 11, 2011

ಯಾರೂ ಗಮನಿಸದ ಒಂದು ಸೂಕ್ಷ್ಮವೆಂದರೆ ಜೈಲಿಂದ ಹೊರಬಂದ ಮೇಲೆ ಯಡ್ಡಿ ಮತ್ತು ಕುಮಾರಸ್ವಾಮಿ ಮಧ್ಯೆ ಅದೆಂಥದೋ ರಾಜಿಯೊಂದು ಸದ್ದಿಲ್ಲದೇ ಸಂಭವಿಸಿರುವುದು. ಕುಮಾರಸ್ವಾಮಿಯಾಗಲಿ, ದೇವೇಗೌಡರಾಗಲಿ ಹಿಂದಿನಂತೆ ಈಗ ಯಡ್ಡಿ ವಿರುದ್ಧ ಕಿಡಿಕಾರುತ್ತಿಲ್ಲ. ಏಕೆಂದರೆ ಈಗ ಯಡ್ಡಿ ಮುಖ್ಯಮಂತ್ರಿಯಲ್ಲವಲ್ಲ ಎಂದು ಎಂಥವರಿಗೂ ಅನ್ನಿಸಬಹುದು. ಹಾಗಂತ ಸದಾನಂದಗೌಡರ ಡೆಮ್ಮಿ ಸಿಎಂಗಿರಿಯನ್ನಾದರೂ ಕುಟುಕಬೇಕಿತ್ತಲ್ಲವೆ? ದೇವೇಗೌಡರಿಗಾಗಲಿ, ಕುಮಾರಸ್ವಾಮಿಗಾಗಲಿ ಈಗ ಯಡ್ಡಿಯ ತಲೆದಂಡ ಮುಖ್ಯವಲ್ಲ. ಅವರಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸಮಾನಶತ್ರುಗಳು. ಇಂಥಾದ್ದರಲ್ಲಿ ಯಡ್ಡಿಯನ್ನು ಬಿಜೆಪಿಯಿಂದ ಸಾಧ್ಯವಾದಷ್ಟು ಬೇರ್ಪಡಿಸಿದರೇನೇ ಅವರಿಗೆ ಲಾಭ.



ಯಡ್ಡಿಯ ಎನಿಮಿ ಸಿಎಂ! 'ಸದಾ' ತಲೆದಂಡಕ್ಕೆ ಸಿದ್ಧ

• ರಾ. ಸೋಮನಾಥ್


ಡಿಸೆಂಬರ್ 22 ರ ಒಳಗೆ ಮುಖ್ಯಮಂತ್ರಿ ಸದಾನಂದ ಗೌಡರ ಹಣೆಬರಹ ನಿರ್ಧಾರ ಶತಸ್ಸಿದ್ಧ!

ಕಾಯುವ ಸಹನೆ ಯಡ್ಡಿಗಿಲ್ಲ. ಇಂಥದೊಂದು ಸಂದಿಗ್ಧ ಮೀರಿತೆಂದರೆ ತನಗೆ ಮತ್ತಾವುದೇ ಅವಕಾಶವಿಲ್ಲ ಎಂಬುದನ್ನು ಯಡ್ಡಿಗಿಂತ ನಿಖರವಾಗಿ ಬಲ್ಲವರಿಲ್ಲ. ಅಷ್ಟರೊಳಗೆ ಎರಡರಲ್ಲೊಂದು ನಿಕ್ಕಿಯಾಗಬೇಕು. ಒಂದೋ ತಾನು ಮತ್ತೆ ಮುಖ್ಯಮಂತ್ರಿಯಾಗಬೇಕು ಅಥವಾ ಬಿಜೆಪಿಯ ಋಣ ಆವತ್ತಿಗೇ ಚುಕ್ತಾಗೊಳ್ಳಬೇಕು. ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದವನೇ ನಾನು. ನನಗಿಲ್ಲದ ಅಧಿಕಾರ ಪಕ್ಷಕ್ಕಾಗಲಿ, ಇನ್ನಾರಿಗಾಗಲಿ ಇದ್ದರೆಷ್ಟು ಬಿಟ್ಟರೆಷ್ಟು?



ಇದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಸದ್ಯದ ಬಿಗಿಪಟ್ಟು. ಎಲ್ಲವನ್ನೂ ಲೆಕ್ಕ ಹಾಕಿಯೇ ಸೋಮವಾರ ದೆಹಲಿ ವಿಮಾನ ಹತ್ತಿದ ಯಡ್ಡಿ ನಿರ್ಧಾರಕ ತಂತ್ರವ್ಯೋ ಎಂಬಂತೆ ಕೊಟ್ಟ ಸ್ಯಾಂಪಲ್ಲಿಗೆ 'ಅಸ್ತ್ರ'ವಾಗಿದ್ದು ಅವರ ಬದ್ಧವೈರಿ(!) ಎಚ್.ಡಿ. ಕುಮಾರಸ್ವಾಮಿ!

'ಯಡಿಯೂರಪ್ಪ ಮತ್ತು ನಾನು ಒಂದೇ ವಿಮಾನದಲ್ಲಿ ದೆಹಲಿಗೆ ಹೋಗಿದ್ದು ಕೇವಲ ಕಾಕತಾಳೀಯವೇ ಹೊರತು ಅದರಲ್ಲಿ ಯಾವುದೇ ವಿಶೇಷವಿಲ್ಲ. ಅದಕ್ಕೆ ಯಾವ ಅರ್ಥವನ್ನೂ ಕಲ್ಪಿಸಬೇಕಾಗಿಲ್ಲ' ಎಂದು ಕುಮಾರಣ್ಣ ವಿಶೇಷ ಪತ್ರಿಕಾಗೋಷ್ಠಿ ಕರೆದು ಹೇಳಿದ ಮರುಗಳಿಗೆಯಲ್ಲೇ ದೆಹಲಿಯಲ್ಲಿ ಯಡ್ಡಿಯ ರಣಕಹಳೆ ಕೇಳಿಬರುತ್ತಿದೆಯೆಂದರೆ ಹಕೀಕತ್ತೇ ಬೇರೆಯಿದೆ. ಅದು ಯಡ್ಡಿಯ ಅಂತಿಮ ತೀರ್ಮಾನ ಮತ್ತು ಕುಮಾರಣ್ಣ ಜೊತೆ ಕುದುರಿದ ಹಳೇ ಗೆಳೆತನ. ಕುಮಾರಸ್ವಾಮಿ-ಯಡ್ಡಿ ಒಟ್ಟೊಟ್ಟಿಗೆ ಪ್ರಯಾಣಿಸಿದ್ದಕ್ಕೂ, ಅತ್ತ ದೆಹಲಿಯಲ್ಲಿ ಬಿಜೆಪಿ ವರಿಷ್ಠರಿಗೆಲ್ಲ ಯಡ್ಡಿ 'ವಾರ್ನ್' ಮಾಡಿದ ವೈಖರಿಗೂ, ಡಿಸೆಂಬರ್ 22 ರ ವಿಧಾನಪರಿಷತ್ ಚುನಾವಣೆಗೂ ಮತ್ತು ಸದಾನಂದ ಗೌಡರ ಸಿಎಂ ಗಾದಿಗೂ ಪರಸ್ಪರ ಸಂಬಂಧವಿದ್ದೇ ಇದೆ.



ರಹಸ್ಯ ರಾಜಿ

ಯಾರೂ ಗಮನಿಸದ ಒಂದು ಸೂಕ್ಷ್ಮವೆಂದರೆ ಜೈಲಿಂದ ಹೊರಬಂದ ಮೇಲೆ ಯಡ್ಡಿ ಮತ್ತು ಕುಮಾರಸ್ವಾಮಿ ಮಧ್ಯೆ ಅದೆಂಥದೋ ರಾಜಿಯೊಂದು ಸದ್ದಿಲ್ಲದೇ ಸಂಭವಿಸಿರುವುದು. ಕುಮಾರಸ್ವಾಮಿಯಾಗಲಿ, ದೇವೇಗೌಡರಾಗಲಿ ಹಿಂದಿನಂತೆ ಈಗ ಯಡ್ಡಿ ವಿರುದ್ಧ ಕಿಡಿಕಾರುತ್ತಿಲ್ಲ. ಏಕೆಂದರೆ ಈಗ ಯಡ್ಡಿ ಮುಖ್ಯಮಂತ್ರಿಯಲ್ಲವಲ್ಲ ಎಂದು ಎಂಥವರಿಗೂ ಅನ್ನಿಸಬಹುದು. ಹಾಗಂತ ಸದಾನಂದಗೌಡರ ಡೆಮ್ಮಿ ಸಿಎಂಗಿರಿಯನ್ನಾದರೂ ಕುಟುಕಬೇಕಿತ್ತಲ್ಲವೆ? ದೇವೇಗೌಡರಿಗಾಗಲಿ, ಕುಮಾರಸ್ವಾಮಿಗಾಗಲಿ ಈಗ ಯಡ್ಡಿಯ ತಲೆದಂಡ ಮುಖ್ಯವಲ್ಲ. ಅವರಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸಮಾನಶತ್ರುಗಳು. ಇಂಥಾದ್ದರಲ್ಲಿ ಯಡ್ಡಿಯನ್ನು ಬಿಜೆಪಿಯಿಂದ ಸಾಧ್ಯವಾದಷ್ಟು ಬೇರ್ಪಡಿಸಿದರೇನೇ ಅವರಿಗೆ ಲಾಭ. ಯಡ್ಡಿ ಬಿಜೆಪಿಯಿಂದ ದೂರಾದಷ್ಟೂ ತಮಗೆ ಹತ್ತಿರವಾಗಲೇಬೇಕೆಂಬುದು ಮಣ್ಣಿನ ಮಕ್ಕಳ ಲೆಕ್ಕಾಚಾರ.

ಏಕೆಂದರೆ ತನೆ ಹೊತ್ತ ಮಹಿಳೆಯನ್ನು ಅಧಿಕಾರವಿಲ್ಲದೆ ಸಾಕುವ ಶಕ್ತಿ ಕುಮಾರಸ್ವಾಮಿಗಿಲ್ಲ. ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷವನ್ನು ಸಂಘಟಿಸುವ ಹುಮ್ಮಸ್ಸಾಗಲಿ, ಸರ್ಕಾರದ ವಿರುದ್ಧ ದೊಡ್ಡಮಟ್ಟದ ಹೋರಾಟ ಕಟ್ಟುವ ನೈತಿಕತೆಯಾಗಲಿ ಕುಮಾರಣ್ಣನಿಗಿಲ್ಲ ಎಂಬುದು ಸ್ವತಃ ದೇವೇಗೌಡರಿಗೇ ಮನದಟ್ಟಾಗಿದೆ. ಬಳ್ಳಾರಿಯಲ್ಲಿ ಶ್ರೀರಾಮುಲು ಪರವಹಿಸಿದ್ದು, ಪರಿಷತ್ ಚುನಾವಣೆಯಲ್ಲಿ ತನ್ನದೇ ಅಭ್ಯರ್ಥಿಯನ್ನು ಹಾಕಲಾಗದೇ ಹೋಗಿದ್ದು ಮತ್ತು ಗಾಬರಿ ಬಿದ್ದು ತಮ್ಮೆಲ್ಲಾ ಶಾಸಕರನ್ನು ಬಿಡದಿ ರೆಸಾರ್ಟ್‌ನಲ್ಲಿ ಕಲೆಹಾಕಿದ್ದು ಕುಮಾರಸ್ವಾಮಿಯ ಅತಂತ್ರ ಮನಸ್ಥಿತಿಯ ದ್ಯೋತಕವಷ್ಟೆ. ಕಾಂಗ್ರೆಸ್ ಜೊತೆ ಸಂಬಂಧ ಕುದುರಿಲ್ಲ. ಬಿಜೆಪಿಯ ಪ್ರಾಬಲ್ಯದ ಎದುರು ಕೈಕಟ್ಟಿ ಕೂರುವಂತಿಲ್ಲ. ಉಳಿದ ಒಂದೇ ದಾರಿಯೆಂದರೆ ಯಡ್ಡಿಯನ್ನು ಎತ್ತಿಕಟ್ಟುವುದು.

ಸದ್ಯ ಸುಲಭ ಸಾಧ್ಯವಾದದ್ದು ಇದೊಂದೇ ದಾರಿ. ಇತ್ತ ಬಿಜೆಪಿಯಲ್ಲಿ ಇದಕ್ಕೆ ಪೂರಕವಾದ ಘಟನಾವಳಿಗಳೇ ಒಂದರ ಮೇಲೊಂದಾಗಿ ಸಂಭವಿಸಿದ್ದು ಮಾತ್ರ ಮಣ್ಣಿನ ಮಕ್ಕಳ ಅದೃಷ್ಟವೇ ಸರಿ. ಜೈಲಿಂದ ಜಾಮೀನು ಗಿಟ್ಟಿಸಿ ಹೊರಬಿದ್ದ ಯಡ್ಡಿ ಈಗ ಕ್ಷುದ್ರ ಜಂಗಮ. ಬಿಜೆಪಿಯನ್ನು ಅಧಿಕಾರಕ್ಕೆ ತಂದವನು ನಾನು. ನನ್ನನ್ನು ಮುಖ್ಯಮಂತ್ರಿ ಮಾಡಲೆಂದೇ ತಾನೆ ಲಿಂಗಾಯತರೆಲ್ಲ ಬಿಜೆಪಿಯನ್ನು ಅಧಿಕಾರಕ್ಕೆ ತಂದದ್ದು? ಭ್ರಷ್ಟಾಚಾರದ ಆರೋಪ ಒಂದನ್ನೇ ಕಾರಣ ಮಾಡಿ ನನ್ನನ್ನು ತುಳಿಯೋದಾದ್ರೆ ಪಕ್ಷದ ವರ್ಚಸ್ಸನ್ನು ಉಳಿಸೋದಕ್ಕೆ ನಾನ್ಯಾಕೆ ಬಲಿಯಾಗಬೇಕು? ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅಧಿಕಾರದಲ್ಲಿದ್ದುಕೊಂಡೇ ಕೋರ್ಟಿನ ಕಟಕಟೆಯಲ್ಲಿ ನಿಲ್ಲುತ್ತಿಲ್ಲವೆ? ನನ್ನ ಹಾಗೆ ಕಾಂಗ್ರೆಸ್‌ನ ಎಸ್.ಎಂ. ಕೃಷ್ಣರ ಮೇಲೂ ಅಕ್ರಮ ಗಣಿಗಾರಿಕೆ ಕೇಸಿದೆ. ಅವರಿನ್ನೂ ಕೇಂದ್ರ ಮಂತ್ರಿಯಾಗೇ ಮುಂದುವರಿಯುತ್ತಿಲ್ಲವೆ? ಮತ್ತೊಬ್ಬ ಕೇಂದ್ರ ಸಚಿವ

ಚುಂಚನಗಿರಿ ಸ್ವಾಮಿಗೆ ಸದಾಗೌಡರೇ ಬೇಕಂತೆ!

ದೇವೇಗೌಡರ ಜಾತಿಪ್ರೇಮದ ಸೂಚಕವಾಗೇ ಮುಖ್ಯಮಂತ್ರಿ ವಿರುದ್ಧ ಜೆಡಿಎಸ್ ಅಭ್ಯರ್ಥಿಯನ್ನು ಹಾಕಿಲ್ಲವೆಂದು ಯಾರಾದರೂ ಲೆಕ್ಕ ಹಾಕಿದರೆ ಅದು ಮೂರ್ಖತನವಷ್ಟೆ-

ಯಡ್ಡಿಗೆ ಹೇಗೆ ಮತ್ತೊಬ್ಬ ಲಿಂಗಾಯತ ಲೀಡರ್ ತಲೆ ಎತ್ತುವುದು ಬೇಕಿಲ್ಲವೋ ಹಾಗೆ ಕುಮಾರಸ್ವಾಮಿ-ದೇವೇಗೌಡರಿಗೂ ಸದಾನಂದಗೌಡ ಗಟ್ಟಿಗೊಳ್ಳುವುದು ಇಷ್ಟವಿಲ್ಲ. ಈ ಹಿಂದೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿ ಗೌಡರ ಓಟ್‌ಬ್ಯಾಂಕ್ ಬೊಕ್ಕಸಕ್ಕೆ ಸಾಕಷ್ಟು ಹಾನಿಯಾದಂತೆ ಈಗ ಸದಾನಂದ ಗೌಡರೂ ಅಷ್ಟೇ ಕಂಟಕರಾಗಬಹುದೆಂಬ ಆತಂಕ ದಿನೇದಿನೇ ಗಟ್ಟಿಗೊಳ್ಳುತ್ತಿದೆ. ಮೈಸೂರು ಪ್ರಾಂತದ ಒಕ್ಕಲಿಗರು ಬಿಜೆಪಿಯತ್ತ ಆಕರ್ಷಿತರಾಗಬಾರದೆಂದರೆ, ತಮ್ಮ ಸಾಂಪ್ರದಾಯಿಕ ಮತನಿಧಿಗೆ ಹಾನಿಯಾಗಬಾರದೆಂದರೆ ಸದಾನಂದ ಗೌಡ ತೊಲಗಿದರೇನೇ ದೇವೇಗೌಡರಿಗೆ ಲಾಭ.

ಯಡ್ಡಿಯ ಜೊತೆ ಕೈಜೋಡಿಸಿಯಾದರೂ ಸೈ ಮುಖ್ಯಮಂತ್ರಿಗಿರಿಯಿಂದ ಸದಾ ಗೌಡರನ್ನು ಇಳಿಸುವುದು ಜೆಡಿಎಸ್ ಹುನ್ನಾರ. ಅತ್ತ ಬಿಡದಿ ರೆಸಾರ್ಟಿನಲ್ಲಿ ಶಾಸಕರನ್ನು ಗುಡ್ಡೆ ಹಾಕಿಕೊಂಡು ಜನವರಿ ಹೊತ್ತಿಗೆ ಬುಡಮೇಲು ಕಾರ್ಯಾಚರಣೆ ಶತಸ್ಸಿದ್ಧ, ಚುನಾವಣೆಗೆ ನಾವೂ ರೆಡಿ ಎಂದೆಲ್ಲ ಗುಡುಗಿದ ಕುಮಾರಣ್ಣನ ಘರ್ಜನೆಯೇ ಪರಿಷತ್ ಚುನಾವಣೆಯಲ್ಲಿ ಸದಾನಂದಗೌಡ ಸೋಲುವುದು ನಿಶ್ಚಿತವೆಂಬ ಅಪಶಕುನವಾಗಿತ್ತು, ಬೇರೆಲ್ಲರಿಗಿಂತಲೂ ಮೊದಲು ಇದರ ವಾಸನೆ ಹಿಡಿದವರು ಆದಿಚುಂಚನಗಿರಿ ಬಾಲಗಂಗಾಧರನಾಥರು.

ಸದಾನಂದಗೌಡ ಏನೇ ಅಂದರೂ ಒಕ್ಕಲಿಗ. ಅದೂ ಬಿಜೆಪಿಯಂಥ ಬ್ರಾಹ್ಮಣರ ಪಕ್ಷದಲ್ಲಿ ಓರ್ವ ಒಕ್ಕಲಿಗ ಮುಖ್ಯಮಂತ್ರಿ ಆಗ್ತಾನೆ. ಅಂದರೆ ಅದು ಆದಿಚುಂಚನಗಿರಿ ಕಾಲಭೈರವನ ಲೀಲೆಯಲ್ಲದೇ ಮತ್ತೇನಲ್ಲ. ಇದಕ್ಕೆ ಒಕ್ಕಲಿಗರಾಗಿ ನಾವೇ ಕೊಳ್ಳಿಯಿಟ್ಟರೆ ಹೇಗೆ? ದಯವಿಟ್ಟು ಸದಾನಂದ ಗೌಡರನ್ನು ಇಳಿಸಲು ಹೋಗಬೇಡಿ. ಅವರನ್ನು ಬೆಂಬಲಿಸಬೇಕೇ ಹೊರತು ಇಳಿಸುವುದು ಬೇಡ.... ಎಂದೆಲ್ಲ ಬಾಲಗಂಗಾಧರನಾಥರು ಕುಮಾರಣ್ಣನಿಗೆ ಫೋನ್ ಮಾಡಿ ಗೋಗರೆದರಂತೆ. ಸ್ವತಃ ಶೇಖರ್ ಸ್ವಾಮಿಯೇ ಕುಮಾರಣ್ಣನನ್ನು ಕಂಡು ಗುರು ಸಂದೇಶವನ್ನೂ ಮುಂದಿಟ್ಟರಂತೆ.

ಆದರೆ ಕುಮಾರಸ್ವಾಮಿಯ ಅಧಿಕಾರ ದಾಹದ ಮುಂದೆ ಸ್ವಾಮಿಯ ಕಳಕಳಿ ಯಾವ ಮಹಾ, ಅಲ್ರೀ.... ಸದಾನಂದ ಗೌಡನ ಬಗ್ಗೆ ಇರೋ ಕಾಳಜಿ ಸ್ವಾಮಿಗೆ ನಮ್ಮ ಬಗ್ಗೆ ಯಾಕ್ರೀ ಇಲ್ಲಾ? ಹೆಸರಿನ ಮುಂದೆ ಗೌಡ ಅಂತ ಇದ್ದು ಬಿಟ್ರೆ ಎಲ್ಲರೂ ಒಕ್ಕಲಿಗರಾಗಿ ಬಿಡ್ತಾರಾ? ಸ್ವಾಮಿ ಕೈಯಿಂದ ನನ್ನನ್ನ ಮುಖ್ಯಮಂತ್ರಿ ಮಾಡೋಕ್ಕೆ ಆಗುತ್ತೇನ್ರೀ... ಎಂದು ಝಾಡಿಸಿದರಂತೆ ಕುಮಾರಣ್ಣ.



ಉರುಳಿಸಲು ಬೇಕಿರುವುದು 22 ಮಾತ್ರ


ಅತ್ತ ದೆಹಲಿಯಲ್ಲಿ ಯಡ್ಡಿಯ ಬುಡಮೇಲು ಕಾರ್ಯಾಚರಣೆ ಶುರುವಾಗಿದ್ದೇ ತಡ ಅದರ ಬಿಸಿ ಮೊದಲು ತಟ್ಟಿದ್ದೇ ಈಶ್ವರಪ್ಪನಿಗೆ. ಬಳ್ಳಾರಿ ಉಪಚುನಾವಣೆಯಲ್ಲಿ ಶ್ರೀರಾಮುಲು ಪರವಹಿಸಿದರೆಂದು ಯಾವ ವೀರಾವೇಶದಿಂದ ನಾಲ್ವರು ಗಣಿಕಳ್ಳ ಬಿಜೆಪಿ ಶಾಸಕರನ್ನು ಈಶ್ವರಪ್ಪ ಸಸ್ಪೆಂಡ್ ಮಾಡಿದ್ದರೋ ಅಷ್ಟೇ ಹೀನಾಯವಾಗಿ ಈಗ ಅಮಾನತ್ತನ್ನು ಹಿಂಪಡೆಯಬೇಕಾಯ್ತು.

ಅದು ಪರೋಕ್ಷವಾಗಿ ಯಡ್ಡಿ ವಿರುದ್ಧ ಅನಂತ್ ಪಟಾಲಂ ಶುರುವಿಟ್ಟ ದುರಸ್ತಿ ಕ್ರಮವೇ ಹೊರತು ಮತ್ತೇನಲ್ಲ. ಹಾಗೊಮ್ಮೆ ಸದಾನಂದ ಗೌಡರನ್ನು ಸೋಲಿಸಲು ಯಡ್ಡಿಯೇ ಮುಂದಾದರೆಂದರೆ ಯಾವುದಕ್ಕೂ ಇರಲಿ ಎಂಬ ವ್ಯರ್ಥ ಕಸರತ್ತಷ್ಟೇ ಹೊರತು ಗಣಿ ಶಾಸಕರನ್ನು ಯಾರೂ ನಂಬುವಂತಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಸೋಮಶೇಖರ ರೆಡ್ಡಿ, ಕೂಡ್ಲಿಗಿ ನಾಗೇಂದ್ರ, ಕಂಪ್ಲಿಯ ಸುರೇಶ್ ಬಾಬು ಮತ್ತು ಎಮ್ಮೆಲ್ಸಿ ಮೃತ್ಯುಂಜಯ ಜಿನಗಾರ ಅಮಾನತು ವಾಪಸ್ಸಾದ ಮಾತ್ರಕ್ಕೆ ಅವರೆಲ್ಲ ಬಿಜೆಪಿ ನಿಷ್ಠರೆಂದೂ, ಶ್ರೀರಾಮುಲು ಜೊತೆಗಿಲ್ಲವೆಂದೂ ನಂಬುವಷ್ಟು ಈಶ್ವರಪ್ಪ ಮೂರ್ಖರಲ್ಲ.

ಆದರೆ ಇದ್ಯಾವುದೂ ಯಡ್ಡಿಯ ಉದ್ದೇಶಕ್ಕೆ ಧಕ್ಕೆ ಮಾಡುವುದಿಲ್ಲ. ಸರ್ಕಾರ ಉರುಳಿಸಲು ಯಡ್ಡಿಗೆ ಬೇಕಿರುವುದು ಕೇವಲ 22 ಶಾಸಕರು ಮಾತ್ರ. ಗಣಿಕಳ್ಳ ಶಾಸಕರ ನಿಷ್ಠೆ ಯಾವತ್ತಿದ್ದರೂ ಯಡ್ಡಿ ವಿರುದ್ಧವೇ. ಈಶ್ವರಪ್ಪ, ಅನಂತ್, ಶೆಟ್ಟರ್, ಅಶೋಕ್ ಆದಿಯಾಗಿ ಯಾರೇನೇ ಬೊಬ್ಬೆಯಿಟ್ಟರೂ ಯಡ್ಡಿ ಬಣದ ಶಾಸಕರ ಸಂಖ್ಯೆ ಮೂವತ್ತಕ್ಕಿಂತ ಕುಸಿಯುವುದು ಸಾಧ್ಯವೇ ಇಲ್ಲ. ಸದಾನಂದ ಗೌಡರ ಕಾರಣಕ್ಕೆ ಕರಾವಳಿಯ ಶಾಸಕರೆಲ್ಲರೂ ಯಡ್ಡಿಯ ಕೈಬಿಟ್ಟರೂ ಕನಿಷ್ಠ ಮೂವತ್ತು ಮಂದಿ ಶಾಸಕರು ಯಡ್ಡಿಯ ಕೈಬಿಡುವುದಿಲ್ಲ. ಈ ಪೈಕಿ ಅನರ್ಹಗೊಂಡಿದ್ದವರು, ಪುಂಡ ಶಾಸಕರು, ಸಂಪಂಗಿ, ಬೇಳೂರು ಎಂದೆಲ್ಲ ಯಾರೆತ್ತ ಹಾರಿದರೂ ಕೊನೆಗೆ 20 ಅಥವಾ 22 ಶಾಸಕರು ಯಡ್ಡಿಯ ಜೊತೆಗಿದ್ದೇ ಇರುತ್ತಾರೆ.

ಈ ಇಪ್ಪತ್ತು ಮಂದಿ ಶಾಸಕರನ್ನಿಟ್ಟುಕೊಂಡೇ ಯಡ್ಡಿ ಆಟಕ್ಕಿಳಿದಿದ್ದಾರೆ. ಡಿಸೆಂಬರ್ 22 ರ ಪರಿಷತ್ ಚುನಾವಣೆಯಲ್ಲಿ ಯಡ್ಡಿ ಬೆಂಬಲಿಸಿ 20 ಮಂದಿ 'ವಿಪ್' ಉಲ್ಲಂಘಿಸಿದರೂ ಸಾಕು. ಬಿಜೆಪಿ ಸರ್ಕಾರದ ಕತೆ ಮುಗಿದಂತೆಯೇ.







ಚಿದಂಬರಂ ವಿರುದ್ಧ ತರಂಗಾಂತರ ಹಗರಣದ ಆರೋಪವಿದ್ದಾಗ್ಯೂ ಅವರು ಅಧಿಕಾರದಲ್ಲಿಲ್ಲವೆ? ಅವರ್‍ಯಾರಿಗೂ ಇಲ್ಲದ ಶಿಕ್ಷೆ ನನಗ್ಯಾಕೆ? ಮೂವತ್ತು ವರ್ಷಗಳ ಕಾಲ ಪಕ್ಷಕ್ಕಾಗಿ ಹೆಣಗಾಡಿದ್ದಕ್ಕೆ, ರಾಜ್ಯ ಸುತ್ತಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಕ್ಕೆ ಇದೇನಾ ಪ್ರತಿಫಲ? ಪಕ್ಷದ ವರ್ಚಸ್ಸಿಗಾಗಿ ನಾನು ಬಲಿಯಾಗಬೇಕು ಅಂಥ ಹೈಕಮಾಂಡ್ ನಿರ್ಧರಿಸುವುದೇ ಆದರೆ ನನ್ನ ಹಿತಾಸಕ್ತಿಗಾಗಿ ನಾನೇಕೆ ಪಕ್ಷದ ಮುಲಾಜು ನೋಡಬೇಕು.....! ಇದು ಯಡ್ಡಿಯ ತರ್ಕ.

ಬಿದ್ದ ಬಿರುಕು......!

ಇದು ಯಡ್ಡಿಯ ಸ್ಪಷ್ಟ ತೀರ್ಮಾನ. ಬಹುಶಃ ಸದಾನಂದ ಗೌಡ ತನ್ನ ಗೆರೆಯನ್ನು ಮೀರದೇ ಹೋಗಿದ್ದರೆ ಇಂಥದೊಂದು ನಿರ್ಧಾರಕ್ಕೆ ಯಡ್ಡಿ ಬರುತ್ತಲೇ ಇರಲಿಲ್ಲ. ಜೈಲಲ್ಲಿ ಇದ್ದಷ್ಟೂ ದಿನ ಯಡ್ಡಿ ನಡೆಸಿದ್ದು ಇಂಥದ್ದೇ ಪೂರ್ವಸಿದ್ಧತೆಯನ್ನು. ಶಂಕರ್ ಬಿದರಿಯನ್ನು ಪೊಲೀಸ್ ಮುಖ್ಯಸ್ಥರನ್ನಾಗಿ ಮಾಡುವಲ್ಲಿ ಸದಾನಂದ ಗೌಡ ಇನ್ನಷ್ಟೇ ಆಸಕ್ತಿ ವಹಿಸದೇ ಹೋಗಿದ್ದು, ಬನ್ನೂರಮಠರನ್ನು ಲೋಕಾಯುಕ್ತರನ್ನಾಗಿ ನೇಮಿಸುವಲ್ಲಿಯೂ ಸದಾನಂದ ಗೌಡರ ಬಾಯಿ ಮುಚ್ಚಿ ಕೂತಿದ್ದು, ಶೋಭಾ ಕರಂದ್ಲಾಜೆಯನ್ನು ಒಳಗೊಳಗೇ ಹಣಿಯಲು ಮುಖ್ಯಮಂತ್ರಿ ನಡೆಸುತ್ತಿರುವ ಹುನ್ನಾರ, ಇತ್ಯಾದಿ ಪ್ರತಿಯೊಂದನ್ನೂ ಸೂಕ್ಷ್ಮವಾಗೇ ಗಮನಿಸಿದ ಯಡಿಯೂರಪ್ಪ ಮೊದಲ ಬಾರಿಗೆ ವಿಚಲಿತರಾಗಿದ್ದು ವಿಧಾನಮಂಡಲದ ಅಧಿವೇಶನದ ಮೊದಲ ದಿನವೇ. ಇನ್ನಾರು ತಿಂಗಳಲ್ಲಿ ತಾನೇ ಮುಖ್ಯಮಂತ್ರಿಯಾಗ್ತೀನಿ ಎಂಬ ಯಡ್ಡಿಯ ಮಾತನ್ನು ವಿರೋಧಿ ನಾಯಕರು ಸದನದಲ್ಲಿ ಎತ್ತಿದ್ದೇ ತಡ ಸದಾನಂದ ಗೌಡರು ಹಿಂದೆಮುಂದೆನ್ನದೆ 'ಅಂಥಾದ್ದೇನೂ ಇಲ್ಲ' ಇನ್ನೂ ಒಂದೂವರೆ ವರ್ಷದ ತನಕ ನಾನೇ ಮುಖ್ಯಮಂತ್ರಿ.....!' ಎಂದುಬಿಟ್ಟರು.

ಮತ್ತೆ ವಕ್ಕರಿಸಿದ ವೃದ್ಧ

ಹಿಂದೆ ಸೂತ್ರಧಾರಿಯಂತೆ ಮುಗುಮ್ಮಾಗಿ ಕೂತಿದ್ದ ಯಡ್ಡಿಗೆ ಈ ಮಾತು ಕೇಳಿದ್ದೇ ಹೊಟ್ಟೆಯಲ್ಲಿ ಖಾರ ಕಿವುಚಿದಂತಾಗಿದೆ. ಬಹುಶಃ ಆವತ್ತೇ ನಿರ್ಧರಿಸಿರಬೇಕು. ಇದಕ್ಕೆ ತಕ್ಕಂತೆ ಡಿಸೆಂಬರ್ 22 ಕ್ಕೆ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ಚುನಾವಣೆ ನಿಗದಿಗೊಂಡಿದ್ದು ಯಡ್ಡಿಯ ಹತಾಶೆಯನ್ನು ಮತ್ತಷ್ಟು ಉಲ್ಬಣಿಸಿದೆ. ಇಂಥದೊಂದು ಬೆಂಕಿಗೆ ತುಪ್ಪ ಸುರಿದದ್ದು ಬಿಜೆಪಿಯ 'ರಾಷ್ಟ್ರ ನಾಯಕ' ಅನಂತ್‌ಕುಮಾರ್. ಅನಂತ್ ಬೇನಾಮಿ ಪಾಲುದಾರಿಕೆಯ ಒಂದು ದಿನಪತ್ರಿಕೆ ಮತ್ತು ಅದರದೇ ಸಹೋದರ ಟೀವಿ ಚಾನಲ್ಲೊಂದು ಈ ಮಧ್ಯೆ ವಿಚಿತ್ರ ವದಂತಿಯೊಂದನ್ನು ಬಿತ್ತರಿಸಿತು. ಅದು ಮುಖ್ಯಮಂತ್ರಿ ಸದಾನಂದ ಗೌಡರನ್ನು ಪರಿಷತ್ ಎಲೆಕ್ಷನ್ನಿಗೆ ನಿಲ್ಲಿಸೋದೇ ಇಲ್ಲ, ಪಕ್ಷ ಬೇರೊಬ್ಬ ಅಭ್ಯರ್ಥಿಯನ್ನು ಹುಡುಕುತ್ತಿದೆಯೆಂದು ಅಬಕಾರಿ ಸಚಿವ ರೇಣುಕಾಚಾರ್ಯ ಮಾಹಿತಿ ನೀಡಿದ್ದಾರೆಂಬ ಸುದ್ದಿ!



ಅನಂತ್‌ಕುಮಾರ್ ಅನ್ನದ ಋಣಕ್ಕೆ ಬಿದ್ದ ಪತ್ರಿಕಾ ಕರ್ಮಿಯೊಬ್ಬ ಇಂಥದೊಂದು ಪುಕಾರೆಬ್ಬಿಸಿದ್ದು ಮತ್ತು ಇದು ಅನಂತ್‌ಕುಮಾರ್ ಉದ್ದೇಶಕ್ಕೆ ತಕ್ಕಂತೆ 'ನಾಟಕ'ಯಾಗಿದ್ದರ ಹುನ್ನಾರ ಅರಿಯದೇ ಈಶ್ವರಪ್ಪ ಪಟಪಟಬಾಯಿ ಬಾರಿಸಿಯೇ ಬಿಟ್ಟ. 'ಹುಡುಕರ ಮಾತನ್ನು ಯಾತ್ರೀ ನಂಬ್ತೀರಿ? ಸದಾನಂದ ಗೌಡರನ್ನು ನಾಪತ್ತಿಗೆ ನಿಲ್ಲಿಸಲ್ಲ ಅನ್ನೋಕೆ ಅವರೆಲ್ಲ ಯಾರ್ರೀ.....?'

ಅನಂತ್ ಷಡ್ಯಂತ್ರ

ಇದನ್ನೂ ಯಥಾವತ್ತಾಗೇ ಅದೇ ಚಾನಲ್ ಮತ್ತು ಅದೇ ದಿನಪತ್ರಿಕೆ ಸುದ್ದಿ ಮಾಡಿದ್ದವು.


ಮೇಲುನೋಟಕ್ಕಿದು ಯಡ್ಡಿ ನಿಷ್ಠ ರೇಣುಕಾಚಾರ್ಯ ಸದಾನಂದ ಗೌಡ ಮತ್ತೆ ಮುಖ್ಯಮಂತ್ರಿಯಾಗದ ಹಾಗೆ ನಡೆಸುತ್ತಿರುವ ಪಿತೂರಿಯೆಂದೂ, ಅದರ ವಿರುದ್ಧ ಈಶ್ವರಪ್ಪ ಕಿಡಿಕಾರಿದಂತೆ ಎಂದೂ ಧ್ವನಿಸುತ್ತಿತ್ತು. ಆದರೆ ಆಳದಲ್ಲಿದ್ದದ್ದು ಅನಂತ್ ಷಡ್ಯಂತ್ರ. ಸದಾನಂದ ಗೌಡರನ್ನು ಇಳಿಸಿ ತಾನೇ ಮತ್ತೆ ಮುಖ್ಯಮಂತ್ರಿಯಾಗಲು ಯಡಿಯೂರಪ್ಪ ಪಿತೂರಿ ನಡೆಸುತ್ತಿದ್ದಾರೆಂದು ಪುಕಾರೇಳಬೇಕು, ಸಿಎಂ ಸದಾನಂದರಿಗೂ ತನ್ನ ಗುರು ಯಡ್ಡಿ ಮೇಲೆ ಅಪನಂಬಿಕೆ ಹುಟ್ಟಬೇಕು, ಜೊತೆಗೆ ಸದಾನಂದ ಗೌಡರ ಪರ ಈಶ್ವರಪ್ಪ ಅರ್ಥಾತ್ ಇಡೀ ಅನಂತ್ ಬಣ ನಿಂತಿರುವಂತೆ ಸಂದೇಶ ರವಾನೆಯಾಗಬೇಕು.

'ಇದಿಷ್ಟೇ ಅಲ್ಲ; ಹೈಕಮಾಂಡ್ ಮತ್ತು ಪಕ್ಷದ ಮಟ್ಟದಲ್ಲಿ ಯಡ್ಡಿ ವಿರುದ್ಧ ಇನ್ನಷ್ಟು ಅನುಮಾನ, ಅಸಹನೆ, ಅಸಹ್ಯ ಹುಟ್ಟಬೇಕು!

ಇದು ತನ್ನ ಬೇನಾಮಿ ಒಡೆತನದ ದಿನಪತ್ರಿಕೆ ಮತ್ತು ಚಾನಲ್ ಮೂಲಕ ಅನಂತ್‌ಕುಮಾರ್ ನಡೆಸಿದ ಷಡ್ಯಂತ್ರ. ರೇಣುಕಾಚಾರ್ಯನ ಮಾತು ಕೇಳಿ ಯಾವುದಾದರೂ ಪತ್ರಿಕೆ-ಚಾನಲ್‌ಗಳು ಸುದ್ದಿ ಮಾಡುವುದು ಎಲ್ಲಾದರೂ ಉಂಟಾ? ಬೇರಾವ ಪತ್ರಿಕೆ-ಚಾನಲ್‌ಗಳೂ ಪ್ರಕಟಿಸದ ಈ ಸುದ್ದಿಯನ್ನು ಈ ನಿರ್ದಿಷ್ಟ ಚಾನಲ್ ಮತ್ತು ಪತ್ರಿಕೆ ಮಾತ್ರವೇ ಏಕೆ ಬೊಬ್ಬಿಡುತ್ತಿವೆ.

ಇದನ್ನು ಕರಾರುವಾಕ್ಕಾಗೇ ಲೆಕ್ಕ ಹಾಕಿದ ಯಡ್ಡಿಗೆ ಇಡೀ ಅನಂತ್ ಗುಂಪು ತನ್ನ ವಿರುದ್ಧ ಸದಾನಂದ ಗೌಡರ ಬೆಂಬಲಕ್ಕೆ ನಿಲ್ಲುತ್ತದೆಯೆಂಬುದು ಗ್ಯಾರಂಟಿಯಾಗಿದೆ: ಮುಖ್ಯಮಂತ್ರಿ ಸದಾನಂದ ಗೌಡರಿಗೆ ತನಗಿಂತಲೂ ಆರೆಸ್ಸೆಸ್ ನಿಷ್ಠೆಯೇ ಮುಖ್ಯ. ಅದು ಕರಾವಳಿಯ ಮಣ್ಣಿನ ಗುಣ. ಸ್ವಾರ್ಥದ ಮುಂದೆ ಸ್ವಾಮಿನಿಷ್ಠೆ, ಋಣ ಯಾವುದೂ ಮುಖ್ಯವಾಗುವುದಿಲ್ಲ. ಮುಖ್ಯಮಂತ್ರಿಯಾದ ಮೇಲೆ ಸದಾನಂದ ಗೌಡರ ವರ್ತನೆಯೂ ಬದಲಾಗಿದೆ. ತನ್ನ ಕಡುವೈರಿ ಅಶೋಕ್ ಜೊತೆಗೆ ಸದಾನಂದ ಗೌಡ ಸದ್ದಿಲ್ಲದೆ ರಾಜಿಯಾಗಿದ್ದು, ಶೆಟ್ಟರ್, ಈಶ್ವರಪ್ಪರ ಜೊತೆ ನಯವಾಗಿ 'ನೆಂಟಸ್ತಿಕೆ' ಸಾಧಿಸಿದ್ದು ಎಲ್ಲವನ್ನೂ ಸೂಕ್ಷ್ಮವಾಗಿಯೇ ಗಮನಿಸಿದ ಯಡ್ಡಿಗೆ ಇವತ್ತಲ್ಲ ನಾಳೆ ಸದಾನಂದ ಗೌಡ ತನಗೆ ಕೈಕೊಡುವುದು ನಿಚ್ಚಳವಾಗಿದೆ.

ಇದೆಲ್ಲಕ್ಕೂ ಪೂರಕವಾಗಿ ಸದಾನಂದ ಗೌಡ ತನ್ನದೇ ವೈಯಕ್ತಿಕ ವರ್ಚಸ್ಸೊಂದನ್ನು ಕಟ್ಟಿಕೊಳ್ಳುತ್ತಿರುವ ಸೂಚನೆಗಳು ದಿನೇದಿನೇ ಸ್ಪಷ್ಟಗೊಳ್ಳುತ್ತಿವೆ. ರಾಜ್ಯೋತ್ಸವ ಪ್ರಾಶಸ್ತಿಯ ವಿಷಯದಲ್ಲಿ ಕಟ್ಟುನಿಟ್ಟಾಗಿ ಐವತ್ತನ್ನು ದಾಟದೆ ಇದ್ದದ್ದು, ಆಡಳಿತದಲ್ಲಿ ಪಾರದರ್ಶಕತೆ ತಂದಿದ್ದು, ನಾಗರಿಕ ಸನ್ನದನ್ನು ಜಾರಿಗೊಳಿಸುವಲ್ಲಿ ಎಲ್ಲಿಲ್ಲದ ಮುತುವರ್ಜಿ ವಹಿಸಿದ್ದು, ಯಾರ ವಿರೋಧವನ್ನೂ ಕಟ್ಟಿಕೊಳ್ಳದೆ ಎಲ್ಲರನ್ನೂ ಏಕಕಾಲಕ್ಕೆ ಸಂಭಾಳಿಸತೊಡಗಿದ್ದು, ಎಲ್ಲಕ್ಕೂ ಮಿಗಿಲಾಗಿ



ಬಹುತೇಕ ಪತ್ರಿಕೆಗಳು ಮತ್ತು ಚಾನಲ್ಲುಗಳೆಲ್ಲ ಸದಾನಂದಗೌಡರ ಬಗ್ಗೆ ಮೆದುವಾಗಿದ್ದು ಯಡ್ಡಿಯ ಹತಾಶೆಯನ್ನು ಮತ್ತಷ್ಟು ಉಲ್ಬಣಿಸಿದೆ.

ಅಂತಿಮ ಕಾರ್ಯಾಚರಣೆ

ಪರಿಸ್ಥಿತಿ ಹೀಗೆ ಮುಂದುವರಿಯಿತೆಂದರೆ ತಾನು ಮೂಲೆಗುಂಪಾಗುವುದು ನಿಶ್ಚಿತ. ಸದಾನಂದ ಗೌಡ ಗಟ್ಟಿಗೊಂಡಷ್ಟೂ ತನ್ನ ಅಸ್ತಿತ್ವಕ್ಕೆ ಸಂಚಕಾರ. ಇನ್ನು ಪರಿಷತ್ ಚುನಾವಣೆಯಲ್ಲಿ ಗೌಡ ಏನಾದರೂ ಗೆದ್ದುಬಿಟ್ಟರೆ ತನ್ನೆಲ್ಲ ಬಾಗಿಲುಗಳೂ ಮುಚ್ಚಿದ ಹಾಗೆಯೇ. ತನ್ನ ಕಾರ್ಯಸಾಧನೆಗೆ ಇದೇ ಸೂಕ್ತ ಕಾಲ ಎಂದು ಲೆಕ್ಕಹಾಕಿದ ಯಡ್ಡಿ ಏಕಾಏಕಿ ಮಹಾನ್ ಮುತ್ಸದ್ದಿಯ ಪೋಜು ಕೊಟ್ಟಿದ್ದು ಮೊನ್ನೆ. ಮುಖ್ಯಮಂತ್ರಿ ಸದಾನಂದ ಗೌಡರನ್ನು ಗೆಲ್ಲಿಸಲು ಸರ್ವಪಕ್ಷಗಳು ಕೈಗೂಡಿಸಬೇಕು. ಈ ಬಗ್ಗೆ ದೇವೇಗೌಡರ ಜೊತೆಗೂ ಮಾತಾಡುತ್ತೇನೆ. ಕಾಂಗ್ರೆಸ್‌ನವರೂ ದೊಡ್ಡ ಮನಸ್ಸು ಮಾಡಬೇಕು.. ಇತ್ಯಾದಿಯಾಗಿ ಯಡ್ಡಿ ಬಾಯಿಂದ ಬಂದ ಮಾತು ಕೇಳಿದ್ದೇ ಸಿಎಂ ಗೌಡ ಹಲ್ಲು ಕಿರಿದಿದ್ದೇ ಬಂತು.

ಅದು ಯಡ್ಡಿ ಹುನ್ನಾರದ ಮೊದಲ ಮೆಟ್ಟಿಲಷ್ಟೇ. ಆ ರೀತಿ ಸದಾನಂದಗೌಡರನ್ನು ಯಡ್ಡಿ ಪಣತೊಟ್ಟಿದ್ದೇ ಆಗಿದ್ದರೆ, ಸಿಎಂ ಗೌಡರನ್ನು ಗೆಲ್ಲಿಸಬೇಕೆಂಬ ಯಡ್ಡಿಯ ಮಾತು ಪ್ರಾಮಾಣಿಕವಾಗೇ ಇದ್ದಿದ್ದರೆ; ಯಡ್ಡಿ ಪಕ್ಷೇತರ ಶಾಸಕರನ್ನು ಒಲ್ಲೈಸಬೇಕಿತ್ತು. ಕೆಲ ಜೆಡಿಎಸ್ ಶಾಸಕರನ್ನು ಪಳಗಿಸುವ ಕಾರ್ಯಾಚರಣೆಗೆ ಕೈಹಾಕಬೇಕಿತ್ತು, ಕಾಂಗ್ರೆಸ್ ನಾಯಕರ ಜೊತೆಗೋ, ದೇವೇಗೌಡರ ಜೊತೆಗೋ ಸಂಧಾನಕ್ಕೂ ಮುಂದಾಗಬೇಕಿತ್ತಲ್ಲವೆ?

ಇದ್ಯಾವುದರ ಬಗ್ಗೆಯೂ ಆಸಕ್ತಿ ವಹಿಸದ, ಕಾಟಾಚಾರಕ್ಕೂ ಪ್ರಯತ್ನಕ್ಕಿಳಿಯದ ಯಡ್ಡಿ ಏಕಾಏಕಿ ದೆಹಲಿಯ ವಿಮಾನ ಹತ್ತುತ್ತಾರೆ. ಅದೂ ಕುಮಾರಸ್ವಾಮಿಯ ಜೊತೆಗೆ. ಒಂದೇ ವಿಮಾನದಲ್ಲಿ ದೆಹಲಿಯ ದಾರಿ ಹಿಡಿದದ್ದು ಕುಮಾರಸ್ವಾಮಿ ಮತ್ತು ಯಡ್ಡಿ ಏನೇ ಕಾಕತಾಳೀಯದ ಕತೆ ಹೊಡೆದರೂ ಹಕೀಕತ್ತು ಬೇರೆಯದೇ ಆಗಿತ್ತು. ಮಾರ್ಗ ಮಧ್ಯೆ ಕುಮಾರಸ್ವಾಮಿ ಪಕ್ಕ ಕೂತಿದ್ದ ಚಲುವರಾಯಸ್ವಾಮಿ ಎದ್ದು ಬಂದು ಯಡ್ಡಿಯ ಸೀಟಿನಲ್ಲಿ ಕೂತರೆಂದೂ, ಯಡ್ಡಿ ಎದ್ದು ಬಂದು ಕುಮಾರಸ್ವಾಮಿಯ ಜೊತೆ ಕೂತು ಸುದೀರ್ಘ ತಂತ್ರವೊಂದನ್ನು ಚರ್ಚಿಸಿದರೆಂದೂ ಅದೇ ವಿಮಾನದ ಪ್ರಯಾಣಿಕರೊಬ್ಬರು ಸ್ಪಷ್ಟಪಡಿಸಿದ್ದರು!

ಬುಧವಾರದ ಹೊತ್ತಿಗೆ ಯಡ್ಡಿಯ ವರಸೆಯೇ ಬದಲಾಗಿತ್ತು. ಸದಾನಂದ ಗೌಡರನ್ನು ಗೆಲ್ಲಿಸಬೇಕೆಂದು ಲಾಬಿಗಿಳಿದಿದ್ದ ಇದೇ ಯಡ್ಡಿ ಈಗ ಉಲ್ಟಾ ಹೊಡೆದಿದ್ದರು. ಮೊದಲು ಗಡ್ಕರಿಯನ್ನು ಕಂಡು ಹೈಕೋರ್ಟ್ ನೀಡಿದ ಜಾಮೀನು ಆದೇಶ ಮುಂದಿಟ್ಟರು. ನಂತರ ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ, ರಾಜನಾಥ್ ಸಿಂಗ್, ವೆಂಕಯ್ಯನಾಯ್ಡುವನ್ನು ಆಟಕಾಯಿಸಿಕೊಂಡರು. ಒಂದೋ ತನ್ನನ್ನು ಮತ್ತೆ ಮುಖ್ಯಮಂತ್ರಿ ಮಾಡಿ ಇಲ್ಲವೇ ರಾಜ್ಯಾಧ್ಯಕ್ಷನನ್ನಾಗಿ ಆದರೂ ನೇಮಿಸಿ. ಇದ್ಯಾವುದೂ ಸಾಧ್ಯವಾಗದೇ ಹೋದರೆ ತನ್ನನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯನ್ನಾಗಿಯಾದರೂ ಮಾಡಿ ಎಂಬುದು ಹೈಕಮಾಂಡ್ ಮುಂದೆ ಯಡ್ಡಿಯ ಬಿಗಿಪಟ್ಟು.

ಗುರುವಾರದ ಹೊತ್ತಿಗೆ ಇಡೀ ಸನ್ನಿವೇಶವೇ ಬದಲಾಗಿ ಹೋಗಿತ್ತು. ರಾಜ್ಯದ 17 ಮಂದಿ ಬಿಜೆಪಿ ಸಂಸದರನ್ನು ಕಟ್ಟಿಕೊಂಡು ಯಡ್ಡಿ ಹೈಕಮಾಂಡ್‌ನ ಬ್ಲಾಕ್‌ಮೇಲ್‌ಗೇ ಕೈಯಿಟ್ಟರು. ಅಲ್ಲಿಗೆ ಯಡ್ಡಿಯ ಅಂತಿಮ ಕಾರ್ಯಾಚರಣೆ ಶುರುವಾಗಿತ್ತು. ಸದಾನಂದ ಗೌಡ ಪರಿಷತ್ ಚುನಾವಣೆಯಲ್ಲಿ ಗೆಲ್ಲುವುದಕ್ಕಿಂತಲೂ ಯಡ್ಡಿಗೆ ಮತ್ತೆ ತಾನು ಮುಖ್ಯಮಂತ್ರಿಯಾಗುವುದೇ ಮುಖ್ಯವಾಗಿತ್ತು. ಬಹುಶಃ ಶುಕ್ರವಾರದ ಹೊತ್ತಿಗಿದು ಸ್ಪಷ್ಟ ರೂಪಕ್ಕೆ ಬರುತ್ತದೆ. ಅಡ್ವಾಣಿ ಎಷ್ಟೆಂದರೂ ಅನಂತ್ ಪಕ್ಷಪಾತಿ. ಹೇಗೆ ಯಡ್ಡಿಯನ್ನು ಬೆಂಬಲಿಸಲು ಸಾಧ್ಯ?

ಪಾಪ ಸದಾನಂದ ಗೌಡರಿಗೆ ಈ ದುರ್ಗತಿ ಬರಬಾರದಿತ್ತು!





ಜೋಯಿಡಾದ ಪ್ರಗತಿ-ಅಭಿವೃದ್ಧಿಯ ಚರ್ಚೆ-ಸಮಾಲೋಚನೆ ಮೀಟಿಂಗು-ಮಂಥನಗಳೆಲ್ಲ ಶುರುವಾಗಿ ಒಂದಲ್ಲ, ಎರಡಲ್ಲ, ಮೂ… ದಶಕಗಳೇ ಕಳೆದುಹೋಗಿದೆ; ಜೋಯಿಡಾದ ಸಮಸ್ಯೆಯ ಬ… ಮಾತಾಡುವುದೇ ಕ್ಲೀಷೆ ಎಂಬಂತಾಗಿದೆ. ಆದರೆ ಪಾಸಿಟಿವ್ ಫಲಿತಾ… ಮಾತ್ರ ಬರುತ್ತಿಲ್ಲ. ಜೋಯಿಡಾದ ಬೇಕು-ಬೇಡ, ಭೌಗೋಳಿಕ ಸ್ಥಿತಿ-ಗ… ಅರ್ಥಮಾಡಿಕೊಳ್ಳಲು ದೊಡ್ಡ ತಪಸ್ಸೇನೂ ಮಾಡಬೇಕೆಂದಿ… ಆಳುವವರಿಗೆ ತಮ್ಮಂತೆಯೇ ಇರುವ ಮನುಷ್ಯರ ಕಷ್ಟ-ಸುಖಕ್ಕೆ ಸ್ಪಂದಿಸು… ಹೃದಯವಂತಿಕೆ, ರಾಜಕೀಯ ಇಚ್ಛಾಶಕ್ತಿ, ಆಡಳಿತಾತ್ಮಕ ಬದ್ಧತೆ ಇದ್ದ… ಸಾಕು. ಜೋಯಿಡಾವನ್ನು ಶಾಪ ಮುಕ್ತವಾಗಿಸಬಹುದು! • ನಹು…

ಜೋಯಿಡಾ

ಕಗ್ಗಾಡು-ಕಗ್ಗತ್ತಲೆ ಖಂಡ!!

ಕರ್ನಾಟಕದಲ್ಲೊಂದು ಅಕ್ಷರಶಃ ನರಕ ಸದೃಶ ತಾಣವಿದೆಯೆಂದರೆ ನಂಬುತ್ತೀರಾ? ಉತ್ತರ ಕನ್ನಡ ಜಿಲ್ಲೆಯ ದಂಡಕಾರಣ್ಯದ ನಡುವೆ ಇರುವ 'ಜೋಯಿಡಾ' ಎಂಬ ತಾಲ್ಲೂಕಿಗೆ ಬಂದರೆ ಈ ಆಶ್ಚರ್ಯಾಘಾತದ ಸತ್ಯದರ್ಶನ ನಿಮಗೆ ಆಗುತ್ತದೆ! ಆಳುವ ಖೂಳರ ಪ್ರಜ್ಞಾಪೂರ್ವಕ ಪಾತಕದಿಂದ ಇವತ್ತಿಗೂ ಈ ಇಡೀ ಜೋಯಿಡಾ "ಶಿಲಾಯುಗ"ದ ಸಂಕಷ್ಟ-ಸಮಸ್ಯೆಯಲ್ಲಿ ಬಿದ್ದು ಒದ್ದಾಡುತ್ತಿದೆ. ಸ್ವಾತಂತ್ರ್ಯ ನಂತರದ ಈ ಆರೂವರೆ ದಶಕಗಳಲ್ಲಿ ಬದಲಾವಣೆ-ಸುಧಾರಣೆ-ಪ್ರಗತಿ ಎಂಬ ಪದಗಳ ಕನಿಷ್ಠ ಪರಿಚಯವೂ ಜೋಯಿಡಾಕ್ಕಾಗಿಲ್ಲ!!

ಹಾಗಂತ ಈ ಭರ್ಜರಿ-ಭಯಾನಕ ಕುಗ್ರಾಮದಂಥ ಜೋಯಿಡಾ ಅಭಿವೃದ್ಧಿಗೆ ಸರ್ಕಾರಿ ಹಣ ಮಂಜೂರಾಗಿಲ್ಲ-ಪ್ಲಾನ್, ಪ್ರಾಜೆಕ್ಟ್‌ಗಳು ಸಿದ್ಧವಾಗಿಲ್ಲವೆಂದೇನೂ ಭಾವಿಸಬೇಕಾಗಿಲ್ಲ; ಊರು ಉದ್ಧಾರಕ್ಕೆಂದು ಹರಿದು ಬಂದ ಕೋಟಿ-ಕೋಟಿ ರೂಪಾಯಿ ರಾಜಕಾರಣಿ-ಅಧಿಕಾರಿ-ಕಂಟ್ರಾಕ್ಟರ್ ಎಂಬ ಹೊಟ್ಟೆಬಾಕ ತ್ರಿವಳಿ ತ್ರಿಜೋರಿ ಪಾಲಾಗಿದೆ! ವಿಪರ್ಯಾಸವೆಂದರೆ, ಜೋಯಿಡಾದ ಸುಧಾರಣೆಗೆಂದು ಹಣ ಬಿಡುಗಡೆಯಾದಂತೆ, ಅಧಿಕಾರಸ್ಥರು ಪ್ರಗತಿಯ ಹುಸಿ ಚಿಂತನ-ಮಂಥನ ನಡೆಸಿದಂತೆ, ಬೋಗಸ್ ಸರ್ಕಾರಿ ಉತ್ಸವ-ಸಭೆ-ಸಮಾಲೋಚನೆ ನಡೆದಂತೆಲ್ಲ ಈ ನತದೃಷ್ಟ ತಾಲ್ಲೂಕು ಅಧೋಗತಿ ಹೊಂದುತ್ತಿದೆ!!



ಸುನೀಲ್ ಹೆಗಡೆ

ತಾತ್ಸಾರದ ಗಡಿ ನಾಡು

ಜೋಯಿಡಾದಲ್ಲಿ ಹೆಜ್ಜೆ-ಹೆಜ್ಜೆಗೆ, ಕ್ಷಣ-ಕ್ಷಣಕ್ಕೂ ಕಷ್ಟ-ನಷ್ಟ-ನೋವುಗಳೇ! ಮನುಷ್ಯ ಬದುಕಲು ಬೇಕಾದ ಕನಿಷ್ಠ ಮೂಲಭೂತ ಸೌಕರ್ಯವೊಂದು ಈ 170 ಕಂದಾಯ ಗ್ರಾಮಗಳ ಬೃಹತ್ ತಾಲ್ಲೂಕಲ್ಲಿ ಇಲ್ಲ. 1910.44 ಚ.ಕಿ. ವಿಸ್ತೀರ್ಣದ ಜೋಯಿಡಾದಲ್ಲಿ ಶೇ. 86 ರಷ್ಟು ಅರಣ್ಯ ಪ್ರದೇಶ! ಅತಿ ಕಡಿಮೆ ಜನಸಂಖ್ಯೆಯುಳ್ಳ ಅತಿದೊಡ್ಡ ಭೂಪ್ರದೇಶದ ಏಕಮೇವ ಕರ್ನಾಟಕದ ತಾಲ್ಲೂಕಿದು. ಸುಮಾರು 52013 ಜನಸಂಖ್ಯೆಯ ಜೋಯಿಡಾದಲ್ಲಿ ಸರಿಯಾದ ಸೂರು ಕಾಣಸಿಗದು. ನಾಡಿಗೆ ಬೆಳಕು (ವಿದ್ಯುತ್) ಕೊಡುವ ಈ ತಾಲ್ಲೂಕು ಸದಾ ಕತ್ತಲಲ್ಲಿ ತೊಳಲಾಡುತ್ತಿರುತ್ತದೆ! ಶಿಕ್ಷಣ, ಆರೋಗ್ಯ ಮೂಲಭೂತ ಸೌಕರ್ಯದ ಕೊರತೆಯ ಶಾಪ ಲಾಗಾಯ್ತಿನಿಂದಲೂ ಬಡಿದು ಕೊಂಡಿದೆ.



ನ್ಯಾಯಾಲಯ, ಆಸ್ಪತ್ರೆ, ಬಸ್ ಡಿಪ್ಪೋ, ಔಷಧ ಅಂಗಡಿ ಜೋಯಿಡಾದಲ್ಲಿ ಇಲ್ಲ; ಇದ್ದರೂ ಹೆಸರಿಗಷ್ಟೇ! ಅಷ್ಟೇ ಏಕೆ, ಶವಸಂಸ್ಕಾರಕ್ಕೂ ಕಟ್ಟಿಗೆಗಾಗಿ ಪರದಾಡಬೇಕು. ಜೋಯಿಡಾದ ದುರಂತ ನೋಡಿ; ತಾಲ್ಲೂಕು ಕೇಂದ್ರದಲ್ಲಿ ಗ್ರಾಮ ಪಂಚಾಯತ್ ಆಡಳಿತವಿರುವ ರಾಜ್ಯದ ಏಕೈಕ ತಾಲ್ಲೂಕಿದು! ತಾಲ್ಲೂಕು ಕೇಂದ್ರದಲ್ಲಿ ಇರಬೇಕಾದ ಯಾವ ಸೌಕರ್ಯವೂ ಇಲ್ಲಿ ಸಮರ್ಪಕವಾಗಿಲ್ಲ. ರಾಜ್ಯದ ಬೊಕ್ಕಸಕ್ಕೆ ಅತಿಹೆಚ್ಚು ಆದಾಯ ಈ ಜೋಯಿಡಾದಿಂದ ಸಂದಾಯ ಆಗುತ್ತಿದೆ. ಆದರೆ ಪ್ರತಿಫಲ ಮಾತ್ರ ಸಿಗುತ್ತಿಲ್ಲ. ಬುಡಕಟ್ಟು ಜನಸಮುದಾಯವೇ ಹೆಚ್ಚಿರುವ ಈ ತಾಲ್ಲೂಕಿನ ಮುಗ್ಧ ಜನರ ಗೋಳು ಹೇಳತೀರದು.


ಜೋಯಿಡಾ ಇರುವುದು ಗೋವಾ ರಾಜ್ಯದ ಗಡಿಯಲ್ಲಿ. ಇಲ್ಲಿಯ ಜನಜೀವನದ ಮೇಲೆ ಕೊಂಕಣಿ-ಮರಾಠಿ ಪ್ರಭಾವ ಜಾಸ್ತಿ. ಹೆಚ್ಚಿನವರ ಮಾತೃಭಾಷೆಯೂ ಕೊಂಕಣಿ-ಮರಾಠಿ. ಹಾಗಂತ ಜೋಯಿಡಾದಲ್ಲಿ ಗಡಿ-ನುಡಿ ತಂಟೆ-ತಕರಾರು ಹೆಚ್ಚೇನೂ ಇಲ್ಲ. ಎಮ್‌ಇಎಸ್‌ನ ಛಾಪಾಗಳು ಹುಕ್ಕಿ ಬಂದಾಗೊಮ್ಮೆ ಜೋಯಿಡಾ ತಮ್ಮದೆಂದು ಬೊಬ್ಬೆ ಹೊಡೆಯುತ್ತಾರೆ. ಒಂದಿಷ್ಟು ಗೋಮಾಂತಕ್ ಗಲಾಟೆ ಗೂಂಡಾಗಳು ಜೋಯಿಡಾ ಗೋವಾಕ್ಕೆ ಸೇರಬೇಕೆಂದು ಕಿತಾಪತಿ ಮಾಡುತ್ತಾರೆ. ಆದರೆ ಸ್ಥಳೀಯವಾಗಿ ಸಮಸ್ಯೆ ಇಲ್ಲ.


ಈ ಆಧುನಿಕ-ವಿಜ್ಞಾನ-ತಂತ್ರಜ್ಞಾನದ ಯುಗದಲ್ಲೂ ಒಂಥರಾ ನಡುಗಡ್ಡೆಯಂತಾಗಿ ಮನುಷ್ಯ ಪ್ರಪಂಚದ ಸಂಪರ್ಕ ಇಲ್ಲದಂತಿರುವ ಜೋಯಿಡಾದ ಜನತೆ ತಮಗೆ ಬದುಕುವ ಸೌಲಭ್ಯ-ಸೌಕರ್ಯ ಕೊಡಿ, ದುಡಿವ ಕೈಗೆ ಉದ್ಯೋಗ ಕೊಡಿ, ಉಳಲು ನೆಲ ಕೊಡಿ ಎಂದು ಕೇಳುತ್ತಿದ್ದಾರೆಯೇ ವಿನಃ ಎಂದೂ ತಾವು ಪಕ್ಕದ ಗೋವಾಕ್ಕೆ ಅಥವಾ ಮಹಾರಾಷ್ಟ್ರಕ್ಕೆ ಸೇರುತ್ತೇವೆಂದು ಹಠ ಹಿಡಿದವರೇ ಅಲ್ಲ. ಆದರೆ ಕರ್ನಾಟಕ ಸರ್ಕಾರದ ಮತ್ತು ಸ್ಥಳೀಯ ಜನಪ್ರತಿನಿಧಿಗಳ ಮೋಸ-ವಂಚನೆ, ತಾತ್ಸಾರ-ತಿರಸ್ಕಾರ, ಹೊಣೆಗೇಡಿತನದಿಂದ ಬೇಸತ್ತು "ನಮ್ಮನ್ನು ಅಭಿವೃದ್ಧಿಪಡಿಸಿ... ಇಲ್ಲವೆ ಗೋವಾಕ್ಕೆ ಬಿಟ್ಟುಕೊಡಿ....." ಎಂದು ಒಮ್ಮೊಮ್ಮೆ ಜೀವ-ಜೀವನಕ್ಕಾಗಿ ಆಳುವವರ ಮೊರೆಯಿಡುತ್ತಾರೆ.

ಹಾಗೆ ನೋಡಿದರೆ, ಕರ್ನಾಟಕದ ಆಳುವ ಮಂದಿಯ ಮನೆಮುರುಕತನದಿಂದ ಸಾಕ್ಷಾತ್ ನರಕದಂತಾಗಿರುವ ಗಡಿಭಾಗದ ಡಿಗ್ಗಿಯಂಥ ಹಲವು ಹಳ್ಳಿಗಳ ಜನರಿಗೆ ತಾಲ್ಲೂಕು ಕೇಂದ್ರ ಜೋಯಿಡಾ, ಜಿಲ್ಲಾ ಕೇಂದ್ರ ಕಾರವಾರಕ್ಕಿಂತ ಹತ್ತಿರವೇ ಇರುವ ಗೋವೆಯ ಸೆಳೆತ ಜಾಸ್ತಿ. ಅವರ ದೈನಂದಿನ ಬದುಕಿನ ವ್ಯವಹಾರ, ಔದ್ಯೋಗಿಕ, ವೈವಾಹಿಕ, ಸಾಮಾಜಿಕ ಸಂಬಂಧವೂ ಅಲ್ಲೇ ಹೆಚ್ಚು. ಮಾತೃಭಾಷೆ (ಮರಾಠಿ-ಕೊಂಕಣಿ)ಯಲ್ಲಿ ಶಿಕ್ಷಣ ನೀಡದ ಕರ್ನಾಟಕ ಸರ್ಕಾರದ ಕನ್ನಡ ಅಂಧಾಭಿಮಾನ ಭಾಷಾ ನೀತಿಯೂ ಜೋಯಿಡಾದ ಪ್ರಗತಿಗೆ ಮಾರಕವಾಗಿ ಪರಿಣಮಿಸಿದೆ. ಹೀಗಾಗಿ ಗಡಿಯ ಜನರಲ್ಲಿ ಮಾನಸಿಕ ಗಡಿಬಿಡಿಯೂ ಶುರುವಾಗಿದೆ. ಅನ್ನ-ನೀರು-ನೆರಳು-ವಿದ್ಯೆ ನೀಡದ ನೆಲ ಯಾರು ತಾನೆ ನೆಚ್ಚಿಕೊಂಡಿರಲು ಸಾಧ್ಯ?

ಜಲವಿದ್ಯುತ್ ಯೋಜನೆಯಿಂದಾಗಿ… ಜಲಾಶಯಗಳಿಂದ ಸೂಪಾ… ಸಾವಿರಾರು ಕುಟುಂಬಗಳ ತ… ತಲಾಂತರದ ಬದುಕು ಧ್ವಂಸವ… ಹೋಗಿದೆ. ಇವರಿಗೆಲ್ಲ ಸರ್ಕಾ… ಸರಿಯಾದ ಪರಿಹಾರ-ಪುನರ್ವ… ಕಲ್ಪಿಸಿಲ್ಲ. ಅವರಿಗೊಂದು ಬದು… ಕಲ್ಪಿಸಿಕೊಟ್ಟಿಲ್ಲ. ಬದುಕು ಕಟ್ಟಿಕೊಳ್ಳ… ಅವಕಾಶವೇ ಕೊಟ್ಟಿಲ್ಲ. ಜಲಾಶಯ… ಹಿನ್ನೀರಿಂದ ಅದೆಷ್ಟೋ ಗ್ರಾಮಗ… ಆಚೀಚೆಯ ಸಂಪರ್ಕವೇ ಕಡಿ… ಕೊಳ್ಳುತ್ತಿವೆ. ಈ ನಡುಗಡ್ಡೆಗ… ಸೇತುವೆ, ದೋಣಿ, ಕಾಲು ಸಂಪ… ಯಾವುದೂ ಇಲ್ಲ. ಹಲವು ಹಳ್ಳಿಗರು ತಾ… ನಿರ್ಮಿಸಿಕೊಂಡಿರುವ ಬಿದಿರಿನ ಬಳುಕುವ ಸೇತುವೆ ಅಥ… ತೆಪ್ಪಗಳಲ್ಲಿ ಓಡಾಡುತ್ತಿದ್ದಾರೆ.

ಜೋಯಿಡಾದ ಬದುಕು ಅದೆಂಥ ಭಯಾನಕವೆಂದ… ಈ ಹೊಯ್ದಾಡುವ ತೆಪ್ಪ ತೂಗುಸೇತುವೆಗಳ ಮೇಲೆ ದಿನ… ಸಾವಿರಾರು ಜನರು, ನೂರಾರು ಶಾಲಾ ವಿದ್ಯಾರ್ಥಿಗ… ಸರ್ಕಸ್ ಮಾಡಬೇಕಾಗಿದೆ. ವಿದ್ಯುತ್ ಇಲ್ಲದ ಮನೆ, ದ… ದೋಣಿ, ಸಂಕಗಳಿಲ್ಲದ ಕಾಡು-ಮೇಡಲ್ಲಿ ಎದ್ದು-ಬಿ… ಶಾಲೆಗೆ ಹೋಗಿಬರುವ ವಿದ್ಯಾರ್ಥಿಗಳ ಪಾಡನ್ನು ಪ… ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿ- ಪಂಡಿತರು ಕಂ… ಕಾಣದಂತಿದ್ದಾರೆ. ಮನುಷ್ಯತ್ವವಿಲ್ಲದ ಆಳುವವರ ನಡು…





ಕತ್ತಲು-ಕಗ್ಗತ್ತಲು

ಇಡೀ ಜೋಯಿಡಾ ತಾಲ್ಲೂಕು ಸರ್ಕಾರಿ ಪ್ರಭೃತಿಗಳ ವಿದ್ಯುತ್ ಉತ್ಪಾದಿಸುವ ಪ್ರಯೋಗದ ಬಲಿಪಶು! ಇಲ್ಲಿ ಒಂದಲ್ಲ, ಎರಡಲ್ಲ ಹಲವು ಜಲವಿದ್ಯುತ್ ಯೋಜನೆಯ ಅಣೆಕಟ್ಟುಗಳು ಸ್ಥಾಪಿತವಾಗಿದೆ. ಮೊದಲಿದ್ದ 'ಸೂಪಾ' ಎಂಬ ತಾಲ್ಲೂಕು ಕೇಂದ್ರವೇ ಈ ಡ್ಯಾಮ್‌ಗಳಲ್ಲಿ ಜಲಸಮಾಧಿಯಾಗಿ ಹೋಗಿದೆ. ಸೂಪಾ-ಜೋಯಿಡಾದ ಅಮಾಯಕರ ತ್ಯಾಗ-ಬಲಿದಾನದಿಂದ ಇವತ್ತು ನಾಡು ಬೆಳಗುತ್ತಿದೆ. ಇಲ್ಲಿ ಉತ್ಪಾದಿಸುವ ವಿದ್ಯುತ್ ನಾಡಿಗೆ ಜೀವಕಳೆ ತುಂಬಿದೆ. ವಿಪರ್ಯಾಸವೆಂದರೆ, ರಾಜ್ಯಕ್ಕೆ ಬೆಳಕು ಕೊಡುತ್ತಿರುವ ಜೋಯಿಡಾದ ಸುಮಾರು 142 ಮಜರೆಗಳಿಗೆ ಇವತ್ತಿಗೂ ವಿದ್ಯುತ್ ಸಂಪರ್ಕವಿಲ್ಲ. ಈ ಹಳ್ಳಿಗಳು ಗಾಢಾಂಧಕಾರದಲ್ಲಿ ಚಡಪಡಿಸುತ್ತಿವೆ!

ಇದಕ್ಕಿಂತಲೂ ಬರ್ಬರ ಅನಾಹುತ-ಅನಾಚಾರ ಜೋಡಿಯಾದ ಜನತೆ ಬದುಕುತ್ತಿರುವುದೇ ದೊಡ್ಡ ಪವಾ… ಜೋಯಿಡಾದ ಅಸಹಾಯಕ ಮಂದಿಯ ಬದುಕುವ ಹಕ್ಕ… ಆಳುವವರು ಸಂಚಕಾರ ತಂದಿರುವುದು ಘೋರ ದುರಂತ… ಸು!!

ಕಂಬಳಿಯೇ ಆಂಬ್ಯುಲೆನ್ಸ್

ಜೋಯಿಡಾದಲ್ಲಿ ಇರುವಷ್ಟು ಅಭದ್ರ ತೂ… ಸೇತುವೆಗಳು ರಾಜ್ಯದ ಇನ್ನೆಲ್ಲಿಯೂ ಇಲ್ಲ! ತಾಲ್ಲೂ… 25-30 ಕಡೆ ಹಳ್ಳಿಗರೇ ಬಿದಿರು-ಬಡಿಗೆಯ ಸೇತು… ಮಾಡಿಕೊಂಡಿದ್ದಾರೆ. ಈ ಹಳ್ಳಿಗಳಲ್ಲಿ ಯಾರಾದರ… ಅನಾರೋಗ್ಯ ಪೀಡಿತರಾದರೆ ಬಚಾವಾಗುವುದೇ ಕ… ರೋಗಿಯ ಶುಶ್ರೂಷೆಗೆ ಹತ್ತಿರದಲ್ಲೆಲ್ಲೂ ಸಣ್ಣ ಆರೋ… ಕೇಂದ್ರವಿಲ್ಲ. ಆಸ್ಪತ್ರೆಗೆ ಹೋಗಬೇಕೆಂದರೆ 40-50 ಕಿ.ಮೀ… ದೂರ ಹೋಗಬೇಕು. ಸರಿಯಾದ ರಸ್ತೆಗಳಿದ್ದರಿಂದ ನಡ…

ಜೋಯಿಡಾ ಉದ್ಧಾರಕ್ಕೆ ಏನಾಗಬೇಕು?

* ಜೋಯಿಡಾ ಅಭಿವೃದ್ಧಿ ಕುರಿತು ಬರಗೂರು ರಾಮಚಂದ್ರಪ್ಪ ಅವರು ಸಿದ್ಧಪಡಿಸಿ ಸರ್ಕಾರಕ್ಕೆ ಕೊಟ್ಟಿರುವ ವರದಿ (2002), ಗಡಿ ಅಭಿವೃದ್ಧಿ ಬಗ್ಗೆ ನಂಜುಂಡಪ್ಪ ಸಲ್ಲಿಸಿರುವ ವರದಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವರದಿ ತಕ್ಷಣ ಜಾರಿಗೆ ಸರ್ಕಾರ ಸಂಕಲ್ಪ ಮಾಡಬೇಕು.
* ತಲತಲಾಂತರದಿಂದ ಕಾಡನ್ನೇ ನಂಬಿ ಬದುಕಿರುವ ಗೌಳಿ, ಕುಣಬಿ ಮತ್ತಿತರ ವನವಾಸಿಗಳನ್ನು ನ್ಯಾಷನಲ್ ಪಾರ್ಕ್ ಹೆಸರಲ್ಲಿ ಒಕ್ಕಲೆಬ್ಬಿಸಬಾರದು. ಅರಣ್ಯ ಉಪ ಉತ್ಪನ್ನಗಳನ್ನು ಬಳಸಿಕೊಳ್ಳುವ ಪಾರಂಪರಿಕ ಹಕ್ಕು ಬುಡಕಟ್ಟು ಜನರಿಗೆ ಕೊಡಬೇಕು. ಹುಲಿಯೊಂದಿಗೆ ಸಾವಿರಾರು ವರ್ಷದಿಂದ ಬದುಕಿರುವ ಅರಣ್ಯವಾಸಿಗಳನ್ನು 'ಹುಲಿ ಯೋಜನೆ' ಹೆಸರಲ್ಲಿ ಅನಾಥರಾಗಿಸಕೂಡದು.
* ಕುಂಬ್ರಿ ಜಮೀನು-ಅತಿಕ್ರಮಣ ಭೂಮಿಯನ್ನು ವನವಾಸಿಗಳು ಬದುಕುವ ಆಹಾರಕ್ಕಾಗಿ ಬಳಸುತ್ತಿದ್ದಾರೆಯೇ ವಿನಃ ಹಣ ಗಳಿಸುವ ವಾಣಿಜ್ಯ ಉದ್ದೇಶಕ್ಕಾಗಿ ಅಲ್ಲ. ಹಾಗಾಗಿ ಆ ಭೂಮಿ ಅವರಿಗೆ ಖಾತೆ ಹಾಕಿ ಕೊಡಬೇಕು. ಈ ಭೂಮಿ ಅವರ ಜೀವ-ಜೀವನ ಅಷ್ಟೇ ಅಲ್ಲ, ಹಕ್ಕೂ ಹೌದು. ಅದವರಿಗೇ ದಕ್ಕುವಂತೆ ಕಾನೂನು ತಿದ್ದುಪಡಿ ಮಾಡಬೇಕು.
* ಅರಣ್ಯವಾಸಿ ಬುಡಕಟ್ಟು ಜನಾಂಗಕ್ಕೆ ಅಗತ್ಯವಾದ ರಸ್ತೆ-ಸೇತುವೆ-ಶಾಲೆ-ರೇಷನ್ ಅಂಗಡಿ-ಆಸ್ಪತ್ರೆ ಇತ್ಯಾದಿ ಮೂಲಭೂತ ಸೌಕರ್ಯ ಅವರಿರುವಲ್ಲೇ ಕಲ್ಪಿಸಬೇಕು.
* ಕುಣಬಿ ಮತ್ತು ಗೌಳಿಗಲು ಪಕ್ಕ ಬುಡಕಟ್ಟು ಮಂದಿ. ಇದು ಅವರ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಆಚರಣೆಯಲ್ಲಿ ಎದ್ದು ಕಾಣಿಸುತ್ತದೆ. ಹಾಗಾಗಿ ಆ ಬುಡಕಟ್ಟು ಜನರ ಬಹುದಿನದ ಬೇಡಿಕೆಯಂತೆ ತಕ್ಷಣ ಅವರನ್ನು ಪರಿಶಿಷ್ಟ ಪಂಗಡ (ಎಸ್‌ಟಿ)ಕ್ಕೆ ಸೇರಿಸಲು ಪ್ರಕ್ರಿಯೆ ಪ್ರಾರಂಭಿಸಬೇಕು.
* ಉದ್ಯೋಗ ಸೃಷ್ಟಿಯಾಗದೆ ಜೋಯಿಡಾ ಮಂದಿಯ ಬದುಕು ಸುಧಾರಿಸದು. ಭೂಮಿ ಮತ್ತು ಕೈಗಾರಿಕೆ ಅಭಿವೃದ್ಧಿಪಡಿಸಿ ಉದ್ಯೋಗ ಒದಗಿಸಬೇಕು. ಕೃಷಿ ಆಧಾರಿತ ಕೈಗಾರಿಕೆ ಬರಬೇಕು. ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಬೇಕು. ಮಳೆಗಾಲದಲ್ಲಿ ಭತ್ತ ಬೆಳೆದು ಕೊಯ್ಲಿನ ನಂತರ ಉದ್ಯೋಗ ಅರಸುತ್ತ ಗೋವಾ ರಾಜ್ಯಕ್ಕೆ ರೈತರು ವಲಸೆ ಹೋಗುವುದು ತಪ್ಪಿಸಲು ಉದ್ಯೋಗ ಸೃಷ್ಟಿ ಅನಿವಾರ್ಯ. ಇದರಿಂದ ಕನ್ನಡನಾಡಿನ ನೆಲವನ್ನೂ ಸಂರಕ್ಷಿಸಿಕೊಳ್ಳಬಹುದು. ಇಲ್ಲದಿದ್ದರೆ ಇಂದಲ್ಲ ನಾಳೆ ಗಡಿ ಗಲಾಟೆ ಗ್ಯಾರಂಟಿ!
* ಚೆಡ್ಡಿ ಮಂತ್ರಿ ಕಾಗೇರಿಯ ಮಹಾಹತುಶಾಹಿ ಧೋರಣೆಯಿಂದ ಜೋಯಿಡಾ ಶಿರಸಿ ವಿಭಾಗಕ್ಕೆ ಸೇರಿಸಲ್ಪಟ್ಟಿದೆ. ಇದೊಂದು ಗಂಡಾಂತರಕಾರಿ ನಿರ್ಧಾರ. ಜೋಯಿಡಾ ಭಾಷಾ, ಸಾಂಸ್ಕೃತಿಕ-ವೈವಾಹಿಕ ಕೊಡುಕೊಳ್ಳುವಿಕೆ ಕಾರವಾರಕ್ಕೆ ಹೆಚ್ಚು ಹೊಂದಿಕೆಯಾಗುತ್ತದೆ. ಸಂಪರ್ಕ ಕೂಡ ಸುಲಭ-ಹತ್ತಿರ. ಜೋಯಿಡಾದ ಬಹುಸಂಖ್ಯಾತರ ಕೊಂಕಣಿ ಭಾಷೆ ಕಾರವಾರದ… ಅಷ್ಟೂ ಸರ್ಕಾರಿ ಕಚೇರಿ- ಸಾಮಾಜಿಕ ವಲಯದಲ್ಲಿ ಅರ್ಥವಾಗುತ್ತದೆ. ಶಿರಸಿ ದೂರವಷ್ಟೇ ಅಲ್ಲ ಅಪರಿಚಿತ ಕೂಡ… ಹೀಗಾಗಿ ಅಭಿವೃದ್ಧಿ ದೃಷ್ಟಿಯಿಂದ ತಕ್ಷಣ ಜೋಯಿಡಾ ಶಿರಸಿ ವಿಭಾಗಕ್ಕೆ ಸೇರಿಸುವ ತೀರ್ಮಾನ ಕೈಬಿಟ್ಟು ಕಾರವಾರ ವಿಭಾಗಕ್ಕೆ ಸೇರಿಸಬೇಕು.

ಸಾಗಬೇಕು. ರಸ್ತೆ ಇಲ್ಲದ ಮೇಲೆ ಆಂಬುಲೆನ್ಸ್ ಎಲ್ಲಿಂದ ಬಂದೀತು?

ಜಗತ್ತಿನ ಆರೋಗ್ಯ ರಂಗದಲ್ಲಿ ಕ್ರಾಂತಿಯೇ ಆಗಿದ್ದರೂ ಜೋಯಿಡಾದಲ್ಲಿ ಪಾರಂಪರಿಕ ಕಂಬಳಿಯೇ ಆಂಬುಲೆನ್ಸ್!! ರೋಗಿಯನ್ನು ಕಂಬಳಿಯಲ್ಲಿ ಹಾಕಿಕೊಂಡು, ಅದಕ್ಕೊಂದು ದೊಣ್ಣೆ ಕಟ್ಟಿಕೊಂಡು ದೂರ.... ದೂರ ಹೊತ್ತು ಸಾಗಬೇಕು. ಮಳೆಗಾಲ ಬಂತೆಂದರೆ ರೋಗಿಗಳಿಗೆ, ಬಸರಿ, ಬಾಣಂತಿಯರಿಗೆ ಮರಣಭಯ! ಒಟ್ಟಿನಲ್ಲಿ ಕಂಪ್ಯೂಟರ್ ಯುಗದಲ್ಲೂ ಜೋಯಿಡಾದ ಜನರು ಶಿಲಾಯುಗದ ಜೀವನ ನಡೆಸುತ್ತಿದ್ದಾರೆ. ನಾಚಿಕೆಗೇಡಿನ ಸಂಗತಿಯೆಂದರೆ ಜಿಲ್ಲಾಡಳಿತ-ತಾಲ್ಲೂಕಾಡಳಿತದ ಮಹಾಮೇಧಾವಿಗಳಿಗೆ, ಜಿಲ್ಲಾ ಉಸ್ತುವಾರಿ ಹೊತ್ತಿರುವ ಮಂತ್ರಿ ಕಾಗೇರಿ ಮಾಣಿಯಂಥವರಿಗೆ ಮುಖ್ಯ ರಸ್ತೆಯಿಂದ 40-50 ಕಿ.ಮೀ. ದೂರದ ತನಕ ಹಳ್ಳಿಗಳಿವೆ ಜೋಯಿಡಾದಲ್ಲಿ ಎಂಬುದೇ ಗೊತ್ತಿಲ್ಲ!

ಬುಡಕಟ್ಟುಗಳ ಬವಣೆ ಬದುಕು

ಆದಿವಾಸಿ ಬುಡಕಟ್ಟು ಜನಾಂಗಗಳಾದ ಕುಣಬಿ ಮತ್ತು ಗೌಳಿಗರ ನೆಲೆ ಜೋಯಿಡಾ, ಕಾಡನ್ನೇ ನಂಬಿ ಕಾಡು-ಮೇಡಲ್ಲಿ ಜೀವನ ಕಟ್ಟಿಕೊಂಡಿರುವ ಈ ಜನಾಂಗವೇ ತಾಲ್ಲೂಕಲ್ಲಿ ಸುಮಾರು ಪಾಲಿನಷ್ಟಿದೆ. ಕಚ್ಚೆ ಗೌಳಿಗರು ಮೊದಲು ದನ-ಎಮ್ಮೆ ಸಾಕಿ ಹಾಲು ಮಾರಿ ಬದುಕುತ್ತಿದ್ದರು. ಜೊತೆಗೆ ಕಾಡಲ್ಲೇ ತುಂಡು ಭೂಮಿ ಉತ್ತು-ಬಿತ್ತಿ ಬೇಸಾಯಿ ಮಾಡಿ ಉಣ್ಣುತ್ತಿದ್ದರು. ಕುಣಬಿಗಳೂ ಅಷ್ಟೇ. ಅವರಿಗೆ ಕಾಡಿನ ಉತ್ಪನ್ನ ಮತ್ತು ಕುಮ್ರಿ (ಕುಂಬ) ಜಮೀನೇ ಜೀವನಾಧಾರ. ಗೌಳಿಗರಿಗಿಂತ ಕುಣಬಿಗಳೇ ಜೋಯಿಡಾದ ಹಳ್ಳಿಗಳಲ್ಲಿ ಹೆಚ್ಚಿದ್ದಾರೆ. ಈಗ ಗೌಳಿಗರಿಗೆ ಕ್ಷೀರ ಕೃಷಿ ಕಷ್ಟವಾಗಿರುವುದರಿಂದ ಕುಣಬಿಗಳಂತೆ ಕುಂಬ್ರಿ ಜಮೀನಿನ ಮೇಲೇ ಹೆಚ್ಚು ಅವಲಂಬಿತರಾಗಿದ್ದಾರೆ.

ತಲತಲಾಂತರದಿಂದ ಈ ಕುಂಬ್ರಿ ಜಮೀನು ಬೇಸಾಯ ಮಾಡುತ್ತಾ ಬಂದಿರುವ ಬುಡಕಟ್ಟು ಜನಾಂಗೀಯರನ್ನು ಬೀದಿಪಾಲಾಗಿಸಲು ಈಗ ಸರ್ಕಾರ ಹವಣಿಸುತ್ತಿದೆ. ಅವರ ಕುಂಬ್ರಿ ಭೂಮಿ ಕಸಿದುಕೊಂಡು ಕಾಡಿಂದ ಓಡಿಸುವ ಹುಲಿ ಯೋಜನೆ, ಅರಣ್ಯ ಸಂರಕ್ಷಣಾ ಕಾಯ್ದೆಗಳನ್ನು ಸರ್ಕಾರಿ ಪ್ರಭೃತಿಗಳು ಪ್ರಯೋಗಿಸುತ್ತಿದ್ದಾರೆ. ಸ್ವಜಾತಿ ಹೈಗರ ಅತಿಕ್ರಮಣ ಅರಣ್ಯ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಲು ಕಿತಾಪತಿ ನಡೆಸುತ್ತಿದೆ ಎಂದು ಬೊಬ್ಬೆ ಹೊಡೆಯುವ ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ-ಕಳ್ಳ ಅತಿಕ್ರಮಣದಾರ ಅನಂತ ಹೆಗಡೆ ಆಶೀಸರ, ಮಂತ್ರಿ ಕಾಗೇರಿಗಳಿಗೆ ಅಮಾಯಕ ಗೌಳಿ-ಕುಣಬಿಗಳ ಕುಂಬ್ರಿ ಭೂಮಿ ಕಿತ್ತುಕೊಂಡು ನಿರ್ಗತಿಕರಾಗಿಸಲು ಸರ್ಕಾರಿ ಅಧಿಕಾರಿಗಳು ಬಹಿರಂಗ ಕಾರ್ಯಾಚರಣೆ ನಡೆಸಿದರೂ ಕಾಣಿಸುವುದೇ ಇಲ್ಲ!

ಈ ಕುಂಬ್ರಿ ಬ್ರಿಟಿಷರ ಕಾಲದಲ್ಲೇ ಅರಣ್ಯವಾಸಿಗಳಿಗೆ ಕೊಡಲ್ಪಟ್ಟ ಭೂಮಿ. ಕುಂಬ್ರಿ ಜಮೀನೆಂದರೆ ಅರಣ್ಯಕ್ಕೆ ಯೋಗ್ಯವಲ್ಲದ ಆದರೆ ಆಹಾರ ಬೆಳೆ ಕೃಷಿಗೆ ಯೋಗ್ಯವಾದ ಭೂಮಿ ಎಂದರ್ಥ. ಜೋಯಿಡಾದಲ್ಲಿ ಸುಮಾರು ಎಂಟ್ಹತ್ತು ಎಕರೆ ಕುಂಬ್ರಿ ಜಮೀನನ್ನು ಕುಣಬಿ-ಗೌಳಿಗರು ಉಪಜೀವನಕ್ಕಾಗಿ ಅನಾದಿ ಕಾಲದಿಂದ ಬಳಸುತ್ತಿದ್ದಾರೆ. ಈ ಭೂಮಿ ಖಾತೆ ಹಾಕಿಸಿಕೊಡುವಂತೆ ಬುಡಕಟ್ಟು ಮಂದಿ ಹಿಂದಿನಿಂದಲೂ ಹೋರಾಡುತ್ತಲೇ ಇದ್ದಾರೆ. ಆದರೆ ಇವರ ಓಟು ಪಡೆದು ಮಂತ್ರಿ-ಶಾಸಕನ ಸಂಸದವರ್‍ಯಾರೂ ಈ ಜನರತ್ತ ತಿರುಗಿ ನೋಡಲಿಲ್ಲ. 1978 ರ ಮೊದಲಿಗ ಅತಿಕ್ರಮಣ ಭೂಮಿ ಮಂಜೂರಿಗೆ ಅವಕಾಶ ಇದ್ದಾಗ ಈ ಬುಡಕಟ್ಟು ಮಂದಿಯ ಪರವಾಗಿ ಮಂತ್ರಿ-ಶಾಸಕ-ಸಂಸದರ್‍ಯಾರೂ ಆ ಪ್ರಯತ್ನ ಮಾಡಲಿಲ್ಲ. ಅರಣ್ಯ ಇಲಾಖೆಯ ಜೋಭದ್ರಗೇಡಿ ಅಧಿಕಾರಿಗಳಂತೂ ಕಣ್ಮುಚ್ಚಿ ಕೂತಿದ್ದರು.

ಹೊರ ಪ್ರಪಂಚದ ಆಗು-ಹೋಗು ಅರ್ಥವಾಗದ, ಅನಕ್ಷರಸ್ಥ ಬುಡಕಟ್ಟು ಜನರಿಂದ ಆಗ ಅಧಿಕಾರಿ-ಜನಪ್ರತಿನಿಧಿಗಳು ಅರ್ಜಿ ತುಂಬಿಸಬೇಕಾಗಿತ್ತು, ಕಾಯ್ದೆ ಜ್ಞಾನ ಇಲ್ಲದ ಅರಣ್ಯವಾಸಿಗಳನ್ನು ಈಗ ಅರಣ್ಯ ಅಧಿಕಾರಿಗಳು ಬೆನ್ನಿಗೆ ಬಿದ್ದು ಕಾಡುತ್ತಿದ್ದಾರೆ. ಕಳ್ಳರೆಂಬಂತೆ ಪರಿಗಣಿಸಿ ಅಟ್ಟಾಡಿಸುತ್ತಿದ್ದಾರೆ. ಅತಿಕ್ರಮಣ ಸಕ್ರಮಕ್ಕೆ ಮೂರು ತಲೆಮಾರಿನ ದಾಖಲೆ ಕೊಡಿ ಇಲ್ಲವೇ ಎದ್ದು ಹೋಗಿ ಎಂದು ಬೆದರಿಸುತ್ತಿದ್ದಾರೆ. ಹಾಲಿ ತಲೆಮಾರಿನ ದಾಖಲೆಯೇ ಒಟ್ಟು ಹಾಕಲು ಸಾಧ್ಯವಾಗದ ಈ ಬಡಪಾಯಿ ಬುಡಕಟ್ಟು ಮಂದಿ ಮೂರು ತಲೆಮಾರಿನ ಸಾಕ್ಷ್ಯಾಧಾರ ಎಲ್ಲಿಂದ ತಂದಾರು?

ಕುಂಬ್ರಿ ಜಮೀನಿನ ಹಕ್ಕು ಬುಡಕಟ್ಟು ಮಂದಿ ಕೇಳಿದಾಗ ವಿದ್ಯುತ್ ಪ್ರಾಜೆಕ್ಟ್‌ಗಳನ್ನು ತಂದು ನಿರಾಶ್ರಿತರನ್ನಾಗಿಸಲಾಯ್ತು; ಅತಿಕ್ರಮಣ ಭೂಮಿಗಾಗಿ ಹೋರಾಟ ನಡೆಸಿದಾಗ ಅದು ನಿರ್ಣಾಯಕ ಹಂತ ತಲುಪುತ್ತಿದೆ ಎನ್ನುವಾಗಲೇ ಈ ಬುಡಕಟ್ಟು ಮಂದಿಯ ಸುತ್ತಲಿನ ಕಾಡಲ್ಲಿ ರಾಷ್ಟ್ರೀಯ ಉದ್ಯಾನ ಹುಲಿ ಯೋಜನೆ ತರಲು ಸರ್ಕಾರ ತವಕಿಸಿತ್ತು. ಈ ಸರ್ಕಾರಿ ಮಂದಿ ಆದಿವಾಸಿಗಳಿಗೆ "ಏಳಿ... ಎದ್ದು ಹೊರಟು ಹೋಗಿ.... ನಮಗಿಲ್ಲಿ ರಾಷ್ಟ್ರೀಯ ಉದ್ಯಾನ ಮಾಡುವ... ಕಾಡು ಕಾಪಾಡುವ ದೇಶೋದ್ಧಾರದ ಯೋಜನೆ ಮಾಡಲಿಕ್ಕಿದೆ...." ಎಂದು ಭೋಂಗು ಬಿಡುತ್ತಿದ್ದಾರೆ. ಕಂಬ್ರಿ ಜಮೀನಿನ ಮೂಲ ಸಮಸ್ಯೆ ಹಾಗೇ ಇದೆ. ಹೊಸ ಸಮಸ್ಯೆ ಬಂಡವಾಳಶಾಹಿ ರಾಜಕಾರಣ-ಆಡಳಿತ ಹುಟ್ಟುಹಾಕಿದೆ.

ಬಹುಜನ ವಿರೋಧಿಯಾದ ಈ ಕಾಡು ಖಾಲಿ ಮಾಡುವ ಯೋಜನೆಯನ್ನು ಜಾರಿಗೆ ತರುವಾಗಲೇ ಮನಸ್ಸು ಮಾಡಿದ್ದರೆ ಸ್ಥಳೀಯ ಶಾಸಕ ಸುನಿಲ್ ಹೆಗಡೆ, ಸಂಸದ ಅನಂತ್ಮಾಣಿ-ಮಂತ್ರಿ ಕಾಗೇರಿ ತಡೆಯಬಹುದಿತ್ತು. ಗುಡ್ಡಗಾಡು ಜನರಿಗೆ ಈ ಯೋಜನೆಯ ಅಪಾಯ ತಿಳಿಸಿ ಹೇಳಿದ್ದರೆ, ಎಜ್ಯುಕೇಟ್ ಮಾಡಿದ್ದರೆ ಅವರೇ ಹೋರಾಡುತ್ತಿದ್ದರು. ಈಗ ಹುಲಿ ಯೋಜನೆ ವಕ್ಕರಿಸಿದೆ. ಹುಲಿಯೊಂದಿಗೆ ಸಾವಿರಾರು ವರ್ಷದಿಂದ ಬದುಕಿದ್ದವರು ಸರ್ಕಾರಿ ಅಧಿಕಾರಿಗಳೆಂಬ ನಕಲಿ ಹುಲಿಗಳಿಗೆ ಹೆದರಬೇಕಾಗಿ ಬಂದಿದೆ. ಅರಣ್ಯ ಉತ್ಪನ್ನ ಮುಟ್ಟುವ ಹಾಗಿಲ್ಲ, ಕಾಡಿನೊಂದಿಗೆ, ಕಾಡುಪ್ರಾಣಿ, ಗಿಡಮರಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಈ ಆದಿವಾಸಿಗಳಿಗೀಗ ಕಾಡೇ ಜೈಲಂತಾಗಿದೆ. ಅವರ ಬದುಕಿಗೆ ಆಧಾರವಾಗಿದ್ದ ಕಾಡು ಕೈಗೆಟುಕದೆ ಕಂಗಾಲಾಗಿದ್ದಾರೆ. 2006 ರ ಕಾಡಿನ ಪಾರಂಪರಿಕ ಹಕ್ಕು ಕಾಯ್ದೆ ಜಾರಿಯಾದರಷ್ಟೇ ಈ ಆದಿವಾಸಿಗಳಿಗೆ ಒಂದಿಷ್ಟು ಮುಕ್ತಿ ಸಿಕ್ಕೀತು. ಇತ್ತಲೂ ಮಂತ್ರಿ-ಮಾಗಧರು ಯೋಚಿಸುತ್ತಿಲ್ಲ; ಆದಿವಾಸಿಗಳಿಗೆ ನೆರವಾಗುತ್ತಿಲ್ಲ. ಅಂದರೆ, ಆದಿವಾಸಿಗಳೆಂದರೆ ಆಳುವ ಕಾಗೇರಿ, ಅನಂತ್ಮಾಣಿ, ಆಶೀಸರ ಮಾಣಿಗಳಂಥ ಚೆಡ್ಡಿ ಬ್ರಾಹ್ಮಣರಿಗೆ ಲೆಕ್ಕಕ್ಕೇ ಇಲ್ಲ!!

ಶೈಕ್ಷಣಿಕ ಸಮಸ್ಯೆ

ಅಲ್ಲಲ್ಲಿ ಶಾಲೆಗಳಾಗಿದ್ದು ಬಟ್ಟರೆ ಜೋಯಿಡಾದ ಶಿಕ್ಷಣ ಸಮಸ್ಯೆ ಮಾತ್ರ ಪೆಡಂಭೂತವಾಗಿ ಬೆಳೆಯುತ್ತಲೇ ಇದೆ. ಜೋಯಿಡಾ ಒಳಗೊಂಡಿರುವ ಉತ್ತರ ಕನ್ನಡ ಜಿಲ್ಲೆಯವರೇ ವಿದ್ಯಾಮಂತ್ರಿ. ಅಷ್ಟೇ ಅಲ್ಲ, ಕಾಗೇರಿಯ ಹೈಗರ ಸಾಮ್ರಾಜ್ಯದ ಶಿರಸಿ ಶೈಕ್ಷಣಿಕ ಜಿಲ್ಲೆಗೆ ಈ ಜೋಯಿಡಾ ಸೇರಿಸಲ್ಪಟ್ಟಿದೆ. ಆದರೆ ಇಲ್ಲಿಯ ಶಾಲೆ-ಹೈಸ್ಕೂಲುಗಳ ಸ್ಥಿತಿ-ಗತಿ ಕಾಗೇರಿಗೊಬ್ಬರಿಗೇ ಪ್ರೀತಿ!! ಒಟ್ಟು 174 ಪ್ರಾಥಮಿಕ ಶಾಲೆ ಮತ್ತು 13 ಹೈಸ್ಕೂಲು ಜೋಯಿಡಾದಲ್ಲಿದೆ. ಪ್ರಾಥಮಿಕ ಶಾಲೆಗಳಿಗೆ ಬೇಕಾಗಿರುವುದು 463 ಶಿಕ್ಷಕರು; ಇರುವುದು ಬರೀ 327 ಶಿಕ್ಷಕರು. ಬರೋಬ್ಬರಿ 136 ಶಿಕ್ಷಕರ ಕೊರತೆ ಗಡಿಯಲ್ಲಿರುವ ಜೋಯಿಡಾದ ಶಾಲೆಗಳನ್ನು ಬಾಧಿಸುತ್ತಿದೆ. ಹೀಗಾಗಿ ಶಿಕ್ಷಣಕ್ಕಿಲ್ಲಿ ಹಿನ್ನಡೆಯಾಗಿ ಗೋವಾ ರಾಜ್ಯದತ್ತ ಸ್ಥಳೀಯರಿಗೆ ಸಹಜವಾಗೇ ಆಕರ್ಷಣೆ ಶುರುವಾಗಿದೆ.

ಇಲ್ಲಿ ತೊಡಕಾಗಿರುವುದೇ ಭಾಷಾ ಸಮಸ್ಯೆ. ಕನ್ನಡಾಭಿಮಾನದಿಂದ ಇಲ್ಲಿ ಕನ್ನಡ ಶಾಲೆ ಸ್ಥಾಪಿಸಲಾಗಿ; ಕನ್ನಡ ಮಾಸ್ತರ್ ನೇಮಿಸಲಾಗಿದೆ. ಆದರೆ ಇಲ್ಲಿ ಬಹುತೇಕರ ಮಾತೃಭಾಷೆ ಕೊಂಕಣಿ-ಮರಾಠಿ. ಇದು ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿದೆ. ಸುಪ್ರೀಂಕೋರ್ಟ್ ಹೇಳಿರುವುದು ಮಾತೃಭಾಷೆಯ ಶಿಕ್ಷಣ. ಈಗ ಜೋಯಿಡಾದಲ್ಲಿ ಕೊಡುತ್ತಿರುವುದು ರಾಜ್ಯ ಭಾಷೆಯ ವಿದ್ಯಾಭ್ಯಾಸ. ಇದರಿಂದ ಗೌಳಿ-ಕುಣಬಿಗಳಿಗೆ ಘೋರ ಅನ್ಯಾಯ ಆಗುತ್ತಿದೆ. ಅವರನ್ನು ಮುಖ್ಯವಾಹಿನಿಗೆ ತಂದು ನಮ್ಮ ನೆಲ ಉಳಿಸಿಕೊಳ್ಳಬೇಕೆಂದಿದ್ದರೆ, ಕೊಂಕಣಿ-ಮರಾಠಿ ಬಲ್ಲಂತ ಶಿಕ್ಷಕರನ್ನು ನೇಮಿಸಬೇಕು. ಜೊತೆ-ಜೊತೆಗೆ ಕನ್ನಡ ಕಲಿಕೆಗೆ ಅವಕಾಶ ಕೊಟ್ಟು ಕನ್ನಡ ನೆಲದ ಬಗ್ಗೆ ಪ್ರೀತಿ-ಅಭಿಮಾನ-ಗೌರವ ಮೂಡುವಂತೆ ಮಾಡಬೇಕಿದೆ. ಇದೆಲ್ಲ ಚೆಡ್ಡಿ ವಿದ್ಯಾ ಪ್ರವೀಣ ಕಾಗೇರಿ ಮಾಣಿಗೆ ಹೇಗೆ ಅರ್ಥವಾದೀತು?


ಗದ್ದೆ ಕಾಯುವ ಮಾಳ

ಬೋಗಸ್ ಭರವಸೆ

ಜೋಯಿಡಾದ ಪ್ರಗತಿ-ಅಭಿವೃದ್ಧಿಯ ಚರ್ಚೆ-ಸಮಾಲೋಚನೆ-ಮೀಟಿಂಗು-ಮಂಥನಗಳೆಲ್ಲ ಶುರುವಾಗಿ ಒಂದಲ್ಲ ಎರಡಲ್ಲ, ಮೂರು ದಶಕಗಳೇ ಕಳೆದುಹೋಗಿದೆ; ಜೋಯಿಡಾದ ಸಮಸ್ಯೆಯ ಬಗ್ಗೆ ಮಾತಾಡುವುದೇ ಕ್ಲೀಷೆ ಎಂಬಂತಾಗಿದೆ. ಆದರೆ ಪಾಸಿಟಿವ್ ಫಲಿತಾಂಶ ಮಾತ್ರ ಬರುತ್ತಿಲ್ಲ. ಜೋಯಿಡಾದ ಬೇಕು-ಬೇಡ, ಭೌಗೋಳಿಕ ಸ್ಥಿತಿ-ಗತಿ ಅರ್ಥಮಾಡಿಕೊಳ್ಳಲು ದೊಡ್ಡ ತಪಸ್ಸೇನೂ ಮಾಡಬೇಕೆಂದಿಲ್ಲ, ಆಳುವವರಿಗೆ ತಮ್ಮಂತೆಯೇ ಇರುವ ಮನುಷ್ಯರ ಕಷ್ಟ-ಸುಖಕ್ಕೆ ಸ್ಪಂದಿಸುವ ಹೃದಯವಂತಿಕೆ, ರಾಜಕೀಯ ಇಚ್ಛಾಶಕ್ತಿ, ಆಡಳಿತಾತ್ಮಕ ಬದ್ಧತೆ ಇದ್ದರೆ ಸಾಕು. ಜೋಯಿಡಾವನ್ನು ಶಾಪ ಮುಕ್ತವಾಗಿಸಬಹುದು!

ಮೇಲಿಂದ ಕೆಳಹಂತದವರೆಗಿನ ಜನಪ್ರತಿನಿಧಿಗಳು ಎಂದೂ ಒಂದೆಡೆ ಸೇರಿ ಜೋಯಿಡಾದ ಏಳ್ಗೆಗಾಗಿ ಚರ್ಚಿಸಿದ್ದೇ ಇಲ್ಲ, ಕೇಂದ್ರ-ರಾಜ್ಯ-ಜಿಲ್ಲಾ ಸರ್ಕಾರದಿಂದ ಯಾವ್ಯಾವ ಯೋಜನೆ ತರಬಹುದು-ಎಷ್ಟೆಷ್ಟು ಅನುದಾನ ಒತ್ತಡ ಹೇರಿ ಮಂಜೂರು ಮಾಡಿಸಿಕೊಳ್ಳಬಹುದೆಂಬ ದೂರದೃಷ್ಟಿಯ-ಸೂಕ್ಷ್ಮತೆಯ ಸ್ಕೆಚ್ ಹಾಕಿದ್ದೇ ಇಲ್ಲ, ಹೀಗೆ ಯೋಜನಾಬದ್ಧವಾಗಿ ಹಠದಿಂದ ಕೆಲಸ ಮಾಡಿದರೆ ಜೋಯಿಡಾದ ಪ್ರಗತಿಯ ನಡೆಯನ್ನೇ ಬದಲಿಸಬಹುದು. ಇದುವರೆಗೆ ಆಗಿರುವುದು ಜೋಯಿಡಾ ಎಂದರೆ ಧ್ವನಿಯಿಲ್ಲದ ಕಾಡುಜನರ ಊರು ಎಂದು ಭಾವಿಸಿರುವ ಅಧಿಕಾರಿ-ಜನಪ್ರತಿನಿಧಿಗಳು ಕೋಟಿ-ಕೋಟಿ ಹಣ ತಂದು ತಿಂದು ಹಾಕಿದ್ದಾರಷ್ಟೇ.

ಅಧಿಕಾರವೆಂದರೆ ತಾಂತ್ರಿಕ ಸಂಗತಿಯಲ್ಲ. ಅದು ಇನ್ನೊಬ್ಬರ ಬದುಕು ಕಟ್ಟಬಲ್ಲದ್ದು; ಕೆಡವಲೂಬಲ್ಲದು. ಕಟ್ಟುವ ಕೆಲಸದ ಬದ್ಧತೆ ಜನಪ್ರತಿನಿಧಿಗಳಿಗಿರಬೇಕು; ಗೆಲ್ಲಿಸಿದವರ ಋಣ ತೀರಿಸುವ ಕೃತಜ್ಞತೆ ಇರಬೇಕು. ಅಧಿಕಾರಿಗಳೂ ಅಷ್ಟೇ. ಯಾವ್ಯಾವ ಕಾರಣಕ್ಕಾಗಿ ಶೋಷಿತರಿಗೆ-ಬುಡಕಟ್ಟು ಜನರಿಗೆ ಸೌಲಭ್ಯ-ಸಹಕಾರ-ಸವಲತ್ತು ಕೊಡಲು ಸಾಧ್ಯವಿಲ್ಲ ಎಂಬುದು ಯೋಚಿಸುವುದನ್ನು ಬಿಟ್ಟು ಒಂದಾದರೂ ಕಾರಣ ಸೌಲಭ್ಯ ಕೊಡಲು ಇದೆಯಾ ಎಂದು ಧನಾತ್ಮಕವಾಗಿ ಯೋಚಿಸಬೇಕಿದೆ. ಅಧಿಕಾರಿಗಳು ಕಾಮಗಾರಿಗಳನ್ನು ಗುತ್ತಿಗೆದಾರರ ಕೈಗೊಪ್ಪಿಸಿ ಅವರು ಕೊಡುವ ಪರ್ಸೆಂಟೇಜು ಹೊಡೆಯುತ್ತ ಸುಳ್ಳು ಪ್ರಗತಿಯ ದಾಖಲೆ ಸೃಷ್ಟಿಸಿದರೆ, ಜೋಯಿಡಾ ಈ ಜನ್ಮದಲ್ಲಿ ಉದ್ಧಾರವಾಗದು. ಪಾಲಿಗೆ ಹಪ-ಹಪಿಸುವ ಶಾಸಕ-ಸಂಸದ-ಮಂತ್ರಿಗಳಿಗಂತೂ ಈ ಚೋರ-ಚಾಂಡಾಲರಿಗೆ ಅಂಕುಶ ಹಾಕುವ ನೈತಿಕ ಧೈರ್ಯ ಇಲ್ಲ ಬಿಡಿ; ಜನಪರ ಯೋಚನೆ-ಯೋಜನೆಯ ಸಾಮಾಜಿಕ ಸೇವಾ ಸಂಸ್ಥೆ (ಎನ್‌ಜಿಒ)ಗಳು ನತದೃಷ್ಟ ಜೋಯಿಡಾದತ್ತ ಕಣ್ಣು ಹರಿಸುವವರ್‍ಯೇ?

ಆಳುವವರು, ಅವರ ಸಲಹೆಗಾರ ಅಡ್ನಾಡಿ ಅಧಿಕಾರಿಗಳು ಆಡಿದಂತೆ ಜೋಯಿಡಾದ ಅಭಿವೃದ್ಧಿ ಮಾಡಿ ತೋರಿಸಿದ್ದೇ ಇಲ್ಲ, ಇಲ್ಲಿ ಕೆಲಸ ಮಾಡಿದ ಅನೇಕ ಇಂಜಿನಿಯರ್‌ಗಳು, ಗುತ್ತಿಗೆ ಹಿಡಿದ ಕಂಟ್ರಾಕ್ಟರ್‌ಗಳು ಮತ್ತು ಅಧಿಕಾರಿಗಳು ಮೂರ್‍ಮೂರು ಜನ್ಮಕ್ಕಾಗುವಷ್ಟು ಕೊಳ್ಳೆ ಹೊಡೆದುಹೋಗಿದ್ದಾರೆ. ಜೋಯಿಡಾ ಉದ್ಧಾರಕ್ಕಾಗಿ ಸಾಲುಸಾಲು ಸಮಾವೇಶ, ಸಾಹಿತ್ಯ ಸಮ್ಮೇಳನ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಉತ್ಸವ, ಗಡಿ ಅಭಿವೃದ್ಧಿ ಪ್ರಾಧಿಕಾರದ ಹಬ್ಬಗಳು, ಜಿಲ್ಲಾ ಪಂಚಾಯತ್ ಅಧಿವೇಶನ ಇಲ್ಲೇ ನಡೆದಿದೆ. ಆದರೆ ಇದ್ಯಾವುದರಿಂದಲೂ ಅಸಲಿ ಉದ್ದೇಶ ಈಡೇರಿಲ್ಲ; ಹಳೆಯ ಉತ್ಸವ-ಸಭೆಗಳ ನಿರ್ಣಯ ಜಾರಿಯಾಗಿಲ್ಲ, ಅಧಿಕಾರಿಗಳಿಗೆ, ಪೊಕ್ಕು ಪರಾಕ್ರಮದ ಜನಪ್ರತಿನಿಧಿಗಳಿಗೆ ಒಣಪ್ರತಿಷ್ಠೆ ಪ್ರದರ್ಶನಕ್ಕೆ, ಐಷಾರಾಮಿ ಜಾತ್ರೆ ನಡೆಸಲಿಕ್ಕೆ ಈ ಹಬ್ಬ-ಸಭೆ-ಸಮಾಲೋಚನೆ ನೆಪವಾಯ್ತೇ ಹೊರತು ಜೋಯಿಡಾ ಜನತೆಗೆ ನಯಾಪೈಸೆ ಪ್ರಯೋಜನವಾಗಲಿಲ್ಲ.

ತೀರಾ ಮೊನ್ನೆ-ಮೊನ್ನೆ ಜೋಯಿಡಾ ಶಾಸಕ ಕಂ ಗಿಮಿಕ್ ಪೋರ ಸುನೀಲ್ ಹೆಗಡೆ ಊರು ಉದ್ಧಾರ ಮಾಡುತ್ತೇನೆಂದು ಜೋಯಿಡಾದ ಉದ್ದಗಲಕ್ಕೆ ಹತ್ತಾರು ದಿನ ಯಾತ್ರೆ ಮಾಡಿ ಮುಗಿಸಿದ್ದಾನೆ. ಕೊನೆಯ ದಿನ ತನ್ನ ಪಕ್ಷದ ರಾಜ್ಯಾಧ್ಯಕ್ಷ ಕುಮಾರಸ್ವಾಮಿಯನ್ನೇ ಕರೆಸಿ ದೊಡ್ಡ ಬಹಿರಂಗ ಸಮಾವೇಶವೂ ಮಾಡಿದ್ದಾನೆ. ಸಭೆಯಲ್ಲಿ 'ನಡೆದಾಟ'ದಿಂದ ಗುಳ್ಳೆ-ಗಾಯಗಳಾಗಿದ್ದ ಶಾಸಕ ಹೆಗಡೆ ಪಾದವನ್ನು ಆತನ ಹೆಂಡತಿ ತನ್ನ ಕಾಲ್ತೊಡೆ ಮೇಲಿಟ್ಟುಕೊಂಡು ಗಳಗಳನೆ ಅತ್ತಿದ್ದು ಮುಂಬರುವ ಇಲೆಕ್ಷನ್ ತಯಾರಿ ಎಂದೇ ಜನರಾಡಿಕೊಂಡರು. ಈಗ ಹೆಗಡೆ ಎದುರಾಳಿ ಕಾಂಗ್ರೆಸ್ ಪಾಳೆಗಾರ ಆರ್.ವಿ. ದೇಶಪಾಂಡೆ ಜೋಯಿಡಾದ ಬುಡಕಟ್ಟು ಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಮಂತ್ರಿ ಕಾಗೇರಿಗಂತೂ ಜೋಯಿಡಾ ತನ್ನ ಜಿಲ್ಲೆಯಲ್ಲಿದೆ ಎಂಬ ಪರಿವೆಯೇ ಇಲ್ಲ.

ಇಂಥ ದಗಲುಬಾಜಿ ರಾಜಕಾರಣಿಗಳು-ದಗಾಕೋರ ಅಧಿಕಾರಿಗಳಿಂದ ಮುಕ್ತವಾಗದೇ ಜೋಯಿಡಾ ಉದ್ಧಾರ ಆಗಲು ಸಾಧ್ಯವಿಲ್ಲ! ಜೋಯಿಡಾದ ಜನರು ನಯವಂಚಕ ರಾಜಕಾರಣಿಗಳಿಗೆ ಮರುಳಾಗದೆ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಸಿದ್ಧರಾಗಬೇಕಾಗಿದೆ!

ಬಡಾಯಿ ಬೊಗಳೆಗಳೇ ಬಂಡವಾಳ

▶2

ಈ ಕಂಪನಿಯ ಪ್ರಧಾನ ವಹಿವಾಟು ಈ ದೇಶದ 30 ಕೋಟಿ ಜನರಿಗೆ ಎಲೆಕ್ಟ್ರಾನಿಕ್ಸ್ ಆಡಳಿತದ ಲಾಭವನ್ನು ತಲುಪಿಸುವುದು. ಇದಕ್ಕೆಂದೇ ಸರ್ಕಾರ ರಾಷ್ಟ್ರೀಯ ಗ್ರಾಮೀಣ ಇ-ಗವರ್ನೆನ್ಸ್ ಯೋಜನೆಯನ್ನು ಜಾರಿಗೆ ತಂದು ಅದಕ್ಕಾಗಿ ಸಹಸ್ರಾರು ಕೋಟಿಯನ್ನು ಖಾಸಗಿ ಕಂಪನಿಗಳ ಮೂಲಕ ವ್ಯಯಿಸಲಿದೆ. ಹೀಗೆ ಸರ್ಕಾರದ ಹಣವನ್ನು ಖಾಸಗಿಯವರಿಗೆ ಪರಭಾರೆ ಮಾಡುವ ಯೋಜನೆಯಲ್ಲಿ ಅತಿ ದೊಡ್ಡ ಲಾಭ ಪಡೆದಿರುವುದು ಈ Srei Infrastructure ಕಂಪನಿಯೇ!

ಈ ಕಂಪನಿ ಈಗ 28,000 ಗ್ರಾಮಗಳಲ್ಲಿ 'ಕಾಮನ್ ಸರ್ವೀಸ್ ಸೆಂಟರ್' ಗಳನ್ನು ತೆರೆಯುವ ಯೋಜನೆಯ ಭಾಗವಾಗಿ ಕರ್ನಾಟಕವನ್ನೂ ಪ್ರವೇಶಿಸುತ್ತಿದೆ. ಈ ಕಾಮನ್ ಸರ್ವೀಸ್ ಸೆಂಟರ್ ಎಂದರೆ ಒಂದೇ ಕಡೆಗೆ ಕಂಪ್ಯೂಟರ್ ಮತ್ತು ಇಂಟರ್‌ನೆಟ್‌ಗಳ ಮೂಲಕ ಆಡಳಿತಕ್ಕೆ ಸಂಬಂಧಪಟ್ಟ ಮಾಹಿತಿ ದಾಖಲಿಸುವ, ಶುಲ್ಕ ಸಂಗ್ರಹಿಸುವ, ಪ್ರಮಾಣ ಪತ್ರ ಕೊಡುವ ಕೇಂದ್ರವಾಗಿರುತ್ತದೆ. ಇದು ರೈತಾಪಿ ತಮಗೆ ಬೇಕಾದ ಮೂಲಭೂತ ಸೌಲಭ್ಯಗಳ ಬಗ್ಗೆ ಕೇಳಲು ಮಾಹಿತಿಯನ್ನು ಒದಗಿಸುತ್ತದೆಯೇ ವಿನಃ ಸಾಕ್ಷಾತ್ ಸೌಲಭ್ಯವನ್ನೇನು ಒದಗಿಸಿಬಿಡುವುದಿಲ್ಲ. ಇದು ರೈತರಿಗೆ ಪೂರಕ ಆದಾಯವನ್ನಾಗಲೀ, ಬಿಕ್ಕಟ್ಟಿನ ನಿವಾರಣೆಯನ್ನಾಗಲೀ ಹೇಗೆ ಮಾಡುತ್ತದೆ?


3. ದೊಡ್ಡ ಬಂಡವಾಳ ಹೂಡಿಕೆ ಮಾಡುವ ಭರವಸೆ ನೀಡಿರುವ ಮತ್ತೊಂದು ಕಂಪನಿ ಕರ್ನಾಟಕ ಮೂಲದ Dee Mandala. ಈ ಕಂಪನಿಯ ಮಾಲೀಕರಾದ ಮಹದೇವ ಗೌಡ ಎಂಬುವವರು ಈಗಾಗಲೇ ರಾಷ್ಟ್ರಪತಿಗಳಿಂದ ಪರಿಸರ ರಕ್ಷಣೆಗಾಗಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಕರ್ನಾಟಕದ ಯಾವ ಪರಿಸರ ರಕ್ಷಣೆ ಚಳವಳಿಯಲ್ಲೂ ಈ ಮಹಾಶಯರ ಹೆಸರು ಕೇಳಿಬಾರದಿದ್ದರೂ ಇವರು ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸುವಷ್ಟು ದೊಡ್ಡ ಪರಿಸರ ರಕ್ಷಣೆಯ ಕೆಲಸ ಎಲ್ಲಿ ಮಾಡಿದ್ದಾರೆ ಎಂಬುದಂತೂ ನಿಗೂಢವಾಗಿದೆ.

ವಾಸ್ತವವಾಗಿ Dee Mandala ಕಂಪನಿ ಒಂದು ದೊಡ್ಡ ರಿಯಲ್ ಎಸ್ಟೇಟ್ ಕಂಪನಿಯಾಗಿದ್ದು ಈವರೆಗೆ ಅದು ಗ್ರಾಮದಲ್ಲಿ ಮಾಡಿರುವ ಕೃಷಿ ಕೆಲಸವೆಂದರೆ ಗೋಲ್ಫ್ ಕೋರ್ಸ್, ಫಾರ್ಮ್ ಹೌಸ್, ನಗರದ ಶ್ರೀಮಂತರಿಗಾಗಿ ಹಳ್ಳಿಗಾಡಿನಲ್ಲಿ ದೊಡ್ಡ ದೊಡ್ಡ ವಿಲ್ಲಾಗಳ ನಿರ್ಮಾಣ ಹಾಗೂ ಔಷಧೀಯ ಸಸ್ಯಗಳ ಉತ್ಪಾದನೆ ಮತ್ತು ರಫ್ತು. ಬೆಂಗಳೂರಿನಿಂದ 55 ಕಿ.ಮಿ. ದೂರದಲ್ಲಿರುವ ಮುದ್ದುಲಿಂಗೇನಹಳ್ಳಿಯ ಬಳಿ 3,000 ಎಕರೆ ಪ್ರದೇಶದಲ್ಲಿ Dee Mandala ಮಾಲೀಕ ಮಹದೇವ ಗೌಡರ ರೆಸಾರ್ಟ್ ಇದೆ. ಈಗ ಕರ್ನಾಟಕದಲ್ಲಿ ಇನ್ನಷ್ಟು ರೆಸಾರ್ಟ್ ಹಾಗೂ ವಿಲ್ಲಾಗಳನ್ನು ಕಟ್ಟಿ ಲಾಭ ಮಾಡುವುದು ಗೌಡರ ಉದ್ದೇಶ. ಶುದ್ಧ ರಿಯಲ್ ಎಸ್ಟೇಟ್ ಉದ್ಯಮಿಯಾದ ಗೌಡರ ಕಂಪನಿಗೆ ಕೃಷಿ ಹೆಸರಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸರ್ಕಾರ ನೀಡಲು ಒಪ್ಪಿದೆ ಮತ್ತು ಸ್ಟೇಟ್ ಬ್ಯಾಂಕ್ ಕೂಡ ಅವರ ಕಂಪನಿಗೆ ಅಗ್ಗದ ದರದಲ್ಲಿ ಬಂಡವಾಳವನ್ನು ಒದಗಿಸುವ ಭರವಸೆ ನೀಡಿದೆ. ಈ ರಿಯಲ್ ಎಸ್ಟೇಟ್ ಉದ್ಯಮ ನಾಡಿನ ರೈತರ ಕಷ್ಟವನ್ನು ಹೇಗೆ ಬಗೆಹರಿಸುತ್ತದೆ?

4. ಅಮೆರಿಕದ ವೆಲ್‌ಸ್ಪನ್ ಸಂಸ್ಥೆಯ ಅಧೀನ ಸಂಸ್ಥೆಯಾದ ಗುಜರಾತ್ ಮೂಲದ ವೆಲ್‌ಸ್ಪನ್ ಇಂಡಿಯಾ ಸಂಸ್ಥೆ ತನ್ನ ಪೈಪ್ ತಯಾರಿಕಾ ಘಟಕ ಒಂದನ್ನು ತೆರೆಯಲು ಜಮೀನು ಕೇಳಿದೆ. ಅದಕ್ಕಾಗಿ 5,000 ಕೋಟಿ ಹೂಡಿಕೆಯ ಭರವಸೆ ನೀಡಿದೆ. ಸರ್ಕಾರ ನೀಡುತ್ತಿರುವ ಸವಲತ್ತಿಗೆ ಅದು ನಾಡಿನ ರೈತಾಪಿಗೆ ಕಡಿಮೆ ದರದಲ್ಲಿ ಪೈಪುಗಳನ್ನೇನೂ ಸರಬರಾಜು ಮಾಡುವುದಿಲ್ಲ, ಇಲ್ಲಿ ಅಗ್ಗಕ್ಕೆ ಸಿಗುವ ನೆಲ, ಜಮೀನು ಮತ್ತು ವಿದ್ಯುತ್ತನ್ನು ಬಳಸಿಕೊಂಡು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅದರಲ್ಲೂ ದಕ್ಷಿಣ ಏಷಿಯಾದ ಮಾರುಕಟ್ಟೆಗೆ ತನ್ನ ಸರಕನ್ನು ಮಾರುತ್ತದಷ್ಟೆ. ಇದರಿಂದ ಈ ನಾಡಿನ ರೈತಾಪಿಗೆ ಏನು ಲಾಭ?


5. MARG ಎಂಬ ಕಂಪನಿ ಸಹ 4000 ಕೋಟಿ ಬಂಡವಾಳ ಹೂಡಿಕೆಯ ಭರವಸೆ ನೀಡಿದೆ. ಇದು ಸಹ ಒಂದು ರಿಯಲ್ ಎಸ್ಟೇಟ್ ಸಂಸ್ಥೆಯಾಗಿದ್ದು ಬಿಜಾಪುರ ಮತ್ತು ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಯಲ್ಲಿ ಸಹಭಾಗಿಯಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇವತ್ತು ದೇಶಾದ್ಯಂತ ನಡೆಯುತ್ತಿರುವ ಈ ಕಂಪನಿಯ ಎಲ್ಲಾ ಯೋಜನೆಗಳ ಒಟ್ಟಾರೆ ವಹಿವಾಟೇ ಕೇವಲ 3,000 ಕೋಟಿ. ಆದರೂ ಅದು ರಾಜ್ಯದಲ್ಲಿ 4,000 ಕೋಟಿ ಹಣ ಹೂಡಿಕೆ ಮಾಡುತ್ತದೆ ಎಂದಿದ್ದಕ್ಕೆ ಸರ್ಕಾರ ಅದಕ್ಕೆ ರತ್ನಗಂಬಳಿ ಹಾಸಿ ನಮ್ಮದೇ ಬ್ಯಾಂಕಿನಿಂದ ಅಗ್ಗದ ದರದಲ್ಲಿ ಬಂಡವಾಳವನ್ನು ಕೊಡಿಸುತ್ತಿದೆ.

ಕೃಷಿ ಉದ್ದಿಮೆಗಳ ಹೂಡಿಕೆಯ ಸಮಾವೇಶದಲ್ಲಿ ನೀಡಲಾದ ಭರವಸೆಗಳಲ್ಲಿ ಶೇ.75ಕ್ಕಿಂತಲೂ ಹೆಚ್ಚಿನ ಹೂಡಿಕೆಗಳು ರಿಯಲ್ ಎಸ್ಟೇಟ್ ಕ್ಷೇತ್ರ, ಗ್ರಾಮೀಣ ಸಾಫ್ಟ್‌ವೇರ್ ಕ್ಷೇತ್ರ ಮತ್ತು ಸ್ವಾವಲಂಬಿ ರೈತಾಪಿ ಜೀವನವನ್ನೇ ಒಳಗಿನಿಂದ ಪುನರ್ ರಚಿಸಿ ಅಂತರರಾಷ್ಟ್ರೀಯ ಮಾರುಕಟ್ಟೆಯ ಗ್ರಾಹಕರಾಗುವಂತೆ, ನವಮಾಹುತು ವಾಗುವಂತೆ ಮಾಡುವ ಹೂಡಿಕೆಗಳಾಗಿವೆ. ಹೀಗಾಗಿಯೇ ಈ ಸಮಾವೇಶ ಮತ್ತು ಅಲ್ಲಿ ಪ್ರಸ್ತಾಪಿತವಾದ ಹೂಡಿಕೆಗಳು ರೈತ ವಿರೋಧಿಯಾಗಿವೆ, ದೇಶ ವಿರೋಧಿಯಾಗಿವೆ.



ನಗರದ ಐಷಾರಾಮಿ ವರ್ಗಕ್ಕೆ ಗೋಲ್ಫ್ ಕೋರ್ಸ್, ವಿಲ್ಲಾ, ಫಾರ್ಮ್ ಹೌಸ್, ಹೈಟೆಕ್ ಫಾರ್ಮಿಂಗ್, ರಫ್ತು ಆಧಾರಿತ ಔಷಧೀಯ ಸಸ್ಯಗಳ ಉತ್ಪಾದನೆಗೆ ರೈತಾಪಿಯ ಜಮೀನನ್ನು ಕಸಿದು ಖಾಸಗಿ ಕಂಪನಿಗಳಿಗೆ ಕೊಡುವುದನ್ನು ವಿರೋಧಿಸಲೇ ಬೇಕು. ರೈತನನ್ನು ಭಿಕ್ಷುಕನನ್ನಾಗಿ ಮಾಡುವ, ರೈತನ ಆಸಕ್ತಿಯನ್ನು ಕೇಂದ್ರದಲ್ಲಿ ಇಟ್ಟುಕೊಳ್ಳದ ಯಾವುದೇ ಯೋಜನೆಗೆ ಒಂದಿಂಚೂ ಭೂಮಿಯನ್ನು ಕೊಡದಂತೆ ಬೃಹತ್ ಹೋರಾಟ ಕಟ್ಟಲೇಬೇಕು.

ಜ್ಯೋತಿಷಿ ಆದಿತ್ಯ ನಾರಾಯಣನಿಗೆ ಅವಿವೇಕಿಗಳೇ ಬಂಡವಾಳ




ಬದುಕಿನ ಜಂಜಾಟ, ಅಭದ್ರತೆ, ಮಾನಸಿಕ ಸಮಸ್ಯೆಗಳಿಗೆ ಸಿಲುಕಿದ ಬಹುತೇಕರು 'ಅದೃಷ್ಟ'ದ ಮೊರೆ ಹೋಗುತ್ತಾರೆ. ಹಾಗೆ ಅದೃಷ್ಟವನ್ನು ಹುಡುಕಹೊರಟವರನ್ನು ಮಣ್ಣು ಮುಕ್ಕಿಸಲು ರೆಡಿಯಾಗಿ ಕೂತಿರುವವರು ಒಬ್ಬಿಬ್ಬರಲ್ಲ. ಜನರನ್ನು ವಂಚಿಸುವುದನ್ನೇ ತನ್ನ ಕಾಯಕ ಮಾಡಿಕೊಂಡಿರುವವರಲ್ಲಿ ಆದಿತ್ಯ ನಾರಾಯಣ ಪ್ರಮುಖ.

ಬೇರೆಲ್ಲ ಜ್ಯೋತಿಷಿಗಳಂತೆ ಈತ ಕೆನ್ನೆ ತುಂಬ ಗಡ್ಡ ತಲೆಯ ಹಿಂದೆ ಜುಳ್ಳಿಜುಟ್ಟು, ಕುತ್ತಿಗೆಗೆ ಜಪಮಣಿಗಳು, ಹಣೆತುಂಬ ಕುಂಕುಮ, ವಿಭೂತಿಗಳ ವೇಷ ತೊಡುವುದಿಲ್ಲ. ಈತನದ್ದು ಸಿಕ್ಕಾಪಟ್ಟೆ ಮಾಡ್ರನ್ ಲುಕ್ಕು. 'ಲಕ್ಕಿ ವರ್ಲ್ಡ್' ನಾರಾಯಣ ಎಂಥ ಸುಡು ಬೇಸಿಗೆಯಲ್ಲೂ ತೊಟ್ಟ ಸೂಟು, ಕೋಟುಗಳನ್ನು ಬಿಚ್ಚಿಡುವುದಿಲ್ಲ.

ಟಿ. ನಾರಾಯಣಕುಮಾರ್ ಎಂಬ ಮೂಲನಾಮಧೇಯವನ್ನು ಹೊಂದಿರುವ ಈತ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಓದಿದ್ದಾನಂತೆ. ಅದು ಎಷ್ಟರಮಟ್ಟಿಗೆ ನಿಜವೋ ಗೊತ್ತಿಲ್ಲ. ಆದರೆ ಈ ಹಿಂದೆ ಈತ ಲೈಟ್ ಮೆಕ್ಯಾನಿಕ್ ಆಗಿದ್ದಂತೂ ನಿಜ. ಸಿನಿಮಾ ಶೂಟಿಂಗ್‌ಗಳಲ್ಲಿ ಬಳಸುವ ಬೃಹತ್ ಗಾತ್ರದ ಲೈಟುಗಳು ಕೆಟ್ಟಾಗ ಅದನ್ನು ರಿಪೇರಿ ಮಾಡಿ ಬದುಕುತ್ತಿದ್ದ. ಆದರೆ ಅದರಿಂದ ಬರುತ್ತಿದ್ದ ಕಾಸು ಈತನ ಶೋಕಿಗಳಿಗೂ ಸಾಕಾಗುತ್ತಿರಲಿಲ್ಲ.

ಈ ಹಿಂದೆ ತಮಿಳುನಾಡು ಮೂಲದ ಅರುಳ್ ಮುರುಗನ್ ಎಂಬಾತ ಸಂಜೆ ದಿನಪತ್ರಿಕೆಗಳಲ್ಲಿ 'ಲಕ್ಕಿವರ್ಲ್ಡ್' ಹೆಸರಿನಲ್ಲಿ 'ಜೀವನದ ಭವಿಷ್ಯ, ವ್ಯಾಪಾರದಲ್ಲಿ ಪ್ರಗತಿ, ಮನೆ-ಮದುವೆ ವಿಚಾರದಲ್ಲಿ ಅಡೆತಡೆ, ಪ್ರೇಮದಲ್ಲಿ ಸಮಸ್ಯೆ ಪತಿ-ಪತ್ನಿ ವಿರಸಗಳಿಗೆ ದೈವಿಕಶಕ್ತಿಯಿಂದ ಪರಿಹಾರ ಸೂಚಿಸುತ್ತೇನೆ' ಎಂದು ಜಾಹೀರಾತು ಕೊಟ್ಟು, ತಿಂಗಳಲ್ಲಿ ಎರಡು ವಾರ ಮೆಜೆಸ್ಟಿಕ್ ಏರಿಯಾದ ಕೆಂಪಾಂಬ ಮತ್ತು ಸಂಗಮ್ ಲಾಡ್ಜುಗಳಲ್ಲಿ ರೂಮು ಹಾಕಿಕೊಂಡು ಕೂರುತ್ತಿದ್ದ. ಆಗ ಲೈಟ್ ರಿಪೇರಿ ಕೆಲಸಕ್ಕೆ ಟಾಟಾ ಹೇಳಿದ ಆದಿತ್ಯ ನಾರಾಯಣ ಈ ಅರುಳ್ ಮುರುಗನ್ ಬೆಂಗಳೂರಿಗೆ ಬಂದಾಗ, ಆತನಿಗೆ ಊಟ, ತಿಂಡಿ, ಸಿಗರೇಟು, ಬೀಡಾ ಸಪ್ಲೈ ಮಾಡುವ ಕೆಲಸಕ್ಕೆ ಸೇರಿದ. ಆಗ ತನ್ನ ಹೆಸರನ್ನು 'ಆದಿತ್ಯ ನಾರಾಯಣ' ಎಂದು ಬದಲಿಸಿಕೊಂಡ ನಾರಾಯಣ ಕುಮಾರನ ಖದರ್ರೂ ಬದಲಾಯಿತು.



ಇವತ್ತು ಆದಿತ್ಯ ನಾರಾಯಣ ಎಷ್ಟು 'ಪವರ್ ಫುಲ್' ಆಗಿದ್ದಾನೆಂದರೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಈತನಿಂದ ಸಲಹೆಗಳನ್ನು ಪಡೆಯುತ್ತಿದ್ದ. ಯಡಿಯೂರಪ್ಪನ ಸರ್ಕಾರದಲ್ಲಿ ಅದೇನೇ ತೊಡಕಾದರೂ, ಪಕ್ಷದಲ್ಲಿ ಬಿರುಕಾದರೂ, ಆತನ ಆರೋಗ್ಯದಲ್ಲಿ ಏರುಪೇರಾದರೂ ಆತ ತನ್ನ ಗೃಹ ಕಚೇರಿಗೆ ಕರೆಸಿಕೊಂಡು ಪರಿಹಾರ ಕೇಳುತ್ತಿದ್ದುದು ಯಾವ ರಾಜಕೀಯ ಮುತ್ಸದ್ದಿ, ಆರ್ಥಿಕ ತಜ್ಞ, ನುರಿತ ವೈದ್ಯರನಲ್ಲ. ಬದಲಾಗಿ ಬೆಳಗ್ಗೆ ಎದ್ದು ಟಾಯ್ಲೆಟ್ಟಿನಲ್ಲಿ ಎಷ್ಟು ನಿಮಿಷ ಕೂತರೆ ಒಳಿತು ಎನ್ನುವುದರಿಂದ ಹಿಡಿದು ಎಷ್ಟು ಸಂಖ್ಯೆಯ ಇಡ್ಲಿ ತಿನ್ನಬೇಕು, ಬೂಟಿನ ಸೈಜು ಎಷ್ಟಿರಬೇಕು ಅನ್ನೋದನ್ನೆಲ್ಲಾ ಕೇಳಿ ಮಾರ್ಗದರ್ಶನ ಪಡೆಯುತ್ತಿದ್ದುದು ಇದೇ ಆದಿತ್ಯ ನಾರಾಯಣನಿಂದಲೇ!

ಈ ಆದಿತ್ಯ ನಾರಾಯಣ ಭ್ರಷ್ಟ ರಾಜಕಾರಣಿಗಳನ್ನು ಮತ್ತು ಹಣವಂತ ಉದ್ಯಮಿಗಳನ್ನು ಯಾಮಾರಿಸಿದ್ದರೆ ಪರವಾಗಿಲ್ಲ. ಆದರೆ ಈತ ಕೆಳ ಮಧ್ಯಮವರ್ಗದವರ ಭಾವನೆಗಳು ಮತ್ತವರ ಸಂಬಂಧಗಳನ್ನೂ ಬಂಡವಾಳ ಮಾಡಿಕೊಂಡು ವಂಚಿಸುತ್ತಿರುವುದು ಸಹಿಸಲಸಾಧ್ಯವಾದದ್ದು.

ಸದ್ಯ ಜೆಪಿ ನಗರ ಫಸ್ಟ್ ಫೇಸ್‌ನಲ್ಲಿರುವ ಇಂದಿರಾ ಗಾಂಧಿ ಸರ್ಕಲ್ ಬಳಿ 'ಸಾಯಿ ಲಕ್ಕಿ ವರ್ಲ್ಡ್' ಎಂಬ ಜ್ಯೋತಿಷ್ಯ ಕೇಂದ್ರವನ್ನು ತೆರೆದಿರುವ ಆದಿತ್ಯ ನಾರಾಯಣ ಜನರನ್ನು ಮುಂಡಾಮೋಚಲು ತರಹೇವಾರಿ ಟ್ರಿಕ್ಕುಗಳನ್ನು ಕರಗತ ಮಾಡಿಕೊಂಡಿದ್ದಾನೆ.

ಯಾರಾದರೂ ಗಂಡ-ಹೆಂಡಿರು ಈತನ ಬಳಿ ತಮ್ಮ ಸಮಸ್ಯೆ ಹೇಳಿಕೊಂಡು ಬಂದರೆ, ಮೊದಲಿಗೆ ಗಂಡನನ್ನು...

ಕಳ್ಳ ಕನ್ನಡಿ ನಾರಾಯಣ ಬೆಳೆದಿದ್ದೇ ಕನ್ನಡಪ್ರಭದಿಂದ!



ಸಂಖ್ಯಾಶಾಸ್ತ್ರದ ಹೆಸರಿನಲ್ಲಿ ಜನರಿಗೆ ಮಂಕುಬೂದಿ ಎರಚುತ್ತಿರುವ ಆದಿತ್ಯ ನಾರಾಯಣ 'ಅದೃಷ್ಟ ಕನ್ನಡಿ- ಎಲ್ಲ ಅದ್ಭುತ ರಹಸ್ಯಗಳನ್ನು ತಿಳಿಸುವ ಏಕೈಕ ಪುಸ್ತಕ' ಎಂಬ ಮಹಾನ್ ಕೃತಿಯ ಕರ್ತೃವೂ ಹೌದು. ಅದ್ಯಾರೋ ಬರೆದ ನ್ಯೂಮರಾಲಜಿ ಪುಸ್ತಕವನ್ನು ಕದ್ದ ಈತ ಅದಕ್ಕೆ ತನ್ನ ಹೆಸರು ಹಾಕಿಸಿಕೊಂಡಿದ್ದಾನೆ ಎನ್ನುವುದು ಶ್ರೀಯುತರ ಮೇಲಿರುವ ಗಂಭೀರ ಆರೋಪ.

ಕನ್ನಡಪ್ರಭದಲ್ಲಿ ಬರುವ 'ಜ್ಯೋತಿಷ್ಯ ಪ್ರಭ' ಪುರವಣಿಯಲ್ಲಿ ಈತ ಸಂಖ್ಯಾಶಾಸ್ತ್ರದ ಬುರುಡೆ ಲೇಖನಗಳನ್ನು ಬರೆಯುತ್ತಿದ್ದ. ಪತ್ರಿಕೆಯವರು ಲೇಖನದ ಕೊನೆಯಲ್ಲಿ ಈತನ ಫೋನ್ ನಂಬರ್ ಅನ್ನು ಸಹ ಪ್ರಿಂಟು ಮಾಡುತ್ತಿದ್ದರು. ಅದು ಈತನ ಕಸುಬಿಗೆ ಒಳ್ಳೇ ಕಾಂಟ್ಯಾಕ್ಟುಗಳನ್ನು ಕೊಡಮಾಡುತ್ತಿತ್ತು.

ಜನರ ಕಷ್ಟಗಳಿಗೆ ನ್ಯೂಮರಾಲಜಿಯೇ ಪರಿಹಾರ ಎನ್ನುವ ಈಗ ಅದಕ್ಕೆ ತನ್ನ ಹೆಸರನ್ನೇ ಉದಾಹರಣೆಯಾಗಿ ಕೊಡುತ್ತಾನೆ.

"ನನ್ನ ವಿದ್ಯಾಭ್ಯಾಸ ಮುಗಿದು ವೃತ್ತಿ ಹುಡುಕುತ್ತಿದ್ದ ಸಂದರ್ಭದಲ್ಲಿ ನನ್ನ ಹೆಸರು ಮತ್ತು ಅದರ ಸಂಖ್ಯೆ ಹೀಗಿತ್ತು:

T. NARAYAN KUMAR

4 5 1 2 1 1 1 5 2 6 4 1 2 = 35 = 8

ಈ ಹೆಸರು ಮತ್ತು ಸಂಖ್ಯೆಯಿಂದಾಗಿ ನಾನು ಪಟ್ಟಪಾಡು ಅಷ್ಟಿಷ್ಟಲ್ಲ. ಯಾವುದೇ ಸ್ಥಿರವಾದ ನೆಲೆ ಬೆಲೆಯಿಲ್ಲದೇ ಕೈಹಾಕಿದ ಕೆಲಸಗಳಲ್ಲೆಲ್ಲ ಅವಮಾನ, ಹಿಂಸೆ, ಅಪಜಯದಲ್ಲೇ ಅಂತ್ಯಗೊಳ್ಳುತ್ತಿತ್ತು. ಆಗ ಅದೃಷ್ಟವಶಾತ್ ನನ್ನ ಗುರು ಖ್ಯಾತ ಸಂಖ್ಯಾಶಾಸ್ತ್ರಜ್ಞ ಶ್ರೀ ಸಾಯಿನಾಥರನ್ನು ಆಕಸ್ಮಿಕವಾಗಿ ಭೇಟಿ ಮಾಡಿ ನನ್ನ ಹೆಸರು ಮತ್ತು ಸಂಖ್ಯೆಯನ್ನು ಹೀಗೆ ಬದಲಾಯಿಸಿಕೊಂಡೆ:

ADITHYA NARAYAN

1 4 1 4 5 11 5 1 2 111 5 = 33 = 6

ಅಂದಿನಿಂದ ನಾವು ತಿರುಗಿ ನೋಡಿದ್ದೇ ಇಲ್ಲ. ನಮ್ಮ ಅದೃಷ್ಟದ ಬಾಗಿಲೇ ತೆರೆಯಿತು. ದಿಢೀರ್ ಬದಲಾವಣೆಗಳಾದವು. ಆಗ ನಾನು ಅಭ್ಯಾಸ ಮಾಡಿದ್ದೆ ಸಂಖ್ಯಾಶಾಸ್ತ್ರವನ್ನು, ನಮ್ಮ ಓದಿಗೂ, ಮಾಡುತ್ತಿದ್ದ ಎಲೆಕ್ಟ್ರಿಕಲ್ ಇಂಜಿನಿಯರ್ ಹುದ್ದೆಗೂ ಸಂಬಂಧವಿಲ್ಲದ ಕ್ಷೇತ್ರದಲ್ಲಿ ಅಪಾರ ಯಶಸ್ಸು ಸಿಕ್ಕಿತು. ಇಂದು ಕರ್ನಾಟಕವು ಸೇರಿದಂತೆ ವಿವಿಧ ದೇಶವಿದೇಶಗಳಲ್ಲಿ ಈ ಹೆಸರನ್ನು ಗುರುತಿಸುವಂತಾಗಿದೆ.

ನನ್ನ ಬಹಳ ವರ್ಷಗಳ ಸಂಖ್ಯಾಶಾಸ್ತ್ರದ (Numerology) ಸಂಶೋಧನೆಯ ನಂತರ ಸೃಷ್ಟಿಯಾದದ್ದೇ ಈ 'ಅದೃಷ್ಟ ಕನ್ನಡಿ'. ಈ ಹಿಂದೆ ಯಾರೂ ಕೇಳಿರದ ತಿಳಿಸಲಾಗದ ಬರೆಯಲಾರದ ಸಂಖ್ಯಾಶಾಸ್ತ್ರದ ವಿವಿಧ ಅದ್ಭುತ ರಹಸ್ಯಗಳನ್ನು ಈ ಪುಸ್ತಕದಲ್ಲಿ ತಿಳಿಸುವ ಪ್ರಯತ್ನಪಟ್ಟಿದ್ದೇನೆ. ಪ್ರತಿಯೊಬ್ಬರ ಮನೆಯಲ್ಲೂ ಇರಬೇಕಾದ ಈ ಪುಸ್ತಕವನ್ನು ನಿಮ್ಮ ಮಡಿಲಿಗೇ ಹಾಕುತ್ತಿದ್ದಾನೆ" ಎಂದು ತನ್ನ ಪುಸ್ತಕದ ಬೆನ್ನುಡಿಯಲ್ಲಿ ಬರೆದುಕೊಂಡಿದ್ದಾನೆ.

ಈತನೇನೋ ಹೆಸರು ಬದಲಿಸಿಕೊಳ್ಳುವುದರ ಜೊತೆಗೆ ಅಮಾಯಕರನ್ನು ವಂಚಿಸಿ, ಲೂಟಿ ಮಾಡಿ ದೊಡ್ಡವನಾಗಿದ್ದಾನೆ. ಆದರೆ ಸಾಮಾನ್ಯ ಜನರ ಪಾಡು, ಅವರ ಬದುಕು ಈತನಿಂದಾಗಿ ಎಕ್ಕುಟ್ಟಿ ಹೋಗಿದೆ...

ಈ ಸಮಾಜದಲ್ಲಿ ಎಂಜಲಿಗೂ ಹುಟ್ಟಿನ ಹಿನ್ನೆಲೆಯ ಮುಖಬೆಲೆಯಿದೆ!



ಕೆಲವರ ದೇಹ, ಉಚ್ಚಿಷ್ಟ ಎಲ್ಲವೂ ಶ್ರೇಷ್ಠವಾಗಿ ಮಿಕ್ಕವರ ದೇಹ, ದೃಷ್ಟಿ, ಎಂಜಲು ಹೀಗೆ ಎಲ್ಲವೂ ನಿರಾಕರಣಗೊಂಡ ಅತ್ಯಂತ ಅಮಾನವೀಯವೂ, ಅಸಮತೋಲನವೂ ಆದ ಸಾಮಾಜಿಕ ಆವರಣವನ್ನು ಈ ದೇಶದ ಸಾಮಾಜಿಕ ಚರಿತ್ರೆಯಾಗಿ ಓದಿಕೊಂಡವರಿಗೆ ಈ ಎಂಜಲ ಕಥೆ ಹೆಚ್ಚು ಆತಂಕವನ್ನುಂಟುಮಾಡದು. ಎಂಜಲು ಎಲೆಯ ಮೇಲೆ ಹೊರಳಾಡುವುದು ಭಕ್ತರ ನಂಬಿಕೆ ಎಂಬುದು ಬಹುವಾಗಿ ಸಮರ್ಥನೆಯ ನೆಲೆಯಿಂದ ಬರುತ್ತಿರುವ ಮಾತು. ಯಾರೂ ಕೂಡಾ ಬಲಾತ್ಕಾರವಾಗಿ ಯಾರೊಬ್ಬರನ್ನೂ ಎಂಜಲ ಎಲೆಯ ಮೇಲೆ ಹೊರಳುವಂತೆ ಬಲಾತ್ಕರಿಸುತ್ತಿಲ್ಲ, ನಿಜ.

ನಾನು ಚಿಕ್ಕಂದಿನಿಂದ ಇತ್ತೀಚಿಗಿನವರೆಗೂ ಕಂಡಹಾಗೆ ನಮ್ಮೂರಲ್ಲಿ ಕೊರಗರೆನಿಸಿದ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ನಿಷ್ಪಾಪಿ ಜನ ದೊಡ್ಡಪ್ರಸ್ತವಿದೆ ಎಂದು ತಿಳಿದ ಜಾಗಕ್ಕೆ ತಾವೇ ಬಂದು ಉಂಡೆಸೆದ ಎಂಜಲ ಎಲೆಯಿಂದ ಅನ್ನ, ಸಾಂಬಾರುಗಳನ್ನು ಸಂಗ್ರಹಿಸುತ್ತಿದ್ದುದುಂಟು. ಆಮೇಲೆ ಮನೆಮಂದಿ ಬಹಳ ಔದಾರ್ಯ ತೋರುವ ಹಾಗೆ ಅವರ ಹೆಡಿಗೆಗೆ ಒಂದಿಷ್ಟು ಅನ್ನ, ಸಾರುಗಳನ್ನು ಕರುಣಿಸುತ್ತಿದ್ದುದೂ ಉಂಟು. ಹಾಗೆ ಸಂಗ್ರಹವಾದ ಅನ್ನವನ್ನು ಹರಿಯುವ ನೀರಿನಲ್ಲಿ ತೊಳೆದು ತರುವಾಯದಲ್ಲಿ ಒಣಹಾಕಿ, ಅನ್ನವಾಗಿದ್ದುದನ್ನು ಅಕ್ಕಿಯಂತೆ ಪರಿವರ್ತಿಸಿ ಮುಂದಿನ ದಿನಗಳ ಹಸಿವಿಗೆ ಬಳಸಿಕೊಳ್ಳುತ್ತಿದ್ದುದಾಗಿ ಆ ಸಮುದಾಯದವರಿಂದಲೇ ನಾನು ಕೇಳಿಬಲ್ಲೆ.

ಹೀಗೆ ಎಂಜಲು ಎಲೆಯನ್ನು ನಮ್ಮಂತೆಯೇ ಇರುವ ಮನುಷ್ಯರ ಮುಂದೆ ಇರಿಸಿ, ಅದನ್ನು ಸಂಗ್ರಹಿಸುವಂತೆ ಯಾವ ಉತ್ತಮಜಾತಿಯೂ ಬಲಾತ್ಕರಿಸುತ್ತಿದ್ದುದಿಲ್ಲ. ಕುತೂಹಲದ ಸಂಗತಿಯೆಂದರೆ ಈ ಎಂಜಲು ತಿನ್ನುವುದನ್ನು ಸಮರ್ಥಿಸುವ ಕಥೆಯೂ ಒಂದಿರುವುದು! ಇಡಿಯ ಜಗತ್ತೇ ಜಲ ಪ್ರಳಯವಾದಾಗ ಈ ಸಮುದಾಯಕ್ಕೆ ಸೇರಿದ ಅಣ್ಣ ತಂಗಿಯರನ್ನು ಡೋಲು (ಡೊಳ್ಳು) ಒಳಗಿರಿಸಿ ತೇಲಿಬಿಟ್ಟರಂತೆ, ಹಾಗೆ ಬದುಕುಳಿದ ಅವರಿಂದಲೇ ಹುಟ್ಟಿದ ಈ ಡೋಲು ಜಾತಿಯೆಲ್ಲಾ ಅವರ ಮಕ್ಕಳಾದುದರಿಂದ ಮಕ್ಕಳ ಎಂಜಲನ್ನು ಹಿರೀಕರಾದ ಇವರು ತಿನ್ನುವುದಂತೆ. ಇದು ಕೊರಗರೇ ಹೇಳಿಕೊಳ್ಳುತ್ತಿದ್ದ ಕಥೆ. ಯಾರೊಬ್ಬರೂ ಈ ಕಥೆಯನ್ನು ಹೇಳಿ ಅವರಿಗೆ ತಾವು ಉಂಡೆಸೆದುದನ್ನು ಸಂಗ್ರಹಿಸುವಂತೆ ಹೇಳುತ್ತಿದ್ದಿಲ್ಲ, ಆದರೆ ಅವರೆದುರು ಎಂಜಲೆಲೆಯನ್ನು ಎಸೆಯುವುದನ್ನು ನಿಲ್ಲಿಸಿರಲಿಲ್ಲ ಮತ್ತು ಹಾಗೆ ಸಂಗ್ರಹಿಸುವುದನ್ನು ತಪ್ಪು ಎಂದು ತಿಳಿಹೇಳುವ ಕೆಲಸವನ್ನೂ ಮಾಡಿಲ್ಲ, ಅವರ ಪಾಲಿನ ಭಾಗ್ಯವೆಂದು ಅವರೇ ಹೇಳಿಕೊಳ್ಳುತ್ತಿದ್ದ ಕಥೆಯೂ ಹಾಗೆ ಎಂಜಲು ನೀಡುವವರಿಗೆ ತಮ್ಮ ಹಿನ್ನೆಲೆಯ ಬಗೆಗೆ ಕೀಳರಿಮೆಯನ್ನೂ ಮೂಡಿಸಿದ್ದಿಲ್ಲ.


ಕಥೆಯೊಂದನ್ನು ಬಿಟ್ಟು ಆ ಕೆಲಸವನ್ನು ಸಮರ್ಥಿಸುವ ಯಾವುದೂ ಅಲ್ಲಿರಲಿಲ್ಲ, ಆದರೆ ಎಲ್ಲರೂ ಒಪ್ಪಿಕೊಳ್ಳುವ ಅತೀ ನಿಷ್ಠುರ ಬೆಂಕಿಯಾದ ಹಸಿವು ಅಲ್ಲಿತ್ತು, ಎಸೆಯುವವರು ಮತ್ತು ಎತ್ತಿಕೊಳ್ಳುವವರೆಂಬ ಅಸಮಾನತೆ ಅಲ್ಲಿತ್ತು, ಆಹಾರ ಮೂಲವನ್ನು ಹೀಗೆ ಸಂಗ್ರಹಿಸುವ ಸಮುದಾಯವೊಂದನ್ನು ತನ್ನ ಬಗಲಲ್ಲಿ ಕಟ್ಟಿಕೊಂಡೂ ನಾಚದಿದ್ದ 'ಗೌರವಾನ್ವಿತ ನಾಗರಿಕ ಸಮಾಜ'ವೊಂದು ಅಲ್ಲಿತ್ತು. ಇಡಿಯಾಗಿ ಮನುಷ್ಯಧರ್ಮ ಎನ್ನಬಹುದಾದುದರ ಪರಿಪೂರ್ಣ ಅಣಕ ಅಲ್ಲಿತ್ತು, ಆದರೆ ಹಾಗೆ ಎಸೆಯುತ್ತಿದ್ದ ಯಾರೊಬ್ಬರಿಗೂ 20ನೆಯ ಶತಮಾನ ಕಳೆಯುವ ತನಕ (ಕೆಲವು ಕಡೆ ಇನ್ನೂ ಕೂಡಾ) ಹೇಸಿಗೆ ಎನಿಸಿಲ್ಲ.

ಈಗ ಇದೊಂದು ಅಪರಾಧವೆಂದು ಘೋಷಿತವಾದುದರಿಂದ ಹಾಗೆ ಬರುತ್ತೇವೆನ್ನುವವರನ್ನು ಕಾನೂನಿನ ಭಯದಿಂದ ಬೇಡವೆನ್ನುತ್ತಿದ್ದಾರೆಯೇ ವಿನಾ ನಂಬಿಗೆಯ ಕುರಿತಂತೆ ಎಂಜಲಿನ ಗೌರವ ಅಳಿದುಹೋಗಿದೆ ಎಂದು ಅರ್ಥವಲ್ಲ, ಇದು ಎಂಜಲಿಗೆ ಕುಲದನೆಲೆಯ ಮುಖಬೆಲೆಯನ್ನು ಚಾಲ್ತಿಯಲ್ಲಿಟ್ಟ ಒಂದು ಉದಾಹರಣೆ ಮಾತ್ರ.


ಹರಿಶ್ಚಂದ್ರಕಾವ್ಯದಲ್ಲಿ ದೊರೆ ಹರಿಶ್ಚಂದ್ರನನ್ನು ಮಾರುಗೊಂಡ ಮೇಲೆ ವೀರಬಾಹು ಆತನ ಕೈಗೆ ಹೊಲೆತನದ ಲಾಂಛನವಾದ ಸಂಬಳಿಗೋಲನ್ನು ಕೊಟ್ಟನೆಂಬುದು ಕಾವ್ಯೋಕ್ತ ಸಂಗತಿ. ಆ ಕೋಲನ್ನು ಊರಿಕೊಳ್ಳುತ್ತಾ ಸಂಬೋಳಿ ಸಂಬೋಳಿ ಎಂದು ಊರೆಲ್ಲ ಸಾರುತ್ತಾ ಮೃಗುರುಹನ್ನು ಅರುಹುತ್ತಾ ಹರಿಶ್ಚಂದ್ರ ಹೊಲೆವೇಷಕ್ಕೆ 'ನ್ಯಾಯ' ಒದಗಿಸಿದ ಎಂಬುದು ರಾಘವಾಂಕನ ಚಿತ್ರಣ. ಸಾಮಾಜಿಕ ಚರಿತ್ರೆಯಲ್ಲಿ ಈ ಹೊಲೆತನದ ಲಾಂಛನವಾದ ಸಂಬೋಳಿಗೋಲಿಗೆ ಸಂಬಂಧಿಸಿ ಹೇಳಲಾಗುವ ಮಾಹಿತಿ ಭಯಾನಕವಾಗಿದೆ. ಅಸ್ಪೃಶ್ಯ ಮಾತ್ರವಲ್ಲ ಅದೃಶ್ಯನ್ನೂ ಆಗಿರಬೇಕಾಗಿದ್ದ ಈ ಅನಾಮಿಕ, ನೋಡಬಾರದ ತನ್ನ ರೂಪವನ್ನು ನೋಡದಂತೆ ಮತ್ತು ನೋಡಬಾರದ ತನ್ನ ನೋಟದಿಂದ ಮರೆಯಾಗುವಂತೆ ತಾನೇ ಮುನ್ನೆಚ್ಚರಿಕೆ ಕೊಟ್ಟುಕೊಳ್ಳುತ್ತಾ ಬರಬೇಕಾಗಿತ್ತಂತೆ! ಇನ್ನೂ ಅಚ್ಚರಿ ಎನ್ನುವ ಹಾಗೆ ಸವರ್ಣೀಯ ಬೀದಿಯಲ್ಲಿ ಬರುವ ವೇಳೆ ಆತ ತನ್ನ ಎಂಜಲು ಬೀದಿಗೆ ಬೀಳದ ಹಾಗೆ ಮುಂಜಾಗರೂಕತೆ ವಹಿಸಬೇಕಾಗಿತ್ತು ಮತ್ತು ತನ್ನ ಹೆಜ್ಜೆ ಗುರುತು ಮೂಡದ ಹಾಗೆ ಅಳಿಸಿಹಾಕಬೇಕಾಗಿತ್ತು, ಇದಕ್ಕೆ ಪರಿಹಾರವಾಗಿ ಆತ ತನ್ನ ಕೊರಳಲ್ಲಿ ಎಂಜಲು ಸಂಗ್ರಹಕ್ಕೆ ತೆಂಗಿನಚಿಪ್ಪನ್ನೂ, ಸೊಂಟದ ಹಿಂದೆ ಪೊರಕೆಯೊಂದನ್ನು ಕಟ್ಟಿಕೊಳ್ಳಬೇಕಾಗಿತ್ತಂತೆ! ಆತನ ಎಂಜಲು ಬಿದ್ದ ನೆಲದಲ್ಲಿ ನಡೆಯಲಾಗದೆ, ಆತನ ಎಂಜಲನ್ನು ಅವನ ಕೊರಳಲ್ಲಿ ಜೋತಾಡಿಸಿಕೊಂಡು ಊರಹೊರಗೆ ಎಸೆಯುವುದು ನಂಬಿಗೆ ಮತ್ತು ಮೈಲಿಗೆಯ ಕಥನಗಳ ಮೂಲಕ ... ನಿಂದಲೇ ಬಲಾತ್ಕಾರವಿಲ್ಲದೆ ಮಾಡಿಸುತ್ತಿದ್ದ ಬಗ್ಗೆ ಚರಿತ್ರೆ ಸಾಕ್ಷಿಹೇಳುತ್ತದೆ.

ಮನುಷ್ಯನಾದವನೊಬ್ಬನ ಎಂಜಲು ಬಿದ್ದ ನೆಲವನ್ನೆ ತ... 'ಅಧಮಾಂಗ'ವಾದ ಕಾಲಿನಿಂದಲೂ ಸ್ಪರ್ಶಿಸಲು ನಿರಾಕರಿ... 'ವಿಶೇಷ ಮನುಷ್ಯ'ರು, ಆ ಉಗಿದುದನ್ನು ಉಗಿದವ... ಕೊರಳಲ್ಲಿಯೇ ಕಟ್ಟಿಕೊಂಡು ಅಲೆಯುವಂತೆ ಮಾಡ... ಸಾಧ್ಯವಾದುದು ನಂಬಿಕೆ ಮತ್ತು ಶ್ರದ್ಧೆಯ ಹೆಸರಲ್ಲಿಯೇ. ... ಶ್ರೇಷ್ಠರ ಮಲವನ್ನು ತಲೆಯಲ್ಲಿ ಹೊತ್ತುದಲ್ಲದೆ ... ಎಂಜಲನ್ನು ಕೊರಳಿಗೆ ಕಟ್ಟಿಕೊಳ್ಳಬೇಕಾಗಿ ಬಂದು... ಪ್ರಳಯ, ಶಾಪ, ರೋಗ ಇನ್ನಿತರ ಭಯಾನಕ ಆತಂಕ... ನಂಬಿಗೆಯಿಂದಲೇ. ತಲೆಯ ಮೇಲೆ ಮಲಹೊರಿಸಿ ಅ... ಎಂಜಲನ್ನೂ ತಮ್ಮ ಬೀದಿಯಲ್ಲಿ ಬೀಳದಂತೆ ಹೊರಗಿ... ಎರಡೂ ಕಾಯಕಗಳು ಪ್ರತ್ಯೇಕವಾದವುಗಳಲ್ಲ, ಅವೆರ... ಪೂರಕವಾದವುಗಳು.

ನಂಬಿಕೆಯ ಮೂಲಕವಾಗಿ ಲಭ್ಯವಾಗ... ಸೇವಾಸೌಲಭ್ಯವನ್ನು ಪೋಷಿಸಬೇಕಾದರೆ ಇನ್ನಷ್ಟು ನಂ... ಮತ್ತು ಇನ್ನಷ್ಟು ಆಚರಣೆಗಳನ್ನು ಜೀವಂತವಾಗಿಡಬೇ...ಗುತ್ತದೆ. ನಂಬುವವರು ನಂಬಿದ್ದನ್ನು ನಂಬುಗೆ ಎಂ... ಗಟ್ಟಿಯಾಗಿ ಅವರೇ ಹೇಳಿಕೊಳ್ಳುವಂತೆ ತರಬೇತಿ ನೀಡಬೇ...ಗುತ್ತದೆ. ಮತ್ತೆ ಮತ್ತೆ ಅದನ್ನು ಪುನಶ್ಚೇತನಗೊಳಿಸು... ಹೋಗಬೇಕಾಗುತ್ತದೆ. ಇದನ್ನು ಭಾಷೆಯ ಮಾಧ್ಯಮ... ಮೂಲಕ ಜೀವಂತವಾಗಿಡಬೇಕಾಗುತ್ತದೆ. ತನ್ನ ಎಂಜ... ಮತ್ತು ಬೇರೆಯವರ ಕೊಳಕನ್ನು ತಲೆಯ ಮೇ... ಹೊರಬೇಕಾದವನಿಗೆ ತನ್ನ ಎಂಜಲು ಉಗಿಯಲೂ ಅವಕ... ನಿರಾಕರಿಸುವಲ್ಲಿಯೂ ಎಂಜಲಿಗೆ ಕುಲದ ನೆಲೆಯ ಮು... ಬೆಲೆಯನ್ನೆ ಚಾಲ್ತಿಯಲ್ಲಿಟ್ಟಿರುವುದು.



ತೊತ್ತು ಹೊರಗೆ ಕೂರಲು ಸೂಚಿಸುತ್ತಾನೆ. ಗಾಬರಿಗೆ ಬಿದ್ದ ಹೆಂಗುಸಿನ ಮುಂದೆ 'ನಾನ್ಯಾಕೆ ನಿನ್ನ ಗಂಡನನ್ನು ಹೊರಗೆ ಕಳಿಸಿದೆ ಗೊತ್ತಾ? ನಿನ್ನ ಮಾಂಗಲ್ಯಭಾಗ್ಯವೇ ಗಟ್ಟಿಯಾಗಿಲ್ಲ, ಯಾವಾಗ ನಿನ್ನ ಗಂಡನಿಗೆ ಆಕ್ಸಿಡೆಂಟಾಗುತ್ತೋ? ಕೆಟ್ಟ ರೋಗ ವಕ್ಕರಿಸುತ್ತೋ ನಂಗೊತ್ತಿಲ್ಲ' ಎನ್ನುತ್ತಾನೆ. ಎಂಥ ಹೆಣ್ಣುಮಗಳೇ ಆದರೂ 'ಅದಕ್ಕೆ ಪರಿಹಾರ ಏನೂ ಇಲ್ವ ಗುರೂಜಿ' ಅನ್ನೋದು ಸಹಜ. ಹಾಗೆ ಕೇಳಿದ ಕೂಡಲೇ 'ನೋಡಮ್ಮಾ, ನಿನ್ನ ತಾಳಿ ದೋಷ ನಿವಾರಣೆಯಾಗಬೇಕೆಂದರೆ ನಾನು ಹೇಳಿದ ಫುಲ್ ಸಂಕಲ್ಪ, ಪವರ್‌ಫುಲ್ ಪೂಜೆಗಳನ್ನು ಮಾಡಬೇಕು' ಎನ್ನುತ್ತಾನೆ. ಜೊತೆಗೆ 'ಈ ವಿಚಾರವನ್ನು ನಿನ್ನ ಗಂಡನಿಗೆ ಹೇಳಬೇಡ' ಎಂಬ ಷರತ್ತೂ ಇರುತ್ತದೆ.


ಇಂದಿರಾ ಗಾಂಧಿ ಸರ್ಕಲ್ ಬಳಿ 'ಸಾಯಿ ಲಕ್ಷ್ಮಿ ಜ್ಯುವೆಲ್ಸ್' ಜ್ಯೋತಿಷ್ಯ ಕೇಂದ್ರ

ಸ್ವಲ್ಪ ಸ್ಥಿತಿವಂತರಾದರೆ ಈತ ಹೇಳಿದ ಸಂಕಲ್ಪಗಳಿಗೆಲ್ಲಾ ಧಾರಾಳವಾಗಿ ಹಣ ತಂದು ಸುರಿಯುತ್ತಾರೆ. ಬಡ ಹೆಂಗಸರು ಇರುವ ಮಾಂಗಲ್ಯಸರವನ್ನೇ ಅಡವಿಟ್ಟು, ಗಂಡ, ಮನೆಯವರಿಗೆ ಗೊತ್ತಾಗದಂತೆ ಅದೇ ರೀತಿಯ ಡೂಪ್ಲಿಕೇಟ್ ಸರವನ್ನು ಪೋಣಿಸಿಕೊಂಡು, ಮನೆಯವರನ್ನೇ ವಂಚಿಸಿ, ಅದರಲ್ಲಿ ಬಂದ ಹಣವನ್ನು ಈ ವಂಚಕನ ಮಡಿಲಿಗೆ ಸುರಿಯುತ್ತಾರೆ.

'ನಿಮಗೆ ಇಂಥ ದೋಷವಿದೆ, ಅಂಥ ಕಂಟಕವಿದೆ' ಎಂದು ಹೇಳುವುದಷ್ಟೇ ಆದಿತ್ಯ ನಾರಾಯಣನ ಪಾರ್ಟು. ಮುಂದಿನದೆಲ್ಲಾ ಆತನ ಜ್ಯೋತಿಷ್ಯಾಲಯದಲ್ಲಿರುವ ಜಯಲಕ್ಷ್ಮಿ ಉರುಫ್ ಲಕ್ಕಿ ಆಂಟಿ ಎಂಬಾಕೆಗೆ ಬಿಟ್ಟದ್ದು. ಬಂದ ಗಿರಾಕಿಗಳನ್ನು 'ಸಂಕಲ್ಪ'ದ ಹೆಸರಿನಲ್ಲಿ ಯಾಮಾರಿಸಲು ಪೂಜಾರಿಯೊಬ್ಬನನ್ನು ಪರ್ಮನೆಂಟಾಗಿ ಇರಿಸಿಕೊಂಡಿದ್ದಾನೆ. ಆದಿತ್ಯ ನಾರಾಯಣ ನಿರ್ದೇಶನದಲ್ಲಿ ಪಾತ್ರ ಮಾಡಲು ಸಿದ್ಧನಾದವನಂತೆ ಕಚ್ಚೆ ಪಂಚೆ, ಬೊಟ್ಟು, ಪಟ್ಟೆಗಳ ಸಮೇತ ಸದಾ ರೆಡಿಯಾಗಿರುವ ಪೂಜಾರಿ ನಾಲ್ಕು ಬಾಳೆಲೆಗಳನ್ನು ಹರಡಿ ಅದರ ಮೇಲೆ ಅಕ್ಕಿ ಬೆಲ್ಲಗಳನ್ನೆಲ್ಲಾ ಇಟ್ಟು ಅದೇನೋ ಅರ್ಥವಾಗದ ಮಂತ್ರಗಳನ್ನೆಲ್ಲಾ ಹೇಳಿ ಸಂಕಲ್ಪ ಮುಗೀತು ಎನ್ನುತ್ತಾನೆ. ಇಷ್ಟಕ್ಕೆ ಗಿರಾಕಿಗಳು ಕೊಡಬೇಕಾದ ದುಡ್ಡು ಭರ್ತಿ ನಲವತ್ತು ಸಾವಿರ!

ಈ ಆದಿತ್ಯ ನಾರಾಯಣನಿಗೆ ನಾಲ್ಕರ ಮಗ್ಗಿ ಕೂಡಾ ನಾಲಿಗೆ ಬರುತ್ತೋ ಇಲ್ಲವೋ? ಆದರೆ ಯಾರೇ ಬಕರಾ ಬಂದು ಎದುರು ಕೂತ ಕೂಡಲೇ 'ನಿಮ್ಮ ಹೆಸರಿನಲ್ಲಿರೋ ಸಂಖ್ಯೆಗಳು ಸರಿಯಿಲ್ಲ, ಇನ್ನೊಂದು ಅಕ್ಷರ ಎಕ್ಸ್‌ಟ್ರಾ ಸೇರಿಸಿಕೊಳ್ಳಿ' ಎನ್ನುತ್ತಾನೆ. ಆತ ಸೂಚಿಸುವುದು **Sateesh, Keeshore, Manjunaath...** ಇಂತಹ ತಪ್ಪು ಕಾಗುಣಿತ ಇರುವ ಹೆಸರುಗಳೇ. ಈಗ ಗೊತ್ತಾಯಿತಾ ಮುಖ್ಯಮಂತ್ರಿ ಆದಕೂಡಲೇ ಯಡಿಯೂರಪ್ಪ ಯಾಕೆ ತನ್ನ ಹೆಸರನ್ನು ಇಂಗ್ಲಿಷ್‌ನಲ್ಲಿ **Yeddyuurappa** ಎಂದು ಬದಲಾಯಿಸಿಕೊಂಡಿದ್ದು! ಯಡ್ಡಿಯಂತೆಯೇ ಇನ್ನೂ ಅದೆಷ್ಟೋ ಮೂರ್ಖರು ಈತನ ಮಾತು ಕೇಳಿ ತಮ್ಮ ಹೆಸರಿನಲ್ಲಿರುವ ಸ್ಪೆಲ್ಲಿಂಗುಗಳನ್ನು ತಪ್ಪುತಪ್ಪಾಗಿ ತಿದ್ದಿಕೊಂಡು ಕುರಿಗಳಂತಾಗಿದ್ದಾರೆ.

ಶಿವಮೊಗ್ಗ ಮತ್ತು ಹಾಸನದಿಂದ ಲಕ್ಷಣವಾಗಿರುವ ನಾಲ್ಕೈದು ಮಂದಿ ಹುಡುಗಿಯರನ್ನು ಕರೆತಂದು, ಅವರಿಗೆ ಪಿಜಿ ಸೌಲಭ್ಯವನ್ನೂ ನೀಡಿ ಈತ ಕೆಲಸಕ್ಕಿಟ್ಟುಕೊಂಡಿದ್ದಾನೆ. 'ಅದೃಷ್ಟದ ಹರಳು'ಗಳು ಎಂದು ಹೇಳಿ ಕೆಲಸಕ್ಕೆ ಬಾರದ ಸ್ಟೋನುಗಳನ್ನೆಲ್ಲಾ ಕೊಟ್ಟು ಕಾಸು ಕೀಳುವ ಮತ್ತೊಂದು ವಂಚನೆಯ ವೆರೈಟಿ ಈತನಲ್ಲಿದೆ. ಲಕ್ಷಾಂತರ ರೂಪಾಯಿ ಕೊಟ್ಟು ಹರಳು ಖರೀದಿಸಿದವರ ಕೈಗೆ ಈತನ ಸಹಾಯಕಿಯರೇ ದುಬಾರಿ ಉಂಗುರಗಳನ್ನು ತೊಡಿಸಬೇಕು. ಸುಂದರವಾದ ಹುಡುಗಿಯರ ಕೈಲಿ ಉಂಗುರ ಹಾಕಿಸಿ ಗಿರಾಕಿಗಳನ್ನು ಮತ್ತಷ್ಟು ಸೆಳೆಯುವುದು ಈ ನಾರಾಯಣನ ಮಾಸ್ಟರ್ ಪ್ಲಾನು.

ಇಷ್ಟೆಲ್ಲಾ 420 ಐಡಿಯಾಗಳನ್ನು ಹೊಂದಿರುವ ಆದಿತ್ಯನಾರಾಯಣ ಮೊದಲು ಸಣ್ಣ ಪುಟ್ಟ ಲೋಕಲ್ ಕೇಬಲ್ ಟೀವಿಗಳಲ್ಲಿ ಪ್ರೋಗ್ರಾಂ ಮಾಡಿ ಆ ಮೂಲಕ ಗಿರಾಕಿಗಳನ್ನು ಹುಡುಕಿಕೊಳ್ಳುತ್ತಿದ್ದ. ಈಗ ಸಮಯ ವಾಹಿನಿಯಲ್ಲಿ ವಾರಕ್ಕೊಮ್ಮೆ 'ಅದೃಷ್ಟ ಕನ್ನಡಿ' ಎಂಬ ಕಾರ್ಯಕ್ರಮವೊಂದನ್ನು ನಡೆಸಿಕೊಡುತ್ತಾನೆ. ಆ ಮೂಲಕ ತನ್ನ ಜ್ಯೋತಿಷ್ಯ ಕಸುಬಿಗೆ ಇನ್ನಷ್ಟು ಬಕ್ರಾಗಳನ್ನು ಪಡೆಯುತ್ತಿದ್ದಾರೆ.

ಈ ಸೂಟುಧಾರಿ ಜ್ಯೋತಿಷಿ ತಾಳಿ ದೋಷದ ಬೆದರಿಕೆ ಒಡ್ಡಿ ಈವರೆಗೆ ಅಸಂಖ್ಯಾತ ಹೆಣ್ಣುಮಕ್ಕಳ ಹಣ ನುಂಗಿದ್ದಾನೆ. ನಿರುದ್ಯೋಗಿಗಳಿಂದ ಕಾಸು ಕಿತ್ತಿದ್ದಾನೆ. ಮುಗ್ಧರನ್ನು ಸುಲಿದು ಮುಕ್ಕಿದ್ದಾನೆ. ಇನ್ನು ಮುಂದಾದರೂ ಈತನನ್ನು ನಂಬಿ ಜನ ಅವಿವೇಕಿಗಳಾಗದಿರಲಿ.

• ಅರುಣ್ ಕುಮಾರ್.ಜಿ

ಎಂಜಲಿಗೆ ಸಂಬಂಧಿಸಿದಂತೆ ಜಾತಿನೆಲೆಯ ತೀರಾ ಹೊರತಾದವನಾಗಿರದ ಹೊರತಾಗಿಯೂ ನನ್ನ ಅನುಭವಕ್ಕೆ ಬಂದ ಸಂಗತಿಯೊಂದನ್ನೂ ಇಲ್ಲಿ ಪ್ರಸ್ತಾಪಿಸಬಹುದೆನಿಸುತ್ತದೆ. ನಾವೆಲ್ಲ ಚಿಕ್ಕ ಮಕ್ಕಳಿರುವಾಗ ನಮ್ಮೂರ ಜಾತಿಶ್ರೇಷ್ಠರ ಮನೆಯಲ್ಲಿ ಹೊರಗಣ ಗೋಡೆಯ ಮೇಲೆ ಎರಡು ಬಿಳಿಯ ಅಲ್ಯುಮೀನಿಯಂ ಲೋಟಗಳಿರುತ್ತಿದ್ದವು. ಅವು ಮನೆಯ ಚಾವಡಿಯ ತನಕ ಹೋಗುವ ಅನುಮತಿಯಿರುವ ನಮ್ಮಂತವರೂ ಸೇರಿ ದಲಿತೇತರರು ನೀರು ಕುಡಿಯುವುದಕ್ಕಾಗಿ ಇಟ್ಟವುಗಳು. ದಲಿತರಾದರೆ ಅವರಿಗೆ ಕರಟವೇ ಗತಿ. ಇನ್ನೂ ಮೀರಿದರೆ ಅವರೇ ತೊಟ್ಟುಕೊಳ್ಳುತ್ತಿದ್ದ ಮುಟ್ಟಾಳೆಗಳೇ ಅವರ ನೀರಲೋಟಗಳಾಗುತ್ತಿದ್ದುವು.

ಇದರ ಜೊತೆಗೆ ಈ ಜಾಗದಲ್ಲಿ ಅನೇಕ ಹೋಮ ಹವನಗಳು ನಡೆಯುತ್ತಿದ್ದವು. ಶಾಂತಿಯೋ, ನಾಗ ಸಂಸ್ಕಾರವೋ, ಸತ್ಯನಾರಾಯಣವ್ರತವೋ, ಮದುವೆಯೋ ನಡೆದು ಊಟದ ವ್ಯವಸ್ಥೆಯೂ ಇರುತ್ತಿದ್ದ ವೇಳೆ ಒಂದು ವಿಶೇಷ ಪ್ರಾಕ್ಟೀಸ್ ಇರುತ್ತಿತ್ತು. ಅದೇನೆಂದರೆ ಊಟ ಆದ ಮೇಲೆ ನಮ್ಮಲ್ಲಿಯೇ ಯಾರಾದರೂ ಹೆಂಗಸರು ಊಟದ ಎಲೆ ಎತ್ತಿ ಅವರ ಮನೆಯ ಅಂಗಣದಲ್ಲಿ ನಾವುಗಳು ಉಂಡ ಎಂಜಲಿಗೆ ಗೋಮಯಹಾಕಿ ಸ್ವಚ್ಛಗೊಳಿಸಿಕೊಡಬೇಕಾಗಿತ್ತು. ಇಟ್ಟಕ್ಕೆ ಎಡೆಲೆಕ್ಕದ ಹಣಕೊಟ್ಟು ನಡೆಸುವ ವ್ಯವಹಾರದಲ್ಲೂ ನಮ್ಮ ಎಂಜಲಿಗೆ ನಾವೇ ದಿಕ್ಕಾಗಿದ್ದವು. (ಈಗ ಇದು ಸ್ವಲ್ಪ ಬದಲಾಗಿದೆ. ಹಾಗೆ ಎಂಜಲು ತೆಗೆಯಲು ಅವರೇ ಜನ ಇರಿಸುತ್ತಿದ್ದಾರೆ).

ಇದು ಸಾಮೂಹಿಕ ಊಟದ ಸಂದರ್ಭದ ಉದಾಹರಣೆ ಆದರೆ, ನಮ್ಮೂರ ದೈವದ ಪಾತ್ರಿಯ ಸ್ಥಿತಿ ಇದಕ್ಕಿಂತ ಭಿನ್ನವಲ್ಲ. ಪೂಜೆಪುನಸ್ಕಾರ ಇದ್ದಾಗ ಈತನಿಗೆ ವ್ರತಾಚರಣೆಯ ಊಟವೊಂದು ಇಲ್ಲಿಯೇ ನಡೆಯಬೇಕೆಂದು ಈಗ್ಗೆ 25-30 ವರ್ಷಗಳಿಂದ ನಿಗದಿಯಂತೆ ನಡೆಸಿಕೊಂಡುಬರಲಾಗುತ್ತಿದೆ. ದಕ್ಕೆ ಹಣವನ್ನೂ ಪೂಜೆ ಕೊಡುವವರು ಕೊಡುತ್ತಾರೆ. ಆದರೆ ಈತ ಊರಮಂದಿಯ ಗೌರವಕ್ಕೆ ಭಾಜನನಾದ ಪಾತ್ರಿಯಾಗಿಯೂ, ಈ ವ್ರತಾಚರಣೆಯ ಊಟದ ವೇಳೆ ತನ್ನ ಎಲೆಯನ್ನು ತಾನೇ ತೆಗೆಯಬೇಕು ಮತ್ತು ಒಂಟಿಯಾಗಿ ತಾನು ಕೂತು ಉಂಡ ಜಾಗದ ಕಸಮುಸುರೆ ಎತ್ತಿ ತಾನೇ ಸ್ವಯಂ ಗೋಮಯಹಾಕಿ ತನ್ನ ಎಂಜಲನ್ನು ಅಳಿಸಿ ಬರಬೇಕು!

ಹಣಕೊಟ್ಟು ಉಣ್ಣುವ ವ್ಯವಹಾರ ನಡೆಸಿಯೂ ಎಂಜಲು ಎತ್ತಿಸುವ, ಕನಿಷ್ಠ ಪೊರಕೆಯಿಂದಲೂ ಮುಟ್ಟದೆ ಉಂಡವರಿಂದಲೇ ಗೋಮಯದ ಮೂಲಕ ಶುದ್ಧೀಕರಣಗೊಳಿಸುವ ಜಡ ಸಾಮಾಜಿಕ ಆವರಣದಲ್ಲಿ ಎಂಜಲಿಗೂ ಸ್ಥಿರೀಕರಣವಿದೆ ಅಥವಾ ಹುಟ್ಟಿನ ನೆಲೆಯ ಮುಖಬೆಲೆಯಿದೆ ಅಲ್ಲವೇ?

ಈ ಎಲ್ಲಾ ಸಂದರ್ಭಗಳಲ್ಲಿ ಎಂಜಲು ಏಕಪ್ರಕಾರವಾಗಿ ನಿರಾಕರಣವೂ ಅಲ್ಲ, ಸ್ವೀಕರಣವೂ ಆಗಿಲ್ಲ. ಶ್ರೇಷ್ಠರೆನಿಸಿದವರ ಎಂಜಲೂ ಅವರ ಸ್ಥಾನಮಾನಾನುಸಾರಿಯಾಗಿ ಶ್ರೇಷ್ಠವೇ ಎನಿಸಿದೆ. ಹುಟ್ಟಿದ ಕಾರಣಕ್ಕಾಗಿ ನಿರ್ದಿಷ್ಟಗೊಂಡ ಸ್ಥಾನಗಳು ಜಾತಿಜನಾಂಗಗಳ ಎಂಜಲಿಗೂ ದಕ್ಕಿದೆ. ಎಂಜಲಿಗೂ ಜಾತಿಯನ್ನು ಕಟ್ಟಿಕೊಂಡ ಈ ಸಮಾಜ ಎಂಜಲ ಮೇಲೆ ಹೊರಳುವುದನ್ನು ನಿರಾಕರಿಸಿಕೊಂಡು ಬದುಕಲು ಇನ್ನೆಷ್ಟು ಕಾಯಬೇಕಾಗಿದೆಯೋ? ಯಾಕೆಂದರೆ ಅನೇಕ ಒಳ ವಿಂಗಡಣೆಯಲ್ಲಿ ತರತಮವಾಗಿ ಒಡೆದುಹೋಗಿರುವ ಈ ಸಮಾಜ ತನಗಿಂತ ಕೆಳಗಿನವರ ಮೇಲೆ ತಾನು ಹೊಂದಿರುವ ಕಲ್ಪಿತ ಅಧಿಕಾರವನ್ನು ಎಲ್ಲಿಯವರೆಗೆ ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳುತ್ತದೆಯೋ ಅಲ್ಲಿಯವರೆಗೆ ಈ ಸಮ್ಮತಿಯ ಮುದ್ರೆಯಲ್ಲಿ ಅಂಗೀಕಾರಗೊಂಡಿರುವ ಉರುಳಾಟದ ಸೂತ್ರಧಾರಿ-ಪಾತ್ರದಾರಿಗಳು ನಿರಾತಂಕವಾಗಿ ಮುಂದುವರೆಯಬಹುದಾಗಿದೆ.

ಒಂದೋ ಸಂವಿಧಾನವನ್ನು ಗೌರವಿಸುವ ಆಳುವಶಕ್ತಿ ಜಾಗೃತವಾಗಬೇಕು, ಇಲ್ಲಾ ಕನಿಷ್ಠ ಮಾನವೀಯತೆಗಾಗಿಯಾದರೂ ನಾಚಿಕೆ ಉಳಿಸಿಕೊಂಡ ಪ್ರಜ್ಞಾವಂತರು ಹೆಚ್ಚಾಗಬೇಕು. ಅಲ್ಲಿಯವರೆಗೆ ತಿಂದ ಕೂಳನ್ನು ತುತ್ತಾಗಿಸಿಕೊಳ್ಳುವುದನ್ನು, ಅದರ ಮೇಲೆ ಹೊರಳುವುದನ್ನು ಸಾಮಾಜಿಕ ಗೌರವ, ನಂಬಿಕೆಯ ಆಚರಣೆಯೆಂದು ಜಾಣ ಮುಸುಕಿನಲ್ಲಿ ನಮ ನಮಗೆ ಸಿಕ್ಕುವ ಅವಮಾನಿತರ ಮೇಲಿನ ಅಧಿಕಾರಕ್ಕಾಗಿ ಗುಟ್ಟಾಗಿ ಸಂಭ್ರಮಿಸುವ ಧೂರ್ತ ಪಾಳೇಗಾರಿ ಮತ್ತು ಪುರೋಹಿತಶಾಹಿ ಸಂಸ್ಕೃತಿಯ ವಿಷಚಕ್ರವನ್ನು ಗಟ್ಟಿಗೊಳಿಸುತ್ತಲೇ ಇರುತ್ತವೆ. 'ದಯೆಯಿಲ್ಲದ ಧರ್ಮ ಅದಾವುದಯ್ಯಾ?'

• ಜಯಪ್ರಕಾಶ್ ಶೆಟ್ಟಿ. ಹೆಚ್, ಕುಂದಾಪುರ

ಗುರುದ್ವಯರಿಗೆ ವಿಜಯ ಪತ್ರ!

ಜಿ. ರಾಜಶೇಖರ ಹಾಗೂ ಕೆ.ಫಣಿರಾಜ್ ಅವರು ತಮ್ಮ ಸೂಕ್ಷ್ಮ, ಪ್ರಖರ ಹಾಗೂ ನಿಷ್ಠುರವಾದ ರಾಜಕೀಯ ಚಿಂತನೆಗಳಿಂದ ನನ್ನಂಥ ಹಲವರನ್ನು ಪ್ರಭಾವಿಸಿದವರು. ನಮ್ಮ ತಲೆಮಾರಿನ ಗುರು ಪರಂಪರೆಯಲ್ಲಿ ಸ್ಥಾನ ಪಡೆದವರು. ಆದರೆ 'ದೇಶಕಾಲ'ದ ಚರ್ಚೆಯಿಂದ ಹಿಡಿದು 'ಅಡಿಗರ ಕೋಮುವಾದಿ ಕವನ'ದ ಗುದ್ದಾಟದವರೆಗಿನ ಅವರ ಕೆಲವು ಬರಹಗಳು ಅವರ ವೈಚಾರಿಕ ವ್ಯಕ್ತಿತ್ವದ ಇನ್ನೊಂದು ಮುಖವನ್ನು ತೋರಿಸಿವೆ. ಅದು ದಾಕ್ಷಿಣ್ಯಪರತೆಯ ಮುಖ. ಅಡಿಗರು, ದೇಶಕಾಲ, ನೀನಾಸಂ... ಮೊದಲಾದ ಒಂದು ಸಾಂಸ್ಕೃತಿಕ ವಲಯದೊಂದಿಗಿನ ಅವರ ವ್ಯಕ್ತಿಗತ ಸಂಬಂಧ, ಒಡನಾಟ ಹಾಗೂ ಬದ್ಧತೆಗಳು ಅವರ ನಿಷ್ಠುರ ರಾಜಕೀಯ ಚಿಂತನೆಗಳಿಗೆ ಅವರೇ ಎರವಾಗುವ, ವಿರೋಧಿಯಾಗುವ ಗುಣವನ್ನು ಪ್ರಕಟಿಸಿವೆ. ಅಡಿಗರ ಕಾವ್ಯವನ್ನು ನಾನು ಬಲಪಂಥೀಯ ಕೋಮುವಾದಿ ನೆಲೆಯಿಂದ ವಿಸ್ತಾರವಾಗಿ ಪ್ರವೇಶಿಸಲು ಪ್ರೇರೇಪಿಸಿದ ಸಂಗತಿಗಳಲ್ಲಿ ಇವರು ಕೋಮುವಾದವನ್ನು ಕುರಿತಾಗಿ ಕನ್ನಡದಲ್ಲಿ ರೂಪಿಸಿದ ಚಿಂತನೆಗಳ ಪಾಲೂ ಇರುವುದನ್ನು ನಾನು ಹೆಮ್ಮೆಯಿಂದಲೇ ನೆನಪಿಸಿಕೊಳ್ಳುತ್ತೇನೆ. ನಮ್ಮ ಲೇಖಕರ ದಾಕ್ಷಿಣ್ಯಪರತೆ ಅವರ ರಾಜಕೀಯ ಚಿಂತನೆಗಳನ್ನು ದಿಕ್ಕು ತಪ್ಪಿಸುವ ವಿಧಾನವನ್ನು ಅಧ್ಯಯನ ಮಾಡಲು ಇವರ ಈ ಬರಹಗಳು ಉತ್ತಮ ಆಕರಗಳಾಗಿವೆ. ಆ ಕುರಿತು ಮತ್ತೊಂದು ಸಂದರ್ಭದಲ್ಲಿ ಲೇಖನವನ್ನು ಬರೆಯಲಿದ್ದೇನೆ. 'ನ್ಯಾಯ ನಿಷ್ಠುರಿ ಲೋಕವಿರೋಧಿ ದಾಕ್ಷಿಣ್ಯಪರ ನಾನಲ್ಲ' ಎಂಬ ಬಸವಣ್ಣನ ಮಾತು ಇಲ್ಲಿ ನೆನಪಾಗುತ್ತಿದೆ. ಲಂಕೇಶ್ ಅವರ ಬರಹಗಳೂ ನೆನಪಾಗುತ್ತಿವೆ. ಆ ಎಚ್ಚರವನ್ನು ಇವರು ಉಳಿಸಿಕೊಳ್ಳಲಿಲ್ಲ. ಹಲವಾರು ಹಿರಿಯರು, ಗೆಳೆಯರು 'ಏನಾಗಿದೆ ಇವರಿಗೆ?' ಎಂದು ನೋವಿನಿಂದ ಪ್ರಶ್ನಿಸುತ್ತಿದ್ದಾರೆ. ಈ ಪ್ರಶ್ನೆ ಅವರು ಈ ಹಿರಿಯರೊಂದಿಗೆ ಹೊಂದಿದ ಕರುಳು-ಬಳ್ಳಿ ಸಂಬಂಧವನ್ನೂ ಇವರ ಹೊಸ ಮುಖದ ಬಗೆಗಿನ ವಿಷಾದವನ್ನೂ ಒಳಗೊಂಡಿದೆ. ನಾನೂ ನೋವಿನಿಂದ 'ಹೌದು, ಏನಾಗಿದೆ ಈ ಇವರಿಗೆ?' ಎಂದು ನೋವಿನಿಂದಲೇ ಪ್ರತಿಕ್ರಿಯಿಸುತ್ತೇನೆ.


ಅಡಿಗರ ಕೋಮುವಾದಿ ಕವನ


ಅಡಿಗರ ಕಾವ್ಯದ ಕೋಮುವಾದಿ ನೆಲೆಗಳನ್ನು ಕುರಿತು ನಾನು ಪ್ರಸ್ತಾಪಿಸಿದ ಕೆಲವು ಸಂಗತಿಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅದರ ಸಾಧ್ಯತೆ ಮತ್ತು ಮಿತಿಗಳ ಬಗ್ಗೆ ಗಂಭೀರವಾದ ಚರ್ಚೆಯನ್ನು ಇವರಿಂದ ನಿರೀಕ್ಷಿಸಿದ್ದೆ. ಆದರೆ ಅಂತಹ ಕನಿಷ್ಠ ಸೌಜನ್ಯ ಹಾಗೂ ವಿಮರ್ಶಾ ವಿನಯವನ್ನು ತೋರದೇ ಇವರು ಮೈಮೇಲೆ ದೇವರು ಬಂದಂತೆ ಏಕಾಏಕಿ ಎರಗತೊಡಗಿದರು. ಮಾರ್ಕ್ಸ್‌ವಾದದ ಪ್ರಭಾವದಿಂದ ಆರಂಭದ ಹಂತದಲ್ಲಿ ಪ್ರಗತಿಶೀಲ ಮತ್ತು ಪ್ರತಿಗಾಮಿ ಎಂಬ ಎರಡು ವಿಭಾಗಗಳಲ್ಲಿ ಲೋಕವನ್ನು ನೋಡುವ ವಿಮರ್ಶಾ ಕ್ರಮವು ಚಾರಿತ್ರಿಕವಾಗಿ ಮೈದಾಳಿ ಅದರ ದೋಷಗಳು ಸಾಹಿತ್ಯದ ಪ್ರಾಥಮಿಕ ವಿದ್ಯಾರ್ಥಿಗಳಿಗೂ ಗೊತ್ತಾಗಿ ಬಹುಮುಖಿ ಚಿಂತನೆಯ ಸಂಸ್ಕೃತಿ ವಿಮರ್ಶೆಯ ಪ್ರಬುದ್ಧತೆಯತ್ತ ಕನ್ನಡ ವಿಮರ್ಶೆ ಮೈ ಹೊರಳಿಸಿದ ಕಾಲವಿದು. (ಸಂಸ್ಕೃತಿ ವಿಮರ್ಶೆಯಲ್ಲಿಯೂ ಸಮಸ್ಯೆಗಳಿರಬಹುದು) ಆ ವಿಧಾನವನ್ನು ಈಗ ಸಾಹಿತ್ಯದ ಯಾವ ಗಂಭೀರ ವಿದ್ಯಾರ್ಥಿಯೂ ಅನುಸರಿಸುತ್ತಿಲ್ಲ. ಆದರೆ ಇಬ್ಬರೂ ಚಿಂತಕರು ತಮ್ಮ ಎಲ್ಲ ಪ್ರತಿಕ್ರಿಯೆಯಲ್ಲೂ ನನ್ನ ಬರಹಗಳನ್ನು ಕಪ್ಪು ಬಿಳುಪು ವಿಮರ್ಶೆಗೆ ಟ್ಯಾಗ್ ಮಾಡಲು ಶಕ್ತಿ ಮೀರಿ ಪ್ರಯತ್ನ ಮಾಡಿದರು- ಅಡಿಗರನ್ನು ಕುರಿತಾದ ದಾಕ್ಷಿಣ್ಯಪರತೆಗಾಗಿ.

ಅಡಿಗರನ್ನು ಕುರಿತಾದ ನನ್ನ ನಿಲುವುಗಳನ್ನು ವಿರೋಧಿಸಲು ಇವರು ಅನುಸರಿಸಿದ ಎರಡನೆಯ ವಿಧಾನವೆಂದರೆ ಚರ್ಚೆಯ ಕೇಂದ್ರವನ್ನು ಮರೆಯಿಸಿ ಅನಗತ್ಯ ವಿಷಯವನ್ನು ಕೇಂದ್ರಕ್ಕೆ ತಂದು ದಿಕ್ಕು ತಪ್ಪಿಸುವುದು. ಕಾರಂತರ ಇಳಿಗಾಲದ ರಾಮಜನ್ಮಭೂಮಿ ಪರ ನಿಲುವಿಗೂ, ರಾಜಕೀಯ ಕ್ರಿಯಾಚರಣೆಯ ಭಾಗವಾಗಿ ಅಡಿಗರಲ್ಲಿ ಆರಂಭದಿಂದಲೂ ಕಂಡುಬರುವ ಬಲಪಂಥೀಯ ಚಿಂತನೆಗಳ ಬೆಂಬಲಕ್ಕೂ ಇರುವ ಅಗಾಧ ವ್ಯತ್ಯಾಸವನ್ನು ನಾನು ಪ್ರಸ್ತಾಪಿಸಿದ್ದೆ. ಆದರೆ ರಾಜಶೇಖರ ಅವರು ಅದು ತಪ್ಪು ಮಾಹಿತಿ ಎಂದು ತಿಳಿಯಪಡಿಸಿ ಕಾರಂತರ ವಯಸ್ಸು ಹಾಗೂ ಸ್ಥಿತಪ್ರಜ್ಞೆಯ ಬಗ್ಗೆ ವಿವರಿಸತೊಡಗುತ್ತಾರೆ. ಇವರು ಕಾರಂತರು ಬದುಕಿರುವಾಗ ಅವರಿಗೆ ಆಪ್ತರಾಗಿದ್ದರೂ ಅವರು ತಾಳಿದ ನಿಲುವಿನ ಕಾರಣಗಳನ್ನು ತಿಳಿಯಲು ಯತ್ನಿಸುವುದಿಲ್ಲ. ನಮ್ಮ ದೊಡ್ಡದೊಡ್ಡ ಕವಿಗಳು ಅವರ ಬರಹಗಳನ್ನು ಕುರಿತಾಗಿ ವಸ್ತುನಿಷ್ಠವಾದ ಕೆಲವು ಚಿಂತನೆಗಳನ್ನು ಪ್ರಸ್ತಾಪಿಸಲು ಅಸಾಧ್ಯವಾದಂತ ಸಾಂಸ್ಕೃತಿಕ ವಾತಾವರಣವನ್ನು ಕಟ್ಟಿಕೊಂಡಿದ್ದರು. ಅಂದಂದಿನ ವಿಭಿನ್ನ ಸಾಂಸ್ಕೃತಿಕ ವಲಯಗಳ ಅಗತ್ಯಗಳ ಹಿನ್ನೆಲೆಗಳಲ್ಲಿ ಕೂಡ ಅಂಥ ನಿಲುವುಗಳನ್ನು ಪ್ರಕಟಿಸಲು ಸಾಧ್ಯವಾಗಿರಲಿಲ್ಲ. (ಅದಕ್ಕೆ ಈಗ ಕಾಲ ಪಕ್ವವಾಗುತ್ತಿದೆ) ಅಂತಹ ಸಂದರ್ಭದಲ್ಲಿ ಕಾವ್ಯ ಸಾಲುಸಾಲುಗಳ ನಡುವಿನ ಮೌನದಲ್ಲಿ ಅರ್ಥಗಳನ್ನು ಬಚ್ಚಿಟ್ಟಂತೆ ವಿಮರ್ಶೆ ಕೂಡ ತನ್ನ ವಿನ್ಯಾಸದಲ್ಲಿ ಭಿನ್ನ ಪ್ರತಿಪಾದನೆಗಳನ್ನು ಒಳಗೊಂಡು ರೂಪ ತಾಳುತ್ತದೆ. ಇದು ಗಂಭೀರವಾಗಿ ಅಧ್ಯಯನ ಮಾಡಬೇಕಾದ ವಲಯವಾಗಿದೆ. ಈ ಹಿನ್ನೆಲೆಯಲ್ಲಿ ಅಡಿಗರ ಕಾವ್ಯವನ್ನು ಕುರಿತಾದ ಕನ್ನಡ ಓದುಗರ ಬಗ್ಗೆ ನಾನು ಗಮನ ಸೆಳೆದಿದ್ದೆ. ಆದರೆ ಫಣಿರಾಜ್ ಅವರು ಎಂದಿನ ಲಘುವಾದ ಧಾಟಿಯಲ್ಲಿ ಅದನ್ನು ಆಯ್ದುಕಟ್ಟುವ ವಿಧಾನವೆಂದು ದಿಕ್ಕು ತಪ್ಪಿಸಲು ಯತ್ನಿಸಿದ್ದಾರೆ. ಮೂರನೆಯದಾಗಿ ಫಣಿರಾಜ್ ಅವರು ಬಳಸಿದ ವ್ಯಂಗ್ಯದ ಭಾಷೆ. ಅದು ವಿಕೃತ, ಉದ್ಧಟ, ದುರಹಂಕಾರಿ ಹಾಗೂ ಆಕ್ರಮಣಶೀಲವಾಗಿದೆ. ಅದಕ್ಕೆ ಚಿಂತನೆಗಳ ಕತ್ತು ಹಿಸುಕುವ ಗುಣವಿದೆ. ಆದರೆ ಮೂಲದಲ್ಲಿ ಅದು ಅಸಹಾಯಕತೆಯ ಆರ್ತನಾದ. ಇವರು ಅನಂತಮೂರ್ತಿ ನಾಡಿಗಾದಿಗಳ ನಂತರ ಅಡಿಗರೆಂಬ ಸಾರ್ವಕಾಲಿಕ ಕವಿಚಕ್ರವರ್ತಿಗಳ ದಂಡನಾಯಕರ ಪಟ್ಟದ 'ಸೂಳ್ಪಡೆ'ದ ಸಂಭ್ರಮದಲ್ಲಿದ್ದಾರೆ. ಆ ಸಾಮ್ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಂಹಾರವಾಗಲಿ, ಶೂದ್ರರ ವಧೆಯಾಗಲಿ, ದಲಿತರ ದಮನವಾಗಲಿ, ಹೆಣ್ಣುಮಕ್ಕಳ ಮಾನ ಮುಕ್ಕಾಗಲಿ ಯಾರೂ ಟುಟಿಪಿಟಿಕ್ ಎನ್ನುವಂತಿಲ್ಲ. ಬಾಯಿಬಿಟ್ಟರೆ ಅಡಿಗರೇ ನೀಡಿದ 'ಪರಶುರಾಮನ ಕೊಡಲಿ'ಯಿಂದ ರುಂಡಚೆಂಡಾಡುವುದಾಗಿ ಗಹಗಹಿಸುತ್ತಿದ್ದಾರೆ. ಹೀಗಾಗಿ ಈ ಗುರುದ್ವಯರಿಗೆ ಶರಣಾಗಿ ನಾನೇ ವಿಜಯ ಪತ್ರವನ್ನು ಬರೆದು ಕೊಡುತ್ತಿದ್ದೇನೆ. ಇವರು ತಮ್ಮ ಪ್ರಚಂಡ ಪಾಂಡಿತ್ಯವನ್ನೂ ಮಹಾಸೂಕ್ಷ್ಮಜ್ಞತೆಗಳನ್ನೂ ಅಡಿಗರೇ ಮೊದಲಾದ ಶ್ರೇಷ್ಠರ ದಾಕ್ಷಿಣ್ಯಪರತೆಗೆ ಒತ್ತೆಯಿಟ್ಟು ಹೀಗೆಯೇ ಉತ್ತರೋತ್ತರವಾಗಿ ವಿಜಯಶಾಲಿಗಳಾಗಲಿ!


• ಎಂ.ಡಿ.ಒಕ್ಕುಂದ

'ಲಂಕೇಶ್ ಪತ್ರಿಕೆ' ಶುರು

ಲಂಕೇಶರಿಗೆ ಯಾವಾಗ ಯಾರು ಸ್ನೇಹಿತರು, ಯಾರು ವೈರಿಗಳು ಎಂದು ನನಗೆ ತಿಳಿಯುತ್ತಿರಲಿಲ್ಲ. ಯಾರಾದರೂ ಸ್ವಂತಕ್ಕೆ ರಾಜಕಾರಣಿಗಳನ್ನು ಸಂಪರ್ಕಿಸಿ ತಮ್ಮ ಕೆಲಸ ಮಾಡಿಸಿಕೊಂಡರೆ ಅವರನ್ನು ಲಂಕೇಶರು ಹೀನಾಮಾನ ಖಂಡಿಸುತ್ತಿದ್ದರು. ಲಂಕೇಶರ ಸಮಕಾಲೀನ ಬರಹಗಾರರು ಲಂಕೇಶರನ್ನು ಎಷ್ಟೇ ದ್ವೇಷಿಸಿದರೂ ಇವರ ಬರವಣಿಗೆಯನ್ನು ಅವರೆಲ್ಲ ಹೊಗಳುತ್ತಿದ್ದರು. ಈಗಲೂ ಹೊಗಳುತ್ತಾರೆ. ಒಮ್ಮೆ ಇವರ ಸಮಕಾಲೀನ ಬರಹಗಾರರು ಲಂಕೇಶರ ಬಗ್ಗೆ ಹೇಳಿದ ಮಾತು: "ನಾನು ಒಂದು ಪುಟದಲ್ಲಿ ಹೇಳುವುದನ್ನು ಲಂಕೇಶ್ ಒಂದೇ ವಾಕ್ಯದಲ್ಲಿ ತಿಳಿಯುವಂತೆ ಬರೆಯುತ್ತಾನೆ."



ಲಂಕೇಶ್ ಪತ್ರಿಕೆಯ ಮೊದಲ ಪ್ರತಿ....



• ಇಂದಿರಾ ಲಂಕೇಶ್

ನಾನು ಅಂಗಡಿ ಶುರು ಮಾಡಿದ ಒಂದು ವರ್ಷದ ನಂತರ 1980ರಲ್ಲಿ ಲಂಕೇಶರು 'ಲಂಕೇಶ್ ಪತ್ರಿಕೆ' ಶುರು ಮಾಡಿದರು. ಆರಂಭದ ಸಂಚಿಕೆಯಲ್ಲೇ 'ಲಂಕೇಶ್ ಪತ್ರಿಕೆ' ರಾಜ್ಯಾದ್ಯಂತ ಸಂಚಲನ ಮೂಡಿಸಿತು. ಪತ್ರಿಕೆಯ ಪ್ರತಿಗಳು ಪ್ರಿಂಟಾಗುವ ವೇಗದಲ್ಲೇ ಅವು ಮಾರಾಟವಾಗುತ್ತಿದ್ದವು. ಲಂಕೇಶರಂತೂ ತುಂಬಾ ಸಂತೋಷಗೊಂಡಿದ್ದರು.

'ಲಂಕೇಶ್ ಪತ್ರಿಕೆ' ರಾಜ್ಯದಲ್ಲಿ ಒಂದು ದಾಖಲೆಯನ್ನೇ ನಿರ್ಮಿಸಿತು. ಅದುವರೆವಿಗೂ ಯಾರೂ ಅಂಥ ಪತ್ರಿಕೆ ಮಾಡುವ ಸಾಹಸ ಮಾಡಿರಲಿಲ್ಲ. ಜಾಹೀರಾತಿಲ್ಲದ, ಯಾವ ರಾಜಕಾರಣಿಯ ಹಂಗೂ ಇಲ್ಲದ, ಸಾಹಿತ್ಯದಿಂದ ಕೂಡಿದ ಪತ್ರಿಕೆ ಅದಾಗಿತ್ತು. ಲಂಕೇಶರ ಬರಹಗಳಂತೂ ಒಂದಕ್ಕಿಂತ ಒಂದು ಚೆನ್ನಾಗಿರುತ್ತಿದ್ದವು. ಯಾವ ವಿಷಯದ ಬಗ್ಗೆ ಬರೆದರೂ ಅದರಲ್ಲಿ ಲಂಕೇಶರ ಛಾಪು ಇರುತ್ತಿತ್ತು.

ಪತ್ರಿಕೆ ಪ್ರಾರಂಭವಾದ ಒಂದೆರಡು ವಾರಗಳ ನಂತರ ಗೋವಿಂದಪ್ಪ ರಸ್ತೆಯಲ್ಲಿದ್ದ ನಮ್ಮ ಬಾಡಿಗೆ ಮನೆಯ ಮೇಲೆಯೇ ಪತ್ರಿಕೆಯ ಕಚೇರಿಯನ್ನು ತೆರೆಯಲು ಲಂಕೇಶರು ನಿರ್ಧರಿಸಿದರು. ಅದಕ್ಕೆ ನಮ್ಮ ಮನೆಯ ಮಾಲೀಕರಾದ ಸಿದ್ದೋಜಿ ನಾರಾಯಣರಾವ್ ಅನುಮತಿ ಕೊಟ್ಟಾಗ ಲಂಕೇಶರೇ ಹಣ ಹಾಕಿ ಆಸ್ಬೆಸ್ಟಾಸ್ ಶೀಟನ್ನು ಹಾಕಿದ್ದ ಜಾಗವನ್ನು ಹೊರತುಪಡಿಸಿ, ಸಿಮೆಂಟ್ ತಾರಸಿ ಇದ್ದ ಎರಡು ರೂಮುಗಳ ಮೇಲೆ ಸಿಮೆಂಟ್ ಬ್ಲಾಕ್ಸ್‌ಗಳಲ್ಲಿ ಒಂದು ಪುಟ್ಟ ಕೊಠಡಿಯನ್ನು ಕಟ್ಟಿಸಿದರು. ಅಲ್ಲಿಂದಲೇ ಹಲವು ತಿಂಗಳ ಕಾಲ ಪತ್ರಿಕೆ ಕೆಲಸ ನಡೆಯುತ್ತಿತ್ತು.

ಆದರೆ ಪತ್ರಿಕೆ ಬೆಳೆಯುತ್ತಾ ಹೋದಂತೆ ಆ ಜಾಗ ಸಾಕಾಗಲಿಲ್ಲ. ಆಗ ನೆಲ ಮಹಡಿಯಲ್ಲಿದ್ದ ಮನೆಯನ್ನೂ ಲಂಕೇಶರು ಬಾಡಿಗೆಗೆ ಪಡೆದರು. ಅಷ್ಟೇ ಅಲ್ಲ, ತಮ್ಮ ಪತ್ರಿಕೆಯ ಅಗತ್ಯಕ್ಕೆ ತಕ್ಕಂತೆ ಲಂಕೇಶರು ಆ ಮನೆಯಲ್ಲಿ ಆಗಾಗ್ಗೆ ಬಹಳಷ್ಟು ಮಾರ್ಪಾಡು ಮಾಡಿಸಿಕೊಳ್ಳುತ್ತಿದ್ದರು. ನಾರಾಯಣರಾವ್ ಎಷ್ಟು ಒಳ್ಳೆಯವರೆಂದರೆ ಇದ್ಯಾವುದರ ಬಗ್ಗೆಯೂ ಅವರು ಒಂದೇಒಂದು ಬಾರಿಯೂ ತಕರಾರೆತ್ತಲಿಲ್ಲ. ಬದಲಾಗಿ ಹಿಂದಿನಂತೆ ಆಗಲೂ ಮನೆ ಮತ್ತು ಆಫೀಸಿನ ಬಾಡಿಗೆ ಪಡೆಯಲು ಅವರು ಬಂದಾಗ ತಾನೇನೋ ತಪ್ಪು ಮಾಡುತ್ತಿರುವವರಂತೆ ಕೂರುತ್ತಿದ್ದರು.

ಅವರು ಎಂತಹ ಸಜ್ಜನ ಎಂದರೆ ನನ್ನ ಅಂಗಡಿಯ ತೆರಿಗೆ ವಿಷಯಗಳಿಗೆ ಸಂಬಂಧಿಸಿದಂತೆ ನನಗೆ ಮಾರ್ಗ ದರ್ಶನ ಬೇಕೆಂದಾಗಲೆಲ್ಲ ನಾನು ಅವರಿಗೆ ಫೋನ್ ಮಾಡುತ್ತಿದ್ದೆ. ಅವರು ಸ್ವಲ್ಪವೂ ಬೇಜಾರು ಮಾಡಿಕೊಳ್ಳದೆ ಎಲ್ಲವನ್ನು ನನಗೆ ವಿವರಿಸಿ ಹೇಳಿಕೊಡುತ್ತಿದ್ದರು.

ಪತ್ರಿಕೆ ಲವಲವಿಕೆಯಿಂದ ಮೂಡಿಬರುತ್ತಿತ್ತು, ತೇಜಸ್ವಿ, ಚಂದ್ರಶೇಖರ ಪಾಟೀಲರು, ಬಿ.ವಿ.ವೀರಭದ್ರಪ್ಪನವರು, ಸಾರಾ ಅಬೂಬಕರ್.... ಎಲ್ಲರೂ ಬರೆಯುತ್ತಿದ್ದರು. ಹೊಸ ಬರಹಗಾರರಲ್ಲಿ ಲಂಕೇಶರು ಧೈರ್ಯ ತುಂಬಿ ಬರೆಸುತ್ತಿದ್ದರು.

ನನ್ನ ಅಂಗಡಿಯೂ ದಿನದಿಂದ ದಿನಕ್ಕೆ ಬೆಳೆಯುತ್ತಿತ್ತು. ಆದರೆ ಸ್ವಲ್ಪ ಕಾಲದ ನಂತರ ಅಂಗಡಿಯ ವಹಿವಾಟನಲ್ಲಿ ಏರುಪೇರುಗಳು ಕಾಣಲಾರಂಭಿಸಿತು. ಜಂಟಿ ಮಾಲೀಕತ್ವದಲ್ಲಿ ನಾನು ಒಬ್ಬಳಿದ್ದರೆ ದಿನಕರನ ಕಡೆಯವರು ಮೂರು ಜನ ಅಂಗಡಿಯಲ್ಲಿ ಇರುತ್ತಿದ್ದರು. ನಿಧಾನವಾಗಿ ಲೆಕ್ಕ ತಪ್ಪಲಾರಂಭಿಸಿತು. ಎಡವಟ್ಟುಗಳಾಗಲಾರಂಭಿಸಿತು. ಇದೆಲ್ಲದರಿಂದ ರೋಸಿಹೋದ ನಾನು ದಿನಕರನೊಂದಿಗೆ ಜಂಟಿ ಮಾಲೀಕತ್ವ ನನಗೆ ಬೇಡವೆಂದು ನಮ್ಮ ಆಡಿಟರ್ ರವಿ ಅವರಿಗೆ ಹೇಳಿದೆ. ಅವರು ನನ್ನನ್ನೂ ಮತ್ತು ದಿನಕರನನ್ನೂ ಕೂರಿಸಿ ಮಾತಾಡಿಸಿ "ನೀವಿಬ್ಬರೂ ಒಂದು ತೀರ್ಮಾನಕ್ಕೆ ಬನ್ನಿ. ಕೊನೆಗೆ ಯಾರು ಅಂಗಡಿ ಇಟ್ಟುಕೊಳ್ಳುತ್ತಾರೋ ಅವರು ಇನ್ನೊಬ್ಬರಿಗೆ ಅರ್ಧ ಹಣವನ್ನು ಕೊಡಬೇಕು. ಈ ನಿರ್ಧಾರ ನಿಮ್ಮಿಬ್ಬರಿಗೆ ಬಿಟ್ಟದ್ದು" ಎಂದರು.

ತಾನೇ ಅಂಗಡಿ ಇಟ್ಟುಕೊಂಡರೆ ನನಗೆ ಅರ್ಧ ಹಣವನ್ನು ಕೊಡಲು ದಿನಕರನ ಬಳಿ ದುಡ್ಡಿರಲಿಲ್ಲ. ನನ್ನ ಹತ್ತಿರವೂ ಅಷ್ಟು ಹಣ ಇರಲಿಲ್ಲ. ಆಗ ನನ್ನ ತಮ್ಮ ಶಿವಕುಮಾರನ ಸಹಾಯ ಕೇಳಿದೆ. ಶಿವು ನನಗೆ ಹಣ ಕೊಡಲು ಒಪ್ಪಿಕೊಂಡ. ಆಗ ನಾನೇ ಅಂಗಡಿ ಇಟ್ಟುಕೊಳ್ಳುತ್ತೇನೆ ಎಂದು ನಿರ್ಧರಿಸಿದೆ. ದಿನಕರನಿಗೆ ಅರ್ಧ ಹಣ ಕೊಟ್ಟು ಅಂಗಡಿಯನ್ನು ಸಂಪೂರ್ಣವಾಗಿ ನನ್ನದಾಗಿಸಿಕೊಂಡೆ.

ಅಲ್ಲಿಯ ತನಕ ನಾನು, ದಿನಕರ ಮತ್ತು ಆತನ ತಂಗಿಯರು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆವು. ಆದರೆ ಈಗ ನಾನು ಒಬ್ಬಂಟಿಯಾಗಿದ್ದೆ. ಆಗ ಅಂಗಡಿಯಲ್ಲಿ ನನಗೆ ಸಹಾಯ ಮಾಡುತ್ತೀಯಾ ಎಂದು ಶಾಂತಾಳನ್ನು ಕೇಳೋಣ ಎಂದುಕೊಂಡೆ. ಆದರೆ ನಾನು ಆಕೆಯನ್ನು ಕೇಳುವ ಮುನ್ನವೇ ಆಕೆ ಅಂಗಡಿಗೆ ಬಂದು ನನ್ನ ಸಹಾಯಕ್ಕೆ ನಿಂತಳು.

*****

ನನ್ನ ಮಾವ ನಂದೀಬಸಪ್ಪನವರ ಆರೋಗ್ಯ ಕೆಟ್ಟಿತು. ವಯಸ್ಸಾಗಿದ್ದ ಅವರಲ್ಲಿ ಮೂತ್ರ ಕಾಯಿಲೆ ಕಾಣಿಸಿಕೊಂಡಿತು. ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಇಲ್ಲಿ ಚಿಕಿತ್ಸೆ ಕೊಡಿಸಿದೆವು. ಸ್ವಲ್ಪ ದಿನಗಳ ನಂತರ ಅವರು ಕೊನಗವಳ್ಳಿಗೆ ವಾಪಸ್ಸಾದರು. ಆದರೆ ಮತ್ತೆ ಅವರನ್ನು ಶಿವಮೊಗ್ಗೆಯ ಆಸ್ಪತ್ರೆಗೆ ಸೇರಿಸಲಾಯಿತು. ಒಂದು ವಾರ ಆಸ್ಪತ್ರೆಯಲ್ಲಿದ್ದ ಅವರು 1982ರ ಡಿಸೆಂಬರ್ 1ರಂದು ತೀರಿಕೊಂಡರು. ನಾನು ಮತ್ತು ಲಂಕೇಶರು ಕೊನಗವಳ್ಳಿಗೆ ಹೋಗಿ ಅವರ ಅಂತ್ಯಕ್ರಿಯೆಗಳಲ್ಲಿ ಭಾಗವಹಿಸಿದೆವು. ತಮ್ಮ ತಂದೆಯನ್ನು ಕುರಿತು ಲಂಕೇಶರು 'ಅಪ್ಪನ ನೆನಪು' ಎಂಬ ಟೀಕೆ ಟಿಪ್ಪಣಿ ಅಂಕಣದಲ್ಲಿ ಮನ ಮುಟ್ಟುವಂತೆ ಬರೆದಿರುವುದು ಎಲ್ಲರಿಗೂ ಗೊತ್ತಿದೆ.

ನಾನು ಅಂಗಡಿಯಲ್ಲಿ ತುಂಬಾ ಬಿಜಿಯಾಗಿರುತ್ತಿದ್ದೆ. ನಮ್ಮ ಮಕ್ಕಳನ್ನು ನೋಡಿಕೊಳ್ಳುವುದೇ ನನಗೆ ಕಷ್ಟವಾಗುತ್ತಿತ್ತು. ಆಗ ಊರಿನಿಂದ ಅಡುಗೆ ಮಾಡುವವಳನ್ನು ಕರೆದುಕೊಂಡು ಬಂದೆ. ನನ್ನ ಮಕ್ಕಳು ಬೆಳೆಯುತ್ತಿದ್ದರು. ಗೌರಿ ಕಾಲೇಜ್ ಸೇರಿದ್ದಳು. ಕವಿತಾ ಹೈಸ್ಕೂಲಿನಲ್ಲಿದ್ದಳು. ಅಜಿತು ಚೆನ್ನಾಗಿ ಓದುತ್ತಿದ್ದನಲ್ಲದೆ ಕ್ರಿಕೆಟ್ ಆಟದಲ್ಲಿ ತಲ್ಲೀನನಾಗಿರುತ್ತಿದ್ದ.

ನನ್ನ ಎರಡನೇ ಮಗಳು ಕವಿತಾಳ ಸ್ಕೂಲ್ ಮನೆಯಿಂದ ದೂರವಿತ್ತು. ಆಕೆಗೆ ಸ್ಕೂಲಿಗೆ ಹೋಗಿಬರಲು ಒಂದು ಸೈಕಲ್ ಕೊಡಿಸೋಣ ಎಂದುಕೊಂಡೆವು. ಆದರೆ ಕವಿತಾಗೆ ಸೈಕಲ್ ಹೊಡೆಯಲು ಬರುತ್ತಿರಲಿಲ್ಲ. ಗೌರಿ ಬೇಬಿಗೆ ಸೈಕಲ್ ಹೊಡೆಯುವುದನ್ನು ಹೇಳಿಕೊಡಲು ಮುಂದಾದಳು. ಆದರೆ ಆಕೆ ಎಷ್ಟು ಪ್ರಯತ್ನಿಸಿದರೂ ಬೇಬಿಗೆ ಸೈಕಲ್ ಹೊಡೆಯುವುದು ಕಲಿಯಲಾಗಲಿಲ್ಲ. ಆಗ ಗೌರಿ "ಇವಳ ಹಿಂದೆ ಓಡಿ ಓಡಿ ನನಗೆ ಸಾಕಾಯಿತು" ಎಂದು ದೂರಿದರೆ, ಬೇಬಿ "ಗೌರಿ ನನಗೆ ತುಂಬಾ ಹೊಡೆಯುತ್ತಾಳೆ. ಅವಳು ನನಗೆ ಸೈಕಲ್ ಕಲಿಸುವುದು ಬೇಡ" ಎಂದಳು.

ಒಂದು ದಿನ ಲಂಕೇಶರೇ ಬೇಬಿಗೆ ಸೈಕಲ್ ಹೊಡೆಯುವುದನ್ನು ಹೇಳಿಕೊಡಲು ಮುಂದಾಗಿ ಆಕೆಯನ್ನು ನ್ಯಾಷನಲ್ ಹೈಸ್ಕೂಲ್ ಗ್ರೌಂಡ್ಸ್‌ಗೆ ಕರೆದುಕೊಂಡು ಹೊರಟರು. ನಾನು ಲಂಕೇಶರಿಗೆ ಎಲ್ಲಿ ಅಷ್ಟು ತಾಳ್ಮೆ ಇದೆ. ಇವರಲ್ಲಿ ಆಕೆಗೆ ಸೈಕಲ್ ಹೊಡೆಯುವುದನ್ನು ಕಲಿಸುತ್ತಾರೆ ಎಂದುಕೊಂಡು ಸುಮ್ಮನಾದೆ. ಆದರೆ ನನಗೊಂದು ಅಚ್ಚರಿ ಕಾದಿತ್ತು. ಅಪ್ಪ, ಮಗಳು ಹೋಗಿ ಇನ್ನೂ ಅರ್ಧ ಗಂಟೆ ಆಗಿರಲಿಲ್ಲ. ಬೇಬಿ ಸೈಕಲ್ ತುಳಿಯುತ್ತಾ ಮನೆಗೆ ಬಂದಳು! ಅಷ್ಟೇ ಅಲ್ಲ, "ಅಪ್ಪ ಎಷ್ಟು ಸುಲಭವಾಗಿ ನನಗೆ ಸೈಕಲ್ ಕಲಿಸಿತು! ಸೈಕಲ್ ಎಡಕ್ಕೆ ವಾಲಿದರೆ ಹ್ಯಾಂಡಲ್ ಅನ್ನು ಬಲಕ್ಕೆ ತಿರುಗಿಸು, ಬಲಕ್ಕೆ ವಾಲಿದರೆ ಹ್ಯಾಂಡಲ್ ಅನ್ನು ಎಡಕ್ಕೆ ತಿರುಗಿಸು ಎಂದು ಅಪ್ಪ ಹೇಳಿಕೊಟ್ಟಿತು. ಗೌರಿ ಬದಲು ಅಪ್ಪನನ್ನೇ ನಾನು ಮೊದಲು ಕೇಳಬೇಕಿತ್ತು" ಎಂದು ಬೇಬಿ ಹಿಗ್ಗಿದಳು.

ಲಂಕೇಶರು ಎಂದೂ ನಮ್ಮ ಮಕ್ಕಳು ಏನು ಓದುತ್ತಿದ್ದಾರೆ, ಹೇಗೆ ಓದುತ್ತಿದ್ದಾರೆ ಎಂದು ಕೇಳಿದವರೇ ಅಲ್ಲ. ಮಕ್ಕಳು ಯಾವ ಕ್ಲಾಸ್‌ನಲ್ಲಿ ಇದ್ದಾರೆ ಎಂಬ ವಿಷಯ ಕೂಡಾ ಅವರಿಗೆ ಗೊತ್ತಿರುತ್ತಿರಲಿಲ್ಲ. ಮಕ್ಕಳು ಸ್ವಲ್ಪ ದೊಡ್ಡವರಾದ ಮೇಲೆಯೇ ಲಂಕೇಶರು ಮಕ್ಕಳಿಗೆ ಹತ್ತಿರವಾದದ್ದು.

ಲಂಕೇಶರ ಎಲ್ಲಾ ಸಮಯ ಪೇಪರ್‌ಗೆ ಮೀಸಲಾಗಿತ್ತು. ಲಂಕೇಶರು ತಮ್ಮ ಆಫೀಸಿನಲ್ಲಿ ಕೆಲಸ ಮಾಡುವವರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಲಂಕೇಶರಿಂದಾಗಿ ಬೆಳೆದವರು ತುಂಬಾ ಜನ ಇದ್ದಾರೆ. ಹಾಗೆಯೇ ಲಂಕೇಶರು ಕೆಲವು ಅನರ್ಹರನ್ನೂ ಉತ್ತೇಜಿಸಿ ಬೆಳೆಸಿದ್ದೂ ಇದೆ.

ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದ ತೇಜಸ್ವಿ ಅವರ ಬರಹಗಳು ನನಗೆ ತುಂಬಾ ಇಷ್ಟವಾಗುತ್ತಿದ್ದವು. ಅವರು ಕೆಲವು ಸೀರಿಯಸ್ ವಿಷಯಗಳನ್ನೂ ಎಷ್ಟು ತಮಾಷೆಯ ರೀತಿಯಲ್ಲಿ ಮನಸ್ಸಿಗೆ ಮುಟ್ಟುವಂತೆ ಬರೆಯುತ್ತಾರೆ ಎನ್ನಿಸುತ್ತಿತ್ತು.

ಲಂಕೇಶರಿಗೆ ಯಾವಾಗ ಯಾರು ಸ್ನೇಹಿತರು, ಯಾರು ವೈರಿಗಳು ಎಂದು ನನಗೆ ತಿಳಿಯುತ್ತಿರಲಿಲ್ಲ. ಯಾರಾದರೂ ಸ್ವಂತಕ್ಕೆ ರಾಜಕಾರಣಿಗಳನ್ನು ಸಂಪರ್ಕಿಸಿ ತಮ್ಮ ಕೆಲಸ ಮಾಡಿಸಿಕೊಂಡರೆ ಅ... ಲಂಕೇಶರು ಹೀನಾಮಾನ ಖಂಡಿಸುತ್ತಿದ್ದರು.

ಲಂಕೇಶರ ಸಮಕಾಲೀನ ಬರಹಗಾರರು ಲಂಕೇ... ಎಷ್ಟೇ ದ್ವೇಷಿಸಿದರೂ ಇವರ ಬರವಣಿಗೆಯನ್ನು ... ಹೊಗಳುತ್ತಿದ್ದರು. ಈಗಲೂ ಹೊಗಳುತ್ತಾರೆ. ಒಮ್ಮೆ ... ಸಮಕಾಲೀನ ಬರಹಗಾರರು ಲಂಕೇಶರ ಬಗ್ಗೆ ... ಮಾತು: "ನಾನು ಒಂದು ಪುಟದಲ್ಲಿ ಹೇಳುವುದನ್ನು ... ಒಂದೇ ವಾಕ್ಯದಲ್ಲಿ ತಿಳಿಯುವಂತೆ ಬರೆಯುತ್ತಾನೆ."

****

ಬೇಬಿಗೆ ಯಾವಾಗಲೂ ನಾನು ಗೌರಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತೇನೆಂದೂ, ಅಪ್ಪ ಅಜಿ... ಪ್ರೀತಿಯಿಂದ ನೋಡಿಕೊಳ್ಳುತ್ತಾರೆಂದೂ, ಆದರೆ ... ಮಾತ್ರ ಯಾರೂ ಪ್ರೀತಿಯಿಂದ ನೋಡಿಕೊಳ್ಳುವುದಿಲ್ಲ... ಭಾವನೆ ಕಾಡುತ್ತಿತ್ತು. ಆಕೆಗೆ ಸ್ವಲ್ಪ ಹಠ ಮತ್ತು ಸಿಟ್ಟು... ಅಪ್ಪನಂತೆ ಕಡ್ಡಿ ಮುರಿಯುವಂತಹ ಮಾತು ಬೇಬಿ... ಬೇಬಿಗೆ ಹೋಲಿಸಿದರೆ ಗೌರಿ ಸ್ವಲ್ಪ ಮೃದು.

ನಮ್ಮ ಮಗ ಅಜಿತ್ 12ನೇ ವಯಸ್ಸಿನವನಿದ್ದಾಗ... ಆರೋಗ್ಯ ಕೆಟ್ಟಿತು. ಬೆಂಗಳೂರಿನ ಹವಾಮಾನದಿಂದ ... ಅಸ್ತಮಾ ತಾಗಿಕೊಂಡಿತು. ಆದರಿಂದ ಆತ ಹಲ... ತುಂಬಾ ಕಷ್ಟಪಡುತ್ತಿದ್ದ. ಹಾಗೆ ಆದಾಗಲೆಲ್ಲ ಲಂಕೇಶ... ಮೇಲೆ ಸಿಟ್ಟು ಬರುತ್ತಿತ್ತು. "ನೀನು ಯಾವಾಗಲೂ ... ಅಂತ ಸಾಯುತ್ತ ನಮ್ಮ ಮಗನನ್ನು ಸರಿಯಾಗಿ ... ಕೊಳ್ಳುತ್ತಿಲ್ಲ" ಅಂತ ಗೊಣಗುತ್ತಿದ್ದರು.

ನನ್ನ ಮಗನೋ ನಾನು ಊಟ ಮಾಡಿಸಿದರೆ ... ಊಟ ಮಾಡುತ್ತಿದ್ದ, ಇಲ್ಲವಾದರೆ ಹಾಗೇ ಮಲಗಿಬಿ... ಅಂಗಡಿ ಕೆಲಸ ಮುಗಿದು ಅದರ ಬಾಗಿಲು ಹಾಕಿಕೊ... ನಾನು ಮನೆಗೆ ಬರುವಷ್ಟರ ಹೊತ್ತಿಗೆ ರಾತ್ರಿ ಒಂಬತ್ತು... ಆಗಿರುತ್ತಿತ್ತು. ನಾನು ಮನೆಗೆ ಬಂದಕೂಡಲೇ ಊಟ... ನಿದ್ದೆ ಮಾಡುತ್ತಿದ್ದ ಅಜಿತುಗೆ ತಿನ್ನಿಸುತ್ತಿದ್ದೆ. ಆತ ನಿದ್ದೆ... ಊಟ ಮಾಡಿ, ಹೊಟ್ಟೆ ತುಂಬಿದ ನಂತರ ಮುಖ ಬ... ತಿರುಗಿಸುತ್ತಿದ್ದ. ಅವನಿಗೆ 18 ವರ್ಷ ವಯಸ್ಸಾಗು... ನಾನು ಅವನಿಗೆ ಈ ರೀತಿ ಊಟ ಮಾಡಿಸಿದ್ದೇನೆ.

ನಾನು ಅಂಗಡಿಯಲ್ಲಿದ್ದಾಗ ಮನೆಯಲ್ಲಿ ... ಏನು ಮಾಡುತ್ತಿದ್ದಾರೆ ಎಂದು ಯೋಚಿಸು... ಮನೆಯಲ್ಲಿದ್ದಾಗ ಅಂಗಡಿಯನ್ನು ಇನ್ನೂ ... ಮಾಡುವುದು ಹೇಗೆ ಎಂದು ಯೋಚಿಸುತ್ತಿ... ಅಂಗಡಿಯಲ್ಲಿ ಆಗ ಸಿಂಥಟಿಕ್ ಮತ್ತು ... ಸೀರೆಗಳು ಮಾತ್ರ ಇದ್ದವು. ರೇಷ್ಮೆ ಸೀರೆಗಳನ್ನು ... ಮಾರಬಾರದು ಅಂತ ಯೋಚಿಸಿದೆ. ಆದಾದ... ಮೊಣಕಾಲ್ಮೂರು, ಸೇಲಂ, ಕೊಯಿಮ... ಊರುಗಳಿಗೆ ಸುತ್ತಾಡಿ ಅಲ್ಲಿಂದ ಸೀರೆಗಳನ್ನು ಖ... ನನ್ನ ಅಂಗಡಿಗೆ ತರುತ್ತಿದ್ದೆ.

ಒಮ್ಮೆ ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ... ಗೀತಾ ಜೊತೆ ಮೊಣಕಾಲ್ಮೂರಿಗೆ ಹೋಗಿದ್ದೆ. ಈಗಿನ... ಬಸ್ಸುಗಳ ಸಂಪರ್ಕ ವ್ಯವಸ್ಥೆ ಅಷ್ಟು ಚೆನ್ನಾಗಿರಲಿಲ್ಲ. ಬೆಳ... ಗಂಟೆಗೆ ಬೆಂಗಳೂರನ್ನು ಬಿಟ್ಟರೆ ರಾತ್ರಿ ಹೊತ್ತಿಗೆ ವಾಪಸ್ ಬರಬೇಕಿತ್ತು. ಒಮ್ಮೆ ವಾಪಸ್ ಬರಲು ಬ... ತುಂಬಾ ತೊಂದರೆ ಆಯಿತು. ಆಗ ಯಾರೋ "ಚಿತ್ರದ... ಹೋಗಿ. ಅಲ್ಲಿಂದ ಬೆಂಗಳೂರಿಗೆ ಬಸ್ ಸಿಗುತ್ತದೆ" ಎ... ಸಿ, ನಾವಿಬ್ಬರೂ ಚಿತ್ರದುರ್ಗಕ್ಕೆ ಹೋದೆವು. ಅಷ್ಟು ತ... ಸಂಜೆ ಆಗಿತ್ತು. ನನಗೆ ತುಂಬಾ ಸುಸ್ತು ಜೊತೆಗೆ ಜ್ವರ... ಚಿತ್ರದುರ್ಗ ಬಸ್‌ಸ್ಟ್ಯಾಂಡ್‌ನಲ್ಲಿ ಸೂಟ್‌ಕೇಸ್ ಮೇ... ಇಟ್ಟುಕೊಂಡು ನಿದ್ದೆ ಮಾಡಿಬಿಟ್ಟೆ.

ನನ್ನ ಜೊತೆಗಿದ್ದ ಹುಡುಗಿ ಗೀತಾ ನನ್ನ ಮೇಲೆ ... ಬಿಳಿ ಟವಲ್ ಹಾಕಿದಳು. ಹೋಗುವವರು, ಬರು... ಎಲ್ಲರೂ ನನ್ನ ಕಡೆ ನೋಡಿನೋಡಿ ಹೋಗುತ್ತಿ... ಯಾರೋ ಪರಲೋಕ ಸೇರಿರಬಹುದು ಎಂದು ಅ... ಅಂದುಕೊಂಡಿರಬೇಕು. ಅದನ್ನು ಕಂಡು ಗೀತಾ ... ತೆಗೆದುಬಿಟ್ಟಳಂತೆ.

ವ್ಯಾಪಾರ ಹೆಚ್ಚಾಗುತ್ತಾ ಹೋದಂತೆ ನನ್ನ ... ಚಿಕ್ಕದಾಯಿತು ಎನ್ನಿಸಲಾರಂಭಿಸಿತು. ಅದೇ ಸಮಯ... ಅಂಗಡಿ ಇದ್ದ ಕಾಂಪ್ಲೆಕ್ಸ್ ಮಾಲೀಕರಾದ ಆರ್.ಎಂ.ಬಿ. ... ಅವರು "ನಿಮ್ಮ ಕೆಳಗಿನ ಅಂಗಡಿ ಖಾಲಿಯಾಗುತ್ತಿದೆ. ... ನೀವೇ ತೆಗೆದುಕೊಳ್ಳಿ" ಎಂದರು. ಧೈರ್ಯ ಮಾಡಿ... ಆ ಅಂಗಡಿಯನ್ನೂ ಬಾಡಿಗೆಗೆ ತೆಗೆದುಕೊಂಡೆ. ಮ... ಅಂಗಡಿಯಿಂದ ಕೆಳಗಿನ ಅಂಗಡಿಗೆ ಬರಲು ಆರಾಧ್ಯ ... ಮೆಟ್ಟಿಲು ಹಾಕಿಸಿಕೊಟ್ಟರು. ಅದೇ ಹೊತ್ತಿಗೆ 'ಪಲ್ಲವಿ' ... ನಿರ್ಮಾಣಕ್ಕೆ ಪ್ರಶಸ್ತಿಯ ಜೊತೆಗೆ ದೊರಕಿದ್ದ ... ಅವಧಿಯೂ ಮುಗಿದಿದ್ದು ಅದನ್ನು ನಗದಾಗಿ ಪರಿ... ಕಾಂಚಿಪುರಂ ಮತ್ತು ಆರಣಿಯಿಂದ ರೇಷ್ಮೆ ಸೀರೆಗಳನ್ನು ... ಮಾರಲು ಪ್ರಾರಂಭಿಸಿದೆ.

ಡಾಕ್ಟರ್ಸ್, ಲೆಕ್ಚರರ್ಸ್, ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿ... ಮಾತ್ರವಲ್ಲದೆ ಚಿತ್ರ ನಟಿಯರು, ಹಾಡುಗಾರರು... ಗ್ರಾಹಕರಾದರು. ರತ್ನಮಾಲಾ, ಛಾಯಾ, ನಟಿ ಮ... ಉಮಾ ಶಿವಕುಮಾರ್, ಕಸ್ತೂರಿ ಶಂಕರ್, ಮಾಲತಿ ... ಮಂಜುಳಾ ಗುರುರಾಜ್ ಅವರಲ್ಲಿ ಪ್ರಮುಖರು. ಶಿ... ಸುಬ್ಬಣ್ಣನವರೂ ಪ್ರತಿ ವರ್ಷ ತಮ್ಮ ವೆಡ್ಡಿಂಗ್ ಆನಿ... ಸಂದರ್ಭದಲ್ಲಿ ತಮ್ಮ ಮಡದಿಗೆ ನನ್ನ ಅಂಗಡಿಯಿಂದಲೇ ... ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದರು.

(ಮುಂದುವರೆಯು...


ಗೋವಿಂದಪ್ಪ ರಸ್ತೆಯಲ್ಲಿದ್ದ ಲಂಕೇಶ್ ಪತ್ರಿಕೆಯ ಕಚೇರಿ

ಅವುನ್ನ ಇಧಾನ ಸಬೆಗೆ ಕಳಿಸಿರದು ಕತ್ತೆಕಾಯಕ್ಕೇನ್ಲ?

ಇದು ಹೊಲ ಕುಯ್ಯುವ ಸಮಯ. ಆಳಿಗೆ ಹೇಳಲು ಹೋಗಿದ್ದ ಜುಮ್ಮಿ ಸುಸ್ತಾದವಳಂತೆ ಕಾಲೆಳೆಯುತ್ತ ಬಂದು,

"ಅಯ್ಯೋ ಮಾವ ಹೋಗತ್ತಗೆ. ರಾಗಿ ಬ್ಯಳಿಯದು ಬ್ಯಾಡ, ಆಳುಂಡಿಕ್ಯಂಡು ತಿರಗದೂ ಬ್ಯಾಡ. ಸಾಲಿಗೆ ಮುನ್ನೂರ್‍ರೂಪಾಯಿ ಕೇಳ್ತರಲ್ಲಾ ಎಲ್ಲಿಂದ ತರ್ಲಿ" ಎಂದಳು.

"ನಿನ್ನ ಗಂಡನ್ನ ಮಯ್ಯಾಳಿಗೆ ಕಳಿಸಿವೇ."

ಬಯಲು ಸೀಮೆ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಹೋದನವುನು? ನಾನು ಪಂಚಾತಿ ಮೆಂಬ್ರು ಗಂಡ ಅಂತ ಧಿಮಾಕು ಅವುನಿಗೆ. ಹೇಳಿದ ಮಾತನೇ ಕೇಳದಿಲ್ಲ ಅಂತ ಅಂಕಾರ ಬಂದದೆ."

"ಬರದಿಲವೇನೆ. ವಸದಾಗಿ ಗೆದ್ದಿರೊ ಸುಂದ್ರಿ ಗಂಡ ಶಿಕುಮಾರನಿಗೇ ಬಂದದೆ. ಇನ್ನ ನೀನಾಗ್ಲೆ ಮೂರು ಸತಿ ಗೆದ್ದಿದ್ದಿ, ಅಂತದ್ರಲಿ ನಿನ್ನ ಗಂಡನಿಗೆ ಧಿಮಾಕು ಬರಬಾರ್ದೆ?" ಎಂದ ಸೀರ.

"ಅವ್ಯಲ್ಲ ಎಷ್ಟು ದಿನದ ಧಿಮಾಕೊ ಮಾವ. ಮಾವನೆ ರಾಜಕಾರಣಿ ಆಗ್ನಿ, ಮಾಜಿ ಆಗಗಂಟ ಮ್ಯರಿತರೆ. ಆಮ್ಯಾಲೆ ನಾಯೂ ಮೂಸದಿಲ್ಲ" ಎಂದ ಉಗ್ರಿ.

"ಅದೇನೊ ನಿಜ ಕಂಡ್ಳ ಉಗ್ರಿ. ಆ ಸೂರಪ್ಪ ಎಲ್ಲೇ ಹೋದ್ರು ನಾನು ಜಿಲ್ಲಾ ಪಂಚಾತಿ ಮೆಂಬ್ರು ಅಂತ ಹೇಳಕಳನು. ಯಾರಾರ ಮದುವೆ ಮಾಡಿದ್ರೆ ಲಗ್ನಪತ್ರಿಕೆಲಿ ನನ್ನ ಹೆಸರಾಕ್ಸಿ ಅಂತಿದ್ದ. ಈಗ ಮಾಜಿ ನೋಡು, ಅದನ್ನ ಯಾರೂ ಹಾಕದಿಲ್ಲ. ದುಡ್ಡುಕೊಟ್ಟು ಹೆಸರಾಕಿಸಿಗಂಡನಂತೆ" ಎಂದಳು ಜುಮ್ಮಿ.

"ಹಗಲು ಗ್ವಾಪಾಳದವು ಕಂಡ್ಯ ಅವು. ಬೇಕಾದೋಟು ಕೆರೆ ಕಟ್ಟೆ ಮಾಡಿಸಿ ಕೋಟೆ ಕಟ್ಟದೋರ್‍ಯಲ್ಲ ಹೆಸರಿಲ್ದಂಗೆ ಹೋದ್ರು. ಅಂತದ್ರಲ್ಲಿ ಈ ಬಡ್ಡೆತ್ತವು ಲಗ್ನಪತ್ರುಕೆಲಿ ಹೆಸರಾಕಿಸಿಗತ್ತವೆ ಅಂದ್ರೆ, ಇನ್ನಂಥ ಗತಿಗೆಟ್ಟವು ಅಂತಾ."

"ಅದು ಹಿಂಗೆ ಕಣಮಾವ. ಈಚೆಗೆ ಲಗ್ನ ಮಾಡೋರು ಯಮ್ಮೆಲ್ಲಿ ಹೆಸರಾಕ್ಸಿದ್ರೆ ಐದು ಸವುರ ಕೊಡ್ತನಂತೆ. ಅದ್ಕೆ ಜಿಲ್ಲಾ ಪಂಚಾತಿ ಮೆಂಬ್ರುಗಳ ಹೆಸರಾಕಿಸಿಗಂಡು ನಾನೂರೊ, ಐನೂರೊ ಕೊಡ್ತವೆ. ಜನ ಮದ್ಲಿನಂಗಿಲ್ಲ, ಭಿಕ್ಷುಕರಾಗ್ಯವುರೆ. ಅದ್ಕೆ ಅಲವೆ ಬಳ್ಳಾರಿಲಿ ರಾಮುಲು ಆಟೊಂತರ ಓಟು ತಗಂಡು ಗೆದ್ದಿದ್ದು."

"ಬ್ಯಟ್ಟ ಅಗದು ಇಲಿ ಹಿಡದಂಗೆ ಗಣಿ ದುಡ್ಡಲ್ಲಿ ಗೆದ್ದು ಬಂದಿರೊ ಅವನು ಏನು ಮಾಡ್ತಯಿದ್ದನ್ಲ?"

"ಜನಾರ್ದನ ರೆಡ್ಡಿ ಈಚೆಗೆ ಬಂದವ್ಯಾಲೆ ಅವುನೇಳಿದಂಗೆ ಕೇಳ್ತನಂತೆ."

"ಜೈಲಲ್ಲಿರೋನು ಹೇಳಿದಂಗೆ ವರಗಿರೋನು ಕೇಳ್ತನೆ ಅಂದ್ರೆ, ಅವುನಿನ್ಯಂತ ಲೀಡ್ರು, ಇವುನಿನ್ಯಂಥ ಪಾಲೋಯರು?" ಎಂದ ಸೀರ.

"ಹಳೆ ಗಾದೆ ಮಾತು ಗೊತ್ತಿಲ್ಲವೇನೊ ನಿಂಗೇ. ಹೇಲು ತಿನ್ನೊ ದೇವರಿಗೆ ಹ್ಯಂಡ ಕುಡಿಯೋ ಪೂಜಾರಿ ಅಂತ, ಅಗೋ ಅಂಗೆ" ಎಂದ ಉಗ್ರಿ.

"ನಿನ್ನ ಮಾತು ಹಂಡ್ರೆಡ್ ಪರಸೆಂಟು ಕುಕ್ಕೆ ಸುಬ್ರಮಣ್ಯಕ್ಕೆ ಸೂಟಾಯ್ತದೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ನೆ ಹಾಜರಾದ.

"ಅದ್ಯಂಗಪ್ಪ?"

"ಯಂಗೆ ಅಂದ್ರೆ, ಅಲ್ಲಿ ಧಾರ್ಮಿಕತೆನೆ ಅಮಲು. ಅಂದ್ರೆ ಹ್ಯಂಡ. ಮಡೆ ಅಂದ್ರೆ ಮಲ. ಯಾಕಂದ್ರೆ ಉಂಡಮೇಲೆ ಊಟ ಮಲ ಆಗುತ್ತೆ. ಆದ್ರಿಂದ ಅಲ್ಲಿನ ಸಂಪ್ರದಾಯ ನೋಡಿದ್ರೆ ನಿನ್ನ ಗಾದೆ ಮಾತು, ಅಲ್ಲ ನಮ್ಮಹಳ್ಳಿ ಜನರ ಗಾದೆ ಮಾತು, ಸೂಟಾಯ್ತದೆ."

"ನಿಲ್ಸಿದ್ರೇನ್ಲ ಆದ?" ಎಂದ ಕಾಳಮಾವ.

"ನಿಲ್ಸದಕ್ಕೆ ಕಾನೂನಲ್ಲಿ ಅವುಕಾಸ ಇಲವಂತೆ ದ್ವಡಪ್ಪ."

"ಯಾವನ್ಲ ಅಂಗಂದೋನು?"

"ಆಚಾರಿ."

"ಅವುನ್ನ ವಿಧಾನಸಭೆಗೆ ಕಳಿಸಿರದ್ಯಾಕೆ? ಕತ್ತೆ ಕಾಯಕ್ಕ? ಕಾನೂನು ಇಲ್ಲ ಅಂದ್ರೆ ಮಾಡಬೇಕು, ನಿಲ್ಲುಸಬೇಕು" ಎಂದು ಕಾಳಮಾವ ಸಿಟ್ಟಾದ.

"ಪರವಾಗಿಲ್ಲ, ನಮ್ಮ ದ್ವಡಪ್ಪನಿಗೂ ಸಂವಿದಾನ ಗೊತ್ತದೆ. ಎಷ್ಟೇ ಆಗಲಿ ದೇವೇಗೌಡ್ರು ಪಾಲೋಯರ್‍ರಲವೆ."

"ದ್ಯಾವೇಗೌಡಿದ್ರೆ ನಿಲ್ಲಿಸ್ಯಾಕತಿದ್ದ ಅಲವೆ?" ಎಂದ ಸೀರ.

"ಅದ್ಯಂಗೆ ನಿಲ್ಲುಸ್ತನೆ ಚಿಗಪ್ಪ? ದ್ಯಾವೇಗೌಡ ಅಂದ್ರೆ ಮೂಢನಂಬಿಕೆಯ ಆಗರ. ಮಡೆಸ್ನಾನ ಮಾಡಿದ್ರೆ ತಿರಗ ಪ್ರದಾನಿಯಾಯ್ತಿ ಅಂತ ಯಾವನಾರ ಜ್ಯೋತಿಷ್ಯ ಹೇಳಿದ್ರೆ, ಅರ್ಧರಾತ್ರೆಲೋಗಿ ಉಳ್ಳಕ್ಯೂ ತಯಾರ್."

"ಅಂಗ್ಯಲ್ಲ ಮಾಡದಿಲ್ಲ ಕಣೊ ಅವುನು."

"ಅಂಗಿದ್ರೆ ಯಾಕೋ ಬಾಯಿಬುಟ್ಟಿಲ್ಲ ಉಗ್ರಿ. ಆ ಪೇಜಾವರನಾರ ನಾನು ಪರನು ಇಲ್ಲ ವಿರೋಧನೂ ಇಲ್ಲ ಅಂದವುರೆ."

"ಅಲ್ಲಿಗೇನಾಯ್ತು? ಅಂತ ಯಡಬಿಡಂಗಿ ಹೇಳಿಕೆ ಯಾಕ್ ಕೊಡಬೇಕು.?"

"ಪೇಜಾವರ ಅದನಾರ ಹೇಳಿದ. ಆದರೆ ಸುತ್ತೂರು ಡಾನ್, ಚುಂಚನಗಿರಿ ಪೈಲ್ವಾನ್, ಧರ್ಮಸ್ಥಳದ ಅಧಿಕಾರಿ, ಬಾಳೆಹೊನ್ನೂರು ಬೃಹಸ್ಪತಿಗಳು ಅಪ್ಪಿತಪ್ಪಿ ಬಾಯಿಬುಟ್ಟಿಲ್ಲವಲ್ಲ ಹೇಳು."


"ಈ ಬಿಜೆಪಿಗಳ ಕಾಲ್ದಲ್ಲಿ ಏನೇನೋ ನ್ಯಡದೋಯ್ತಲ್ಲಾ" ಎಂದು ಉಗ್ರಿ ಬೇಜಾರಾದ.

"ನ್ಯಡದೋಗಿಲ್ಲ ಕಣೊ ಉಗ್ರಿ, ಇನ್ನೂ ನ್ಯಡಿಯದದೆ. ನೋಡು ಬಿಟ್ಟುಗೋಡನಳ್ಳಲಿ ಮಗು ಮೂಲ ನಕ್ಷತ್ರದಲ್ಲಿ ಹುಟ್ಯದೆ ಅಂತ ಮಗನೂ, ಹೆಡ್ತಿನೂ ಮನಿಂದ ವರಿಕಾಕ್ಯವುನೆ ಭೂಪ."

"ಯಾರ್‍ಲ ಅವುನು?"

"ಯಾವನೊ ಮಡೆಸ್ನಾನದ ಗಿರಾಕಿ ದೊಡಪ್ಪ. ಆ ಮಗಿನ್ದೇನು ತೆಪ್ಪು? ಅದರವ್ವ ಮಗ ಕಟಗಂಡು ಏನು ಮಾಡಬೇಕು?"

"ಟಿವಿಯಿಂದ್ಲೆ ಕಂಡ್ಳ ಜನ ಹಿಂಗಾಯ್ತಾಯಿರದು" ಎಂದಳು ಜುಮ್ಮಿ.



"ನಿಜ ಕಣಕ್ಯ. ಬೆಳಗಾಯ್ತು ಅಂದ್ರೆ ಸಾಸ್ತ್ರ ಹೇಳೋರು, ನಕ್ಷತ್ರ ನೋಡೋರು, ರಾಹುಕಾಲ ಹೇಳೋರು ಟಿವೀಲಿ ಕಾಣಿಸಿಕೊಂಡು ಇಡೀ ಸಮಾಜನೆ ರೋಗಿಷ್ಟ ಸಮಾಜ ಮಾಡಿ ಮಡಗಿಬುಟ್ಯವುರೆ ದ್ವಡಪ್ಪ."

"ಮೂಲ ನಕ್ಷತ್ರ ಅಂತಿದ್ಯೇಳ್ತಿನಿ. ಈ ಉಗ್ರಿಯರವ್ವನೂ ಮೂಲಾ ನಕ್ಷತ್ರದಲ್ಲೇ ಹುಟ್ಟಿದ್ದು ಅಂತ ಪುಟ್ಟಾಚಾರಿ ಸಾಸ್ತ್ರ ಹೇಳಿದ್ನಂತೆ. ಅದ ಕೇಳಿಕಂಡು ಅವುರಪ್ಪ ಮಗಿನ ಮಕನೆ ನೋಡ್ತಿಲ್ಲ, ಒಂದಾರು ತಿಂಗಳಾದ ಮ್ಯಾಲೆ ಹೇಮಗಿರಿ ಜಾತ್ರಿಗೋಗುವಾಗ ಹೋರಿ ತಿವುದು ಸತ್ತೋದ. ಮನಿಯೋರ್‍ಯಲ್ಲ ಆ ಮಗಿಗೆ ಅನ್ನಬಾರದ್ದಂದ್ರು" ಎಂದ ಕಾಳಮಾವ.

"ಆ ಮಗ ಏನು ಮಾಡಿತ್ತು ಮಾವ ಪಾಪ" ಎಂದಳು ಜುಮ್ಮಿ.

"ಆ ಮಗಿಂದೇನೂ ತೆಪ್ಪಿಲ್ಲ. ಹೆತ್ತೋರು, ಹುಟ್ಟಿಸಿದೋರದೂ ತೆಪ್ಪಿಲ್ಲ ಕಣೆ. ಆದ್ರೆ ಈ ಸಾಸ್ತ್ರ ಹೇಳೊ ಸೂಳೆಮಕ್ಕಳಿಗೆ ಯಕ್ಕಡದಲ್ಲಿ ವಡಿಬೇಕು. ಅದೇನೋ ಆ ಕಾಲ ಬುಡು. ಈಗ್ಲೂ ನ್ಯಡಿತಾ ಅದೆ ಅಂದ್ರೆ ಏನ್ಹೇಳನಾ. ಟಿವಿಲೊಬ್ಬ ಈಶ್ವರಪ್ಪನಂಗೆ ಬಂದು ಕೂತಗತ್ತನೆ ನೋಡಿದ್ದಿರಾ" ಎಂದ ಉಗ್ರಿ.

"ಬ್ರಹ್ಮಾಂಡ ಅಂತ ಕಣೊ ಅವುನೆಸರು. ಥೇಟ್ ಈಶ್ವರಪ್ಪನಂಗೆ ಮಾತಾಡ್ತನೆ. ಅಂಥೋರಿಂದ್ಲೆ ಜನ ಮೂಢನಂಬಿಕೆ ದಾಸರಾಗಿರದು."

"ಈಶ್ವರಪ್ಪನ ಜಾಗದ ಮ್ಯಾಲೆ ಎಡೂರಪ್ಪನ ಕಣ್ಣು ಬಿದ್ದದಂತಲ್ಲಾ" ಎಂದ ಸೀರ.

"ಊ ಚಿಗಪ್ಪ, ಎಡೂರಪ್ಪನತ್ರ ಈಗ ಯಾವ ಪವರ್‍ರು ಇಲ್ಲ, ಮಾಜಿ ಮುಖ್ಯಮಂತ್ರಿ ಕಂ ಶಾಸಕ ಮತ್ತೆ ಮಾಜಿ ಕೈದಿ."

"ಮಾಜಿ ಕೈದಿ ಯಂಗಾದನೊ. ಇನ್ನೂ ವಿಚಾರಣೆ ನ್ಯಡಿತಾ ಅದೆ. ಆದ್ರಿಂದ ಮಾಜಿ ಅನ್ನಕ್ಕೆ ಬರದಿಲ್ಲ."

"ಆಯ್ತು, ಹಾಲಿ ಕೈದಿ ಅಂತ್ಲೆ ಇಟಗಳನ. ಈ ತರದ ವ್ಯಕ್ತಿ ತಿರಗ ಇಡಿ ಕರ್ನಾಟಕಕ್ಕೆ ವಕ್ಕರಿಸಿಗಳಕ್ಕೆ ಯಾವುದಾದ್ರು ಸ್ಥಾನಮಾನ ಬೇಕು ಅಂತ ಕೋಟಿಕ್ಯಂಡು ಡೆಲ್ಲಿಗೋಗಿ ಈಶ್ವರಪ್ಪನ ಜಾಗಕೊಡಿ ಅಂದನಂತೆ."

"ಅದಕವುರೇನಂದ್ರೂ?"

"ಮದ್ಲೆ ಬಿಜೆಪಿಗಳು ಒಳಗೊಂದು, ಹೊರಗೊಂದಲವೆ. ಎಡೂರಪ್ಪನ್ನ ಜೈಲಿಂದ ಬಂದೋನು ಅಂತ ಉಷಾರಾಗಿ ಮಾತಾಡ್ಸಿ, ಅಲ್ಲಿ ಸದಾನಂದ ಗೌಡನ ಯಲಕ್ಷನ್ ನ್ಯಡದದೆ ಅದ ಮುಗಿಸಿಗಂಡು ಬಾ ನೋಡನ ಅಂದ್ರಂತೆ."

"ಅಲ್ಲಾ, ಎಡೂರಪ್ಪನಂತ ಜೋಕರ್ ಎಲ್ಲೂ ನೋಡಿಲ್ಲ ಹೋಗತ್ಲಗೆ" ಎಂದ ಉಗ್ರಿ.

"ಯಾಕ್ಲ ಅಂಗಂತೀ?"

"ಯಲಕ್ಷನಿಗೆ ನಿಂತಿರೋನು ಸದಾನಂದಗೌಡ. ಅವುನು ದೇವೇಗೌಡ, ಕುಮಾರಸ್ವಾಮಿ, ಸಿದರಾಮಯ್ಯ, ರಾಮುಲುಗೇಳಿ, ನನ್ನ ವಿರುದ್ಧ ಕ್ಯಾಂಡೇಟಾಕಬ್ಯಾಡಿ, ನನ್ನನ್ನ ಗೆಲ್ಲಿಸಿ ಅಂತ ಕೇಳಬೇಕೊ, ಎಡೂರಪ್ಪ ಕೇಳಬೇಕೊ ವಾಟಿಸ್ನೆ?"


"ನೀನೇಳದು ನಿಜ ಕಣೊ ಉಗ್ರಿ. ಆದ್ರೆ ಎಡೂರಪ್ಪನ ತಂತ್ರೇನು ಅಂದ್ರೆ ನಾಳೆ ಸದಾನಂದ ಗ್ಯಾತಾ ಯಸ್ತಾಗ ತನ್ನ ಮ್ಯಾಲೆ ಯಾವ ದೂರು ಬರಬಾರ್ದು ಅಂತ ಮದ್ಲೆ ಡ್ರಾಮಾ ಮಾಡ್ಯವುನೆ. ಅದಕ್ಕಿಂತ್ಲೂ ಸಿದ್ದರಾಮಯ್ಯ ಒಂದು ಡ್ರಾಮಾ ಮಾಡಿದ ನೋಡಿದಾ."

"ಏನು ಮಾಡಿದಾ?"

"ಪಾಪ, ಹಿಂದುಳಿದ ಈಶ್ವರಪ್ಪ ಅದ್ಯಕ್ಷಾಗಿರ್ಲಿ ಬಿಡ್ರಿ ಎಡೂರಪ್ಪ ಅಂದ. ಯಾಕೆ ಗೊತ್ತೇನೊ? ಬಾಯಿಗೆ ಬಂದಂಗೆ ಮಾತಾಡಿ ಬಿಜೆಪಿಯ ಹಳ್ಳ ಹಿಡಸೋ ಶಕ್ತಿ ಇರದು ಈಶ್ವರಪ್ಪನಿಗೆ ಮಾತ್ರ. ಅಂಡರ್‌ಸ್ಟಾಂಡ್!"

ಶೌರಿಯ ಮುಖಕ್ಕೆ ಮಸಿ


ಅರುಣ್ ಶೌರಿಯ ಮುಖಕ್ಕೆ ದಲಿತ ಪ್ಯಾಂಥರ್‌ನವರು ಪೂನಾದಲ್ಲಿ ಮಸಿ ಬಳಿದರೆಂಬ ಸುದ್ದಿ ಬಂದಿದೆ. ಶೌರಿಯ ಶತ್ರುಗಳು ಇದನ್ನು ಸ್ವಾಗತಿಸುವುದೂ ಮಿತ್ರರು ಖಂಡಿಸುವುದೂ ವಿವೇಕಿಗಳಿಗೆ ಅಚ್ಚರಿಯನ್ನುಂಟು ಮಾಡಬಹುದು. ಆದರೆ ವಿಷಯ ಇನ್ನೂ ಜಟಿಲವಾಗಿದೆ. ಶೌರಿ ನಮ್ಮ ದೊಡ್ಡ ವಿದ್ವಾಂಸರು, ಇವರು ಶಂಕರ, ಮಾಧ್ವ, ಮನು ಸಂಪ್ರದಾಯದಲ್ಲಿ ಬೆಳೆದರೆಂದು ಸರಳವಾಗಿ ಹೇಳಬಹುದು; ಈ ವ್ಯಕ್ತಿಗೆ ಹೋಲಿಸಿದರೆ ಅವರೆಲ್ಲ ಮುಗ್ಧರು. ಯಾಕೆಂದರೆ ಒಂದು ರೀತಿಯಲ್ಲಿ ಅಂತರ್ರಾಷ್ಟ್ರೀಯತೆಯನ್ನೂ ಇನ್ನೊಂದು ರೀತಿಯಲ್ಲಿ ಅತ್ಯಂತ ಕ್ರೂರ ಪರಂಪರೆಯನ್ನೂ ಪ್ರತಿನಿಧಿಸುವ ಶೌರಿಯಂಥವರು ಯಾವ ಓದಿತಕ್ಕೂ ಸಲೀಸಾಗಿ ಸಿಕ್ಕುವುದಿಲ್ಲ. ಅಂಬೇಡ್ಕರ್ ಬಗ್ಗೆ ಈತ ಹೇಳಿದ ಅಭಿಪ್ರಾಯ ಕೆಟ್ಟದಾಗಿದೆ; ಅದು ಸರಿಯೆಂದು ತಿಳಿದುಕೊಂಡರೂ ಶೌರಿಯಂಥವರ ವ್ಯಕ್ತಿತ್ವ ಕುತೂಹಲ ಹುಟ್ಟಿಸುತ್ತದೆ. ಈ ಶೌರಿಯ ಪ್ರಕಾರ ಭಾರತದ ಸಂಪ್ರದಾಯ ಒಳ್ಳೆಯದು. ಇಲ್ಲಿಯ ಜಾತೀಯತೆ, ವರ್ಣವ್ಯವಸ್ಥೆಗೆ ಕೂಡ ಕಾರಣ ಕಂಡುಕೊಂಡು ಸಮರ್ಥಿಸಿಕೊಳ್ಳಬಲ್ಲ ಜನ ಶೌರಿಯಂಥವರು. ಈತ ತನ್ನ ಜಾತಿಯ ಸೊಕ್ಕಿನಿಂದ ಮಾತಾಡುತ್ತಾರೆ; ಈತನಂಥ ಸಾವಿರಾರು ಜನ ಶೌರಿಗಳು ಸಮುದಾಚನೆಯಲ್ಲಿ ಮುಳುಗಿದ್ದಾರೆ. ಇಲ್ಲದಿದ್ದರೆ ಈ ಇಡೀ ದೇಶ ಈ ಸ್ಥಿತಿಗೆ ಬರಲು ಸಾಧ್ಯವಿರಲಿಲ್ಲ. ಇದನ್ನು ತಮ್ಮ ಒಳನೋಟದ ಸಹಾಯದಿಂದ ಅರಿಯಬಲ್ಲವರಾಗಿದ್ದ ಗಾಂಧಿ ಶೌರಿಯಂಥವರನ್ನು ಹತ್ತಿರ ಕೂಡ ಸೇರಿಸುತ್ತಿರಲಿಲ್ಲ; ಒಂದು ವೇಳೆ ಸೇರಿಸಿಕೊಂಡರೂ ತೊಳೆದು ಇಸ್ತ್ರಿ ಮಾಡಿಬಿಡುತ್ತಿದ್ದರು. ಆದರೆ ಜೆಪಿ ಹಾಗಲ್ಲ. ತಮ್ಮ ಕಲ್ಪನೆಯ 'ಸಂಪೂರ್ಣ ಕ್ರಾಂತಿ'ಯ ಚಟುವಟಿಕೆಗಳಲ್ಲಿ ಶೌರಿ ತರಹದವರು ಜೆಪಿಗೆ ಅರ್ಥವಾಗುತ್ತಿರಲಿಲ್ಲ. ಇದರಿಂದಾಗಿಯೇ ಇವತ್ತು ಈ ಶೌರಿ ಮಸೀದಿಗಳನ್ನು ಬೀಳಿಸಿದ್ದನ್ನು ಸಮರ್ಥಿಸಿಕೊಳ್ಳಬಲ್ಲ ಎಗ್ಗು ಪಡೆದಿದ್ದಾರೆ; ಚೆಡ್ಡಿಗಳ ಜೊತೆಯಲ್ಲಿ ನಿಂತು ಸುಳ್ಳು ಹೇಳುವುದರಲ್ಲಿ ಮುಳುಗಿದ್ದಾರೆ.



ಭಾರತ ಈಗ ಆಧುನಿಕಗೊಳ್ಳುತ್ತಿರುವಂತೆ ಕಾಣುತ್ತಲೇ ತೀವ್ರ ದಾರಿದ್ರ್ಯದ ಸ್ಥಿತಿ ತಲುಪಿರುವುದಕ್ಕೆ ಬೇರೆ ಕಾರಣ ಹುಡುಕುವುದು ಅನಗತ್ಯ. ನಮ್ಮ ಬಡವರು ಚೀರಿಕೊಳ್ಳುತ್ತಲೇ ತಮ್ಮ ವ್ಯಕ್ತಿತ್ವ ಕಳೆದುಕೊಂಡು ದುರ್ಬಲರಾಗುತ್ತಿದ್ದಾರೆ; ಶೌರಿ ತರಹದವರು ಅಂತರ್ರಾಷ್ಟ್ರೀಯತೆಯನ್ನು ನಂಬಿ ಸಣ್ಣವರಾಗುತ್ತಿದ್ದಾರೆ. ಶೌರಿಯ ಮೂರ್ಖ ಹೇಳಿಕೆಗಳಿಗೆ ಪ್ಯಾಂಥರ್‌ಗಳ ಪ್ರತಿಕ್ರಿಯೆ (ಮಸಿ ಬಳಿಯುವ ಕೆಲಸ) ನಿಜಕ್ಕೂ ಸಾಂಕೇತಿಕವಾಗಿದೆ. ಶೌರಿಗೆ ಮಸಿ ಬಳಿದದ್ದು ಸರಿ; ಪ್ಯಾಂಥರ್‌ಗಳ ಸಿಟ್ಟು ಸಹಜವಾದದ್ದು. ಆದರೆ ಶೌರಿಯ ಸುಳ್ಳು ಮತ್ತು ಪ್ಯಾಂಥರ್‌ಗಳ ಹಲ್ಲೆ–ಎರಡೂ ವಿಚಾರಾರ್ಹವಾಗಿದೆ. ಇದರಿಂದೆಲ್ಲ ನಾವು ಎತ್ತ ಸಾಗುತ್ತಿದ್ದೇವೆ ಎಂಬುದು ಆತಂಕ ಹುಟ್ಟಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಶೌರಿಯಂಥ ವ್ಯಕ್ತಿಗಳು ತಮ್ಮ ಚಿತೆಯನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ಆತ 1975 ರಿಂದ ಇಲ್ಲಿಯವರೆಗೆ ನಡೆದುಬಂದ ರೀತಿಯನ್ನು ನೋಡಿದವರಿಗೆ ಇದು ತಿಳಿಯುತ್ತದೆ. ನಾನು ಇದನ್ನು ಸಿಟ್ಟಿನಿಂದ ಹೇಳುತ್ತಿಲ್ಲ, ವ್ಯಸನದಿಂದ ಹೇಳುತ್ತಿದ್ದೇನೆ. ಇವತ್ತು ಶೌರಿ ಬಿಜೆಪಿಗಳ ಜೊತೆಯಲ್ಲಿ ನಿಂತು ಕಾರಿಕೊಳ್ಳುತ್ತಿರುವಂತೆಯೇ ಎಂ.ಜೆ. ಅಕ್ಬರ್ ಎಂಬ ವ್ಯಕ್ತಿ ಕಾಂಗ್ರೆಸ್‌ಗಳ ಜೊತೆಯಲ್ಲಿ ನಿಂತು ಕರಗಿ ಹೋಗಿದ್ದನ್ನು ನೋಡಬಹುದು. ನಮ್ಮೆಲ್ಲ ಹೇಳಿಕೆ, ಪ್ರದರ್ಶನ, ಬದಿವಾರಗಳ ಅಂತರಂಗ ಜನತೆಗೆ ಗೊತ್ತಾಗಿಹೋಗುತ್ತದೆ. ಈ ಅಂತರಂಗವನ್ನು ಅರಿತಿದ್ದ ಗಾಂಧೀಜಿ ಇವತ್ತು ಇಲ್ಲದಿದ್ದರೂ ಜನತೆಯ ಒಳನೋಟ ಇದೆ. ಅದಿಲ್ಲದಿದ್ದರೆ ಎಂ.ಜೆ. ಅಕ್ಬರ್ ಹಾಗಾಗುವುದು, ಶೌರಿ ಹೀಗಾಗುವುದು ಸಾಧ್ಯವಿರಲಿಲ್ಲ.

ಏಪ್ರಿಲ್ 3, 1996



ಬುದ್ಧಿಜೀವಿಗಳ ವರಸೆ

ಅಹಿಂದ ಯಾರ ಮಗು?

ಇದು ಕೋಲಾರದಲ್ಲಿ ಜನಿಸಿದ ಕೂಸು. ಅದು ನಮ್ಮ ಮಗು ಎಂದು ಬುದ್ಧಿಜೀವಿಗಳ ವಾದ.

ಇರಬಹುದು. ಯಾಕೆಂದರೆ ಅವರ ಹತ್ತಿರ ಪ್ಲೇಸ್ ಆಫ್ ಬರ್ತ್ ಸರ್ಟಿಫಿಕೇಟ್ ಇದೆ.

ಇದಕ್ಕೆ ಕೆಲವರ ತಕರಾರು: ಹುಟ್ಟಿಸಿದರೆ ಆಯಿತೇ? ಅದರ ಲಾಲನೆ-ಪೋಷಣೆ ಬೇಡವೇ? ರಾಜ್ಯಾದ್ಯಂತ ಅದನ್ನು ಎತ್ತಿ ಮೆರೆಸಿ ಅದಕ್ಕೆ ಅಸ್ತಿತ್ವ ಸಿಗುವಂತೆ ಮಾಡಿದ್ದು ಜನಪ್ರಿಯತೆಗೊಳಿಸಿದ್ದು ನಾವು. ನಾವೇ ನೈಜ ಜನ್ಮದಾತರು ಎಂಬುದು ರಾಜಕಾರಣಿಗಳ ವಾದ.

ಇವರ ಹತ್ತಿರ ಪ್ಲೇಸ್ ಆಫ್ ಬರ್ತ್ ಸರ್ಟಿಫಿಕೇಟ್ ಇಲ್ಲ, ಜನಪ್ರಿಯಗೊಳಿಸಿದ ಸರ್ಟಿಫಿಕೇಟ್ ಇದೆ.

ಅವರಿವರ ಕಿತ್ತಾಟದಲ್ಲಿ ಅಹಿಂದ ಬಡವಾಯಿತು.

ತಾಯಿ ಇದ್ದಿರಬೇಕಲ್ಲ?

ಇಲ್ಲದೆ ಏನು, ಇದ್ದಾರೆ.

ಯಾರು ಆ ಮಹಾ ತಾಯಿ?

ಇನ್ನಾರು? ಕನ್ನಡಾಂಬೆ!

ತಾಯಿ ಇದ್ದೂ ಕಂದ ತಬ್ಬಲಿಯಾಯಿತೇ?

ಅದೇ ದಿಕ್ಕು ದೆಸೆ ಇಲ್ಲದ ಪರದೇಸಿ. ಆಕೆಯ ಮಗು ಇದು. ಇದೂ ದಿಕ್ಕು ದೆಸೆ ಇಲ್ಲದೆ ಅನಾಥ ಆಯಿತು. ಮೂಲೆ ಸೇರಿತು.

ಕಾಲ ಉರುಳಿತು.

ಉದಯಿಸಿತು ಬಿಎಸ್ಆರ್!

ಆನಂದ ತುಂದಿಲರಾದರು ಬುದ್ಧಿಜೀವಿಗಳು. ಅಹಿಂದ ಮರು ಹುಟ್ಟಾಯಿತೆಂದು ಸಂಭ್ರಮಿಸಿದರು!

ಗಾಬರಿಯಾದರು ಜನ.


ಅಹಿಂದ ಎಂದರೆ ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಎಂದಲ್ಲವೇ? ಅದಕ್ಕೂ, ಬಿಎಸ್ಆರ್‌ಗೂ ಎತ್ತಣಿಂದೆತ್ತಣ ಸಂಬಂಧವಯ್ಯ ಎನ್ನುವುದು ಅವರ ಚಿಂತೆಯಾಗಿತ್ತು.

ಮೂರ್ಖಜನ. ಬುದ್ಧಿಜೀವಿಗಳ ಅಂತರಾಳದ ಅರಿವಿಲ್ಲ, ಬಿಎಸ್ಆರ್ ಎಂಬುದರ ಅರ್ಥ ತಿಳಿದಿಲ್ಲ.

ಹೌದು, ಹಾಗೆಂದರೇನು?

ಬಡವರು, ಶ್ರಮಿಕರು, ರೈತರು!

ಅಹಿಂದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂಬ ಪೆದ್ದು



ತರ್ಕವೇ ಜನರಲ್ಲಿ ಇರಬಾರದು! ಅವರಿಗೆ ನೆನಪಿರಲಿ. ಕೂಸು ಹುಟ್ಟುವುದು ಖಚಿತವಾಗಿತ್ತು, ನಾಮಕರಣ ಆಗಬೇಕಿತ್ತಲ್ಲ. ಹುಟ್ಟುವ ಮಗುವಿಗೆ ಬುದ್ಧಿಜೀವಿಗಳ ಪೌರೋಹಿತ್ಯದಲ್ಲಿ ಸಾಂಗವಾಗಿ ಇದು ನೆರವೇರಲಿದೆ ಎಂದು ಘೋಷಿಸಲಾಗಿತ್ತು. ಕೂಸು ಜನಿಸಿತು. ಬುದ್ಧಿಜೀವಿಗಳು ತಮಗೆ ವಹಿಸಿದ್ದ ಕರ್ತವ್ಯ ಯಶಸ್ವಿಯಾಗಿ ನಿರ್ವಹಿಸಿದರು. ಅದೇ ಇದು!

ಆದರೂ....

ಇನ್ನೂ ಸಂದೇಹವೇ? ಪೂರ್ವಾಶ್ರಮದ ಅಹಿಂದವೇ ಈ ಆಶ್ರಮದ ಬಿಎಸ್ಆರ್!


ಗೂಂಡಾ ಸಂಸ್ಕೃತಿಯ, ಗಣಿಲೂಟಿಕೋರರ ಕೂಸು ಅಲ್ಲವೇ ಇದು?

ಅವನೇ ಜನ್ಮದಾತ ನಿಜ. ಆದರೆ ಪ್ರೇರಣೆ ಬುದ್ಧಿಜೀವಿಗಳದ್ದು!

ಜನ್ಮದಾತನ ಹೆಸರ ಸೂಚಕ ಆಗಿದೆಯಲ್ಲ ಇದು?

ಸಾಧ್ಯವೇ ಇಲ್ಲ! ಬುದ್ಧಿಜೀವಿಗಳೇ ಸಾರುತ್ತಿದ್ದಾರೆ-'ಅಹಿಂದ ಪರ್ಯಾಯ ಹೆಸರು ಬಿಎಸ್ಆರ್!'

ವಿಶೇಷ ಸೂಚನೆ : ಬಡವರು, ಶ್ರಮಿಕರು, ರೈತರು ಪ್ರತ್ಯೇಕ ಬಣಗಳೇ? ಬಡವರು ರೈತರು ಶ್ರಮಿಕರಲ್ಲವೇ? ಇಂತಹ ಮೂರ್ಖ ಪ್ರಶ್ನೆಗಳನ್ನು ಬುದ್ಧಿಜೀವಿಗಳಿಗೆ ಹಾಕಿ ಬುದ್ಧಿಗೇಡಿ ಎನ್ನಿಸಿಕೊಳ್ಳಬೇಡಿ. ನಿಮಗೆ ಅದು ಯಾರದೋ ಹೆಸರಿನ ಸೂಚಕವಾಗಿ ತೋರಬಹುದು. ಅದೇ ಸತ್ಯ ಅನ್ನಿಸಿರಲೂಬಹುದು. ಪರೀಕ್ಷಿಸಬೇಕಿದ್ದರೆ ನೀವು ನಿಮ್ಮ ಪೂರ್ಣ ಹೆಸರನ್ನು ಈ ಬುದ್ಧಿಜೀವಿಗಳಿಗೆ ಕಳುಹಿಸಿಕೊಡಿ. ಅದು ಅಹಿಂದದ ಪರ್ಯಾಯವೇ ಹೌದು ಎಂಬಂತಹ ಒಂದು ಹೆಸರು ಅವರಿಂದ ನಿಮಗೂ ದೊರೆತರೂ ದೊರೆಯಬಹುದು! ಆದರೆ ಒಂದು ರಾಜಕೀಯ ಪಕ್ಷವನ್ನು ಕಟ್ಟಲು ಅವಶ್ಯಕವಾದ ಶ್ರೀಮಂತಿಕೆ ನಿಮಗಿರಬೇಕು! ಶ್ರೀಮಂತಿಕೆಯ ಹಿನ್ನೆಲೆ ಹಿತಕರವಾಗಿಲ್ಲ ಎಂಬ ಯೋಚನೆ ಬಿಡಿ. ಶ್ರೀಮಂತಿಕೆಯ ಸ್ವಭಾವವೇ ಹಾಗೆ. ಅದರ ಹಿನ್ನೆಲೆ ಹಿತಕರವಾಗಿರುವುದಿಲ್ಲ, ಇದು ಬುದ್ಧಿಜೀವಿಗಳಿಗೆ ಅರಿವಿದೆ- ಎಂದೇ ಅಂತಹ ಚಿಲ್ಲರೆ ಸಂಗತಿಗಳು ಅವರಿಗೆ ಗೌಣ!



ಎಚ್.ಎಲ್. ಕೇಶವಮೂರ್ತಿ

ಅಣಕ

ಆಹಾ ದುರ್ವಿಧಿಯೇ

ಪೌರಾಣಿಕ ನಾಟಕಗಳಲ್ಲಿ ನಾಯಕನಾದವನು 'ಆ... ದುರ್ವಿಧಿಯೇ' ಎಂದು ತನ್ನ ಕಷ್ಟಕಾರ್ಪಣ್ಯಗಳಿಗೆ ವಿಧಿಯ... ಕುರಿತು ಹೇಳುವಂತೆ ಭಾಜಪ ನಾಯಕ... ಹೇಳುವಂತಾಗಿದೆ. ಮಾಜಿ ಮುಖ್ಯಮಂತ್ರಿಯವರಾದ ಸ... ಯಡ್ಯೂರಪ್ಪನವರು ಜೈಲುವಾಸಿಗಳಾಗಿ ಜಾಮೀನಿನ ಮೆ... ಹೊರಬಂದ ನಂತರ ತಮ್ಮ ಇರುವನ್ನು ಆಗ... ಸಾಕ್ಷಾತ್ಕರಿಸಿಕೊಳ್ಳುವುದು ಅನಿವಾರ್ಯವೇ ಆಗಿ... ಶಾಶ್ವತವಾಗಿ ಹೊರಗೇ ಉಳಿಯಲು ಬಹಳ ಶ್ರಮಿಸುತ್ತಿದ್ದ... ಈ ಪ್ರಯತ್ನದ ಅಂಗವಾಗಿಯೇ ಎಂಬಂತೆ ಲೋಕಾಯು... ನೇಮಕ ಪ್ರಶ್ನೆಯನ್ನು ತಮ್ಮ ಪಕ್ಷದ ಘನತೆ ಗೌರವ... ಪ್ರಶ್ನೆಯನ್ನಾಗಿ ಮಾರ್ಪಡಿಸಿದ್ದಾರೆ. ಇಂತಹವರು ಆ ಸ್ಥಾ... ಏರಿದರೇ ಆ ಪೀಠಕ್ಕೂ ಒಂದು ಮರ್ಯಾದೆ ಎಂದು ಬಿ... ಸುತ್ತಿದ್ದಾರೆ. ಅದು ಹಾಗಿದ್ದರೂ ಇರಬಹುದು. ಆದರೆ ಆ... ರಾಜ್ಯಪಾಲರು ಸಮ್ಮತಿಸುತ್ತಿಲ್ಲ, ಕಳಂಕರಹಿತ ವ್ಯಕ್ತಿಯ ಹೆ... ಸೂಚಿಸಿ ಎನ್ನುತ್ತಿದ್ದಾರೆ ಅವರು. ಯಡ್ಯೂರಪ್ಪನವರಿಗೆ ಅ... ವಾದ ಸರಿ ಕಾಣುತ್ತಿಲ್ಲ, ಮುಖ್ಯ ನ್ಯಾಯಾಧೀಶನಾಗಿದ್ದ... ಮನೆಯನ್ನೇ ಹೊಂದಿರಬಾರದೇ? ನ್ಯಾಯಾಲಯದ ಸಿಬ್ಬಂ... ನೌಕರರ ಗೃಹ ನಿರ್ಮಾಣ ಸಂಘದಿಂದ ನಿವೇಶನ ಪಡೆ... ವುದೂ ಅಪರಾಧವೇ? ಇತರ ನ್ಯಾಯಾಧೀಶರೂ ಪಡೆದಿ... ರಲ್ಲ? ಎಂದೆಲ್ಲಾ ಪ್ರಶ್ನಿಸುತ್ತಿದ್ದಾರೆ.

ಹೀಗೆ ಹೇಳುವುದರ ಮುಖಾಂತರ ಬಹುಪಾ... ನ್ಯಾಯಾಧೀಶರುಗಳು ಕಾನೂನು ಉಲ್ಲಂಘಕರು ಎಂಬು... ಜಗಜ್ಜಾಹೀರುಮಾಡಿದ್ದಾರೆ! ಅವರು ಮಾಡಿರುವ ತ... ಇವರೂ ಮಾಡಿರುವುದರಿಂದ ಇದು ಅಪರಾಧ ... ಎಂಬುದು ಯಡ್ಯೂರಪ್ಪನವರ ನ್ಯಾಯ ಆಗಿದೆ. ಆದುದರಿ... ರಾಜ್ಯಪಾಲರು ಇಂತಹವರನ್ನೇ ಲೋಕಾಯುಕ್ತರನ್ನಾ... ನೇಮಿಸಲು ಅನುಮತಿ ನೀಡಲೇಬೇಕು. ಹೀಗೆ ಮಾಡ... ಹೋದಲ್ಲಿ ಅವರು ಪಕ್ಷಪಾತದಿಂದ ವರ್ತಿಸುತ್ತಿ... ಎಂಬುದು ಖಚಿತವಾಗುತ್ತದೆ. ಈ ವಿಷಯವನ್ನು ಧೈ...

'ಗಾಂಧಿ ಬಂದ' ವಿವಾದ: ಜಾತಿ ಶ್ರೇಷ್ಠತೆಯ ಅಂಧಕಾರದಲ್ಲಿ

ಭಾರತ ದೇಶದ ಮಾನವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡರೆ ಬಹುಶಃ ಈ ದೇಶವೂ ಎಲ್ಲಾ ರಂಗದಲ್ಲೂ ಸಂಪದ್ಭರಿತವಾಗಿರುತ್ತಿತ್ತೇನೋ. ದುರದೃಷ್ಟವಶಾತ್ ಜನತೆ ಕಣ್ಣಿಗೆ ಕಾಣದ, ಕೈಗೆ ಸಿಗದ, ಒಟ್ಟಾರೆ ಪಂಚೇಂದ್ರಿಯಗಳಿಗೆ ಅತೀತವಾದ ಸನಾತನ ಧರ್ಮದ 'ಜಾತಿ' ಎಂಬ ಅಂಧಕಾರದಲ್ಲಿ ನಮ್ಮ ಸಮಾಜ ಮುಳುಗಿದೆ.

ಪ್ರಸ್ತುತ 'ಗಾಂಧಿ ಬಂದ' ಎಂಬ ಸೃಜನಶೀಲ ಕೃತಿ ಬಗ್ಗೆ ಎದ್ದಿರುವ 'ಜನಾಂಗ ನಿಂದನೆ', 'ಜಾತಿ ಶ್ರೇಷ್ಠತೆ'ಯ ಹಳಹಳಿಕೆಯಲ್ಲಿ ಲೇಖಕರಿಗೆ ಲಾಯರ್ ನೋಟಿಸ್ ಕೊಟ್ಟು, ಮಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳಿಗೆ ಪಠ್ಯವಾಗಿರುವ ಈ ಕೃತಿಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಪಡಿಸುತ್ತಿರುವ ಜಾತಿ ಮತಾಂಧರ ಉದ್ಧಟತನದ ಪರಮಾವಧಿಗೆ ಪ್ರತಿಕ್ರಿಯಿಸುತ್ತಿದ್ದೇನೆ.

21ನೇ ಶತಮಾನದಲ್ಲಿ ಮಾಧ್ಯಮಗಳ ಅಭಿವ್ಯಕ್ತಿ ನಾಲಗೆ ಪಟ್ಟಭದ್ರರ ಹಿಡಿತದಲ್ಲಿ ಸಿಲುಕಿದೆ. ಇದು ಮಾಧ್ಯಮಗಳು ಇಳಿದಿರುವ ಅಧೋಗತಿಯನ್ನು ತೋರಿಸುತ್ತದೆ. ಆದರೆ ಸೃಜನಶೀಲ ಸಾಹಿತ್ಯ ಅಭಿವ್ಯಕ್ತಿಯು ಯಾವ, ಯಾರ ಹಿಡಿತಕ್ಕೂ ಒಳಗಾಗಬೇಕಿಲ್ಲ. ಹಾಗೆಂದ ಮಾತ್ರಕ್ಕೆ ಸತ್ಯಕ್ಕೆ ದೂರವಾದುದನ್ನು ಹೇಳುವ ಹಾಗಿಲ್ಲ, ವೈಚಾರಿಕ ಬರಹದಲ್ಲಿ ಹೇಳುವುದನ್ನೇ ಕಲ್ಪಿತ ವಾಸ್ತವ ನೆಲೆಯಾದ ಕತೆ-ಕಾದಂಬರಿಗಳಲ್ಲಿ ತಾವು ಸೃಷ್ಟಿಸುವ ಪಾತ್ರ, ಸನ್ನಿವೇಶಗಳ ಮೂಲಕ ವಸ್ತು ಸ್ಥಿತಿಯನ್ನು ಹೊರಗೆಡವಲು ಸಾಹಿತಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ನೈತಿಕ ಜವಾಬ್ದಾರಿಗಳಿವೆ. ಇದರ ಚೌಕಟ್ಟಿನೊಳಗೆ ಡಾ.ಎಚ್.ನಾಗವೇಣಿಯವರು ತುಳುನಾಡಿನ ಸಾಂಸ್ಕೃತಿಕ ಸಾಮಾಜಿಕ ವಲಯದಲ್ಲಿ ಕೋಮು ಸೌಹಾರ್ದವನ್ನು ಬಿಂಬಿಸುವ ಕಥಾವಸ್ತುವಿನ ಎಳೆಗಳನ್ನು ಬಿಡಿಸಿಟ್ಟಿದ್ದಾರೆ. ಇಲ್ಲಿನ ಪಾತ್ರಗಳ ಸಂಭಾಷಣೆಗಳು ನಿರ್ದಿಷ್ಟ ಜಾತಿ, ಜನಾಂಗವನ್ನು ಅದರಲ್ಲೂ ವಿಶ್ವಕರ್ಮ-ಬ್ರಾಹ್ಮಣರನ್ನು ನಿಂದಿಸುವ ಉದ್ದೇಶ ಹೊಂದಿಲ್ಲ, ಕಾದಂಬರಿಯಲ್ಲಿ ಬರುವ ಸಂದರ್ಭಗಳಿಗೆ, ನಾಟಕೀಯ ಸನ್ನಿವೇಶಕ್ಕೆ ಪೂರಕವಾಗಿ ಆಡಿದ ಮಾತುಗಳಾಗಿವೆ ಎಂಬುದು ಸೂಕ್ಷ್ಮಮತಿಯ ಗಂಭೀರ ಓದುಗರಿಗೆ ತಿಳಿಯುವಂಥದ್ದು.


ಮೊಸರಲ್ಲೂ ಕಲ್ಲು ಹುಡುಕುವವರಂತೆ, ಈ ಕಾದಂಬರಿಯಲ್ಲಿ ತಮ್ಮ ಜಾತಿಗೆ-ಜನಾಂಗಕ್ಕೆ ಅಪಮಾನವಾಗಿದೆ ಎಂದು ತಳಮಳಿಸುತ್ತಿರುವುದು ಅವರ ತಿಳಿಗೇಡಿತನಕ್ಕೆ ಸಾಕ್ಷಿಯಾಗಿದೆ. ಇವರುಗಳ ತರ್ಕದಂತೆ ಹೋದರೆ ಶೂದ್ರ ವರ್ಗ, ಕೆಳಜಾತಿಯವರು ಕೂಡ ಕೋರ್ಟಿನ ಮೆಟ್ಟಿಲು ಹತ್ತಬೇಕಾಗುತ್ತದೆ. ಏಕೆಂದರೆ ಇಲ್ಲಿ ಶೂದ್ರರನ್ನು ಕುರಿತು 'ಕೃತಘ್ನ ಹಡಬೆ'ಯವರು (ಪುಟ-302, 'ಗಾಂಧಿ ಬಂದ') ಎಂಬ ಮಾತು ಬರುತ್ತದೆ. ಯಾರನ್ನೂ ಬಾಧಿಸದ ಈ 'ಅಪಮಾನ' 'ನಿಂದನೆ' ವಿಶ್ವಕರ್ಮ-ಬ್ರಾಹ್ಮಣರು ಮಾತ್ರವೇ ಬಾಧಿಸಲು ಕಾರಣ ಅವರ ನೆತ್ತಿಗೇರಿರುವ 'ತಮ್ಮ ಜಾತಿ ಶ್ರೇಷ್ಠ' ಎಂಬ ಅಮಲು.

ಇಂದಿನ ವಿದ್ಯಾರ್ಥಿಗಳು ಕಲಿಯಬೇಕಾದ್ದು, ಅವರಿಗೆ ಕಲಿಸಬೇಕಾದ್ದು ಬಹಳಷ್ಟಿದೆ. ಹೊಸ ಹೊಸ ಆವಿಷ್ಕಾರಗಳು ಜ್ಞಾನದ ದಿಗಂತವನ್ನು ವಿಸ್ತರಿಸುತ್ತವೆ. ಹೊಸ ಸಮಸ್ಯೆಗಳು, ಸವಾಲುಗಳು ಎದುರಾಗುತ್ತವೆ. ಅವನ್ನು ಮುಖಾಮುಖಿಯಾಗುವುದು ಹೇಗೆ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕಾಗಿದೆ. ಇದೆಲ್ಲದರ ಬದಲಿಗೆ ಶತಮಾನಗಳಿಂದ ಕೊಳೆತು ನಾರುತ್ತಿರುವ ಜಾತಿ, ವರ್ಗಗಳ ಶ್ರೇಷ್ಠತೆಯ ಹಳವಂಡಗಳಲ್ಲಿ ಅವರನ್ನು ಬೀಳಿಸುತ್ತಿರುವುದು ಎಷ್ಟರಮಟ್ಟಿಗೆ ಸರಿ?

ಇವತ್ತು ಶಿಕ್ಷಣದಲ್ಲಿ ಕಲಿಸಬೇಕಾಗಿರುವುದು ಜಾತಿ ಶ್ರೇಷ್ಠತೆಯನ್ನಲ್ಲ, ಕೇವಲ ಮನುಷ್ಯರು ಮನುಷ್ಯರಂತೆ ಬದುಕುವುದನ್ನು. ಇದನ್ನು ಮರೆತವರು ಜಾತಿ ವಿಷಬೀಜಗಳನ್ನು ಬೆಳೆಯುವ ಮಕ್ಕಳಲ್ಲಿ ಬಿತ್ತುವುದಕ್ಕೆ ಹೇಸುವುದಿಲ್ಲ, ಇಂಥವರಿಂದ ಒಂದು ಸೃಜನಶೀಲ ಕೃತಿಯನ್ನು ಸೃಜನಾತ್ಮಕವಾಗಿ, ವೈಚಾರಿಕವಾಗಿ ಗ್ರಹಿಸುವುದರಿಂದ ವಂಚಿತರಾಗಬೇಕಾಗುತ್ತದೆ. ನಮ್ಮ ಪ್ರಜ್ಞಾವಂತ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಗೆ ಇಂಥ ಕ್ಷುಲ್ಲಕ ನೆಪಗಳು, ತುಚ್ಛ ಆರೋಪಗಳು ನಿಲ್ಲಬೇಕು. ಇದು ತಪ್ಪಬೇಕಾದರೆ ಪ್ರಜ್ಞಾವಂತ ಮನಸ್ಸುಗಳು ಒಂದಾಗಬೇಕು.

- ಸುಮಂಗಲಾ ಎಲ್. ಕನ್ನಡ ಉಪನ್ಯಾಸಕಿ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುವ ಮೊದಲಿನ ಮತ್ತು ಸ್ವಾತಂತ್ರ್ಯ ಸಿಕ್ಕಿದ ನಂತರದ ಒಂದು ದಶಕದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ವಾಸ್ತವಿಕ ಚಿತ್ರಣವು ಡಾ. ಎಚ್. ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯಲ್ಲಿದೆ.

ಗಾಂಧೀಜಿಯವರಿಗೆ 'ಇಂಡಿಯಾದ' ಸ್ವಾತಂತ್ರ್ಯವೆಂದರೆ ಬ್ರಿಟಿಷ್ ವಸಾಹತುಶಾಹಿ ಆಡಳಿತ ವ್ಯವಸ್ಥೆಯಿಂದ ಬಿಡುಗಡೆ ಮಾತ್ರವಲ್ಲದೆ ಭಾರತದ ಸಮಸ್ತ ಜನ ಸಮುದಾಯವು ಆಗಿನ ಜಾತಿನಿಷ್ಠ ಶೋಷಣೆ, ಅಸಮಾನತೆ, ಅಸ್ಪೃಶ್ಯತೆ, ದೌರ್ಜನ್ಯಗಳಿಂದ ಪಾರಾಗುವುದಾಗಿತ್ತು ಎನ್ನುವುದರ ಸೃಜನಾತ್ಮಕ ಚಿತ್ರಣವು 'ಗಾಂಧಿ ಬಂದ'ದಲ್ಲಿದೆ.

ಪ್ರಸ್ತುತ ಕಾದಂಬರಿಯ ಮೌಲ್ಯದ ಕುರಿತು ತಕರಾರು ಎತ್ತಿರುವವರು ಗಮನಿಸಬೇಕಾದ್ದೇನೆಂದರೆ-ಅನಾದಿಕಾಲದಿಂದ ಹರಿದುಬಂದಿರುವ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ (ಈಗಲೂ ಅಳಿದಿರದ), ಕುಶಲಕರ್ಮಿಗಳು ಜೀವನೋಪಾಯಕ್ಕಾಗಿ ಕಂಡುಕೊಂಡಿದ್ದ ಕಸುಬುಗಳು (ಬುಟ್ಟಿ ಹೆಣಿಗೆ, ಬಡಗಿ, ಕಮ್ಮಾರಿಕೆ, ಕುಂಬಾರಿಕೆ ಇತ್ಯಾದಿ ಪಾರಂಪರಿಕ ವೃತ್ತಿಗಳು) ಜಾತಿ ನಿಷ್ಠವಾಗಿದೆ ಎಂಬುದನ್ನು ಮತ್ತು ಪರಂಪರಾಗತವಾಗಿ ಅವಲಂಬಿಸಿದ್ದ ವೃತ್ತಿಯನ್ನುಳಿದು ಬೇರೆಯದಕ್ಕೆ ಕೈ ಹಚ್ಚಿದರೆ ಅಂಥ ವ್ಯಕ್ತಿ ಮತ್ತು ಅವನ ಪರಿವಾರವು ದೈಹಿ... ದಂಡನೆ, ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಬೇಕಾಗಿತ್ತು ಎಂಬುದನ್ನು.

ಗಾಂಧೀಜಿಯ ಚಿಂತನೆಯು ಜಾತಿ, ಮತ, ಧರ್ಮಗಳನ್ನು ಮೀರಿ ಮಾನ... ಸಂಬಂಧವನ್ನು ಬೆಸೆದಿತ್ತು; ಆತ್ಮಾಭಿಮಾನವನ್ನು ಚಿಗುರಿಸಿತ್ತು.

ಪ್ರಾಯಶಃ ವಿಶ್ವಕರ್ಮ ಸಮುದಾಯದವರು ಇತ್ತೀಚಿಗಿನವರೆ... ಅನುಭವಿಸಿದ್ದ ಶೋಷಣೆ, ಅಗೌರವಗಳನ್ನು ಮನಸ್ಸಿಗೆ ತಂದುಕೊಂಡು, ಆಚಾ... ಜಾತಿಯ ಕೀಳರಿಮೆಯ ಭ್ರಮೆಗೊಳಗಾಗಿರಬಹುದೇನೋ? ಆದರೆ ಡಾ... ನಾಗವೇಣಿಯವರ ದೂಷಣೆಗೆ ಹೊರಟಿರುವುದು ವಿಷಾದಕರ.

ಮಂಗಳೂರು ವಿಶ್ವವಿದ್ಯಾಲಯವು ಸೃಜನಶೀಲತೆಯನ್ನು ಮಾ... ಮಾಡುವುದೆನ್ನುವ ಭರವಸೆಯಿಂದ ಈ ಪ್ರತಿಕ್ರಿಯೆ.

-ಪಿ. ಗೋಕುಲ್ ದಾಸ್, ಮಂಗಳೂರು

ಕರಾವಳಿ ಕರ್ನಾಟಕದಲ್ಲಿ 'ಲವ್ ಜಿಹಾದ್' ಎಂಬ ಹಣೆಪಟ್ಟಿಯ... ಕಥಿಸಲ್ಪಟ್ಟ ಪ್ರಸಂಗದ ಪ್ರದರ್ಶನಗಳು ಆರಂಭಗೊಂಡ ನಂತರ... ಮುಗ್ಧ ಮತ್ತು ನೊಂದಜೀವಿಗಳ ಸರಣಿ ಹಂತಕ ಮೋಹನ... ಕುಮಾರನ ವಿಚಾರಣೆ ಕಾನೂನಿನ ನ್ಯಾಯಾಲಯದಲ್ಲಿ ನಡೆಯುತ್ತ... ಜನಮಾನಸದಲ್ಲಿ ಕೌತುಕತೆಯನ್ನು ಕೆರಳಿಸುತ್ತದೆ.

ಮುಸ್ಲಿಂ ಭಯೋತ್ಪಾದಕ ತಂತ್ರಗಳ ಒಂದು ಭಾಗವಾಗಿ 'ಲವ್ ಜಿಹಾದ್' ಎಂಬ ನವೀನ ತಂತ್ರದಲ್ಲಿ ಹಿಂದೂ ಯುವತಿಯರನ್ನು ಮುಸ್ಲಿಂ ಯುವಕರು ಮರುಳುಗೊಳಿಸುತ್ತಿದ್ದಾರೆ ಎನ್ನುವ ಪೂರ್ವ... ಕಲ್ಪಿತ ಸಂಚುಗಾರಿಕೆಯನ್ನು ಪರಮ ಸತ್ಯವೆಂಬಂತೆ ಬಿಂಬಿಸಲಾಗಿ... ಈ ಬಿಂಬಿತ ಸತ್ಯವನ್ನು ಪ್ರತಿಪಾದಿಸುವಲ್ಲಿ, ಭಜರಂಗದಳ ಹಾಗೂ... ಗುರುಪುರದ ವಜ್ರದೇಹಿ ಮಠದ ಸ್ವಾಮಿ ಇವರೆಲ್ಲ... ಆತ್ಮಘಾತಕತನದ ಪ್ರತಿಭಟನೆಗಳು/ಸೋಗಿನ ಆಕ್ರಮಣಗಳು ನಡೆದಿವೆ.

ಪೂರ್ವಕಲ್ಪಿತ ಅರ್ಥಗಳಂತೆ ಬರುವ ಪೂರ್ವ ಕಲ್ಪಿತ ಸಂಚುಗಳ... ಉತ್ಪಾದನೆಯಾಗುವ ಮನೋಭೂಮಿಕೆಯ ಮೇಲೆ ವಿಮರ್ಶೆಯ ಬೆಳಕನ್ನು ಬೀರಬೇಕಾದ ಅನಿವಾರ್ಯತೆಯಿದೆ. ನಮ್ಮೆಲ್ಲರ ಕಾಳಜಿ ಸಮಾಜದ ಸಾಮರಸ್ಯ ಮತ್ತು ಸ್ವಾಸ್ಥ್ಯ. ಮೋಹನ ಕುಮಾರನ ವಿಚಾರಣೆ ನ್ಯಾಯಾಲಯದಲ್ಲಿ ನಡೆಯು... ರೀತಿಯಲ್ಲೇ, ಲವ್ ಜಿಹಾದ್ ಮತ್ತು ಇತರ ಲೇಬಲ್‌ಗಳಲ್ಲಿ ಸಮಾಜದ... ಉತ್ಪತ್ತಿಯಾದ/ಉತ್ಪತ್ತಿಯಾಗುತ್ತಿರುವ ಸರಣಿ ಪೂರ್ವಕಲ್ಪಿತ ಭಾವಗ... ಸೋಗಿನಲ್ಲಿ ನಡೆದ ಸಂಚುಗಳ ವಿಚಾರಣೆಯೂ ಸಮಾಜದ... ಮನೋಭೂಮಿಕೆಯ ವಿಮರ್ಶಾ ನ್ಯಾಯಾಲಯದಲ್ಲಿ ನಡೆಯಬೇಕಾಗಿದೆ.

ಸಂಚುಗಳ (ನೈಜಾರ್ಥ) ನಿಗೂಢ ರಹಸ್ಯ ಬಯಲಾಗಬೇಕಿದೆ.

ಯಾವುದೇ ಘಟನೆಗಳು ಘಟಿಸಿದಾಗ ಪೂರ್ವಕಲ್ಪಿತ ನಿರ್ಧಾರಗಳ... ಸಹಜವಾಗಿ ಜನಮನದಲ್ಲಿ ಉತ್ಪತ್ತಿಯಾಗುತ್ತದೆ. ಕಾಲ ಸರಿದಂತೆ ಈ ಪೂರ್ವ... ಕಲ್ಪಿತ ಭಾವಗಳು ಇಂದ್ರಿಯ ಸದೃಶ್ಯ ಸತ್ಯಾಂಶಗಳಿಗೆ ತಾಳೆಯಾಗಿ, ವಿಮರ್ಶೆಯ...

ವಾಗಿ ಬಹಿರಂಗಗೊಳಿಸಲು ಯಾರೂ ಹಿಂಜರಿಯಬಾರದು ಎಂದೆಲ್ಲ ತಮ್ಮ ಪಕ್ಷದ ಶಾಸಕರುಗಳಿಗೆ ನಾಲ್ಕೈದು ಪುಟಗಳ ಪತ್ರ ಬರೆದು ಉತ್ತೇಜಿಸಿದ್ದಾರೆ. ಇದನ್ನು ಸುದ್ದಿಮಾಧ್ಯಮಗಳಿಗೆ ತಿಳಿಸುವ ಮುತುವರ್ಜಿಯನ್ನೂ ವಹಿಸಿದ್ದರು ಎಂದು ಆಲಾಯಿದ ಹೇಳಬೇಕಾಗಿಲ್ಲವಷ್ಟೆ!

ತನ್ನ ಮೇಲೆ ಮಾಜಿ ಮುಖ್ಯಮಂತ್ರಿಯವರು ಈ ರೀತಿ ಆರೋಪಗಳನ್ನು ಮಾಡಿದ್ದಾರೆ ಎಂಬುದನ್ನು ತಿಳಿದು ರಾಜ್ಯಪಾಲರು ಹೇಗೆ ಪ್ರತಿಕ್ರಿಯಿಸಬೇಕು? 'ಅವರ ಮೇಲೆ ಹದಿಮೂರು ಕ್ರಿಮಿನಲ್ ಕೇಸುಗಳಿವೆ. ಇಂತಹ ಕಳಂಕಿತರ ಮಾತಿಗೆಲ್ಲ ಪ್ರತಿಕ್ರಿಯಿಸಬೇಕಿಲ್ಲ' ಅಂದುಬಿಟ್ಟರು!


ದೂಷಿಸಿಕೊಂಡ ರಾಜ್ಯಪಾಲರೇ ಹೀಗೆ ತಣ್ಣಗೆ ಉತ್ತರಿಸಿದರೆ, ಎಲ್ಲರೂ ಹೀಗೆಯೇ ಪ್ರತಿಕ್ರಿಯಿಸಲು ಪ್ರಾರಂಭಿಸಿದರೆ ಯಡ್ಯೂರಪ್ಪನವರು ತಮ್ಮ ಇರುವನ್ನು ಜನರಿಗೆ ತಿಳಿಸುವ ಮಾರ್ಗ ಹೇಗೆ... ಆಹಾ ದುರ್ವಿಧಿಯೇ...

ಕೆ.ಎಸ್.ಈಶ್ವರಪ್ಪನವರು ಶರೀರವನ್ನು ಮೀರಿಸುವಂತಹ ಶಾರೀರ ಹೊಂದಿರುವ ಪುಣ್ಯಾತ್ಮರು. ನಾಲಿಗೆಯನ್ನು ಕತ್ತಿಯಂತೆ ಝಳಪಿಸುವುದರಲ್ಲಿ ಪ್ರವೀಣರು. ಶ್ರೀರಾಮುಲು ಪಕ್ಷದಲ್ಲಿದ್ದಾಗ ಅವರು ಹೇಳಿದ್ದೆಲ್ಲ ಹಿತವಾಗಿ ತೋರುತ್ತಿತ್ತು. ಅವರು ಭಾಜಪ ಬಿಸಾಕಿ ಹೊರನಡೆದದ್ದು ಅಲ್ಲದೆ ನನ್ನ ಸಂಗಡ 22 ಶಾಸಕರು ಇದ್ದಾರೆ ಎಂದು ಹೇಳ್ತಿತ್ತಿದ್ದಾರೆ. ಅದೂ ಸನ್ಮಾನ್ಯ ಸದಾನಂದ ಗೌಡರು ಮೇಲ್ಮನೆಗೆ ಆರಿಸಿಬರುವ ತರಾತುರಿಯಲ್ಲಿರುವಾಗ! ಈಶ್ವರಪ್ಪನವರಿಗೆ ಕೋಪ ಬರುವುದಿಲ್ಲವೇ? ಆ ಶ್ರೀರಾಮುಲು ಹತ್ತಿರ ಅಷ್ಟು ಶಾಸಕರು ಇದ್ದರೆ ನಾನು ನೇಣು ಹಾಕಿಕೊಂಡು ಸಾಯ್ತೀನಿ ಅನ್ನೋ ವೀರ ಪ್ರತಿಜ್ಞೆ ಕೈಗೊಂಡರು! ಹಾಗೇನಾದರೂ ಮಾಡಿಕೊಂಡೇ ಬಿಟ್ಟರೆ ಭಾಜಪ ಅಧ್ಯಕ್ಷರನ್ನು ಸಾಯಿಸಿದ ಪಾಪಕ್ಕೆ ಗುರಿಯಾಗಬೇಕಲ್ಲ ಎಂದು ಯೋಚಿಸಿದ ಶ್ರೀರಾಮುಲು ಹಾಗಲ್ಲ ಅಧ್ಯಕ್ಷರೆ ಅದು ಹೀಗೆ ಎಂದು ಸಮಾಧಾನ ಹೇಳಬಹುದಾಗಿತ್ತು. ಹಾಗೆ ಮಾಡಲಿಲ್ಲ. 'ಅವನ ಜೊತೆ ವಾಗ್ವಾದ ಮಾಡುವುದು ಅಂದ್ರೆ ಕೊಚ್ಚೆಗೆ ಕಲ್ಲೆಸೆದಂಗೆ' ಅಂದುಬಿಟ್ಟರು! ಬಾರೋ ಲೋ ವಾಗ್ಯುದ್ಧಕ್ಕೆ ಅಂತ ಪಂಥಾಹ್ವಾನ ನೀಡಿದರೆ 'ಥೂ ನಿಂದು ಕೊಚ್ಚೆ ಸವಾಸ' ಅಂತ ಹೋಗಿಬಿಟ್ಟರೆ... ಈಶ್ವರಪ್ಪನವರ ಮಸೆದ ನಾಲಿಗೆ ಏನು ಮಾಡಬೇಕು.....

ಕ್ರಿಯೆಗೆ ಸೂಕ್ತ ಪ್ರತಿಕ್ರಿಯೆ ನೀಡುವುದು ಪ್ರಕೃತಿ ನಿಯಮ. ಹೀಗೆ ಎಲ್ಲರೂ ತಣ್ಣಗೆ ಪ್ರತಿಕ್ರಿಯಿಸುತ್ತಿದ್ದರೆ... ಅವರ ಮುಂದಿನ ಯೋಜನೆಗಳೇನಾಗಬೇಕು? ಜನಪ್ರಿಯತೆ ಗಳಿಸುವುದು ಹೇಗೆ?

ಆಹಾ ದುರ್ವಿಧಿಯೇ...

ಜಯಣ್ಣನಿಗೆ ಚೊಂಬೇಶ್ವರ! ಭಟ್ಟರಿಗೆ ಐಶ್ವರ್ಯ!!



'ಪರಮಾತ್ಮ'ನ ಸಹವಾಸ ಮಾಡಿದ್ದರ ಫಲವಾಗಿ ನಿರ್ಮಾಪಕ ಜಯಣ್ಣ ಈಗ ಪೆಚ್ಚು ಮೋರೆ ಹಾಕ್ಕೊಂಡು ಕೂರುವಂತಾಗಿದೆ.

ಸೂಪರ್ ಸ್ಟಾರ್ ಪುನೀತ್ ರಾಜ್‌ಕುಮಾರ್, ಸ್ಟಾರ್ ಡೈರೆಕ್ಟರ್ ಯೋಗರಾಜ್ ಭಟ್, ಹರಿಕೃಷ್ಣರ ಮ್ಯೂಜಿಕ್ಕು, ಭಯಂಕರ ಪಬ್ಲಿಸಿಟಿ... ಇವೆಲ್ಲವನ್ನು ಒಟ್ಟಿಗೆ ಲೆಕ್ಕ ಮಾಡಿದರೆ ಜಯಣ್ಣನ ತಲೆಮೇಲೆ ಈಗ ಒಂದೂವರೆ ಕೋಟಿ ರೂಪಾಯಿಗಳ ಲಾಸು ಉಳಿದಿದೆ.

ನಾಲ್ಕು ಕೋಟಿ ರೂಪಾಯಿಗಳ ಖರ್ಚಿನಲ್ಲಿ ನಿರ್ಮಾಣವಾದ ಪುನೀತ್‌ರ 'ಜಾಕಿ' ಚಿತ್ರವನ್ನು ನಿರ್ಮಾಪಕರು ವಿವಿಧ ಏರಿಯಾಗಳಿಗೆ ಬಿಕರಿ ಮಾಡಿ ಹದಿನಾಲ್ಕು ಕೋಟಿ ರೂಪಾಯಿ ಗಳಿಸಿದ್ದರು. ಆ ಚಿತ್ರ ಬಿಡುಗಡೆಯಾದ ನಂತರ ಸುಮಾರು ಇಪ್ಪತ್ತೆರಡು ಕೋಟಿ ರೂ.ಗಳ ಕಲೆಕ್ಷನ್ ಆಗಿ ಎಲ್ಲ ವಿತರಕರೂ ಭರ್ಜರಿ ಲಾಭ ಕಂಡಿದ್ದರು. ಆದೇ ಪುನೀತ್ ನಟಿಸಿದ್ದ ಕಾರಣಕ್ಕೆ 'ಹುಡುಗರು' ಎಂಬ ಸಾಧಾರಣ ಸಿನಿಮಾ ಕೂಡಾ 'ಜಾಕಿ'ಯ ರೇಂಜಿನಲ್ಲೇ ಹಣ ಮಾಡಿತ್ತು. ಹೀಗಾಗಿ 'ಪರಮಾತ್ಮ' ಚಿತ್ರ ಆ ಎರಡೂ ಸಿನಿಮಾಗಳನ್ನು ಓವರ್‌ಟೇಕ್ ಮಾಡಿ ಕಲೆಕ್ಷನ್‌ನಲ್ಲಿ ರೆಕಾರ್ಡು ಸೃಷ್ಟಿಸುವುದು ಗ್ಯಾರಂಟಿ. ಈ ಚಿತ್ರವನ್ನು ಬೇರೆ ವಿತರಕರಿಗೆ ಮಾರುವುದು ಬೇಡ ಎಂದು ನಿರ್ಧರಿಸಿದ ಜಯಣ್ಣ ಕರ್ನಾಟಕದಾದ್ಯಂತ ಸ್ವತಃ ತಾವೇ 'ಪರಮಾತ್ಮ'ನನ್ನು ವಿತರಣೆ ಮಾಡಿದ್ದರು.


ಪುನೀತ್‌ಗೆ ಕೊಟ್ಟ ಒಂದೂಮುಕ್ಕಾಲು ಕೋಟಿ ಮತ್ತು ಸಿನಿಮಾಕ್ಕೆ ಖರ್ಚಾದ ಒಂದೂವರೆ ಕೋಟಿ ರೂಪಾಯಿಗಳು ಚಾನೆಲ್ ರೈಟ್ಸ್‌ಅನ್ನು ಮಾರುವ ಮೂಲಕವೇ ಬಂದಿತ್ತು. ಇನ್ನು ಆಡಿಯೋ ಮಾರಾಟದಿಂದ ಬಂದ ಹಣ ಪಬ್ಲಿಸಿಟಿಗೆ ಖರ್ಚಾಗಿತ್ತು. ಹಾಗಾದರೆ ಲಾಸ್ ಆಗಿದ್ದು ಯಾಕೆ? ಕಡೇ ಪಕ್ಷ ಈ ಚಿತ್ರಕ್ಕೆ ಹಾಕಿದ್ದ ಹಣವಾದರೂ ವಾಪಸು ಬಂದಿರ ಬೇಕಲ್ಲ? ಎಂದುಕೊಂಡರೆ ತಪ್ಪಾಗುತ್ತದೆ.

ಸಿನಿಮಾ ಆರಂಭಿಸುವ ಮುನ್ನ ಜಯಣ್ಣ ಮತ್ತು ಭಟ್ ಮಾಡಿಕೊಂಡ ಒಪ್ಪಂದದ ಪ್ರಕಾರ ಚಿತ್ರ ಬಿಡುಗಡೆಯಾದ ಮೇಲೆ ಬಂದ ಲಾಭದ ಶೇರಿನಲ್ಲಿ ಇಪ್ಪತ್ತೈದು ಪರ್ಸೆಂಟ್‌ಅನ್ನು ಯೋಗರಾಜ್ ಭಟ್ಟರಿಗೆ ಕೊಡಬೇಕಿತ್ತು. ಹಾಗೇ ನಡೆದಿದ್ದರೆ ಜಯಣ್ಣನಿಗೆ ಅಂತಾ ಎಡವಟ್ಟಾಗುತ್ತಿರಲಿಲ್ಲ. ಆದರೆ ಇನ್ನೇನು 'ಪರಮಾತ್ಮ' ಬಿಡುಗಡೆಗೆ ಒಂದು ವಾರ ಇದೆ ಎನ್ನುವಾಗ ಯೋಗರಾಜ್ ಭಟ್ಟರು ಹೊಸದೊಂದು ಮನೆಯ ಖರೀದಿಗೆ ಕೈಯಿಟ್ಟರು. ಆದರೆ ಭಟ್ಟರ ಬಳಿಯಿದ್ದ ದುಡ್ಡು ಆ ಮನೆ ಖರೀದಿಗೆ ಸಾಕಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ಆತುರಕ್ಕೆ ಬಿದ್ದ ಜಯಣ್ಣ "ಹೇಗಿದ್ದರೂ ಸಿನಿಮಾ ರಿಲೀಸಾದ ಮೇಲೆ ಭಟ್ಟರಿಗೆ ದುಡ್ಡು ಕೊಡಲೇಬೇಕಲ್ಲಾ? ನಮ್ಮ ಸಿನಿಮಾ ಖಂಡಿತವಾಗಿ ಹಂಡ್ರೆಡ್ ಡೇಸ್ ಓಡುತ್ತೆ. ಏನಿಲ್ಲವೆಂದರೂ ಇಪ್ಪತ್ತು ಕೋಟಿ ರೂಪಾಯಿಗಳು ಬಂದು ನಮ್ಮ ಮುಂದೆ ಬೀಳುತ್ತೆ. ಆದ್ದರಿಂದ ಸದ್ಯಕ್ಕೆ ಭಟ್ಟರಿಗೆ ಮೂರು ಕೋಟಿ ರೂಪಾಯಿ ಕೊಟ್ಟು, ಮಿಕ್ಕಿದ್ದು ರಿಲೀಸ್ ಆದಮೇಲೆ ಕೊಟ್ಟರೆ ಆಯಿತು" ಎಂದು ನಿರ್ಧರಿಸಿ ಭಟ್ಟ ಕೈಗೆ ಮೂರು ಕೋಟಿಯ ಹಿಡುಗಂಟು ಕೊಟ್ಟೇಬಿಟ್ಟರು.

ಆದರೆ 'ಪರಮಾತ್ಮ' ಬಿಡುಗಡೆಯಾದ ಒಂದು ವಾರದಲ್ಲೇ ಈ ಚಿತ್ರದಿಂದ ಇಪ್ಪತ್ತು ಕೋಟಿಯಲ್ಲ, ಹಾಕಿದ ಅಸಲು ಕೂಡಾ ಬರುವುದು ಡೌಟು ಎಂಬುದು ಸ್ಪಷ್ಟವಾಯಿತು. ಅಷ್ಟರಲ್ಲಾಗಲೇ ಭಟ್ಟರು ಕತ್ರಿಗುಪ್ಪೆ ರಿಂಗ್ ರಸ್ತೆಯಿಂದ ಸ್ವಲ್ಪ ಕೆಳಕ್ಕಿಳಿದರೆ ಸಿಗುವ ಸೀತಾ ಸರ್ಕಲ್ಲಿನಲ್ಲಿ ಒಂದೂಮುಕ್ಕಾಲುಕೋಟಿಗೆ ಬಂಗಲೆಯೊಂದನ್ನು ಪರ್ಚೇಸ್ ಮಾಡಿ ಅದರ ರಿಪೇರಿ, ರಿನೋವೇಷನ್ನು ಶುರು ಮಾಡಿಬಿಟ್ಟಿದ್ದರು.

ಈಗ 'ಪರಮಾತ್ಮ'ನಿಂದ ಬಂದ ಲಾಭ, ನಷ್ಟಗಳ ಬ್ಯಾಲೆನ್ಸ್‌ಶೀಟು ಜಯಣ್ಣನ ಕೈ ಸೇರಿದೆ. ಅದನ್ನು ನೋಡಿ "ನಸೀಬೇ ಸರಿಯಿಲ್ಲ ಚೊಂಬೇಶ್ವರಾ... ಪಾಪರಾಗೋದ್ನಲ್ಲಾ ಒಂದೇ ಸಲಾ" ಅಂತಾ ಹಾಡು ಹೇಳಿಕೊಂಡು, ಬಾಯಲ್ಲಿ ಪೀಪಿ ಊದುವುದೊಂದೇ ಜಯಣ್ಣನಿಗೆ ಉಳಿದಿರುವ ಮಾರ್ಗ ಎಂಬಂತಾಗಿದೆ.

'ದುನಿಯಾ' ವಿಜಯ್ ನಟಿಸಿದ್ದ, ಇದೇ ಜಯಣ್ಣ ನಿರ್ಮಿಸಿದ್ದ 'ಜಾನಿ ಮೇರಾ ನಾಮ್' ಚಿತ್ರ ನೂರು ದಿನ ಓಡಿ ದಾಖಲೆ ನಿರ್ಮಿಸಿತ್ತು. ಆದರೆ ಆ ಚಿತ್ರದಿಂದಲೂ ಜಯಣ್ಣನಿಗೆ ನಯಾ ಪೈಸೆಯ ಲಾಭವಾಗಿಲ್ಲ. ಯಾಕೆಂದರೆ ಅಷ್ಟೊಂದು ದಿನ ಆ ಸಿನಿಮಾವನ್ನು ಥಿಯೇಟರಿನಲ್ಲಿ ಉಳಿಸಿಕೊಂಡಿದ್ದರ ಫಲವಾಗಿ ಜಯಣ್ಣನಿಗೇ ಐವತ್ತು ಲಕ್ಷ ಲುಕ್ಸಾನಾಗಿತ್ತು.



ಒಟ್ಟಾರೆ 'ಪರಮಾತ್ಮ' ಮತ್ತು 'ಜಾನಿ'ಯ ಕೃಪೆಯಿಂದ ಜಯಣ್ಣ ಮುಂದೆ ನಿರ್ಮಿಸಲು ಪ್ಲಾನು ಮಾಡಿದ್ದ ಸಿನಿಮಾಗಳಿಗೆ ಈಗ ಕಾಸು ಹಾಕಲು ಹಿಂದೂಮುಂದೂ ನೋಡುತ್ತಿದ್ದಾರೆ. 'ಪರಮಾತ್ಮ'ನ ಸೈಡ್ ಎಫೆಕ್ಟ್ ಬಡಿದಿರುವುದು ನಿರ್ದೇಶಕ ಪ್ರೀತಂ ಗುಬ್ಬಿ ಮೇಲೆ. ಇಷ್ಟರಲ್ಲೇ ಜಯಣ್ಣ ನಿರ್ಮಾಣದಲ್ಲಿ ಯಶ್ ನಟಿಸಬೇಕಿದ್ದ ಹೊಸದೊಂದು ಚಿತ್ರಕ್ಕೆ 'ಆಕ್ಷನ್' ಎನ್ನಲು ಪ್ರೀತಂ ರೆಡಿಯಾಗಿದ್ದರು. ಆದರೆ ಸದ್ಯಕ್ಕೆ ಜಯಣ್ಣ 'ಅಕ್ಷಿ.. ಅಕ್ಷಿ' ಅನ್ನೋ ಸದ್ದಷ್ಟೇ ಕೇಳಿಸುತ್ತಿದೆ!

• ಅರುಣ್

ಒರೆಗಲ್ಲಿನಲ್ಲಿ ಘಟನೆಯ ಸತ್ಯ ರಚನೆಯಾಗುತ್ತದೆ. ಹೀಗೆ ಉತ್ಪತ್ತಿಯಾದ ಸತ್ಯ ಜನಮನದ ಪೂರ್ವಕಲ್ಪಿತ ನಿರ್ಧಾರ/ಭಾವಗಳನ್ನು ತೊಡೆದು ಹಾಕಿ, ಆ ಸ್ಥಳದಲ್ಲಿ ತನ್ನನ್ನು ತಾನೇ ಸ್ಥಾಪಿತಗೊಳಿಸುತ್ತದೆ. ಆ ಮೊದಲು ಉತ್ಪಾದನೆಯಾಗುವ ಪೂರ್ಣವಲ್ಲದ ತಕ್ಷಣದ ಗ್ರಹಿಕೆಗಳೇ ಪೂರ್ವಕಲ್ಪಿತ ನಿರ್ಧಾರಗಳಾಗಿರುತ್ತವೆ.

ಆದರೆ 'ಲವ್ ಜಿಹಾದ್' ಸೃಷ್ಟಿಸಿದ ಪೂರ್ವಕಲ್ಪಿತ ನಿರ್ಧಾರಗಳು ಮಾನವ ಜ್ಞಾನ ಗ್ರಹಿಕೆಯ ಸಹಜತೆಗೆ ಸಂಬಂಧಿಸಿಲ್ಲ. ಏಕೆಂದರೆ ಇಂತಹ ಪೂರ್ವಕಲ್ಪಿತ ಭಾವಗಳ ಸಾಮಾಜಿಕ ಪಥಸಂಚಲನದ ನಂತರವೂ ಅವುಗಳನ್ನು ಪಲ್ಲಟಗೊಳಿಸುವ ಸತ್ಯ ಮೌನ ತಳೆದಿರುವುದು. ಈ ತೆರನಾದ ಮನೋಭೂಮಿಕೆ ಸಮಾಜ ಘಾತಕತನದ ಸಂಭಾವ್ಯತೆಗಳನ್ನು ತನ್ನ ಗರ್ಭದಲ್ಲಿಯೇ ಅಡಗಿಸಿರುವಂತೆ ಪ್ರಕಟಗೊಳ್ಳುತ್ತದೆ. ಮೋಹನಕುಮಾರನ ಪಾಶವೀ ಕೃತ್ಯಗಳು ಆರಂಭಗೊಳ್ಳುವುದಕ್ಕಿಂತ ಪೂರ್ವದಲ್ಲಿಯೇ ಬಹುಶಃ ಅಜ್ಞಾತ ಸಂಚುಕಾರರು ಅವುಗಳನ್ನು ಬಳಸಿ ಸಮಾಜಕ್ಕೆ ವಿಷ ಉಣಿಸಲು ಕಾದಿರುವಂತೆ ಭಾಸವಾಗುತ್ತದೆ. ಮೋಹನಕುಮಾರನ ಪಾಪಿ ಕೃತ್ಯಗಳು ಇಂತಹ ಸಂಚುಕೋರರಿಗೆ ರಾಕ್ಷಸೀ ಶಕ್ತಿಯನ್ನು ತೆರೆಮರೆಯಲ್ಲಿ ತುಂಬಿ ಸಶಕ್ತಗೊಳಿಸುತ್ತವೆ.

ಒಬ್ಬ ವ್ಯಕ್ತಿಯ ಮನೋವಿಕಾರತೆ ಸಾಮಾಜಿಕ ಮನೋವಿಕಾರತೆಗೆ ತನ್ನ ಶಕ್ತಿಯನ್ನು ಧಾರೆ ಎರೆದರೆ, ವ್ಯಕ್ತಿಯ ಮನೋವಿಕಾರತೆಯಲ್ಲಿ ಸುಪ್ತವಾಗಿರುವ ಸತ್ಯಗಳಿಗೆ ನ್ಯಾಯಾಲಯ ಬೆಳಕು ಚೆಲ್ಲಬಹುದು, ಆದರೆ ಸಾಮಾಜಿಕ ಮನೋವಿಕಾರತೆಯ ಹಿಂದಿನ ಅಸತ್ಯದ ಅಂಧಕಾರ ಮಾತ್ರ ಯಥಾವತ್ತಾಗಿ ಉಳಿದು ಬಿಡುತ್ತದೆ. ನಮ್ಮ ಆತಂಕವೆಂದರೆ ಈ ಸಾಮಾಜಿಕ ಮನೋಭೂಮಿಕೆಯಿಂದ ಬಂದ ಪೂರ್ವಕಲ್ಪಿತ ಸಂಚುಗಳು ಹೊಸ ಮನೋವಿಕಾರತೆಯ ಕಥೆಗಳ ಹುಡುಕಾಟಕ್ಕೆ ನರಿಯಂತೆ ಹೊಂಚು ಹಾಕಿ ಕುಳಿತಿರುತ್ತವೆ. ನರಿಗೆ ಮಂತ್ರದಂಡವನ್ನು ಹೇಗೆ ಹುಡುಕುವುದು?

ಅಸತ್ಯದ ಹಾದಿಯಲ್ಲಿ ಸತ್ಯದ ಪೂರ್ವ ಕಲ್ಪಿತ ಅರ್ಥಗಳಂತೆ ನಟಿಸಿ ಬರುವ ಪೂರ್ವಕಲ್ಪಿತ ಭಾವಗಳ ಅಲೆಯಲ್ಲಿ ಜನತೆ ಕೊಚ್ಚಿ ಹೋಗಬಾರದು. ಅತೀ ಅವಸರಕ್ಕೆ ಕೊಚ್ಚಿಕೊಂಡು ಹೋಗುವ ಶಕ್ತಿಯಿದೆ. ಆದ್ದರಿಂದ ಸಮಚಿತ್ತವಾಗಿ ಅವುಗಳ ಹಿಂದೆ ಸತ್ಯವಿದೆಯೇ? ಎಂಬುದನ್ನು ಅರಿಯಲು ಪ್ರಯತ್ನಿಸಬೇಕು. ಸಾವಧಾನದಲ್ಲಿ ಮಾತ್ರ ಇದು ಸಾಧ್ಯ. ಏಕೆಂದರೆ ಸತ್ಯ ತಕ್ಷಣದ ನೋಟಕ್ಕೆ ಸಿಲುಕುವುದಿಲ್ಲ. ಈ ತೆರನಾದ ವಿವೇಚನೆಯ ಪ್ರಯತ್ನಗಳಿಂದ ಮಾತ್ರ ರಂಪಾಟದ, ವೀರಾವೇಶದ ಕಿರುಕುಳ ಸಂಚುಗಳಿಗೆ ಅಂಕುಶ ಹಾಕಬಹುದಾಗಿದೆ. ವಿಫಲವಾದಲ್ಲಿ ಸಮಾಜ ಪ್ರಾಯಶ್ಚಿತ್ತದ ಕಣ್ಣೀರು ಹಾಕಬೇಕಾಗುತ್ತದೆ. ಪ್ರಾಯಶ್ಚಿತ್ತ ಮಾಡುವುದಕ್ಕಿಂತ, ಪ್ರಾಯಶ್ಚಿತ್ತಕ್ಕೆ ತಳ್ಳುವ ಪ್ರವೃತ್ತಿಯನ್ನು ಸಾರಭೂತದಲ್ಲಿ ಹಿಡಿಯುವುದು ಉತ್ತಮವಲ್ಲವೇ?

- ವಿದ್ಯಾಧರ ರೈ ಎಂ.ಆರ್. ಮಡಿಕೇರಿ ಮತ್ತು ಐವನ್ ಐಫ್ ಲೋಬೋ. ಪುತ್ತೂರು

ಪತ್ರಿಕೆಯ ಡಿಸೆಂಬರ್ 14, 2011ರ ಸಂಚಿಕೆಯಲ್ಲಿ 'ಅದ್ಭಾದಿ ಜ್ಯೋತಿಷಿ ಆನಂದನ' ಬಗ್ಗೆ ಪ್ರಕಟಗೊಂಡ ವರದಿಯು ಜನರಲ್ಲಿ ತಿಳುವಳಿಕೆ ಮೂಡಿಸುವಲ್ಲಿ ಯಶಸ್ವಿಯಾಗಿದೆ.

21ನೇ ಶತಮಾನದಲ್ಲೂ ಜನರು ಇಂತಹ ಖೊಟ್ಟಿ ಸ್ವಾಮೀಜಿಗಳಿಗೆ ಮರುಳಾಗುವುದು ವಿಚಿತ್ರವೆನಿಸುತ್ತದೆ. ಇಂತಹ ಸ್ವಾಮೀಜಿಗಳು ಪ್ರತಿದಿನ ಟಿವಿ ಚಾನೆಲ್‌ಗಳಲ್ಲಿ ಹೇಳುವ ಭವಿಷ್ಯವನ್ನು ನಂಬುವ ಜನರಿದ್ದಾರೆ. ಅವರು ಹೇಳಿದ ಸುಳ್ಳುಗಳನ್ನೇ ಜನ ನಂಬುತ್ತಾರೆ. ವಿದ್ಯಾವಂತರು ಮತ್ತು ಯುವ ಪೀಳಿಗೆಯ ಜನರು ಕೂಡ ಇವತ್ತು ಮೂಢನಂಬಿಕೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಅದರಲ್ಲಿ ರಾಜಕೀಯ ನಾಯಕರು ಪಾತ್ರವೂ ಇದೆ.

ಆದ್ದರಿಂದ ಇಂತಹ ಸ್ವಾಮಿಗಳ ಮತ್ತು ಮೂಢ ನಂಬಿಕೆಗಳ ವಿರುದ್ಧ ಪತ್ರಿಕೆ ಇನ್ನೂ ಹೆಚ್ಚು ವರದಿಗಳನ್ನು ಪ್ರಕಟಿಸಿ ಅವರನ್ನೆಲ್ಲ ಎಕ್ಸ್‌ಪೋಸ್ ಮಾಡಬೇಕು ಮತ್ತು ಜನರಲ್ಲಿ ಅರಿವನ್ನು ಮೂಡಿಸಬೇಕೆಂದು ಆಶಿಸುತ್ತೇನೆ.

- ಶಶಿಕಲಾ. ಕಡೂರು

ಸರಳ, ಮುಗ್ಧ ಜನಪ್ರಿಯ ಹೋರಾಟಗಾರರಾದ ಅಣ್ಣಾ ಹಜಾರೆಯವರು ತಮ್ಮೊಳಗೆ ಅಂತರ್ಗತವಾಗಿರುವ ಸರ್ವಾಧಿಕಾರತ್ವದಿಂದ, ರಾಜಕೀಯ ಹಾಗೂ ಸಾಮಾಜಿಕ ಅಜ್ಞಾನದಿಂದ, ಕೇವಲ ಕಾಂಗ್ರೆಸ್ ವಿರೋಧಿ ಧೋರಣೆಯಿಂದ ಮತ್ತೊಮ್ಮೆ ತಮ್ಮ ಕೈಗೆ ಸಿಕ್ಕ ಅಪೂರ್ವ ಅವಕಾಶವನ್ನು ಹಾಳುಗೆಡವಿದ್ದಾರೆ. ಅಷ್ಟೇ ಅಲ್ಲದೆ, ಬೌದ್ಧಿಕವಾಗಿ ದಿವಾಳಿಯಾಗಿರುವ ದೃಶ್ಯ ಮಾಧ್ಯಮಗಳ, ಕೋಮುವಾದಿ ಸಂಘ ಪರಿವಾರದ ಕುತಂತ್ರಗಳಿಗೆ ಅಣ್ಣಾ ಹಜಾರೆಯವರು ಮತ್ತೆ ಬಲಿಯಾಗಿದ್ದಾರೆ.

ಈ ಅಣ್ಣಾ ಹೋರಾಟದ ಕಾವನ್ನು ಬಳಸಿಕೊಂಡು ದಿಲ್ಲಿಯ ಗದ್ದುಗೆಗೆ ಏರಲು ಇನ್ನಿಲ್ಲದ ತಂತ್ರ, ಕುತಂತ್ರಗಳನ್ನು ನಡೆಸುತ್ತಿರುವ ಸಂಘಪರಿವಾರ ಇದರಲ್ಲೇನಾದರೂ ಯಶಸ್ವಿಯಾದರೆ ಅದಕ್ಕಿಂತ ಅನಾಹುತ ಬೇರೊಂದಿಲ್ಲ ಎನ್ನುವುದು ನಮ್ಮ ಮಾಧ್ಯಮಗಳಿಗೆ ಅರ್ಥವಾಗದಿರುವುದು ದುರಂತವೇ ಸರಿ. ಎಂತಹ ವಿಪರ್ಯಾಸ ನೋಡಿ, ಪಶ್ಚಿಮ ರಾಷ್ಟ್ರಗಳ ಆರ್ಥಿಕ, ಸಾಮ್ರಾಜ್ಯಶಾಹಿ ಅತ್ಯಾಚಾರಗಳು ಭ್ರಷ್ಟಾಚಾರದ ಮೂಲಧಾತುಗಳಲ್ಲೊಂದು ಎನ್ನುವುದು ಈ ದೇಶಪ್ರೇಮಿಗಳಿಗೆ ಅರ್ಥವಾಗಿದೆಯೇ? ಭ್ರಷ್ಟಾಚಾರದ ಮೂಲಗಳೇನು, ಅದರ ಹುಟ್ಟುವಿಕೆಗೆ ತಳಮಟ್ಟದ ಗುಪ್ತ ಕಾರಣಗಳೇನು ಎಂದು ಅತ್ಯಂತ ವಿಸ್ತೃತವಾಗಿ ಚರ್ಚಿಸಿ, ಹೋರಾಟಕ್ಕೆ ಇಳಿಯಬೇಕಿದೆ. ಅದರ ಬದಲಾಗಿ ಕೇವಲ ಆಡಳಿತ ವಲಯದ ಭ್ರಷ್ಟತೆಯ ಬಗ್ಗೆ ಹುಂಬತನದಿಂದ ಮಾತನಾಡುವ ಈ ಅಣ್ಣಾ ಬಳಗ ನಮ್ಮ ದೇಶಕ್ಕೇ ಒಂದು ಸಮಸ್ಯೆ ಆಗುವ ಅಪಾರ ಸಾಧ್ಯತೆಗಳಿವೆ.

ಹುಸಿ ಗಾಂಧೀವಾದಿ ಅಣ್ಣಾ ಹಜಾರೆ ಹಾಗೂ ಅವರ ಬಳಗವು ಕರ್ನಾಟಕ, ಛತ್ತೀಸ್‌ಘಡ, ಮಧ್ಯಪ್ರದೇಶದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಗಳ ಬ್ರಹ್ಮಾಂಡ ಭ್ರಷ್ಟತೆಯನ್ನು, ಗುಜರಾತ್ ಸರ್ಕಾರದ ಹತ್ಯಾಕಾಂಡದ ಕೃತ್ಯಗಳನ್ನು ಚಣ ಮಾತ್ರವೂ ಟೀಕಿಸುವುದಿಲ್ಲ. ನೈತಿಕವಾಗಿ ಭ್ರಷ್ಟವಾಗಿರುವ ಕಾರ್ಪೋರೇಟ್ ವಲಯವು ಇವತ್ತು ದೇಶದ ಆರ್ಥಿಕ ವ್ಯವಸ್ಥೆಯನ್ನೇ ತನ್ನ ಅನುಕೂಲಕ್ಕೆ ತಕ್ಕ ಹಾಗೆ ನಿಯಂತ್ರಿಸುತ್ತಿರುವುದರ ಬಗ್ಗೆಯೂ ಅಣ್ಣಾ ತಂಡ ಚಕಾರವೆತ್ತುವುದಿಲ್ಲ.

ಇಷ್ಟೊಂದು ಜನಪ್ರಿಯತೆ ಪಡೆದಿರುವ ನಾಯಕನೊಬ್ಬ ಪದೇ ಪದೇ ಈ ರೀತಿ ಎಡುವುತ್ತಿರುವುದು ಪ್ರಜಾಪ್ರಭುತ್ವಕ್ಕೇ ಅಪಾಯಕಾರಿ. ಏಕೆಂದರೆ ಈ ಜನಪ್ರಿಯ ನಾಯಕರು ತಾವೂ ಕೆಡುವುದಲ್ಲದೆ ಇಡೀ ವ್ಯವಸ್ಥೆಯನ್ನೇ ಯಶಸ್ವಿಯಾಗಿ ದಿಕ್ಕುತಪ್ಪಿಸಿ ಮತ್ತೊಂದು ದುರಂತಕ್ಕೆ ನಾಂದಿ ಹಾಡುವುದು ಗ್ಯಾರಂಟಿ.

ನಮ್ಮ ದೇಶವನ್ನು ಕ್ಯಾನ್ಸರ್‌ನಂತೆ ಕಾಡುತ್ತಿರುವ ಜಾತೀಯತೆ ಮತ್ತು ಕೋಮುವಾದವನ್ನು ವಿನಾಶಗೊಳಿಸುವ ಉದ್ದೇಶವನ್ನು ತಮ್ಮ ಹೋರಾಟದ ಭಾಗವನ್ನಾಗಿ ಮಾಡಿಕೊಳ್ಳದ ಯಾವ ನಾಯಕನೂ ಅಂತಿಮವಾಗಿ ಜೀವ ವಿರೋಧಿಯಾಗಿ ಕಂಗೊಳಿಸುತ್ತಾನೆ. ಪ್ರಜ್ಞಾವಂತರ ಚಿಂತನೆಗಳ ಸಾರವನ್ನು ಬಳಸಿ ಈ ಬಳಗದ ನಕಲಿ ಹೋರಾಟವನ್ನು, ಅದರ ಟೊಳ್ಳುತನವನ್ನು ಪ್ರತಿಯೊಂದು ಘಟ್ಟದಲ್ಲೂ ಸಾಬೀತುಪಡಿಸುವ ದೊಡ್ಡ ಜವಾಬ್ದಾರಿಯನ್ನು ನಾವೆಲ್ಲ ಕೈಗೆತ್ತಿಕೊಳ್ಳಬೇಕಿದೆ.

- ಬಿ.ಶ್ರೀಪಾದ ಭಟ್, ಬೆಂಗಳೂರು

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಬ್ರಾಹ್ಮಣರು ಉಂಡ ಎಸೆದ ಎಂಜಲೆಲೆ ಮೇಲೆ ಉರುಳಿ ಹೊರಳಾಡುವ 'ಮಡೆಸ್ನಾನ' ಎಂಬ ಆಚರಣೆಯು ಇದೀಗ ಭಾರೀ ಸುದ್ದಿಗೆ ಗ್ರಾಸವಾಗುತ್ತಿದೆ. ಸೋಜಿಗವೆಂದರೆ ಪ್ರಜಾಪ್ರಭುತ್ವದ ತತ್ವ ಸಿದ್ಧಾಂತಕ್ಕೆ ವಿರುದ್ಧವಾಗಿ ಸಂವಿಧಾನಬಾಹಿರವಾದ ಜಾತೀಯತೆ ಭೇದಭಾವಕ್ಕೆ ಇಂಬು ನೀಡುವಂತಹ ಈ ಘಟನೆ ನಡೆದದ್ದು ರಾಜ್ಯದ ಮುಖ್ಯಮಂತ್ರಿಯ ತವರು ಹಾಗೂ ಹಲವಾರು ಬಾರಿ ಗೆದ್ದಿರುವ ಆಡಳಿತ ಪಕ್ಷದ ದಲಿತ ಶಾಸಕರ ತವರಾದ ಸುಳ್ಯದಲ್ಲಿ.

ನಮ್ಮ ಘನ ಸರಕಾರದ ಮುಜರಾಯಿ ಸಚಿವರು ಇದೀಗ "ಮಡೆಸ್ನಾನ ನಿಷೇಧ ಇಲ್ಲ" ಎಂದು ಸ್ಪಷ್ಟಪಡಿಸಿಯೂ ಆಗಿದೆ. ಅವರ ಪ್ರಕಾರ ಅದು 'ಸೂಕ್ಷ್ಮಾತಿಸೂಕ್ಷ್ಮ' ವಿಷಯವಂತೆ. ಸೂಕ್ಷ್ಮಾತಿಸೂಕ್ಷ್ಮ ವಿಷಯ, ಪರಂಪರಾಗತ ಸಂಪ್ರದಾಯ, ಇತ್ಯಾದಿಗಳ ನೆಪದಲ್ಲಿ ಸರಕಾರ ಇದೀಗ ಮಡೆಸ್ನಾನ ಎಂಬ ಅನಿಷ್ಟವನ್ನು ಮುಂದುವರೆಸಿದರೆ ಮುಂದೆ ಕೆಲವೇ ದಿನಗಳಲ್ಲಿ ಇದೇ ನೆಪದಲ್ಲಿ ದೇವದಾಸಿ ಪದ್ಧತಿ, ಬೆತ್ತಲೆ ಸೇವೆಗಳು ಪುನರಾರಂಭಗೊಂಡರೂ ಅಚ್ಚರಿಯಿಲ್ಲ.

ಭಾರತೀಯ ಸಮಾಜದಲ್ಲಿ ವರ್ಣಾಶ್ರಮ ಧರ್ಮ ಮಾಡಿದಂತಹ ಸಾಮಾಜಿಕ ಹಾನಿ ಬಹುದೊಡ್ಡದು. ಕೇವಲ ಜನ್ಮದ ಆಧಾರದಲ್ಲಿ ಮೇಲುಕೀಳು ಭೇದಗಳನ್ನು ಬಿತ್ತಿ ಬಹುತೇಕರನ್ನು ಸಹಸ್ರಾರು ವರ್ಷ ಅಂಧಕಾರದ ಕತ್ತಲಲ್ಲಿ ಕೊಳೆಯಿಸಿದ್ದು ಇದೇ ತತ್ವ. ಜಾತಿಯ ಕಾರಣಕ್ಕೆ ಉಚ್ಚ, ನೀಚನೆಂದು ವಿಂಗಡಿಸಿ ನೋಡುವ ಸಂಪ್ರದಾಯ ಸಮಾಜದಲ್ಲಿ ಇಂದಿಗೂ ಪೂರ್ತಿಯಾಗಿ ಹೋಗಿಲ್ಲ. ಹೀಗಿರುವಾಗ ಬ್ರಾಹ್ಮಣ ಶ್ರೇಷ್ಠತೆಯನ್ನು ಸಾರುವ ಮಡೆಸ್ನಾನ ಜಾತೀವಾದಕ್ಕೆ ಹೊಸ ಟಾನಿಕ್‌ನಂತೆ ಕೆಲಸ ಮಾಡುತ್ತದೆ.

ಈ ಹಿಂದೆ ಮಾರಿಗುಡಿಗಳಲ್ಲಿ ಕೋಣಗಳ ಬಲಿ ಕಡ್ಡಾಯವಾಗಿತ್ತು. ಆದರೆ ಈಗಿನ ಕಾಲಕ್ಕೆ ಅದು ಸರಿಹೊಂದದೆಂದು ಕಷ್ಟದಲ್ಲಾದರೂ ಬದಲಾವಣೆ ತರಲಿಲ್ಲವೇ? ಬದಲಾವಣೆ ತರುವುದು ದೊಡ್ಡ ಮಾತಲ್ಲ, ಜಗುಟುತನ ಬಿಟ್ಟು ಮನಸ್ಸು ಮಾಡಬೇಕಷ್ಟೆ.

- ಶಶಿ ಪುತ್ತೂರು. ಬೆಂಗಳೂರು


Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 28-12-2011 RNI No. KARKAN2005/1

ಅಕಾಡೆಮಿ ಅಧ್ಯಕ್ಷಗಿರಿ ಯಾರಿಗೆ?

ಇನ್ನು ಮೂರು ತಿಂಗಳಿಗೆ ಸಿನಿಮಾ ಅಕಾಡೆಮಿ ಅಧ್ಯಕ್ಷ ನಾಗಾಭರಣ ಅವರ ಅವಧಿ ಮುಕ್ತಾಯವಾಗುತ್ತಿದೆ. ಈಗ ಬೆಂಗಳೂರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಮಗ್ನರಾಗಿರುವ ಭರಣ ಅವರು ಎರಡನೇ ಅವಧಿಗೆ ಮತ್ತೆ ಅಧ್ಯಕ್ಷರಾಗಿ ಮುಂದುವರೆಯುವ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಅವರನ್ನು ಮುಂದುವರೆಸುವ ಇರಾದೆಯೂ ಸರಕಾರಕ್ಕಿಲ್ಲ ಎಂಬುದು ಬೇರೆ ಮಾತು. ಆದರೆ ಅಕಾಡೆಮಿ ಅಧ್ಯಕ್ಷ ಪದವಿಯನ್ನು ತೊರೆದ ನಂತರ ಎರಡು-ಮೂರು ಸಿನಿಮಾಗಳನ್ನು ಮಾಡುವ ಬಗ್ಗೆ ಈಗಾಗಲೇ ಭರಣ ಪ್ಲಾನ್ ಹಾಕಿಕೊಂಡಿದ್ದಾರೆ.



ಅಂದಹಾಗೆ, ಸಿನಿಮಾ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕಾಗಿ ಈಗಾಗಲೇ ಸರಕಾರದ ವಲಯದಲ್ಲಿ ಲಾಬಿ ಆರಂಭವಾಗಿದೆ. ವಿಧಾನಸೌಧದ ಕಾರಿಡಾರ್‌ಗಳಲ್ಲಿ ಸದ್ಯಕ್ಕೆ ಗಿರೀಶ್ ಕಾಸರವಳ್ಳಿಯವರ ಹೆಸರು ಕೇಳಿ ಬರುತ್ತಿದೆ. ಸರ್ಕಾರವು ಹಿಂದಿನ ಬಾರಿಯೇ ಇವರಿಗೆ ಅಧ್ಯಕ್ಷ ಸ್ಥಾನಕ್ಕೆ ಆಹ್ವಾನವನ್ನು ನೀಡಿತ್ತು. ಆದರೆ ಕಾಸರವಳ್ಳಿಯವರು ಸಿನಿಮಾದ ಕೆಲಸವಿದೆ ಎಂದು ಅದನ್ನು ತಿರಸ್ಕರಿಸಿದ್ದರು. ಈ ಬಾರಿ ಅವರು ಈ ಪದವಿಯನ್ನು ಸ್ವೀಕರಿಸುತ್ತಾರೋ, ಇಲ್ಲವೋ ಗೊತ್ತಿಲ್ಲ.



ಒಂದು ವೇಳೆ ಕಾಸರವಳ್ಳಿಯವರು ಮತ್ತೆ ಒಲ್ಲೆ ಎಂದರೆ, ಯಾರಾದರೂ ಮಹಿಳಾಮಣಿಯನ್ನು ಅಧ್ಯಕ್ಷ ಸ್ಥಾನಕ್ಕೇರಿಸಬೇಕೆಂಬ ಇರಾದೆ ವಾರ್ತಾ ಇಲಾಖೆಯದ್ದು. ಆ ಕಾರಣಕ್ಕಾಗಿ ಜಯಮಾಲಾರವರ ಹೆಸರು ಕೇಳಿಬರುತ್ತಿದೆ. ಜಯಮಾಲಾ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ವಿಜೇತರು, ಛೇಂಬರ್ ಅಧ್ಯಕ್ಷೆಯಾಗಿ ಕೆಲಸ ಮಾಡಿದವರು, ಡಾಕ್ಟರೇಟ್ ಪದವಿಯನ್ನೂ ಗಳಿಸಿರುವವರು, ಇವೆಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಚಿತ್ರರಂಗದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟವರು ಎಂಬಿತ್ಯಾದಿ ಅಂಶಗಳು ಅವರ ಪರವಾಗಿವೆ. ಆದರೆ ಆಕೆ ಕಾಂಗ್ರೆಸ್ ಪಕ್ಷದ ಕಡೆಗೆ ಹೆಚ್ಚು ಒಲವನ್ನು ಹೊಂದಿರುವವರು ಎಂದು ಸಿನಿಮಾರಂಗದವರೇ ವಾರ್ತಾ ಇಲಾಖೆಯ ಅಧಿಕಾರಿಗಳ ಕಿವಿಯಲ್ಲಿ ಉಸುರಿದ್ದಾರಂತೆ. ಈ ಒಂದು ಅಂಶ ಅವರಿಗೆ ಅಧ್ಯಕ್ಷ ಪದವಿ ಸಿಗದಂತೆ ಮಾಡಬಹುದೋ ಏನೊ!







ಈ ಮಧ್ಯೆ ಕಣ್ಣೀರ ರಾಣಿ ಶೃತಿಯವರ ಹೆಸರು ಕೂಡ ಚಾಲ್ತಿಯಲ್ಲಿದೆ. ಈಕೆ ಬಿಜೆಪಿಯ ಸದಸ್ಯೆ ಮಾತ್ರವಲ್ಲ, ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಪರ ಪ್ರಚಾರದಲ್ಲೂ ತನ್ನನ್ನು ತೊಡಗಿಸಿಕೊಂಡಿದ್ದರು. ಆದರೆ ಆನಂತರ ವೈಯಕ್ತಿಕ ಸಮಸ್ಯೆಗಳಲ್ಲಿ ಸಿಲುಕಿಕೊಂಡಾಗ ಶೃತಿ ಮಹಿಳಾ ಮತ್ತು ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಧ್ಯಕ್ಷೆ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿ ಬಂದಿತ್ತು, ಆದರೀಗ ಆ ಘಟನೆ ನಡೆದು ಅನೇಕ ವರ್ಷಗಳೇ ಉರುಳಿವೆ. ಅಷ್ಟೇ ಅಲ್ಲ, ಜನ ಕೂಡ ಅದನ್ನು ಮರೆತುಬಿಟ್ಟಿದ್ದಾರೆ. ಹೀಗಾಗಿ ಶೃತಿಯವರಿಗೆ ಮತ್ತೊಮ್ಮೆ ಅವಕಾಶ ಕಲ್ಪಿಸಿಕೊಡಬೇಕೆಂಬ ಮಾತು ಬಿಜೆಪಿ ವಲಯದಲ್ಲಿ ಕೇಳಿಬರುತ್ತಿದೆ. ಈ ಮನವಿಗೆ ಪಕ್ಷದ ಹೈಕಮಾಂಡ್ ಸ್ಪಂದಿಸಿದರೆ ಶೃತಿ ಸಿನಿಮಾ ಅಕಾಡೆಮಿಯ ಅಧ್ಯಕ್ಷೆಯಾಗುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ.

ಜಯಮಾಲಾ ಮತ್ತು ಶೃತಿಯವರಿಗೆ ತೀರ ಹತ್ತಿರದ ಪೈಪೋಟಿ ನೀಡುತ್ತಿರುವ ಮತ್ತೊಬ್ಬ ಮಹಿಳೆ ತಾರಾ. ತಾರಾ ಕೂಡ ಅತ್ಯುತ್ತಮ ನಟಿಯಾಗಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಯನ್ನು ಪಡೆದವರು ಮಾತ್ರವಲ್ಲ, ಕಲಾತ್ಮಕ ಮತ್ತು ಕಮರ್ಷಿಯಲ್ ಚಿತ್ರ ವಲಯಗಳಲ್ಲಿ ಎಲ್ಲರಿಗೂ ಆಪ್ತರಾಗಿರುವವರು. ಈಕೆ ಕೂಡ ಬಿಜೆಪಿಯ ಸದಸ್ಯೆ ಆಗಿದ್ದು ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಆತನ ಮನೆಗೆ ದಿನಾ ಹಾಜರಾಗುವ ಮೂಲಕ ತನಗೆ ಯಾವುದಾದರೂ ಸ್ಥಾನ-ಹುದ್ದೆ ಸಿಗುತ್ತದೆಂಬ ಕನಸು ಕಾಣುತ್ತಿದ್ದಾಕೆ. ಶೃತಿ ತೊರೆದ ಮಹಿಳಾ ಮತ್ತು ಮಕ್ಕಳ ಇಲಾಖೆ ಅಧ್ಯಕ್ಷೆ ಹುದ್ದೆಗೆ ಆಗ ತಾರಾ ಸಾಕಷ್ಟು ಪ್ರಯತ್ನಿಸಿದರೂ ರಾಜಕೀಯ ಅನಿಶ್ಚಿತತೆಯ ನಡುವೆ ಅದು ಸಾಧ್ಯವಾಗಿರಲಿಲ್ಲ. ಆದ್ದರಿಂದ ಈಗ ಸಿನಿಮಾ ಅಕಾಡೆಮಿಯ ಅಧ್ಯಕ್ಷ ಸ್ಥಾನ ತಾರಾಗೆ ಒಲಿದರೂ ಅಚ್ಚರಿ ಇಲ್ಲ.

ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಭರದ ಸಿದ್ಧತೆ ನಡೆಯುತ್ತಿದ್ದರೂ ಅದರ ಬಗ್ಗೆ ನಮ್ಮ ಚಿತ್ರರಂಗದ ಕಲಾವಿದರು ತಲೆ ಕೆಡಿಸಿಕೊಂಡಿಲ್ಲ. ಆದರೆ ಆ ಚಿತ್ರೋತ್ಸವವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತಿರುವ ಸಿನಿಮಾ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕಾಗಿ ಮಾತ್ರ ಎಲ್ಲರೂ ತೆರೆಮರೆಯಲ್ಲಿ ಲಾಬಿ ಮಾಡುತ್ತಿದ್ದಾರೆ.

ಸಿನಿಮಾ ಅಕಾಡೆಮಿಗೆ ಸರಕಾರ ಇತ್ತೀಚೆಗೆ ಹೆಚ್ಚಿನ ಆಡಳಿತಾತ್ಮಕ ಜವಾಬ್ದಾರಿಯನ್ನು ನೀಡಿರುವ ಹಿನ್ನೆಲೆಯಲ್ಲಿ ಆದಷ್ಟು ಸೂಕ್ತವಾದ ಮತ್ತು ಕ್ರಿಯಾಶೀಲ ವ್ಯಕ್ತಿಯನ್ನು ಅಧ್ಯಕ್ಷ ಹುದ್ದೆಗೆ ಆಯ್ಕೆ ಮಾಡಲಿ ಎಂಬುದಷ್ಟೇ ನಮ್ಮ ಆಶಯ.

• ಶೆಣೈ

ರಾಗಿಣಿ ಬೆಲೆ 33 ಲಕ್ಷ!

ಕೇವಲ ಎರಡು ವರ್ಷಗಳ ಹಿಂದೆ ಚಿತ್ರರಂಗಕ್ಕೆ ಕಾಲಿಟ್ಟ ಆರಡಿ ಎತ್ತರದ ತೆಳ್ಳನೆ ಬಳುಕುವ ರಾಗಿಣಿ ಎಂಬ ನಾಯಕಿ ಸದ್ಯಕ್ಕೆ ರಮ್ಯಾ, ಐಂದ್ರಿತಾ ರೈ ಇವರನ್ನೆಲ್ಲ ಓವರ್‌ಟೇಕ್ ಮಾಡಿ ನಂಬರ್ ಒನ್ ಸ್ಥಾನದತ್ತ ದಾಪುಗಾಲು ಹಾಕುತ್ತಿದ್ದಾಳೆ. 'ಹೋಳಿ' ಎಂಬ ಚಿತ್ರದಲ್ಲಿ ಹೊಸ ಹೀರೋ ಜೊತೆ ಕಾಣಿಸಿಕೊಂಡ ರಾಗಿಣಿ ಆನಂತರ ಸುದೀಪ್ ಜೊತೆ 'ವೀರ ಮದಕರಿ'ಯಲ್ಲಿ 'ಜುಂ ಜುಂ ಮಾಯಾ...' ಎಂದು ಹಾಡುತ್ತ, ಕುಣಿಯುತ್ತ ಗಾಂಧಿನಗರದತ್ತ ಭವ್ಯವಾಗಿ ಕಾಲಿಟ್ಟಿದ್ದಳು. ಈಗ ಶಿವರಾಜ್‌ಕುಮಾರ್, ಉಪೇಂದ್ರ ಮೊದಲಾದವರ ಜೊತೆ ನಟಿಸುತ್ತಿರುವ ರಾಗಿಣಿ ಇತ್ತೀಚೆಗೆ ಒಂದು ಹೊಸ ಚಿತ್ರಕ್ಕೆ ಸಹಿ ಮಾಡಿ ಬರೋಬ್ಬರಿ 33 ಲಕ್ಷ ರೂ.ಗಳನ್ನು ಸಂಭಾವನೆಯಾಗಿ ಪಡೆದಿದ್ದಾರೆ ಎಂಬ ಸುದ್ದಿ ಬಂದಿದೆ. ಈ ಸುದ್ದಿ ಕೇಳಿ ಇತರೆ ನಾಯಕಿಯರೆಲ್ಲ ಡಿಸೆಂಬರ್ ತಿಂಗಳ ಚುಮುಚುಮು ಚಳಿಯಲ್ಲೂ ಬೆವತುಹೋಗಿದ್ದಾರೆ.



ಇಷ್ಟು ದೊಡ್ಡ ಸಂಭಾವನೆ ಪಡೆದು ರಾಗಿಣಿ ನಟಿಸುತ್ತಿರುವ ಚಿತ್ರದ ನಾಯಕ ನಟ ಮಾತ್ರ ಹೊಸಬ. ಈತನ ಹೆಸರು ಅರ್ಜುನ್. ಇವನು ಜೆಡಿ (ಎಸ್) ರಾಜ್ಯಾಧ್ಯಕ್ಷ ಕುಮಾರಸ್ವಾಮಿಯವರ ಹತ್ತಿರದ ಬಂಧು. ಈ ಬಗ್ಗೆ ರಾಗಿಣಿ ಹೇಳುವುದಿಷ್ಟೇ: "ನನಗೆ ಹೊಸಬರು-ಹಳಬರು ಎಂಬ ಭೇದಭಾವವಿಲ್ಲ, ಚಿತ್ರದ ಕಥೆ ಚೆನ್ನಾಗಿದೆ ಎಂಬ ಕಾರಣಕ್ಕೆ ಇದನ್ನು ಒಪ್ಪಿದ್ದೇನೆ."

ಸಾಧಾರಣವಾಗಿ ಚಾಲ್ತಿಯಲ್ಲಿರುವ ನಾಯಕಿಯರು ಹೊಸ ಹೀರೋಗಳ ಜೊತೆಗೆ ನಟಿಸುವಾಗ ಸಿಕ್ಕಾಪಟ್ಟೆ ದೊಡ್ಡ ಮೊತ್ತದ ಸಂಭಾವನೆ ಕೇಳುವುದು ಸಹಜ. ಆದರೆ ಜನಪ್ರಿಯ ನಾಯಕ ನಟರೊಂದಿಗೆ ನಟಿಸುವಾಗ ಅವರಿಗೆ ಇದರ ಅರ್ಧದಷ್ಟು ಸಂಭಾವನೆ ಕೂಡ ಸಿಗುವುದಿಲ್ಲ, ಈ ಹಿನ್ನೆಲೆಯಲ್ಲಿ ರಾಗಿಣಿ 33 ಲಕ್ಷ ರೂ. ಸಂಭಾವನೆ ಪಡೆದುದನ್ನು ವಿಶ್ಲೇಷಿಸಿದರೆ ನಿಮಗೆ ಆಕೆಯ ನಿಜವಾದ ತಾರಾಮೌಲ್ಯ ಅರ್ಥವಾಗುತ್ತದೆ.

ರಾಕ್‌ಲೈನ್ ಜಾಕ್-ಪಾಟ್!

ರಾಕ್‌ಲೈನ್ ವೆಂಕಟೇಶ್ ಎಂಬ ನಿರ್ಮಾಪಕನ ತಾಕತ್ತು ಮತ್ತು ಕೆಪಾಸಿಟಿ ಬಹುತೇಕ ಉದ್ಯಮದ ಜನರಿಗೆ ತಿಳಿದೇ ಇದೆ. ಚಿತ್ರರಂಗದಲ್ಲಿ ಹಲವಾರು ಸಾಹಸಗಳನ್ನು ಮಾಡಿರುವ ರಾಕ್‌ಲೈನ್ ವೆಂಕಟೇಶ್ ಅವರನ್ನು ಸಂಗೀತ ನಿರ್ದೇಶಕ ಹಂಸಲೇಖ 'ಧೀರ ರಾಕ್‌ಲೈನ್ ವೆಂಕಟೇಶ್' ಎಂದು ಮರುನಾಮಕರಣ ಮಾಡಿದ್ದರು. ಈಗಾಗಲೇ ಕನ್ನಡದ ಜೊತೆ-ಜೊತೆಗೆ ತಮಿಳು ಮತ್ತು ತೆಲುಗು ಚಿತ್ರರಂಗದಲ್ಲೂ ಅದ್ದೂರಿ ಸಿನಿಮಾಗಳನ್ನು ಮಾಡಿರುವ ರಾಕ್‌ಲೈನ್ ವೆಂಕಟೇಶ್ ಮುಂದಿನ ವರ್ಷ ಕನ್ನಡದಲ್ಲಿ ದೊಡ್ಡ ಸಾಹಸಕ್ಕೆ ಕೈಹಾಕಲಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮತ್ತು ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರನ್ನು ಒಂದೇ ಚಿತ್ರದಲ್ಲಿ ನಾಯಕ ನಟರಾಗಿ ತೋರಿಸಬೇಕೆಂಬುದು ಅನೇಕ ನಿರ್ಮಾಪಕರ ಕನಸಿನ ಪ್ರಾಜೆಕ್ಟ್ ಆಗಿತ್ತು, ಅಂತಹ ಅವಕಾಶ ಈಗ ರಾಕ್‌ಲೈನ್ ವೆಂಕಟೇಶ್‌ಗೆ ಒದಗಿದೆಯಂತೆ.



2012ರಲ್ಲಿ ಈ ಪ್ರಾಜೆಕ್ಟ್ ಸೆಟ್ಟೇರುವುದು ಬಹುತೇಕ ಖಚಿತವಾಗಿದೆ. ಆದರೆ ಚಿತ್ರದ ನಿರ್ದೇಶಕ ಯಾರು ಎಂಬುದು ಇನ್ನೂ ನಿಗೂಢವಾಗಿದೆ. ಅಂತೂಇಂತೂ ರಾಕ್‌ಲೈನ್ ವೆಂಕಟೇಶ್ ಜಾಕ್‌ಪಾಟ್ ಹೊಡೆದಿದ್ದಾರೆ ಎಂದೇ ಉದ್ಯಮದ ಜನರು ಈಗಾಗಲೇ ಮಾತನಾಡಿಕೊಳ್ಳಲು ಆರಂಭಿಸಿದ್ದಾರೆ.

ಹಿಂದಿಯಲ್ಲಿ ವಿಷ್ಣುವರ್ಧನ?



'ವಿಷ್ಣುವರ್ಧನ' ಚಿತ್ರ ಬಿಡುಗಡೆಯಾಗಿ ಒಂದು ವಾರ ಮುಗಿಯುವುದಕ್ಕೂ ಮುನ್ನ ಅದರ ನಿರ್ಮಾಪಕ ದ್ವಾರಕೀಶ್ "ಈ ಚಿತ್ರವನ್ನು ಹಿಂದಿಯಲ್ಲಿ ರೀಮೇಕ್ ಮಾಡುವ ಐಡಿಯಾ ಹಾಕಿಕೊಂಡಿದ್ದೇವೆ. ಅದಕ್ಕೆ ಹಿಂದಿಯ ಖ್ಯಾತ ನಟ ಅಮೀರ್ ಖಾನ್ ಅವರನ್ನು ನಿರ್ಮಾಪಕ ಅಶೋಕ್ ಖೇಣಿ ಮುಖಾ... ಸಂಪರ್ಕಿಸಲಿದ್ದೇವೆ" ಎಂದರೆ ಆ ಚಿತ್ರದ ನಾಯಕ ನಟ ಸುದೀಪ್ "ಈ ಚಿ... ತೆಲುಗಿನಲ್ಲಿ ರೀಮೇಕ್ ಮಾಡುವ ಉದ್ದೇಶವಿದೆ. ಇದಕ್ಕಾಗಿ ನನ್ನ ಸ... ರವಿತೇಜನನ್ನು ಮಾತನಾಡಿಸಿದ್ದೇವೆ. ಸಾಧ್ಯವಾದರೆ ಈ ಚಿತ್ರವನ್ನು ... ತೆಲುಗಿನಲ್ಲಿ ನಿರ್ದೇಶಿಸಲಿದ್ದೇನೆ" ಎಂದಿದ್ದಾರೆ. ಆದರೆ ವಾಸ್ತವವಾಗಿ ... ಹಿಂದಿ ಅಥವಾ ತೆಲುಗಿನಲ್ಲಿ ರೀಮೇಕ್ ಆಗುವಷ್ಟು ಅ... ಕಥೆಯನ್ನೇನೂ ಹೊಂದಿಲ್ಲ, ತಾಂತ್ರಿಕತೆಯ ಮೆರುಗು ಕೂಡ ಅ... ಅಷ್ಟೇ ಅಲ್ಲ, ಬಾಕ್ಸ್ ಆಫೀಸ್ ಗಳಿಕೆಯ ದೃಷ್ಟಿ... ನೋಡಿದರೂ ಈ ಚಿತ್ರ ಓಹೋ! ಎನ್ನುವಷ್ಟು ಹಣ ಮ... ಆದರೂ ದ್ವಾರಕೀಶ್ ಮತ್ತು ಸುದೀಪ್ ಈ ಚಿ... ಪರಭಾಷೆಯಲ್ಲಿ ರೀಮೇಕ್ ಮಾಡುವ ಬಗ್ಗೆ ಮಾತನಾ... ಗಾಂಧಿನಗರದವರು ಹೇಗೆ ಅರ್ಥೈಸಿದ್ದಾರೆ ಗೊತ್ತೆ? 'ದ್ವಾ... ತಮ್ಮ ಹೈಟ್‌ಗೆ ಸರಿಯಾಗಿ ಅಮೀರ್ ಖಾನ್ ಬಗ್ಗೆ ಮಾತನ... ಸುದೀಪ್ ಕೂಡ ತನ್ನಷ್ಟೇ ಎತ್ತರದ ನಾಯಕ ರವಿತೇ... ಮಾತನಾಡಿದ್ದಾರೆ. ಅವರವರ ಹೈಟ್, ಅವರವರ ಭಾವಕ್ಕೆ ... ಇದೆ!" ಎಂದು ಗಾಂಧಿನಗರದವರು ಕುಹಕವಾಡುತ್ತಿದ್ದಾರೆ.

ತಮಿಳಿನಲ್ಲಿ ಟ್ರೈನಿಂಗ್

ಕನ್ನಡದಲ್ಲಿ ಸುಮಾರು ಐವತ್ತು ಸಿನಿಮಾಗಳನ್ನು ನಿ... ಹಿರಿಯ ನಿರ್ದೇಶಕ ಎನಿಸಿಕೊಂಡಿರುವ ಬಿ.ರಾಮಮೂರ್ತಿ ... ತಮಿಳಿಗೆ ಹೋಗಿದ್ದಾರೆ. ರಾಮಮೂರ್ತಿ ತಮಿಳಿನಲ್ಲಿ ನಿರ್ದೇಶಿಸು... ಚಿತ್ರದ ಹೆಸರು 'ಸೊಲ್ಲಿತರೆ ನಾನಿರುಕ್ಕೇನ್'. ಅಂದರೆ ಹೇಳಿಕೆ... ನಾನಿರುವೆ ಎಂದರ್ಥ. ತಮಿಳಿನಲ್ಲಿ ಹಿಟ್ ಆದ ಚಿತ್ರಗಳನ್ನು ಕನ್ನಡ... ಇಳಿಸುವುದು ಮಾಮೂಲಿ. ಆದರೆ ರಾಮಮೂರ್ತಿಯವರು ಸು... ಹದಿನೇಳು ವರ್ಷಗಳ ಹಿಂದೆ ಕಾಶೀನಾಥ್ ನಟಿಸಿದ್ದ 'ಲವ್ ಟ್ರೈ... ಸ್ಕೂಲ್' ಎಂಬ ಕನ್ನಡ ಹಿಟ್ ಕಾಮಿಡಿ ಚಿತ್ರವನ್ನು ತಮಿಳಿ... ಇಳಿಸಲು ಹೊರಟಿದ್ದಾರೆ.

ಹಳೇ ಲವ್ ಟ್ರೈನಿಂಗ್ ಮೆಥೆಡ್ದು ತಮಿಳಿನಲ್ಲಿ ಎಷ್ಟರ ... ವರ್ಕ್‌ಔಟಾಗುತ್ತೋ ಗೊತ್ತಿಲ್ಲ, ಸದ್ಯ ಹ್ಯಾಪು ಮೋರೆ ಕಾಶೀನಾ... ತಮಿಳಿನಲ್ಲೂ ಹೀರೋ ಮಾಡಿಲ್ಲ ಅನ್ನೋದಷ್ಟೇ ಸಮಾಧಾನದ ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com